ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಶಿವಮೊಗ್ಗ
ಬುಧವಾರ, 1 ಏಪ್ರಿಲ್ 2026
ಸಂಪುಟ 16, ಸಂಚಿಕೆ 338, ಪುಟಗಳು 12+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹4
RNI: KAR KAN 2010/64051
hosadigantha.com
epaper.hosadigantha.com
Hosadigantha Digital



ಕೇರಳ ಬಿಜೆಪಿ ಪ್ರಣಾಳಿಕೆ ಬಿಡುಗಡೆ | ೦೭
ಇನ್ಫ್ಲುಯೆನ್ಸರ್ಸ್ ಮೇಲೆ ಹದ್ದಿನ ಕಣ್ಣು | ೦೭
ಟೆನಿಸ್ ದಂತಕಥೆ ಲಿಯಾಂಡರ್ ಬಿಜೆಪಿಗೆ | ೦೭

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಉತ್ತರೆ

ದಿನದ ಮಾತು

ಪ್ರಪಂಚವು ಭಗವದಾನಂದ ಮತ್ತು ವಿಷಯ ಸುಖವೆಂಬ ಹಾಲು ನೀರುಗಳ ಬೆರಕೆ. ಹಂಸದಂತೆ ನೀರನ್ನು ತ್ಯಜಿಸಿ ಹಾಲನ್ನು ಮಾತ್ರ ಸೇವಿಸಬೇಕು.
▲ಶ್ರೀ ರಾಮಕೃಷ್ಣ ಪರಮಹಂಸ

ಸಿಲಿಂಡರ್ ನಿರ್ಭರದಿಂದ ಆತ್ಮನಿರ್ಭರವಾಗುವತ್ತ

ಖಾರಾ ಬಾತ್

• ವಿನಾಯಕ ಭಟ್ಟ ಮೂರೂರು

• ಪುಟ ೬

ಕಿರುಸುದ್ದಿ

ಜೈಶ್ ಮುಖ್ಯಸ್ಥ ಮಸೂದ್ ಅಜರ್ ಸಹೋದರ ಹತ್ಯೆ

• **ಹೊಸದಿಲ್ಲಿ:** ಜೈಶ್-ಎ-ಮೊಹಮ್ಮದ್ ಮುಖ್ಯಸ್ಥ ಮೌಲಾನಾ ಮಸೂದ್ ಅಜರ್‌ನ ಹಿರಿಯ ಸಹೋದರ, ಭಾರತಕ್ಕೆ ಮೋಸ್ಟ್ ವಾಂಟೆಂಡ್ ಆಗಿದ್ದ ಉಗ್ರ ಮೊಹಮ್ಮದ್ ತಾಹಿರ್ ಅನ್ವರ್ ಪಾಕಿಸ್ತಾನದಲ್ಲಿ ನಿಗೂಢವಾಗಿ ಮೃತಪಟ್ಟಿದ್ದಾನೆ.

• ಪುಟ ೭

ಕಾಲ್ತುಳಿತ: 9 ಭಕ್ತರ ಸಾವು

• ಪುಟ ೭

ಅಸ್ಸಾಂ ಬಿಜೆಪಿ ಪ್ರಣಾಳಿಕೆ: ಏನಾಸಂ ಜಾರಿ ಭರವಸೆ

• ಪುಟ ೭

ಪರಮಾಣುನಗರ ಇಸ್ಫಾಹಾನ್ ಮೇಲೆ ಅಮೆರಿಕ ಬಾಂಬ್ ದಾಳಿ
ಟ್ಯಾಂಕರ್ ನಾಶಗೈದ ಇರಾನ್ | 2ನೇ ತಿಂಗಳಿಗೆ ಕಾಲಿಟ್ಟ ಯುದ್ಧ

ಮತ್ತೆ ಯುದ್ಧೋನ್ಮಾದ

• **ದುಬೈ:** ಇರಾನ್‌ನ ಪ್ರಮುಖ ಪರಮಾಣು ಕೇಂದ್ರ ವಿರುವ ಇಸ್ಫಾಹಾನ್ ನಗರದ ಮೇಲೆ ಮಂಗಳವಾರ ಅಮೆರಿಕ ದಾಳಿ ನಡೆಸಿದ್ದು, ಇದಕ್ಕೆ ಪ್ರತಿಯಾಗಿ ಇರಾನ್ ಪರ್ಷಿಯನ್ ಕೊಲ್ಲಿಯಲ್ಲಿ ಕುವೈತ್‌ನ ತೈಲ ಟ್ಯಾಂಕರ್ ಮೇಲೆ ದಾಳಿ ಮಾಡಿದೆ.

ಅಮೆರಿಕದ ಪಡೆಗಳು ಇಸ್ಫಾಹಾನ್‌ನಲ್ಲಿರುವ ಮದ್ದು ಗುಂಡು ಡಿಪೋವನ್ನು 2,000 ಪೌಂಡ್ (ಸುಮಾರು 907-ಕಿಲೋಗ್ರಾಂ) ಬಂಕರ್ ಬಸ್ಟರ್ ಬಾಂಬ್‌ಗಳೊಂದಿಗೆ ಸ್ಫೋಟಿಸಿವೆ ಎಂದು ಅಮೆರಿಕ ಹೇಳಿಕೊಂಡಿದ್ದು, ವಿಡಿಯೋವೊಂದನ್ನು ಸಹ ಬಿಡುಗಡೆ ಮಾಡಿದೆ. ದಾಳಿ ನಡೆಸಲು ಹೆಚ್ಚಿನ ಪ್ರಮಾಣದ ಪೆನೆಟ್ರೇಟರ್ ಮದ್ದುಗುಂಡುಗಳನ್ನು ಬಳಸಲಾಗಿದೆ ಎಂದು ಅಧಿಕಾರಿ ಹೇಳಿದರು. ಯುದ್ಧವು ಎರಡನೇ ತಿಂಗಳಿಗೆ ಕಾಲಿಡುತ್ತಿದ್ದಂತೆ, ಪಾಕಿಸ್ತಾನ, ಈಜಿಪ್ಟ್ ಸೌದಿ ಅರೇಬಿಯಾ ಮತ್ತು ಟರ್ಕಿ ಮಧ್ಯಸ್ಥಿಕೆ ವಹಿಸಲು ಪ್ರಯತ್ನಿಸುತ್ತಿರುವಾಗ, ಈ ದಾಳಿಯು ಭಯ ಹೆಚ್ಚಿಸಿದೆ.



ತೀವ್ರಗೊಂಡ ಸಂಘರ್ಷ: ಅಮೆರಿಕ ಮತ್ತು ಇಸ್ರೇಲ್ ಮೊದಲ ದಾಳಿ ನಡೆಸಿದ ಒಂದು ತಿಂಗಳ ನಂತರ ಈ ಬೆಳವಣಿಗೆ ನಡೆದಿದೆ. ಈ ಯುದ್ಧದಿಂದಾಗಿ ಇಲ್ಲಿಯವರೆಗೆ 3,000ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಜಾಗತಿಕ ತೈಲ ಹಾಗೂ ನೈಸರ್ಗಿಕ ಅನಿಲ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆ. ಮಂಗಳವಾರ ಅಮೆರಿಕದಲ್ಲಿ ಗ್ಯಾಸೋಲಿನ್ ಬೆಲೆ ಪ್ರತಿ ಗ್ಯಾಲನ್‌ಗೆ 4 ಡಾಲರ್ ದಾಟಿದೆ. ➡ಪುಟ ೯

ತೈಲ ಮಾರುಕಟ್ಟೆ ಮೇಲೆ ಪರಿಣಾಮ

ಹಾರ್ಮುಜ್ ಜಲಸಂಧಿ ಮೇಲೆ ಇರಾನ್ ನಿಯಂತ್ರಣ ಸಾಧಿಸಿರುವುದರಿಂದ ಜಾಗತಿಕ ತೈಲ ಬೆಲೆ ಏರಿಕೆಯಾಗಿದೆ.



ಫೆ.28ರಿಂದ ಬ್ರೆಂಟ್ ಕ್ರೂಡ್ ತೈಲದ ಬೆಲೆ ಶೇ.45ರಷ್ಟು ಹೆಚ್ಚಾಗಿದ್ದು, ಮಂಗಳವಾರ ಪ್ರತಿ ಬ್ಯಾರೆಲ್‌ಗೆ 106 ಡಾಲರ್ ತಲುಪಿದೆ. ಜಲಸಂಧಿಯನ್ನು ಮುಕ್ತಗೊಳಿಸದಿದ್ದರೆ ಖಾರ್ಗ್ ದ್ವೀಪದ ತೈಲ ರಫ್ತು ಕೇಂದ್ರದ ಮೇಲೆ ದಾಳಿ ನಡೆಸುವುದಾಗಿ ಟ್ರಂಪ್ ಎಚ್ಚರಿಸಿದ್ದಾರೆ.



ಯುದ್ಧ ವೆಚ್ಚ ಭರಿಸಲು ಗಲ್ಫ್‌ಗೆ ಟ್ರಂಪ್ ಮನವಿ ಸಾಧ್ಯತೆ

ಇರಾನ್ ಯುದ್ಧದ ವೆಚ್ಚ ಭರಿಸಲು 200 ಶತಕೋಟಿ ಡಾಲರ್ ನೀಡಲು ಅಮೆರಿಕ ಅಧ್ಯಕ್ಷ ಟ್ರಂಪ್ ಗಲ್ಫ್ ರಾಷ್ಟ್ರಗಳಿಗೆ ಮನವಿ ಮಾಡುವ ಸಾಧ್ಯತೆಯಿದೆ. ಸೋಮವಾರ ಶ್ವೇತಭವನದ ವಕ್ತಾರೆ ಕ್ಯಾರೊಲಿನ್ ಲೀವಿಟ್ ತಾವು ಅಧ್ಯಕ್ಷರಿಗೆ ಇಂತಹದ್ದೊಂದು ಸಲಹೆ ನೀಡಿರುವುದಾಗಿ ಹೇಳಿಕೊಂಡಿದ್ದಾರೆ. ಇರಾಕ್‌ನಿಂದ ಕುವೈತ್‌ಗೆ ವಿಮೋಚನೆ ನೀಡಿದ್ದಾಗ 34 ರಾಷ್ಟ್ರಗಳ ಒಕ್ಕೂಟವನ್ನು ಅಮೆರಿಕವೇ ನೇತೃತ್ವ ವಹಿಸಿತ್ತು. ಅಂದಿನ ಯುದ್ಧ ವೆಚ್ಚ 54 ಶತಕೋಟಿ ಡಾಲರ್‌ನಲ್ಲಿ ಬಹುತೇಕ ಹಣವನ್ನು ಯುಎಇ ಭರಿಸಿತ್ತು.

ಗಲ್ಫ್‌ನಲ್ಲಿ 57 ಸಾವಿರ ಸೈನಿಕರ ನಿಯೋಜನೆ!

ಕತಾರ್, ಕುವೈತ್, ಬಹ್ರೈನ್, ಯುಎಇ, ಸೌದಿ ಅರೇಬಿಯಾ, ಇರಾಕ್, ಜೋರ್ಡನ್, ಸಿರಿಯಾ ಮೊದಲಾದ ಗಲ್ಫ್ ರಾಷ್ಟ್ರಗಳಲ್ಲಿನ ಅಮೆರಿಕ ಸೇನಾ ನೆಲೆಗಳಲ್ಲಿ 57,000 ಸೈನಿಕರನ್ನು ನಿಯೋಜನೆ ಮಾಡಿಕೊಂಡಿದೆ. ➡ಪುಟ ೯

ಹಾರ್ಮುಜ್ ಮುಚ್ಚಿದ್ದರೂ ಯುದ್ಧ ನಿಲ್ಲಿಸ್ತಾರಾ ಟ್ರಂಪ್?

• **ವಾಷಿಂಗ್ಟನ್:** ಹಾರ್ಮುಜ್ ಜಲಸಂಧಿ ಬಹುತೇಕ ಮುಚ್ಚಿದ್ದರೂ ಸರಿ, ಇರಾನ್ ಯುದ್ಧವನ್ನು ನಿಲ್ಲಿಸಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಿದ್ಧವಾಗಿದ್ದಾರೆಂದು ಅವರ ಆಪ್ತ ವಲಯಗಳು ತಿಳಿಸಿವೆಯೆಂದು ದಿ ವಾಲ್ ಸ್ಟ್ರೀಟ್ ಜರ್ನಲ್ ವರದಿ ಮಾಡಿದೆ. ಸದ್ಯ ಇರಾನ್ ನಿಯಂತ್ರಣದಲ್ಲಿರುವ ಹಾರ್ಮುಜ್ ಜಲಸಂಧಿಯನ್ನು ವಶಪಡಿಸಿ ಸಂಪೂರ್ಣ ತೆರೆಯುವುದಕ್ಕಾಗಿ ಕಾರ್ಯಾಚರಣೆ ಕೈಗೆತ್ತಿಕೊಂಡರೆ ಗುರಿ ಸಾಧಿಸಲು ಇನ್ನೂ ನಾಲ್ಕರಿಂದ ಆರು ವಾರಗಳವರೆಗೆ ಯುದ್ಧ ನಡೆಸುವ ಅಗತ್ಯವಿರುವುದನ್ನು ಟ್ರಂಪ್ ಮತ್ತವರ ಆಪ್ತ ವಲಯ ಮನಗಂಡಿದೆ ಎಂದು ವರದಿಯಾಗಿದೆ. • ವಿವರ ಪುಟ ೭



ಇಂಧನ ಬೇಕಿದ್ದರೆ ಜಲಸಂಧಿಗೆ ತೆರಳಿ!

ಇರಾನ್ ಯುದ್ಧದಲ್ಲಿ ಬೆಂಬಲಿಸದ ಮಿತ್ರರಾಷ್ಟ್ರಗಳಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ನಿಮಗೆ ಬೇಕಿರುವ ತೈಲ ನೀವೇ ಸಂಗ್ರಹಿಸಿಕೊಳ್ಳಿ ಎಂದು ಎಚ್ಚರಿಕೆ ನೀಡಿದ್ದಾರೆ. • ವಿವರ ಪುಟ ೭

ಗೂಗಲ್, ಮೈಕ್ರೋಸಾಫ್ಟ್‌ಗೆ ಇರಾನ್ ದಾಳಿ ಬೆದರಿಕೆ • ಪುಟ ೭

ತೆರಿಗೆ ಪಾವತಿಸದ ವಿಧಾನಸೌಧ, ವಿಕಾಸಸೌಧ

ಸರ್ಕಾರಿ ಕಟ್ಟಡ ಕರ ₹473 ಕೋಟಿ ಬಾಕಿ

• **ಬೆಂಗಳೂರು:** ಸಾಮಾನ್ಯ ಜನರ ಸಣ್ಣಪುಟ್ಟ ಆಸ್ತಿ ತೆರಿಗೆ ಬಾಕಿ ಇದೆ ಎಂದು ಆಸ್ತಿ ಹರಾಜು ಹಾಕಲು ಮುಂದಾಗುವ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ)ದ ನಗರಪಾಲಿಕೆ ಅಧಿಕಾರಿಗಳು, ನೂರಾರು ಕೋಟಿ ರೂಪಾಯಿ ಬಾಕಿ ಉಳಿಸಿಕೊಂಡಿರುವ ವಿಧಾನಸೌಧ, ವಿಕಾಸಸೌಧದಂತಹ ಸರ್ಕಾರಿ ಕಟ್ಟಡಗಳ ವಿರುದ್ಧ ಕ್ರಮ ಜರುಗಿಸಲು ಏಕೆ ಹಿಂದೇಟು ಹಾಕುತ್ತಿದ್ದಾರೆ ಎಂದು ಬಿಜೆಪಿ ನಾಯಕ ಎನ್. ಆರ್. ರಮೇಶ್ ಪ್ರಶ್ನಿಸಿದ್ದಾರೆ.



ಜಿಬಿಎ ಕೇಂದ್ರ ಕಚೇರಿಯಲ್ಲಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಸರ್ಕಾರಿ ಕಟ್ಟಗಳ ದಾಖಲೆ ಬಿಡುಗಡೆ ಮಾಡಿ, ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ನಗರದ ಪ್ರಮುಖ ಸರ್ಕಾರಿ ಕಟ್ಟಡಗಳು ಮತ್ತು ಇಲಾಖೆಗಳು ಬರೋಬ್ಬರಿ 472.66 ಕೋಟಿ ಮೊತ್ತದ ಸೇವಾ ತೆರಿಗೆಯನ್ನು (ಸರ್ವಿಸ್ ಟ್ಯಾಕ್ಸ್) ಬಾಕಿ ಉಳಿಸಿಕೊಂಡಿರುವ ಬಗ್ಗೆ ದಾಖಲೆ ಬಿಡುಗಡೆ ಮಾಡಲಾಗಿದೆ. ರಾಜ್ಯದ ಆಡಳಿತ ಶಕ್ತಿ ಕೇಂದ್ರಗಳಾದ ವಿಧಾನಸೌಧ ಮತ್ತು ವಿಕಾಸಸೌಧಗಳೇ ಪಾಲಿಕೆಗೆ ಕೋಟ್ಯಂತರ ರೂಪಾಯಿ ಬಾಕಿ ಇಟ್ಟಿವೆ.

ವಿಧಾನಸೌಧ, ವಿಕಾಸಸೌಧ, ಬಹುಮಹಡಿ ಕಟ್ಟಡ, ಕುಮಾರಕೃಪಾ ಅತಿಥಿಗೃಹ ಮತ್ತು ರಾಜಭವನಗಳಿಂದ ಮಾತ್ರವೇ ಪಾಲಿಕೆಗಳಿಗೆ ಒಟ್ಟು 14.94 ಕೋಟಿ ರೂ.ಗಳಷ್ಟು ಬೃಹತ್ ಪ್ರಮಾಣದ ಸೇವಾ ತೆರಿಗೆ ಬಾಕಿ ಉಳಿಸಿಕೊಂಡಿದೆ. ➡ಪುಟ ೯

ಬೃಹತ್ ಬಾಕಿ ವಸೂಲಿ ಮಾಡಿ

ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರಿಗೆ ಪತ್ರ ಬರೆದು ಮನವಿ ಮಾಡಲಾಗಿದ್ದು, ಸಾಮಾನ್ಯ ಜನರಂತೆ ಸರ್ಕಾರಿ ಕಟ್ಟಡಗಳಿಗೂ ಒಂದೇ ಕಾನೂನು ಅನ್ವಯವಾಗಲಿ. 473 ಕೋಟಿ ಬಾಕಿ ಉಳಿಸಿಕೊಂಡಿರುವ ಇಲಾಖೆಗಳಿಗೆ ನೋಟಿಸ್ ನೀಡಿ, ತಕ್ಷಣವೇ ಕಟ್ಟಡಗಳನ್ನು ಜಪ್ತಿ ಮಾಡುವ ಧೈರ್ಯ ತೋರಲಿ. ➡ಪುಟ ೯

ದಾಖಲೆ ಬಿಡುಗಡೆ ಮಾಡಿದ ಬಿಜೆಪಿ ನಾಯಕ ರಮೇಶ್



ಪ್ರಮುಖ ಕಟ್ಟಡಗಳ ಬಾಕಿ ವಿವರ

ವಿಕಾಸಸೌಧ	4.24 ಕೋಟಿ
ಬಹುಮಹಡಿ ಕಟ್ಟಡ	3.38 ಕೋಟಿ
ಕುಮಾರಕೃಪಾ ಅತಿಥಿಗೃಹ	3.01 ಕೋಟಿ
ವಿಧಾನಸೌಧ	2.15 ಕೋಟಿ
ರಾಜಭವನ	1.89 ಕೋಟಿ
ವಿಧಾನಸೌಧ ಕ್ಯಾಂಟೀನ್	7.40 ಲಕ್ಷ
ವಿಕಾಸಸೌಧದ ಕ್ಯಾಂಟೀನ್	17.65 ಲಕ್ಷ

ರೂ.ಗಳಲ್ಲಿ

ಜನಸಾಮಾನ್ಯರ ಮೇಲೆ ಪ್ರತಾಪ ತೋರಿಸುವುದನ್ನು ಬಿಟ್ಟು ಮೊದಲು ಸರ್ಕಾರದಿಂದ ಬರಬೇಕಾದ ಬೃಹತ್ ಬಾಕಿಯನ್ನು ಜಿಬಿಎ ವಸೂಲಿ ಮಾಡಲಿ.
■ ಎನ್.ಆರ್.ರಮೇಶ್, ಬಿಜೆಪಿ ನಾಯಕ

ಅಹಿಂಸಾ ತತ್ವ ಮರುಸ್ಥಾಪನೆ ಅತಿ ಅವಶ್ಯ



ಸಾಮ್ರಾಟ್ ಸಂಪ್ರತಿ ಮ್ಯೂಸಿಯಂ ಲೋಕಾರ್ಪಣೆ ಮಾಡಿದ ನಮೋ

• **ಗಾಂಧಿನಗರ:** ಜಗತ್ತು ಅಸ್ಥಿರತೆ ಮತ್ತು ಅರಾಜಕತೆಯಲ್ಲಿ ತೊಳಲಾಡುತ್ತಿರುವ ಪ್ರಸ್ತುತ ಸನ್ನಿವೇಶದಲ್ಲಿ ಶಾಂತಿ, ಅಹಿಂಸಾ ತತ್ವ ಮರುಸ್ಥಾಪನೆ ತೀರಾ ಅಗತ್ಯವೆಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದ್ದಾರೆ.

ಗುಜರಾತಿನಲ್ಲಿ ಮೈದಳೆದಿರುವ ನೂತನ ಸಾಮ್ರಾಟ್ ಸಂಪ್ರತಿ ಮ್ಯೂಸಿಯಂ, ಪ್ರಸಕ್ತ ಹಿಂಸಾತ್ಮಕ ಜಾಗತಿಕ ಸನ್ನಿವೇಶಗಳ ಹಿನ್ನೆಲೆಯಲ್ಲಿ ಶಾಂತಿ-ಅಹಿಂಸೆಗಳ ಅನಿವಾರ್ಯತೆಯ ಬಲಿಷ್ಠ ಸಂದೇಶ ಸಾರಿದೆ. ಈ ಸಂದೇಶವಿಂದು ಮಹತ್ವಪೂರ್ಣ ಕೂಡ ಎಂದು ಮೋದಿ ಹೇಳಿದರು. ಈಗಿನ ಜಾಗತಿಕ ಸನ್ನಿವೇಶ ಉಲ್ಲೇಖಿಸಿ, ಮ್ಯೂಸಿಯಂನದಂತಕಥೆ, ಸಂದೇಶಗಳು ಕೇವಲ ಭಾರತಕ್ಕೆ ಮಾತ್ರವಲ್ಲ, ಇಡೀ ಜಗತ್ತಿಗೆ ಮಹತ್ವಪೂರ್ಣವಾದದ್ದು. ➡ಪುಟ ೯

ಹಿಂದಿ ಮಾತು, ಕಲಿಕೆ ತಪ್ಪಲ್ಲ: ಬಿಎಸ್‌ವೈ

• **ಬೆಂಗಳೂರು:** ದೇಶದ ಉದ್ದಗಲಕ್ಕೆ ಹಿಂದಿ ಭಾಷೆ ಇಲ್ಲದಿದ್ದರೆ ಬೇರೆ ಭಾಷೆಯಲ್ಲಿ ಮಾತಾಡಲು ಬರುವುದಿಲ್ಲ, ಹಿಂದಿ ಮಾತಾಡುವುದು, ಕಲಿಯುವುದು ತಪ್ಪು ಅಲ್ಲ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅಭಿಪ್ರಾಯಪಟ್ಟಿದ್ದಾರೆ.



ರಾಜ್ಯ ಸರ್ಕಾರದ ತೀರ್ಮಾನಕ್ಕೆ ಮಾಜಿ ಸಿಎಂ ಬೇಸರ

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಶಿಕ್ಷಣದಲ್ಲಿ ಹಿಂದಿ ಭಾಷೆ ಕಡ್ಡಾಯವಲ್ಲ ಎಂಬ ಸರ್ಕಾರದ ತೀರ್ಮಾನವನ್ನು ಖಂಡಿಸಿದರು. ಕೆಲವರು ಹಿಂದಿ ಭಾಷೆಯ ಬಗ್ಗೆ ತಮ್ಮದೇ ಆದ ಮಾತು ಗಳನ್ನಾಡುತ್ತಾರೆ. ಇದು ಕನ್ನಡಕ್ಕೆ ಮಾಡುವ ದ್ರೋಹ ಅಲ್ಲ, ನಾನು ಅತ್ಯಂತ ವಿನಯದಿಂದ ಕನ್ನಡಿಗರಲ್ಲಿ ವಿನಂತಿ ಮಾಡುತ್ತೇನೆ. ಹಿಂದಿ ಭಾಷೆ ಕಲಿಯುವುದರಿಂದ ಕನ್ನಡ ಭಾಷೆಗೆ ಆಘಾತ ಆಗುವುದಿಲ್ಲ, ಆದ್ದರಿಂದ ದಯವಿಟ್ಟು ಈ ಬಗ್ಗೆ ಗೊಂದಲ ಉಂಟುಮಾಡಬಾರದು ಎಂದು ಹೇಳಿದರು. ➡ಪುಟ ೯

ಮತ್ತೆ ಯುದ್ಧೋನ್ಮಾದ

ಪುಟ ೧➡ **ಇಸ್ಫಾಹಾನ್ ಮೇಲಿನ ದಾಳಿ:** ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇಸ್ಫಾಹಾನ್ ಮೇಲಿನ ದಾಳಿಯ ದೃಶ್ಯಗಳನ್ನು ಹಂಚಿಕೊಂಡಿದ್ದಾರೆ. ಈ ನಗರ, ಇರಾನ್‌ನ ಮೂರು ಪ್ರಮುಖ ಪರಮಾಣು ಪುಷ್ಟೀಕರಣ ಕೇಂದ್ರಗಳಲ್ಲಿ ಒಂದನ್ನು ಹೊಂದಿದ್ದು, ಅಲ್ಲಿ ಹೆಚ್ಚಿನ ಪ್ರಮಾಣದ ಯುರೇನಿಯಂ ಸಂಗ್ರಹಿಸಲಾಗಿದೆ ಎಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ಉಪಗ್ರಹ ದೃಶ್ಯಗಳ ಪ್ರಕಾರ, ನಗರದ ದಕ್ಷಿಣ ಭಾಗದ ಪರ್ವತ ಪ್ರದೇಶದಲ್ಲಿ ಸ್ಫೋಟಗಳು ಸಂಭವಿಸಿವೆ. ಜೂನ್‌ನಲ್ಲಿ ಇರಾನ್ ಶೇ.60ರಷ್ಟು ಶುದ್ಧೀಕರಿಸಿದ ಯುರೇನಿಯಂ ಹೊಂದಿದ್ದ 18 ಕಂಟೈನರ್‌ಗಳನ್ನು ಈ ಪ್ರದೇಶದ ಸಮೀಪವಿರುವ ಕೇಂದ್ರಕ್ಕೆ ಸ್ಥಳಾಂತರಿಸಿತ್ತು ಎಂದು ತಿಳಿದುಬಂದಿದೆ.

ಗಲ್ಫ್‌ನಲ್ಲಿ 57 ಸಾವಿರ ಸೈನಿಕರ ನಿಯೋಜನೆ!

ಪುಟ ೧➡ ಮಧ್ಯಪ್ರಾಚ್ಯದಲ್ಲಿ ಯುಎಸ್‌ಎಸ್ ಟ್ರಿಪೋಲಿ ಯುದ್ಧನೌಕೆಯಲ್ಲಿ 3,500+ ಮತ್ತು ವಾಯುಪಡೆಯ ಸಾವಿರ ಸೈನಿಕರಿದ್ದಾರೆ. ಅಮೆರಿಕ ಸೈನಿಕರು ನುಗ್ಗಿದರೆ ಪ್ರಖರ ದಾಳಿ ನಡೆಸುವುದಾಗಿ ಇರಾನ್ ಎಚ್ಚರಿಕೆ ನೀಡಿದೆ. ಅಮೆರಿಕ ಸೈನಿಕರು ಯಾವಾಗ ಬರುತ್ತಾರೆಂದು ನಮ್ಮವರು ಕಾಯುತ್ತಿದ್ದಾರೆ. ಅವರನ್ನು ಮತ್ತವರ ಮಿತ್ರರಾಷ್ಟ್ರಗಳನ್ನು ಒಂದೇ ಬಾರಿಗೆ ಮುಗಿಸುತ್ತೇವೆ ಎಂದಿದೆ.

ಡ್ರೋನ್, ಕ್ಷಿಪಣಿ ದಾಳಿ

ದುಬೈ ಕರಾವಳಿಯಲ್ಲಿ ಕುವೈತ್ ತೈಲ ಟ್ಯಾಂಕರ್ ಮೇಲೆ ಇರಾನ್ ಡ್ರೋನ್ ದಾಳಿ ನಡೆಸಿದ್ದರಿಂದ ಬೆಂಕಿ ಕಾಣಿಸಿಕೊಂಡಿದ್ದರೂ, ಯಾವುದೇ ತೈಲ ಸೋರಿಕೆಯಾಗಿಲ್ಲ. ಡ್ರೋನ್ ಪತನಗೊಂಡ ಪರಿಣಾಮ ನಾಲ್ವರು ಗಾಯಗೊಂಡಿದ್ದಾರೆ. ಸೌದಿ ಅರೇಬಿಯಾ ತನ್ನ ರಾಜಧಾನಿಯತ್ತ ಬಂದ ಮೂರು ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಹೊಡೆದುರುಳಿಸಿದೆ. ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ, ತಮಗೆ ಕೇವಲ ಅಮೆರಿಕ ಸೇನೆಯೇ ಗುರಿ ಎಂದು ಹೇಳಿದ್ದಾರೆ.

ಲೆಬನಾನ್, ಇರಾನ್‌ನಲ್ಲಿ ಸಾವು-ನೋವು

ದಕ್ಷಿಣ ಲೆಬನಾನ್‌ನಲ್ಲಿ ಮೂವರು ಶಾಂತಿ ಪಾಲಕರು ಮೃತಪಟ್ಟ ನಂತರ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ತುರ್ತುಸಭೆ ಕರೆದಿದೆ. ಲೆಬನಾನ್‌ನಲ್ಲಿ 1,200 ಜನರು ಮೃತಪಟ್ಟಿದ್ದು, 10 ಲಕ್ಷಕ್ಕೂ ಹೆಚ್ಚು ಜನರು ಸ್ಥಳಾಂತರಗೊಂಡಿದ್ದಾರೆ. ಇರಾನ್‌ನಲ್ಲಿ 1,900, ಇಸ್ರೇಲ್‌ನಲ್ಲಿ 19 ಮತ್ತು ಅಮೆರಿಕದ 13 ಸೈನಿಕರು ಮೃತಪಟ್ಟಿದ್ದಾರೆ.

ಷೇರು ಮಾರುಕಟ್ಟೆ ತಲ್ಲಣ

ಇಸ್ಫಾಹಾನ್ ಮತ್ತು ತೈಲ ಟ್ಯಾಂಕರ್‌ಗಳ ಮೇಲಿನ ಹೊಸ ದಾಳಿಗಳಿಂದಾಗಿ ಬ್ರೆಂಟ್ ಕಚ್ಚಾತೈಲದ ಬೆಲೆ ಪ್ರತಿ ಬ್ಯಾರೆಲ್‌ಗೆ 107116 ಅಮೆರಿಕ ಡಾಲರ್‌ಗೆ ಏರಿಕೆಯಾಗಿದ್ದು, ಇದು ಭಾರತದ ಮೇಲೂ ಪರಿಣಾಮ ಬೀರಿದೆ. ರೂಪಾಯಿ ಮೌಲ್ಯ ದಾಖಲೆ ಮಟ್ಟಕ್ಕೆ ಕುಸಿದಿದೆ. ಭಾರತೀಯ ಷೇರು ಮಾರುಕಟ್ಟೆಯ ನಿಫ್ಟಿ ಮತ್ತು ಸೆನ್ಸೆಕ್ಸ್ ಸೂಚ್ಯಂಕಗಳು ತೀವ್ರ ಕುಸಿತ ಕಂಡಿವೆ.

ರಾಮ ಬಾಣ



ಬಿಸಿಲಿನ ತಾಪಮಾನ: ಕಚೇರಿ ವೇಳಾಪಟ್ಟಿ ಬದಲಾವಣೆ

• **ಬೆಂಗಳೂರು:** ಬಿಸಿಲಿನ ತಾಪಮಾನದ ಹಿನ್ನೆಲೆಯಲ್ಲಿ ಬೆಳಗಾವಿ ವಿಭಾಗದ ವಿಜಯಪುರ ಮತ್ತು ಬಾಗಲಕೋಟೆ ಹಾಗೂ ಕಲಬುರಗಿ ವಿಭಾಗದ ಎಲ್ಲಾ ಜಿಲ್ಲೆಗಳಿಗೆ ಪ್ರಸ್ತುತ ಜಾರಿಯಲ್ಲಿರುವ ಸರ್ಕಾರಿ ಕಚೇರಿಗಳ ವೇಳಾಪಟ್ಟಿಯ ಬದಲಾಗಿ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಬೆಳಿಗ್ಗೆ 8 ಗಂಟೆಯಿಂದ ಮಧ್ಯಾಹ್ನ 1.30 ಗಂಟೆ ವರೆಗೆ ಬದಲಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಆದೇಶಿಸಿದೆ. ಈ ಎಲ್ಲಾ ಜಿಲ್ಲೆಗಳಲ್ಲಿನ ಸರ್ಕಾರಿ ನೌಕರರು ಬದಲಾದ ಸಮಯದಲ್ಲಿ ಎಂದಿನಂತೆ ಯಾವುದೇ ಲೋಪ, ಅಡೆತಡೆಯಿಲ್ಲದೆ ಕರ್ತವ್ಯವನ್ನು ನಿರ್ವಹಿಸಬೇಕು, ಸಾರ್ವಜನಿಕರಿಗೆ ಯಾವುದೇ ಅನಾನುಕೂಲತೆ ಆಗದಂತೆ ಮತ್ತು ಡಿಸಿ, ಜಿಲ್ಲಾ ಪಂಚಾಯಿತ್ತಿ ಸಿಇಒ ಸೇರಿದಂತೆ ಹೊರೊಯ ಅಧಿಕಾರಿಗಳು ತುರ್ತು ಸಂದರ್ಭದಲ್ಲಿ ಯಾವುದೇ ಕಾರ್ಯನಿರ್ವಹಿಸಲು ನಿರ್ದೇಶಿಸಿದಲ್ಲಿ ಸಮಯದ ಪರಿಮಿತಿಯಿಲ್ಲದೆ ಕರ್ತವ್ಯ ನಿರ್ವಹಿಸಬೇಕೆಂದು ತಿಳಿಸಲಾಗಿದೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ರಸ್ತೆ ಸ್ವಚ್ಛಗೊಳಿಸುವವನು ತನ್ನ ಕೆಲಸವನ್ನು ಶ್ರದ್ಧೆಯಿಂದ ಮಾಡಿದಾಗ ಊರು ಸ್ವಚ್ಛವಾಗುತ್ತೆ, ಶಿಕ್ಷಕನು ತನ್ನ ಸೇವೆಯನ್ನು ಜ್ಞಾನ ಸೇವೆ ಎಂಬ ಭಾವದಿಂದ ಮಾಡಿದಾಗ ವಿದ್ಯಾರ್ಥಿಗಳ ಭವಿಷ್ಯ ರೂಪುಗೊಳ್ಳುತ್ತೆ, ಇಂಜಿನಿಯರ್ ತನ್ನ ಹೊಣೆಗಾರಿಕೆಯನ್ನು ಸೇವಾಭಾವದಿಂದ ನಿರ್ವಹಿಸಿದಾಗ ಸೇತುವೆಗಳು ಸುರಕ್ಷಿತವಾಗಿರುತ್ತವೆ
- ಡಾ/ವೀರೇಂದ್ರ ಹೆಗ್ಗಡೆ
- ಇನ್ನು ಸುಲಭವಾಗಿ ಹೇಳುವುದಾದರೆ ನಮ್ಮ ಪಾಲಿಗೆ ಬಂದ ಕೆಲಸವನ್ನು ಶ್ರದ್ಧೆಯಿಂದ ಮಾಡುವುದೇ ಕರ್ಮಯೋಗ, ಅದೇ ನಿಜವಾದ ದೇವರ ಪೂಜೆ!

ದಿನ ಭವಿಷ್ಯ

ಮೇಷ
ಶೀಘ್ರ ಪ್ರಗತಿ ಸಾಧಿಸಬೇಕು ಎನ್ನುವುದು ನಿಮ್ಮ ಆಸೆ. ತಾಳ್ಮೆ ಬೆಳೆಸಿಕೊಳ್ಳಿ. ದುಡುಕು ಹಾನಿ ತಂದೀತು. ಕೌಟುಂಬಿಕ ಸಹಕಾರ.

ವೃಷಭ
ಕೆಲಸದಲ್ಲಿ ಪ್ರಗತಿ. ಹಿರಿಯರ ಮೆಚ್ಚುಗೆ. ಮನೆಯಲ್ಲಿ ಕೆಲವು ಬದಲಾವಣೆ ಆದೀತು. ಆರೋಗ್ಯ ಸಮಸ್ಯೆ ನಿವಾರಣೆ, ನಿರಾಳತೆ.

ಮಿಥುನ
ಕಾರ್ಯ ಪೂರೈಸಲು ಹೆಚ್ಚು ಪರಿಶ್ರಮ ಬೇಕು. ಅರ್ಥಕ್ಕೆ ಕೈ ಬಿಡಬೇಡಿ. ವಿವಾಹ ಪ್ರಸ್ತಾಪ ಸಫಲ ಆಗಲಿದೆ. ಆರೋಗ್ಯ ಸಮಸ್ಯೆ ಸಂಭವ.

ಕಟಕ
ಈ ದಿನ ನಿಮಗೆ ಪ್ರತಿಕೂಲ. ಪ್ರಮುಖ ಕಾರ್ಯ ಇಂದು ಬೇಡ. ಸಂಗಾತಿ ಜತೆ ಸಂಘರ್ಷ ಸಂಭವ. ತಾಳ್ಮೆಯ ವ್ಯವಹಾರ ಅಗತ್ಯ.

ಸಿಂಹ
ಎಲ್ಲ ಸುಸೂತ್ರವಾಗಿ ನಡೆದರೂ ಮನಸ್ಸಿಗೆ ಸಮಾಧಾನವಿರದು. ಏನೋ ಅತೃಪ್ತಿ. ಕೆಲವರ ವರ್ತನೆಗೆ ಅಸಹನೆ. ಧ್ಯಾನ, ಅಧ್ಯಾತ್ಮ ಸಹಕಾರಿ.

ಕನ್ಯಾ
ಆಪ್ತರ ಜತೆಗಿನ ಭಿನ್ನಮತ ಪರಿಹರಿಸಿ. ಪ್ರೀತಿಗೆ ಸಂಬಂಧಿಸಿದ ಬಿಕ್ಕಟ್ಟು ನಿವಾರಿಸಿ. ವೃತ್ತಿಯಲ್ಲಿ ವಾಗ್ವಾದ, ಸಂಘರ್ಷ ನಡೆದೀತು.

ತುಲಾ
ಕೆಲ ಕೌಟುಂಬಿಕ ವಿಚಾರ ಇತ್ಯರ್ಥಕ್ಕೆ ದಿನ ಮೀಸಲು. ಉತ್ಸಾಹ ಹೆಚ್ಚುವ ಬೆಳವಣಿಗೆ. ಕಾರ್ಯ ಪ್ರಗತಿ. ಆರ್ಥಿಕ ಸ್ಥಿತಿಯಲ್ಲಿ ಪ್ರಗತಿ.

ವೃಶ್ಚಿಕ
ನಿಮ್ಮ ಸುತ್ತಮುತ್ತ ಹರ್ಷದ ವಾತಾವರಣ. ಇತರರ ಉತ್ಸಾಹದಲ್ಲಿ ಭಾಗಿ. ಸಣ್ಣ ವಿಷಯಕ್ಕೆ ವಾಗ್ವಾದ ನಡೆಸಲು ಹೋಗದಿರಿ. ಖರ್ಚು ನಿಯಂತ್ರಣ.

ಧನು
ನಿಮ್ಮ ಕಾರ್ಯಕ್ಕೆ ಸಹೋದ್ಯೋಗಿ ಬೆಂಬಲ. ಖರೀದಿ ಹುಮ್ಮಸ್ಸಿನಿಂದ ಖರ್ಚು ಹೆಚ್ಚಬಹುದು. ಆಸ್ತಿ ಖರೀದಿಗೆ ಕಾಲ ಸದ್ಯ ಕೂಡಿಬರದು.

ಮಕರ
ಪ್ರಮುಖ ಕಾರ್ಯ ಇಂದು ಸಾಧಿಸುವಿರಿ. ವೃತ್ತಿಯಲ್ಲಿ ಯಶಸ್ಸು. ಸ್ವಂತ ಉದ್ಯೋಗಿಗಳಿಗೆ ಆರ್ಥಿಕ ಉನ್ನತಿ. ಕೌಟುಂಬಿಕ ಪರಿಸ್ಥಿತಿ ಸಮಾಧಾನಕರ.

ಕುಂಭ
ಯುವಜನರು ಹೆತ್ತವರ ಜತೆ ಸಂಘರ್ಷ ನಡೆಸಿಯಾರು. ಉದ್ದಿಮೆಯಲ್ಲಿ ಧನಹಾನಿ. ಇತರರ ಮನಸ್ಸಿಗೆ ಘಾಸಿ ಎಸಗದಿರಿ. ವಿನಯವಿರಲಿ.

ಮೀನ
ಕಾರ್ಯ ಸರಾಗ. ಅಡ್ಡಿಗಳ ನಿವಾರಣೆ. ಖರ್ಚು ಕಡಿಮೆ ಮಾಡಲು ಗಮನ ಕೊಡಿ. ಸಣ್ಣ ಸಮಸ್ಯೆಯೊಂದು ನೆಮ್ಮದಿ ಕೆಡಿಸುವುದು.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00

ಅದೃಷ್ಟ ಸಂಖ್ಯೆ : 4,0,5,1

ತೃತೀಯಲಿಂಗಿ ಮೇಲೆ ಹಲ್ಲೆ

• **ಮೈಸೂರು:** ವೈಯಕ್ತಿಕ ಖರ್ಚಿಗೆ ಹಣ ನೀಡಲು ನಿರಾಕರಿಸಿದ ಕಾರಣಕ್ಕೆ ತೃತೀಯಲಿಂಗಿಯ ಮೇಲೆ ಯುವಕರ ತಂಡವೊಂದು ತಲ್ವಾರ್ ಮತ್ತು ಚಾಕುವಿನಿಂದ ಭೀಕರವಾಗಿ ಹಲ್ಲೆ ನಡೆಸಿರುವ ಆಘಾತಕಾರಿ ಘಟನೆ ಮೈಸೂರಿನ ಸಾತಗಳ್ಳಿ ಸಮೀಪದ ಅಮೃತ ಬಡಾವಣೆಯಲ್ಲಿ ನಡೆದಿದೆ. ಅಮೃತ ಬಡಾವಣೆ ನಿವಾಸಿಯಾದ ಆನಮ್ ಎಂಬ ತೃತೀಯಲಿಂಗಿಯ ಬಳಿ ಕೆಲವು ಯುವಕರು ತಮ್ಮ ವೈಯಕ್ತಿಕ ಖರ್ಚಿಗೆ ಹಣ ನೀಡುವಂತೆ ಒತ್ತಾಯಿಸಿದ್ದಾರೆ. ಆನಮ್ ಹಣ ನೀಡಲು ನಿರಾಕರಿಸಿದಾಗ ಯುವಕರು ಗಲಾಟೆ ಆರಂಭಿಸಿದ್ದಾರೆ. ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿರುವುದನ್ನು ಕಂಡು ಆನಮ್ ತನ್ನ ಸ್ನೇಹಿತೆ ಪಾರಿ ಎಂಬಾಕೆಗೆ ದೂರವಾಣಿ ಕರೆ ಮಾಡಿ, ಸ್ಥಳಕ್ಕೆ ಬರಲು ತಿಳಿಸಿದ್ದಾಳೆ. ಗೌಸಿಯಾನಗರದ ನಿವಾಸಿಯಾದ ಪಾರಿ ಸ್ಥಳಕ್ಕೆ ಬರುತ್ತಿದ್ದಂತೆಯೇ, ಆಕ್ರೋಶಗೊಂಡಿದ್ದ ಯುವಕರು ತಲ್ವಾರ್ ಮತ್ತು ಚಾಕುವಿನಿಂದ ಹಲ್ಲೆ ನಡೆಸಿದ್ದಾರೆ. ಈ ವೇಳೆ ಪಾರಿ ಅವರ ಮುಖಕ್ಕೆ ಚಾಕುವಿನಿಂದ ಇರಿದು ತೀವ್ರವಾಗಿ ಗಾಯಗೊಳಿಸಲಾಗಿದೆ. ರಕ್ಷಣೆ ಬಂದ ಪಾರಿಗೂ ಗಂಭೀರವಾಗಿ ಗಾಯವಾಗಿದ್ದು ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಇಬ್ಬರೂ ತೃತೀಯಲಿಂಗಿಯರು ಅಪಾಯದಿಂದ ಪಾರಾಗಿದ್ದಾರೆ ಎಂದು ತಿಳಿದುಬಂದಿದೆ.

ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರ ಬಿ.ವೈ.ವಿಜಯೇಂದ್ರ ಪ್ರಚಾರ

ಕಾಂಗ್ರೆಸ್ ಹಣ ಕೆಲಸ ಮಾಡಲ್ಲ



ಬಾಗಲಕೋಟೆಯಲ್ಲಿ ಸೋಲುವ ಭಯದಿಂದ ಮುಖ್ಯಮಂತ್ರಿಗಳು 10-15 ಮಂತ್ರಿಗಳ ಜೊತೆ ಸೂಟ್ ಕೇಸ್ ಸಮೇತ ಠಿಕಾಣಿ ಹೂಡಿದ್ದಾರೆ. ದಾವಣಗೆರೆ, ಬಾಗಲಕೋಟೆಯಲ್ಲಿ ಸೋಲಿನ ಭಯದಲ್ಲಿ ಡೇರಾ ಹಾಕಿಕೊಂಡು ಕೂತಿದ್ದಾರೆ. ಎರಡೂ ಕಡೆಗಳಲ್ಲಿ ಬಿಜೆಪಿ ಗೆಲುವು ನಿಶ್ಚಿತ.
■ ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

• **ಬಾಗಲಕೋಟೆ:** ವಿಶೇಷ ಕ್ಯಾಬಿನೆಟ್ ಮಾಡಿ ಮುಳುಗಡೆ ಪ್ರದೇಶದ ರೈತರಿಗೆ ಪರಿಹಾರ ಕೊಡುತ್ತೇವೆ ಎಂದು ಪೊಳ್ಳು ಭರವಸೆ ನೀಡಿ ಇಲ್ಲಿವರೆಗೆ ಎಷ್ಟು ಸಾವಿರ ಕೋಟಿ ಬಿಡುಗಡೆ ಮಾಡಿದ್ದೀರಿ. ನಮ್ಮ ನಡೆ ಕೃಷ್ಣೆ ಕಡೆ ಎಲ್ಲಿ ಹೋಯ್ತು ಎಂದು ಜನರಿಗೆ ಉತ್ತರ ಕೊಡಿ. ಗ್ಯಾರಂಟಿ ಬಗ್ಗೆ ವಿಶ್ವಾಸ ಇದ್ದರೆ ಸೂಟ್‌ಕೇಸ್ ಸಮೇತ ಏಕೆ ಠಿಕಾಣಿ ಹೂಡಿದ್ದೀರಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮುಖ್ಯಮಂತ್ರಿಗಳ ವಿರುದ್ಧ ಪ್ರಶ್ನೆಯ ಸುರಿಮಳೆಗೈದರು.

ಉಪಚುನಾವಣೆ ನಿಮಿತ್ತ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರವಾಗಿ ನವನಗರದಲ್ಲಿ ಮನೆ ಮನೆಗೆ ತೆರಳಿ ಪ್ರಚಾರ ನಡೆಸಿ ಮಾತನಾಡಿದ ಅವರು, ಕೃಷ್ಣಾ ಮೇಲ್ದಂಡೆ ಯೋಜನೆ ಅನುದಾನ ವಿಚಾರಕ್ಕೆ ಸಿಎಂಗೆ ತಿರುಗೇಟು ನೀಡಿ ಬೊಗಳೆ ಹೊಡೆದುಕೊಂಡೆ 3 ವರ್ಷ ಆಡಳಿತ ನಡೆಸಿದ್ದಾರೆ ಎಂದರು. ನಾಲ್ಕು ತಿಂಗಳ ಹಿಂದೆ ವಿಶೇಷ ಕ್ಯಾಬಿನೆಟ್ ಮಾಡಿ ಮುಳುಗಡೆ ಪ್ರದೇಶ ರೈತರಿಗೆ ಒಂದು ಎಕರೆ ನೀರಾವರಿ ಭೂಮಿಗೆ 40 ಲಕ್ಷ ರೂ., ಖುಷ್ಕಿ ಜಮೀನಿಗೆ 30ಲಕ್ಷ ರೂ.ಅಂತೆ ಎಷ್ಟು ಬಿಡುಗಡೆಯಾಗಿದೆ ಉತ್ತರ ಕೊಡಲಿ. 2010ರಲ್ಲಿ ಸುಪ್ರೀಂಕೋರ್ಟ್ ಆದೇಶ ಹೊರಬಿದ್ದಾಗಿಯೂ ಆಂಧ್ರ, ತೆಲಂಗಾಣ ಡಿಸ್ಪ್ಯೂಟ್ ಆಯ್ತು ಅಂತ ಕೇಂದ್ರದಲ್ಲಿ ಯುಪಿಎ ಸರ್ಕಾರ ಇದ್ದಾಗ ನಾಲ್ಕು ವರ್ಷ ಮುಂದೆ ಹೋಗಲು ಬಿಡದೇ ಕೇಂದ್ರದ ಮೇಲೆ ಗೂಬೆ ಕೂಡಿಸಿಕೊಂಡು ತಮ್ಮ ವೈಫಲ್ಯ ಮುಚ್ಚಿಕೊಳ್ಳುವ ಕುತಂತ್ರ. ಷಡ್ಯಂತ್ರ ಮಾಡುವಲ್ಲಿ ಕಾಂಗ್ರೆಸ್ ಮೇಲುಗೈ ಸಾಧಿಸಿದೆ ಎಂದು ಕಿಡಿಕಾರಿದರು.

ಸರ್ಕಾರಕ್ಕೆ ರೈತರ ಬಗ್ಗೆ, ಉತ್ತರ ಕರ್ನಾಟಕ ಬಗ್ಗೆ ಕಾಳಜಿ ಇಲ್ಲ, ನೀರಾವರಿ ಯೋಜನೆಗೆ ಹಣ ಒದಗಿಸಲು ಸಮಯವಿಲ್ಲ, ಹಣವಂತೂ ಮೊದಲೇ ಇಲ್ಲ, ಬಿಜೆಪಿ ಮೇಲೆ ಭ್ರಷ್ಟಾಚಾರದ ಸುಳ್ಳು ಆರೋಪ ಹೊರಿಸಿ ಅಧಿಕಾರಕ್ಕೆ ಬಂದು ಹಗರಣಗಳ ಆಗರವಾಗಿ ನಿಂತಿದೆ ಎಂದರು.

ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ ಮಾತನಾಡಿ, ಅಭಿವೃದ್ಧಿಯನ್ನು ಸಹಿಸದ ಕಾಂಗ್ರೆಸ್ ಗೂಬೆಕೂರಿಸಿ ಅಧಿಕಾರಕ್ಕೆ ಬರುವ ನೀಚ ಬುದ್ಧಿಯನ್ನು ಮೈಗೂಡಿಸಿಕೊಂಡಿದ್ದು ಬಾಗಲಕೋಟೆಯ ಬುಡಾ, ಆರ್‌ಟಿಓ ಡ್ರೈವಿಂಗ್ ಟ್ರ್ಯಾಕ್, ಮೇಲ್ದರ್ಜೆಗೆ ಏರಿಸಿದ ನಗರಸಭೆ, ಜಿಲ್ಲಾಡಳಿತ ಭವನದ ನವೀಕರಣ ಸೇರಿದಂತೆ ಸಾಲು ಸಾಲು ಬಿಜೆಪಿ ಅಭಿವೃದ್ಧಿ ಕಾರ್ಯಗಳನ್ನು ನೋಡಿ ಕಣ್ತುಂಬಿಕೊಳ್ಳಲಿ. ಸುಳ್ಳು ಹರಡುವುದನ್ನು ಬಿಟ್ಟು ಇನ್ನಾದರೂ ಪಾಠ ಕಲಿಯಲಿ. ವೀರಣ್ಣ ಚರಂತಿಮಠರ ಗೆಲುವನ್ನು ತಡೆಯಲು ಸಾಧ್ಯವಿಲ್ಲ ಎಂದರು.

ರಾಷ್ಟ್ರಪತಿ ದ್ರೌಪದಿ ಮುರ್ಮು ಆಗಮನ



• **ಬೆಂಗಳೂರು:** ತುಮಕೂರಿನ ಸಿದ್ದಗಂಗಾ ಮಠದಲ್ಲಿ ಬುಧವಾರ (ಏ.1) ಆಯೋಜಿಸಲಾಗಿರುವ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳ 119ನೇ ಜಯಂತೋತ್ಸವ ಹಾಗೂ ಗುರುವಂದನಾ ಕಾರ್ಯಕ್ರಮದಲ್ಲಿ ಭಾಗವಹಿಸಲು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಂಗಳವಾರ ರಾತ್ರಿ ಭಾರತೀಯ ವಾಯುಸೇನೆಯ ವಿಶೇಷ ವಿಮಾನದ ಮೂಲಕ ಬೆಂಗಳೂರಿನ ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಆಗಮಿಸಿದರು.

ರಾಷ್ಟ್ರಪತಿಗಳನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್, ಕೇಂದ್ರ ಸಚಿವ ವಿ. ಸೋಮಣ್ಣ, ಸಚಿವ ರಾಮಲಿಂಗರೆಡ್ಡಿ, ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ಕರ್ನಾಟಕ ಪೊಲೀಸ್ ಮಹಾನಿರ್ದೇಶಕ ಡಾ. ಎಂ.ಎ ಸಲೀಮ್, ಬೆಂಗಳೂರು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್, ಬೆಂಗಳೂರು ನಗರ ಜಿಲ್ಲಾಧಿಕಾರಿ ಜಗದೀಶ್ ಜಿ, ಸೇರಿದಂತೆ ಹಿರಿಯ ಅಧಿಕಾರಿಗಳು, ಗಣ್ಯರು ರಾಷ್ಟ್ರಪತಿ ಅವರನ್ನು ಸ್ವಾಗತಿಸಿದರು.

ಸರ್ಕಾರಿ ಕಟ್ಟಡ ಕರ ₹473 ಕೋಟಿ ಬಾಕಿ

ಪುಟ ೧➡ ಜಿಬಿಎ ವ್ಯಾಪ್ತಿಯಲ್ಲಿರುವ ಎಲ್ಲ ಸರ್ಕಾರಿ ಕಟ್ಟಡಗಳಿಂದ ಪಾಲಿಕೆಗಳಿಗೆ ಒಟ್ಟು 472 ಕೋಟಿ ಸೇವಾ ತೆರಿಗೆ ಬಾಕಿ ಉಳಿಸಿಕೊಂಡಿವೆ ಎಂದು ಆರೋಪಿಸಿದರು.

ಗುಬ್ಬಿ ಮೇಲೆ ಬ್ರಹ್ಮಾಸ್ತ್ರ ಬೇಡ: ಕೇವಲ 50 ಸಾವಿರದಿಂದ 5 ಲಕ್ಷದವರೆಗೆ ತೆರಿಗೆ ಬಾಕಿ ಇರುವ ಮಧ್ಯಮ ಮತ್ತು ಕೆಳ ಮಧ್ಯಮ ವರ್ಗದವರ ಆಸ್ತಿಗಳನ್ನು ಹರಾಜು ಹಾಕಲು ಮುಂದಾಗಿರುವ ಪಾಲಿಕೆ ಅಧಿಕಾರಿಗಳ ಧೋರಣೆ ಸರಿಯಲ್ಲ. ಬೃಹತ್ ಟೆಕ್ ಪಾರ್ಕ್‌ಗಳು, ಮಾಲ್‌ಗಳು ಮತ್ತು ಶಿಕ್ಷಣ ಸಂಸ್ಥೆಗಳಿಂದ ತೆರಿಗೆ ವಸೂಲಿ ಮಾಡದ ಅಧಿಕಾರಿಗಳು ಸಾಮಾನ್ಯ ಜನರ ಮೇಲೆ ದರ್ಪ ತೋರುತ್ತಿದ್ದಾರೆ ಎಂದು ರಮೇಶ್ ಕಿಡಿಕಾರಿದರು.

ಬೃಹತ್ ಬಾಕಿ ವಸೂಲಿ ಮಾಡಿ



ಪುಟ ೧➡ 18 ವರ್ಷಗಳಿಂದ ತೆರಿಗೆ ಕಟ್ಟದ ವಿಧಾನಸೌಧ, ವಿಕಾಸಸೌಧಗಳಿಗೆ ಕನಿಷ್ಠ ಒಂದು ದಿನವಾದರೂ ಬೀಗ ಜಡಿಯುವ ಮೂಲಕ ಕಾನೂನು ಎಲ್ಲರಿಗೂ ಒಂದೇ ಎಂಬುದನ್ನು ಸಾರಿ ಹೇಳಲಿ. ಜಿಬಿಎ ಮುಖ್ಯ ಆಯುಕ್ತರು ಮತ್ತು ಕಂದಾಯ ಇಲಾಖೆಯ ವಿಶೇಷ ಆಯುಕ್ತರು ಈ ಕೂಡಲೇ ಸೇವಾ ತೆರಿಗೆ ಬಾಕಿ ಉಳಿಸಿಕೊಂಡ ಸರ್ಕಾರಿ ಇಲಾಖೆಗಳ ಮುಖ್ಯಸ್ಥರಿಗೆ ಡಿಮ್ಯಾಂಡ್ ನೋಟಿಸ್ ಜಾರಿಗೊಳಿಸಬೇಕು ಎಂದು ಎನ್.ಆರ್. ರಮೇಶ್ ಆಗ್ರಹಿಸಿದರು.

ಹಿಂದಿನ ಬಿಬಿಎಂಪಿ ಎಂಟು ವಲಯಗಳಲ್ಲಿರುವ ಸರ್ಕಾರಿ ಕಟ್ಟಡಗಳು 2025 ರ ಆರ್ಥಿಕ ವರ್ಷದವರೆಗೆ ಬಾಕಿ ಉಳಿಸಿಕೊಂಡಿರುವ ಸೇವಾ ತೆರಿಗೆಯ ವಲಯವಾರು ವಿವರ

ವಲಯದ ಹೆಸರು	ಬಾಕಿ ಮೊತ್ತ (ಕೋಟಿ ರೂ.ಗಳಲ್ಲಿ)
ಪೂರ್ವ ವಲಯ	246
ಯಲಹಂಕ	67.48
ರಾಜರಾಜೇಶ್ವರಿ ನಗರ	57.52
ಮಹದೇವಪುರ	39.13
ದಕ್ಷಿಣ ವಲಯ	33.70
ಬೊಮ್ಮನಹಳ್ಳಿ	05.68
ದಾಸರಹಳ್ಳಿ	04.17
ಪಶ್ಚಿಮ ವಲಯ	03.61
ದಾಸರಹಳ್ಳಿ	04.17
ಪಶ್ಚಿಮ ವಲಯ	03.61

ಹಿಂದಿ ಮಾತು, ಕಲಿಕೆ ತಪ್ಪಲ್ಲ: ಬಿಎಸ್‌ವೈ

ಪುಟ ೧➡ **ಬಿಜೆಪಿ ಅಭ್ಯರ್ಥಿಗಳ ಗೆಲುವು ನಿಶ್ಚಿತ:** ಉಪ ಚುನಾವಣೆ ಪ್ರಚಾರಕ್ಕೆ ಸಂಬಂಧಿಸಿದ ಪ್ರಶ್ನೆಗೆ ಉತ್ತರಿಸಿದ ಅವರು, ಮಂಗಳವಾರ ಮತ್ತು ಬುಧವಾರ ದಾವಣಗೆರೆಯಲ್ಲಿ ಪ್ರಚಾರ ಮಾಡುತ್ತೇನೆ, ಏಪ್ರಿಲ್ 5 ಮತ್ತು 6ರಂದು ಬಾಗಲಕೋಟೆಯಲ್ಲಿ ಚರಂತಿಮಠ ಪರವಾಗಿ ಪ್ರಚಾರಕ್ಕೆ ಹೋಗುತ್ತೇನೆ. ಎರಡೂ ಕಡೆ ದೊಡ್ಡ ಅಂತರದಲ್ಲಿ ನಮ್ಮ ಅಭ್ಯರ್ಥಿಗಳು ಗೆಲ್ಲುತ್ತಾರೆ. ನನಗೆ ನೂರಕ್ಕೆ ನೂರು ವಿಶ್ವಾಸವಿದೆ ಎಂದು ಭವಿಷ್ಯ ನುಡಿದರು.

ಇಡೀ ಸರ್ಕಾರವೇ ಉಪಚುನಾವಣೆ ಪ್ರಚಾರದಲ್ಲಿದೆ. ಸ್ವತಃ ಮುಖ್ಯಮಂತ್ರಿಗಳೇ ನಾಲ್ಕೈದು ದಿನ ಅಲ್ಲಿ ಹೋಗಿ ಕುಳಿತಿದ್ದಾರೆ. ಅದರರ್ಥ ಚುನಾವಣಾ ಸೋಲಿನ ಭಯ ಅವರಿಗೆ ಕಾಡುತ್ತಿದೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಜನ ಕಾಂಗ್ರೆಸ್‌ನವರಿಗೆ ತಕ್ಕ ಪಾಠ ಕಲಿಸಲಿ ಎಂದು ಹೇಳಿದರು.

ರಾಜ್ಯದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜನಹಿತ ಮರೆತು ತುಘಲಕ್ ದರ್ಬಾರ್ ನಡೆಸುತ್ತಿದ್ದಾರೆ. ಅಜೀರ್ಣವಾಗುವಷ್ಟು ಬಹುಮತ ಕಾಂಗ್ರೆಸ್‌ಗೆ ಈಗಾಗಲೇ ಇದೆ, ಮತ್ತೊಮ್ಮೆ ಚುನಾವಣೆ ಗೆದ್ದರೆ ಅಧಿಕಾರ ಮದದಿಂದ ಇನ್ನೂ ಹೆಚ್ಚು ಭ್ರಷ್ಟಾಚಾರಕ್ಕೆ ಅವಕಾಶ ಕೊಟ್ಟಂತಾಗುತ್ತದೆ. ಆದ್ದರಿಂದ ಎರಡೂ ಕ್ಷೇತ್ರಗಳ ಮತದಾರರು ಈ ಬಾರಿ ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸಬೇಕು. ಬಿಜೆಪಿಯ ಇಬ್ಬರು ಅಭ್ಯರ್ಥಿಗಳನ್ನು ಮತದಾರರು ಗೆಲ್ಲಿಸಿಕೊಡಲಿ ಎಂದು ಮನವಿ ಮಾಡಿದರು.

ಬಿಜೆಪಿ ಪರ ಪ್ರಚಾರಕ್ಕೆ ಹಸಿರು ನಿಶಾನೆ

ಬಾಗಲಕೋಟೆ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರ ಬಿಜೆಪಿ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಪ್ರಚಾರ ನಡೆಸಲಿರುವ ಹಿನ್ನೆಲೆಯಲ್ಲಿ ಅವರ ಪ್ರಚಾರಕ್ಕೆ ಬಿ.ಎಸ್. ಯಡಿಯೂರಪ್ಪ ಹಸಿರು ನಿಶಾನೆ ತೋರಿದ್ದಾರೆ. ಯಾರೇ ಬಂದರೂ ಪ್ರಚಾರ ನಡೆಸಲು ಅವಕಾಶವಿದೆ. ಅವರು ಪ್ರಚಾರಕ್ಕೆ ಬರಲಿ, ಸ್ವಾಗತ ಮಾಡುತ್ತೇನೆ ಎಂದು ಯಡಿಯೂರಪ್ಪ ಹೇಳಿದರು.

ಸಿಂದಗಿಯಲ್ಲಿ ಬೈಕ್ ಸವಾರ ಸಜೀವ ದಹನ

• **ಸಿಂದಗಿ:** ಸಾರಿಗೆ ಬಸ್ ಹಾಗೂ ಬೈಕ್ ಮುಖಾಮುಖಿ ಡಿಕ್ಕಿಯಾಗಿ ಸ್ಥಳದಲ್ಲಿಯೇ ಸಾರಿಗೆ ಬಸ್ ಧಗಧಗ ಹೊತ್ತಿ ಉರಿದಿದ್ದು, ಬೈಕ್ ಸವಾರ ಸಜೀವ ದಹನಗೊಂಡಿರುವ ಹೃದಯ ವಿದ್ರಾವಕ ಘಟನೆ ಸಿಂದಗಿ ತಾಲೂಕಿನ ಕನ್ನೊಳ್ಳಿ ಟೋಲ್‌ಗೇಟ್ ಬಳಿ ನಡೆದಿದೆ. ಮೃತಪಟ್ಟವನನ್ನು ಜಿಲ್ಲೆಯ ದೇವರಹಿಪ್ಪರಗಿ ತಾಲೂಕಿನ ಮುಳಸಾವಳಗಿ ಗ್ರಾಮದ ಅಭಿಷೇಕ ಸಾಯಬಗೌಡ ನಾಗರಾಳ ಎಂದು ಗುರುತಿಸಲಾಗಿದೆ. ಸಾರಿಗೆ ಬಸ್ ಹಾಗೂ ಬೈಕ್ ಡಿಕ್ಕಿಯ ರಭಸಕ್ಕೆ ಬೈಕ್ ಟ್ಯಾಂಕಿನ ಪೆಟ್ರೋಲ್ ಚೆಲ್ಲಿ, ಬಸ್‌ಗೆ ಬೆಂಕಿ ತಗುಲಿಕೊಂಡಿದ್ದು, ಬೆಂಕಿ ಬಸ್‌ಗೆ ಆವರಿಸಿಕೊಂಡಿದೆ. ಅದೃಷ್ಟವಶಾತ್ ಪ್ರಯಾಣಿಕರು ಬಚಾವ್ ಆಗಿದ್ದು, ಬಸ್ ಅಡಿ ಸಿಲುಕಿದ್ದ ಬೈಕ್ ಸವಾರ ಸಜೀವ ದಹನಗೊಂಡಿದ್ದಾನೆ. ಸ್ಥಳಕ್ಕೆ ಸಿಂದಗಿ ಅಗ್ನಿಶಾಮಕ ಸಿಬ್ಬಂದಿ ದೌಡಾಯಿಸಿ ಬೆಂಕಿ ನಂದಿಸಲು ಯತ್ನಿಸಿದ್ದು, ಸ್ಥಳಕ್ಕೆ ಪೊಲೀಸ್‌ರು ಭೇಟಿ ನೀಡಿ ಪರಿಶೀಲಿಸಿದರು. ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತು. ಸಿಂದಗಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.



ಬೆದರಿಸಿ 25 ಲಕ್ಷ ರೂ.ವಂಚನೆ

• **ರಾಮನಗರ:** ಐವರು ಮಹಿಳೆಯರ ಗುಂಪೊಂದು ಚಿತ್ರಮಂದಿರದ ಮಾಲೀಕ ನನ್ನು ಬೆದರಿಸಿ ಬರೋಬ್ಬರಿ 25 ಲಕ್ಷ ರೂಪಾಯಿಯನ್ನು ದೋಚಿರುವ ಘಟನೆ ನಗರದಲ್ಲಿ ಬೆಳಕಿಗೆ ಬಂದಿದೆ. ಲೇಡಿ ಗ್ಯಾಂಗ್ ನಿಂದ ಸುಲಿಗೆಗೆ ಒಳಗಾದ ಅಗ್ರಹಾರ ಬಡಾವಣೆಯ ನಿವಾಸಿಯಾಗಿರುವ 52 ವರ್ಷದ ವ್ಯಕ್ತಿ ಪೊಲೀಸರಿಗೆ ದೂರು ನೀಡಿದ್ದಾರೆ. ಸಂತ್ರಸ್ತ ವ್ಯಕ್ತಿ ನೀಡಿರುವ ದೂರಿನ ಪ್ರಕಾರ, ಆರೇಳು ತಿಂಗಳ ಹಿಂದೆ ರಾಮನಗರದ ಕೋತ್ತೀಪುರದ ಬಳಿ ವಾಸವಿದ್ದ ಆರೋಪಿ ಮಹಿಳೆಯೋರ್ವಳು ಸಿನಿಮಾ ನೋಡುವ ನೆಪದಲ್ಲಿ ತನ್ನ ಥಿಯೇಟರ್‌ಗೆ ಬಂದಿದ್ದಳು. ಬಳಿಕ ತನ್ನನ್ನು ಪರಿಚಯಿಸಿಕೊಂಡು ಮದುವೆಯಾಗಲು ಇಚ್ಛೆ ಇದೆ ಎಂದು ಹೇಳಿದ್ದಳು. ಆದರೆ ತಾನದನ್ನು ನಿರಾಕರಿಸಿದ ನಂತರ, ಆಕೆ ಮತ್ತಿಬ್ಬರು ಮಹಿಳೆಯರೊಂದಿಗೆ ಇನ್ನೊಮ್ಮೆ ಭೇಟಿ ನೀಡಿದ್ದಳು. ಬಳಿಕ ಮಹಿಳೆಯರೆಲ್ಲರೂ ಸೇರಿ ಒಂದಲ್ಲ ಒಂದು ನೆಪದಲ್ಲಿ ತನ್ನನ್ನು ಬೆದರಿಸಿ ಹಣ ಹಾಗೂ ಚಿನ್ನಾಭರಣಗಳನ್ನು ಸುಲಿಗೆ ಮಾಡಿದ್ದಾರೆ ಎಂದು ಉಲ್ಲೇಖಿಸಿದ್ದಾರೆ. ಈ ಸಂಬಂಧ ಐಜೂರು ಠಾಣೆಯಲ್ಲಿ ದೂರು ದಾಖಲಾಗಿದೆ.

ಚಲಿಸುತ್ತಿದ್ದ ಕಾರಿಗೆ ಬೆಂಕಿ

• **ದೇವನಹಳ್ಳಿ:** ಚಲಿಸುತ್ತಿದ್ದ ಕಾರಿನಲ್ಲಿ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡಿರುವ ಪರಿಣಾಮ, ಕಾರು ಸಂಪೂರ್ಣವಾಗಿ ಸುಟ್ಟುಹೋಗಿರುವ ಘಟನೆ ಹೊಸಕೋಟೆ-ದಾಬಸ್‌ಪೇಟೆ ಹೆದ್ದಾರಿಯಲ್ಲಿ ನಡೆದಿದೆ. ನಗರದ ಹೊರವಲಯದಲ್ಲಿರುವ ದಾಬಸ್‌ಪೇಟೆ ಹೆದ್ದಾರಿಯಲ್ಲಿ ಕಾರಿನ ಇಂಜಿನ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಸಂಪೂರ್ಣ ಕಾರಿಗೆ ಆವರಿಸಿಕೊಂಡಿದೆ. ಅದೃಷ್ಟವಶಾತ್ ಕಾರಿನಲ್ಲಿದ್ದವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಬೆಂಕಿ ಕಾಣಿಸಿಕೊಳ್ಳುತ್ತಿದ್ದಂತೆ, ಮಾಲೀಕ ಕಾರಿನಿಂದ ಕೆಳಗೆ ಇಳಿದು ಕಾರಿನಲ್ಲಿದ್ದವರನ್ನು ಕೆಳಗೆ ಇಳಿಸಿದ್ದರಿಂದ ಪ್ರಾಣಾಪಾಯ ತಪ್ಪಿಸಿಕೊಂಡಿದ್ದಾರೆ.

ಅಹಿಂಸಾ ತತ್ವ ಮರು ಸ್ಥಾಪನೆ ಅತಿ ಅವಶ್ಯ

ಪುಟ ೧➡ ಪ್ರಾಚೀನ ಮೌಲ್ಯಯುತ ಹಸ್ತಪ್ರತಿಗಳನ್ನು ಸಂರಕ್ಷಿಸಲು ವಿಫಲವಾಗಿರುವ ಹಿಂದಿನ ಸರಕಾರಗಳ ಲೋಪಗಳನ್ನು ನಾವು ಸರಿಪಡಿಸುತ್ತಿದ್ದೇವೆ ಎಂದು ಹೇಳಿದರು.

ಭಾರತದಲ್ಲಿ ಮಾತ್ರ ಕಾರ್ಯಸಾಧ್ಯ: ವೇದಗಳು, ಪುರಾಣಗಳು, ಆಯುರ್ವೇದ, ಯೋಗ ಮತ್ತಿತರ ಸೈದ್ಧಾಂತಿಕ ವಿಚಾರಧಾರೆಸಹಿತ ಪರಂಪರೆ, ಸಂಪ್ರದಾಯಗಳನ್ನು ಒಗ್ಗೂಡಿಸಿರುವ ಮ್ಯೂಸಿಯಂ, ಭಾರತದ ವೈವಿಧ್ಯತೆ ಮತ್ತು ಏಕತೆಗಳ ಅತ್ಯುಚ್ಚ ಬಲವನ್ನು ಪ್ರತಿಫಲಿಸಿದೆ. ಸಾಮ್ರಾಟ್ ಸಂಪ್ರತಿ ಸಿದ್ಧಾಂತ ಮತ್ತು ಆಡಳಿತ ನಡುವಣ ಸಂಬಂಧವನ್ನು ಪ್ರತಿನಿಧಿಸಿದ್ದಾರೆ. ಸಾಮ್ರಾಟ್ ಸಂಪ್ರತಿ ಚಾರಿತ್ರಿಕ ದೊರೆಯ ಹೆಸರಷ್ಟೇ ಅಲ್ಲ, ಭಾರತದ ಸಿದ್ಧಾಂತವನ್ನು ಅದರ ಅನುಷ್ಠಾನದೊಂದಿಗೆ ಜೋಡಿಸುವ ಸೇತುವಾಗಿದ್ದಾರೆಂದು ಪ್ರಧಾನಿ ಮೋದಿ ಬಣ್ಣಿಸಿದರು.

ವಿದೇಶಿ ದಾಳಿಕೋರರಿಂದ ಜ್ಞಾನ ಭಂಡಾರ ನಾಶ: ಸಂಪ್ರತಿ ಮಹಾರಾಜರ ದಂತಕಥೆಯನ್ನು ಈ ಮ್ಯೂಸಿಯಂ ಸಂರಕ್ಷಿಸುವುದು ಮಾತ್ರವಲ್ಲ, ಹೆಜ್ಜೆ ಹೆಜ್ಜೆಗೂ ಭಾರತದ ಅಸ್ಮಿತೆಯನ್ನು ಎತ್ತಿಹಿಡಿಯಲಿದೆ. ಮ್ಯೂಸಿಯಂನ ಏಳು ಗ್ಯಾಲರಿಗಳು ಭಾರತದ ವೈವಿಧ್ಯತೆ ಮತ್ತು ಸಾಂಸ್ಕೃತಿಕ ಸಂಪನ್ನತೆಯನ್ನು ಎತ್ತಿಹಿಡಿಯಲಿವೆ ಎಂದು ಸಾರಿದ ಪ್ರಧಾನಿ, ತಕ್ಷಶಿಲೆ ಮತ್ತು ನಳಂದಾದಂತಹ ನಮ್ಮ ಅದೆಷ್ಟೋ ಪ್ರಾಚೀನ ಜ್ಞಾನ ಭಂಡಾರ ಕೇಂದ್ರಗಳನ್ನು ಗತಕಾಲದಲ್ಲಿ ವಿದೇಶಿ ದಾಳಿಕೋರರು ನಾಶಪಡಿಸಿದ ಪರಿಣಾಮ, ಭಾರತಕ್ಕೆ ಅಪಾರ ಅಮೂಲ್ಯ ಜ್ಞಾನ ಸಂಪತ್ತು ನಷ್ಟವಾಗಿದೆ. ದಾಳಿಕೋರರು ಅಮೂಲ್ಯ ಹಸ್ತಪ್ರತಿಗಳನ್ನು ಸುಟ್ಟುಹಾಕಿದ್ದರಿಂದ ಮಾನವೀಯತೆಯ ಯಥೇಚ್ಛ ಪರಂಪರೆ ಕೈತಪ್ಪಿಹೋಗಿದೆ ಎಂದು ಬೇಗುದಿ ವ್ಯಕ್ತಪಡಿಸಿದರು.

ರಾಷ್ಟ್ರೀಯ ಪ್ರಾಧಾನ್ಯತೆ ನೀಡದ ಕಾಂಗ್ರೆಸ್ ಸರಕಾರ: ನಂತರದ ವರ್ಷಗಳಲ್ಲಿ , ಅಳಿದುಳಿದ ಹಸ್ತಪ್ರತಿಗಳನ್ನು ಜನರು ಒಂದು ತಲೆಮಾರಿನಿಂದ ಇನ್ನೊಂದಕ್ಕೆ ತಲುಪಿಸುವ ಮುಖೇನ ಇವುಗಳನ್ನು ಸಂರಕ್ಷಿಸಿದರು. ಸ್ವಾತಂತ್ರ್ಯಾನಂತರದಲ್ಲಿ ಹಿಂದಿನ ಸರಕಾರಗಳು ಜ್ಞಾನಭಂಡಾರಯುಕ್ತ ಪ್ರಾಚೀನ ಹಸ್ತಪ್ರತಿಗಳ ಸಂರಕ್ಷಿಸಲು ಮುಂದಾಗಲಿಲ್ಲ, ಸ್ವಾತಂತ್ರ್ಯಾನಂತರದಲ್ಲಿ ಇವಕ್ಕೆ ರಾಷ್ಟ್ರೀಯ ಪ್ರಾಧಾನ್ಯತೆ ಕೊಡಬೇಕಿತ್ತು. ದುರದೃಷ್ಟವಶಾತ್ ವಸಾಹತುಶಾಹಿ ಚಿಂತನೆಯಿಂದಾಗಿ ಈ ಮಹತ್ವದ ವಿಚಾರಕ್ಕೆ ಪ್ರಾಧಾನ್ಯತೆ ಸಿಗಲೇ ಇಲ್ಲ ಎಂದು ಪ್ರಧಾನಿ 2014ರ ಮುನ್ನ ದೇಶವಾಳಿದ್ದ ಕಾಂಗ್ರೆಸ್ ನೇತೃತ್ವದ ಸರಕಾರಗಳನ್ನು ತರಾಟೆಗೆತ್ತಿಕೊಂಡರು.

ಸೆಮಿಕಂಡಕ್ಟರ್ ಜೋಡಣಾ ಸೌಲಭ್ಯ ಉದ್ಘಾಟನೆ: ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಸನಂದ್‌ನಲ್ಲಿ ಕೇನ್ಸ್ ಸೆಮಿಕಾನ್‌ನ ಹೊರಗುತ್ತಿಗೆ ಸೆಮಿಕಂಡಕ್ಟರ್ ಜೋಡಣೆ ಮತ್ತು ಪರೀಕ್ಷಾ ಸೌಲಭ್ಯವನ್ನು ಉದ್ಘಾಟಿಸಿದರು. ಜಾಗತಿಕ ಮಾರುಕಟ್ಟೆಯಲ್ಲಿ ವಿಶ್ವಾಸಾರ್ಹ ಸೆಮಿಕಂಡಕ್ಟರ್ ಪೂರೈಕೆದಾರನಾಗಿ ಭಾರತವು ತನ್ನ ಪಾತ್ರವನ್ನು ಬಲಪಡಿಸುತ್ತಿದೆ ಎಂದು ಹೇಳಿದರು. ಈ ಸೌಲಭ್ಯದ ಉದ್ಘಾಟನೆಯು ಸ್ವಾವಲಂಬನೆ ಕಡೆಗೆ ಭಾರತದ ಪ್ರಯತ್ನವನ್ನು ಬಲಪಡಿಸುತ್ತದೆ.

ಇದು ದೃಢವಾದ ಅರೆವಾಹಕ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವಲ್ಲಿ ಒಂದು ಹೆಗ್ಗುರುತು ಹೆಜ್ಜೆಯಾಗಿದೆ ಎಂದು ಮೋದಿ ಹೇಳಿದರು. ಪ್ಯಾಕ್ಸ್ ಸಿಲಿಕಾ ಯೋಜನೆಗೆ ಸೇರುವ ಭಾರತದ ನಿರ್ಧಾರವು ನಿರ್ಣಾಯಕ ಖನಿಜಗಳ ಪೂರೈಕೆಯನ್ನು ಬಲಪಡಿಸುವ ಗುರಿಯನ್ನು ಹೊಂದಿದೆ ಎಂದು ಮೋದಿ ಹೇಳಿದರು.



ಕನ್ನಡದ ಸಾಹಿತಿ ಅಮರೇಶ ನುಗಡೋಣಿ ಅವರ ದಡ ಸೇರಿಸು ತಂದೆ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಂದಿದ್ದು, ಮಂಗಳವಾರ ಹೊಸದಿಲ್ಲಿಯ ಕಮಾನಿ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸ್ವೀಕರಿಸಿದರು.

ಜನರಿಂದ ಕಾಂಗ್ರೆಸ್ ಸರ್ಕಾರಕ್ಕೆ ತಕ್ಕ ಪಾಠ: ಯಡಿಯೂರಪ್ಪ

• **ದಾವಣಗೆರೆ:** ರಾಜ್ಯದಲ್ಲಿನ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರ ಮತ್ತು ಆಡಳಿತ ವೈಫಲ್ಯಗಳಿಂದ ಬೇಸತ್ತಿರುವ ಜನರು ಉಪಚುನಾವಣೆಗಳಲ್ಲಿ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ವಿಶ್ವಾಸ ವ್ಯಕ್ತಪಡಿಸಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಂಗ್ರೆಸ್ ಸರ್ಕಾರಕ್ಕೆ ರಾಜ್ಯದ ಅಭಿವೃದ್ಧಿ ಬಗ್ಗೆ ಗಮನವಿಲ್ಲ, ಲೂಟಿ ಹೊಡೆಯುವುದೇ ಸರ್ಕಾರದ ಸಾಧನೆ ಆಗಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿವೃದ್ಧಿಗೆ ಮೀಸಲಿಟ್ಟಿದ್ದ ಸಾವಿರಾರು ಕೋಟಿ ರೂಪಾಯಿ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಲಾಗಿದೆ. ಇದರಿಂದ ದಲಿತ ಸಮುದಾಯಕ್ಕೆ ಅನ್ಯಾಯವಾಗಿದೆ. ಬಿಜೆಪಿ ಜಾರಿಗೆ ತಂದಿದ್ದ ಕಿಸಾನ್ ಸಮ್ಮಾನ್ ಯೋಜನೆಯನ್ನು ಸ್ಥಗಿತಗೊಳಿಸುವ ಮೂಲಕ ರೈತರಿಗೂ ದ್ರೋಹ ಎಸಗಿದೆ ಎಂದು ದೂರಿದರು. ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಭಾರಿ ಹಗರಣ ನಡೆದಿದ್ದು, ಹಣವನ್ನು ಬೇರೆ ರಾಜ್ಯದ ಚುನಾವಣೆಗೆ ಬಳಸಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಚಿವರೊಬ್ಬರು ರಾಜೀನಾಮೆ ಕೂಡ ನೀಡಿದ್ದಾರೆ. ಇದೆಲ್ಲದರ ಹಿನ್ನೆಲೆಯಲ್ಲಿ ದಾವಣಗೆರೆ ಹಾಗೂ ಬಾಗಲಕೋಟೆ ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಜಯ ಸಾಧಿಸಲಿದ್ದಾರೆ ಎಂದರು.

ದಲಿತ ಸಮುದಾಯಕ್ಕೆ ಕಾಂಗ್ರೆಸ್ ಸರ್ಕಾರ ಅನ್ಯಾಯ: 2000 ರೂಪಾಯಿ ಗೃಹಲಕ್ಷ್ಮೀ ಹಣ ಹಾಕಿ, ಸಿಕ್ಕ ಸಿಕ್ಕ ವಸ್ತುಗಳ ದರ ಏರಿಕೆ ಮಾಡಲಾಗಿದೆ. 39 ಸಾವಿರ ಕೋಟಿ ಎಸ್‌ಸಿಪಿ ಟಿಎಸ್ ಹಣ ಗ್ಯಾರಂಟಿ ಯೋಜನೆಗೆ ಅಕ್ರಮವಾಗಿ ವರ್ಗಾವಣೆ ಅಂತ ಬಿಎಸ್‌ವೈ ಆರೋಪಿಸಿದ್ರು. ದಲಿತ ಸಮುದಾಯಕ್ಕೆ ಕಾಂಗ್ರೆಸ್ ಸರ್ಕಾರ ದೊಡ್ಡ ಅನ್ಯಾಯ ಮಾಡಿದೆ. ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ತೆಲಂಗಾಣ ಚುನಾವಣೆಗೆ ಬಳಕೆ ಮಾಡಿದೆ ಅಂತ ಇದೇ ಸಂದರ್ಭದಲ್ಲಿ ಬಿಎಸ್‌ವೈ ಆರೋಪಿಸಿದರು.

ಚನ್ನಕೇಶವಸ್ವಾಮಿ ರಥೋತ್ಸವ



ಬೇಲೂರು ಶ್ರೀ ಚನ್ನಕೇಶವ ಸ್ವಾಮಿಯವರ ಬ್ರಹ್ಮ ರಥೋತ್ಸವವು ಮಂಗಳವಾರ ಸಹಸ್ರಾರು ಭಕ್ತಾದಿಗಳ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಲೋಕಾಯುಕ್ತ ನ್ಯಾಯಾಲಯ ಮಹತ್ವದ ತೀರ್ಪು

ಮಾಜಿ ಎಂಡಿ ವಿ. ಮುನಿಯಪ್ಪ ದೋಷಿ: ಮೂರು ವರ್ಷ ಶಿಕ್ಷೆ

• **ಬೆಂಗಳೂರು:** ಆದಾಯಕ್ಕೂ ಮೀರಿದ ಆಸ್ತಿಗಳಿಕೆ ಪ್ರಕರಣದಲ್ಲಿ ಕರ್ನಾಟಕ ತಾಂತ್ರಿಕ ಶಿಕ್ಷಣ ಪರಿಷತ್‌ನ ನಿವೃತ್ತ ವ್ಯವಸ್ಥಾಪಕ ನಿರ್ದೇಶಕ ವಿ. ಮುನಿಯಪ್ಪ ಅವರು ದೋಷಿ ಎಂದು ಕರ್ನಾಟಕ ಲೋಕಾಯುಕ್ತ ನ್ಯಾಯಾಲಯವು ಮಹತ್ವದ ತೀರ್ಪು ನೀಡಿದೆ.



ಸುಮಾರು 12 ವರ್ಷಗಳ ಸುದೀರ್ಘ ಕಾನೂನು ಹೋರಾಟದ ನಂತರ ಈ ಶಿಕ್ಷೆ ಪ್ರಕಟವಾಗಿದ್ದು, ಭ್ರಷ್ಟಾಚಾರದ ವಿರುದ್ಧದ ಹೋರಾಟದಲ್ಲಿ ಇದೊಂದು ಪ್ರಮುಖ ಮೈಲಿಗಲ್ಲಾಗಿದೆ. ಸಧ್ಯ ಬೆಂಗಳೂರಿನ ಬಸವ ಭವನದ ವ್ಯವಸ್ಥಾಪಕ ನಿರ್ದೇಶಕರಾಗಿದ್ದಾರೆ. ವಿ. ಮುನಿಯಪ್ಪ ವಿರುದ್ಧ 2014ರಲ್ಲಿ ಭ್ರಷ್ಟಾಚಾರ ಮತ್ತು ಅಕ್ರಮ ಆಸ್ತಿ ಗಳಿಕೆಯ ಆರೋಪದ ಮೇಲೆ ಪ್ರಕರಣ ದಾಖಲಾಗಿತ್ತು.

ಲೋಕಾಯುಕ್ತ ಪೊಲೀಸರು ನಡೆಸಿದ ತನಿಖೆಯಲ್ಲಿ, ಮುನಿಯಪ್ಪ ಅವರು ತಮ್ಮ ಅಧಿಕೃತ ಆದಾಯದ ಮೂಲಗಳಿಗಿಂತ ಕೋಟ್ಯಾಂತರ ರೂ. ಮೌಲ್ಯದ ಅಕ್ರಮ ಆಸ್ತಿಯನ್ನು ಸಂಪಾದಿಸಿರುವುದು ಸಾಕ್ಷ್ಯಾಧಾರಗಳ ಸಮೇತ ಸಾಬೀತಾಗಿತ್ತು. ಪ್ರಕರಣದ ಸಮಗ್ರ ವಿಚಾರಣೆ ನಡೆಸಿದ ನ್ಯಾಯಾಲಯವು ಆರೋಪಿಗೆ 3 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ಹಾಗೂ 4.5 ಕೋಟಿ ರೂ.ಗಳ ಬೃಹತ್ ದಂಡವನ್ನು ವಿಧಿಸಿದೆ. ಒಂದು ವೇಳೆ ಈ ದಂಡದ ಮೊತ್ತವನ್ನು ಪಾವತಿಸಲು ವಿಫಲವಾದರೆ, ಆರೋಪಿಯು ಹೆಚ್ಚುವರಿಯಾಗಿ ಆರು ತಿಂಗಳ ಕಾಲ ಜೈಲು ಶಿಕ್ಷೆ ಅನುಭವಿಸಬೇಕೆಂದು ನ್ಯಾಯಾಧೀಶರು ತೀರ್ಪಿನಲ್ಲಿ ಸ್ಪಷ್ಟಪಡಿಸಿದ್ದಾರೆ. 2014ರಲ್ಲಿ ಆರಂಭವಾದ ಈ ಕಾನೂನು ಪ್ರಕ್ರಿಯೆಯು 2026ರಲ್ಲಿ ಅಂತಿಮವಾಗಿ ಶಿಕ್ಷೆಯ ಮುದ್ರೆಯೊಂದಿಗೆ ಅಂತ್ಯಗೊಂಡಿದೆ.

ಕಿರುಸುದ್ದಿ

ಪತ್ರಕರ್ತೆ ನವ್ಯಜ್ಯೋತಿಗೆ ಕೆಯುಡಬ್ಲ್ಯೂಜೆ ಪ್ರಶಸ್ತಿ

• **ಬೆಂಗಳೂರು:** ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯೂಜೆ) 2024ನೇ ಸಾಲಿನ ವಾರ್ಷಿಕ ಪ್ರಶಸ್ತಿಗಳನ್ನು ಪ್ರಕಟಿಸಿದ್ದು, ಹೊಸದಿಗಂತ ಪತ್ರಿಕೆಯ ವಿಶೇಷ ಪ್ರತಿನಿಧಿ ನೆಲ್ಲಿಜೆ ನವ್ಯಜ್ಯೋತಿ ಅವರು, ಪತ್ರಕರ್ತ ದಿ. ಗುರುಲಿಂಗಸ್ವಾಮಿ ಹೊಳಿಮಠ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಬೀದರ್‌ನಲ್ಲಿ ಏ.11 ಮತ್ತು 12 ರಂದು ನಡೆಯಲಿರುವ 40ನೇ ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಮತ್ತು ಪ್ರಧಾನ ಕಾರ್ಯದರ್ಶಿ ಜಿ.ಸಿ ಲೋಕೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಜನರ ಮೇಲೆ ಸಾಲದ ಹೊರೆ ಎರಿಸಿದ ಸರ್ಕಾರ

• **ದಾವಣಗೆರೆ:** ರಾಜ್ಯದಲ್ಲಿರುವುದು ಕಾಂಗ್ರೆಸ್ಸಿನ ಫೋನ್ ಪೇ ಲಂಚದ ಸರ್ಕಾರ, ರಾಜ್ಯದ ಜನರ ಮೇಲೆ ಸಾಲದ ಹೊರೆ ಏರಿಸುವ ಮೂಲಕ ಸಿಎಂ ಸಿದ್ದರಾಮಯ್ಯನವರು ಸಾಲರಾಮಯ್ಯ ಆಗಿದ್ದಾರೆ ಎಂದು ವಿಪಕ್ಷ ನಾಯಕ ಆರ್.ಅಶೋಕ್ ಟೀಕಿಸಿದರು. ಮಂಗಳವಾರ ನಗರದ ಬಿಜೆಪಿ ಕಚೇರಿಯಲ್ಲಿ ಮಂಗಳವಾರ ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆ ಹಿನ್ನೆಲೆಯಲ್ಲಿ ಪಕ್ಷದ ಪ್ರಣಾಳಿಕೆ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಅಭಿವೃದ್ಧಿಯನ್ನು ಮರೆತು ಕೇವಲ ಲಂಚ ಪಡೆಯುವುದರಲ್ಲಿ ಮಗ್ನವಾಗಿದೆ. ಲಂಚದ ಹಣವನ್ನು ಫೋನ್ ಪೇ ಮೂಲಕವೇ ಹಾಕಿಸಿಕೊಳ್ಳುತ್ತಿದೆ. ಸಿದ್ದರಾಮ್ಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಅಧಿಕಾರಕ್ಕೆ ಬಂದ ಈ ಮೂರು ವರ್ಷಗಳ ಅವಧಿಯಲ್ಲಿ ವಿಪರೀತ ಸಾಲ ಮಾಡುವ ಮೂಲಕ ಆರ್ಥಿಕ ಶಿಸ್ತನ್ನು ಉಲ್ಲಂಘಿಸಿದೆ. ಪ್ರತಿಯೊಬ್ಬ ನಾಗರಿಕರ ಮೇಲೆ 1.12 ಲಕ್ಷ ರೂ. ಸಾಲ ಹೊರಿಸಿದೆ ಎಂದರು. ಹಿಂದಿ ಹೇರಿಕೆ ಬಗ್ಗೆ ಮಾತನಾಡುವ ಕಾಂಗ್ರೆಸ್ ನಾಯಕರು ಇತಿಹಾಸ ನೆನಪಿಸಿಕೊಳ್ಳಬೇಕು. ದೇಶದಲ್ಲಿ ತ್ರಿಭಾಷಾ ಸೂತ್ರ ತಂದವರು ಮಹಾತ್ಮ ಗಾಂಧೀಜಿ, ನೆಹರು ಮತ್ತು ಇಂದಿರಾ ಗಾಂಧಿ. ದೇಶದ ಎಲ್ಲಾ ಜಿಲ್ಲೆ ಮತ್ತು ನಗರಗಳಿಗೆ ಹಿಂದಿಯನ್ನು ತಲುಪಿಸಿದವರು ಕಾಂಗ್ರೆಸ್ಸಿಗರೇ ಹೊರತು ಬಿಜೆಪಿಯಲ್ಲ ಎಂದು ಅವರು ವಾಗ್ದಾಳಿ ನಡೆಸಿದರು.

ಸಾರ್ವತ್ರಿಕ ಚುನಾವಣೆಗೆ ದಿಕ್ಸೂಚಿ: ಸುನೀಲ್ ಕುಮಾರ್

• **ದಾವಣಗೆರೆ:** ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಗಳು ರಾಜ್ಯ ರಾಜಕೀಯದಲ್ಲಿ ಮಹತ್ವದ ತಿರುವು ತರಲಿದ್ದು, ಈ ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು ಮುಂಬರುವ ಸಾರ್ವತ್ರಿಕ ಚುನಾವಣೆಗೆ ದಿಕ್ಸೂಚಿಯಾಗಲಿದೆ ಎಂದು ಶಾಸಕ ವಿ.ಸುನೀಲ್ ಕುಮಾರ್ ಹೇಳಿದರು.



ನಗರದಲ್ಲಿ ಮಂಗಳವಾರ ನಡೆದ ಪಕ್ಷದ ಪ್ರಮುಖರು ಮತ್ತು ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಉಪಚುನಾವಣೆಗಳು ಕೇವಲ ಕ್ಷೇತ್ರ ಮಟ್ಟಕ್ಕೆ ಸೀಮಿತವಾಗಿಲ್ಲ, ರಾಜ್ಯದ ರಾಜಕೀಯ ಭವಿಷ್ಯವನ್ನು ನಿರ್ಧರಿಸುವಂತಿವೆ. ಉಪಚುನಾವಣೆಯ ಕಾವು ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಕಾರ್ಯಕರ್ತರು ನಿರ್ಮಿಸಿರುವ ಉತ್ಸಾಹಭರಿತ ವಾತಾವರಣವು ಬಿಜೆಪಿ ಗೆಲುವಿನ ಸೂಚಕವಾಗಿದೆ. ರಾಜ್ಯದ ಎಲ್ಲೆಡೆಯಿಂದ ಕಾರ್ಯಕರ್ತರು ಈ ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ಗೆಲ್ಲಬೇಕು ಎಂಬ ದೃಢ ಸಂಕಲ್ಪದೊಂದಿಗೆ ಕೆಲಸ ಮಾಡುತ್ತಿದ್ದಾರೆ ಎಂದರು.

ಪ್ರಚಾರದಲ್ಲಿ ಒಳಮೀಸಲಾತಿ ವಿಚಾರ | ಸಿಎಂ ಸಿದ್ದರಾಮಯ್ಯ ಹೇಳಿಕೆ

ಯಾರಿಗೂ ಅನ್ಯಾಯ ಮಾಡಲ್ಲ

• **ಬಾಗಲಕೋಟೆ:** ಒಳ ಮೀಸಲಾತಿ ವಿಚಾರದಲ್ಲಿ ಬಂಜಾರ ಸಮುದಾಯವಾಗಲಿ, ಎಡಗೈ ಮತ್ತು ಬಲಗೈ ಸಮುದಾಯ ಸೇರಿದಂತೆ ಸಣ್ಣ ಸಮುದಾಯಕ್ಕೂ ಕೂಡ ಯಾವುದೇ ಅನ್ಯಾಯ ಮಾಡುವುದಿಲ್ಲ, ಕಾಂಗ್ರೆಸ್ ಸಾಮಾಜಿಕ ನ್ಯಾಯದಲ್ಲಿ ನಂಬಿಕೆ ಇಟ್ಟ ಪಕ್ಷವಾಗಿದೆ. ಯಾರೂ ಕೂಡ ಒಳಮೀಸಲಾತಿ ವಿಚಾರದಲ್ಲಿ ಆತಂಕ ಪಡುವ ಅಗತ್ಯವಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.



ಬಾಗಲಕೋಟೆ ಮತಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಪರ ಪ್ರಚಾರ ನಡೆಸಿ, ನೀಲಾನಗರದಲ್ಲಿ ಬಹಿರಂಗ ಪ್ರಚಾರ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು. ಬಂಜಾರ ಸಮುದಾಯವನ್ನು ಎಸ್ಸಿ ವರ್ಗಕ್ಕೆ ಸೇರಿಸಿದ್ದು ಕಾಂಗ್ರೆಸ್. ಹೀಗಾಗಿ ಒಳಮೀಸಲಾತಿ ವಿಚಾರದಲ್ಲಿಯೂ ಕೂಡ ಅನ್ಯಾಯವಾಗದ ರೀತಿ ಸರ್ಕಾರ ನಡೆದುಕೊಳ್ಳುತ್ತದೆ ಎಂದು ಭರವಸೆ ನೀಡಿದರು.

ನಮ್ಮದು ಪಕ್ಷಾತೀತವಾದ ಅಭಿವೃದ್ಧಿಪರ ಸರ್ಕಾರವಾಗಿದೆ. ಬಿಜೆಪಿಯವರು ಗ್ಯಾರಂಟಿ ಯೋಜನೆಯನ್ನು ವಿರೋಧಿಸಿದ್ದಾರೆ. ಬಡವರು, ಮಹಿಳೆಯರು ಬಗ್ಗೆ ಬಿಜೆಪಿಯವರಿಗೆ ಕಾಳಜಿ ಇಲ್ಲ ಎಂದು ಹೇಳಿದರು. ದೇಶಕ್ಕೆ ಸ್ವಾತಂತ್ರ್ಯ ತಂದು ಕೊಡುವಲ್ಲಿ ಮಹಾತ್ಮ ಗಾಂಧೀಜಿಯವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷ ಪ್ರಮುಖ ಪಾತ್ರ ವಹಿಸಿದೆ. ಸ್ವಾತಂತ್ರ್ಯ ತಂದುಕೊಟ್ಟಿದ್ದೇ ಕಾಂಗ್ರೆಸ್ ಪಕ್ಷ. ಬ್ರಿಟಿಷರ ಜತೆಗೆ ಬಿಜೆಪಿಯವರು ಸೇರಿಕೊಂಡಿದ್ದರು. ಬಿಜೆಪಿಯವರಿಗೆ ಬಡವರ, ಮಹಿಳೆಯರ ಕಷ್ಟ ಗೊತ್ತಿಲ್ಲ, ಅದಕ್ಕೇ ಅವರು ಅಧಿಕಾರದಲ್ಲಿದ್ದಾಗ ಅಭಿವೃದ್ಧಿ ಕಾರ್ಯ ಮಾಡಲಿಲ್ಲ, ದಲಿತರಿಗೆ ಮೀಸಲಾತಿ ತಂದವರು ನಾವು. ಬಿಜೆಪಿ ತರಲಿಲ್ಲ, ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟಿದ್ದು ಕಾಂಗ್ರೆಸ್ ಪಕ್ಷ. ಬ್ರಿಟಿಷರ ಜೊತೆ ಸೇರಿದ್ದ ಬಿಜೆಪಿಯವರು ದೇಶದ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟದಲ್ಲಿ ಭಾಗಿಯಾಗಲೇ ಇಲ್ಲ. 1925ರಲ್ಲೇ ಆರ್‌ಎಸ್‌ಎಸ್ ಸ್ಥಾಪನೆ ಆಗಿದ್ದರೂ ಬ್ರಿಟೀಷರ ವಿರುದ್ಧ ಆರ್‌ಎಸ್‌ಎಸ್ ಧ್ವನಿ ಎತ್ತಲಿಲ್ಲ, ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಲಿಲ್ಲ, ಇದು ಕಾಂಗ್ರೆಸ್‌ನ ಹೋರಾಟದ ಪರಂಪರೆ ಮತ್ತು ಕಾಂಗ್ರೆಸ್ ಪಕ್ಷದ ಇತಿಹಾಸ ಎಂದರು.

ಜನರಿಗೆ ಸ್ಪಂದಿಸದೆ, ಈಗ ನಮ್ಮ ಗ್ಯಾರಂಟಿಗಳ ಬಗ್ಗೆ ಅಪಪ್ರಚಾರ ಮಾಡುತ್ತಿರುವ ಬಿಜೆಪಿಯವರಿಗೆ ಮತ ಕೇಳುವ ಯಾವ ನೈತಿಕತೆ ಇದೆ ಎಂದು ಪ್ರಶ್ನಿಸಿದ ಅವರು, ಎಚ್.ವೈ.ಮೇಟಿ ಅವರ ಆತ್ಮಕ್ಕೆ ಶಾಂತಿ ಸಿಗಬೇಕಾದರೆ ಉಮೇಶ ಮೇಟಿ ಅವರನ್ನು ಗೆಲ್ಲಿಸಲೇಬೇಕು ಎಂದು ಕರೆ ನೀಡಿದರು. ಸಚಿವ ಶಿವಾನಂದ ಪಾಟೀಲ, ಆರ್.ಬಿ.ತಿಮ್ಮಾಪುರ, ಶಾಸಕ ವಿಜಯಾನಂದ ಕಾಶಪ್ಪನವರ, ಬಿ.ಬಿ.ಚಿಮ್ಮನಕಟ್ಟಿ, ಜಿಲ್ಲಾಧ್ಯಕ್ಷ ಎಸ್.ಜಿ.ನಂಜಯ್ಯನಮಠ, ಸಂಯುಕ್ತ ಪಾಟೀಲ, ಮಾಜಿ ಸಚಿವ ಎಸ್.ಆರ್.ಪಾಟೀಲ, ಅಜಯಕುಮಾರ ಸರನಾಯಕ ಇದ್ದರು.

ಬಿಜೆಪಿಯವರಿಗೆ ಸೋಲಿನ ಭೀತಿ: ಸಿಎಂ

ಬಾಗಲಕೋಟೆ: ಬಿಜೆಪಿಯವರು ಸೋಲಿನ ಭೀತಿಯಿಂದ ನಮ್ಮ ವಿರುದ್ಧ ಹೇಳಿಕೆಗಳನ್ನು ನೀಡುತ್ತಿದ್ದಾರೆ. ನಿಧನ ಹೊಂದಿದ ಶಾಸಕರ ಕುಟುಂಬದವರಿಗೆ ಟಿಕೆಟ್ ನೀಡುವುದು ಕಾಂಗ್ರೆಸ್ ಪಕ್ಷದ ಪ್ರತೀತಿಯಾಗಿದ್ದು, ದಾವಣಗೆರೆ ಹಾಗೂ ಬಾಗಲಕೋಟೆಯಲ್ಲಿ ನಿಧನ ಹೊಂದಿದ ಶಾಸಕರ ಕುಟುಂಬದವರಿಗೆ ಟಿಕೆಟ್ ನೀಡಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಸಿಎಂ ಸ್ಥಾನದ ಬಗ್ಗೆ ಬಿಜೆಪಿಯ ಛಲವಾದಿ ನಾರಾಯಣಸ್ವಾಮಿಯವರು ನೀಡಿರುವ ಹೇಳಿಕೆ ಬಗ್ಗೆ ಪ್ರತಿಕ್ರಿಯೆ ನೀಡಿ, ಪಕ್ಷದ ಹೈಕಮಾಂಡ್‌ನ ನಿರ್ಧಾರಗಳಿಗೆ ಬದ್ಧನಾಗಿರುತ್ತೇನೆ. ಬಿಜೆಪಿಯವರ ಹೇಳಿಕೆಗೆ ಪ್ರತಿಕ್ರಿಯೆ ನೀಡುವುದಿಲ್ಲ ಎಂದರು. ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್‌ನವರೇ ಆಗಿದ್ದ ಪೈಲ್ವಾನ್ ಸಾದಿಕ್ ಅವರ ಮನವೊಲಿಸಿ ಕಣದಿಂದ ಹಿಂದೆ ಸರಿಯುವಂತೆ ಮಾಡಲಾಗಿದೆ. ಸಚಿವ ಜಮೀರ್ ಅಹ್ಮದ್ ಅವರೂ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಜನರ ಮೇಲೆ ಬೆಲೆ ಏರಿಕೆ ಯುದ್ಧ: ಡಿಕೆಶಿ

• **ಬೆಂಗಳೂರು:** ಸಾಮಾನ್ಯ ಜನರ ಮೇಲೆ ಕೇಂದ್ರ ಸರ್ಕಾರ ಬೆಲೆ ಏರಿಕೆ ಯುದ್ಧ ಮಾಡುತ್ತಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಟೀಕಿಸಿದ್ದಾರೆ.



ಕೆಪಿಸಿಸಿ ಕಚೇರಿಯಲ್ಲಿ ಮಂಗಳವಾರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಯುದ್ಧಗಳ ನೆಪ, ಕೇಂದ್ರದ ತಪ್ಪು ನಿರ್ಧಾರ, ನೀತಿಗಳಿಂದಾಗಿ ಇಂದು ದೇಶದ ಜನ ಬೆಲೆ ಏರಿಕೆಯಿಂದ ನರಳುತ್ತಿದ್ದಾರೆ ಎಂದರು. ಪಂಚರಾಜ್ಯ ಚುನಾವಣೆ ನಡೆಯುತ್ತಿದೆ. ಜನರು ಪರದಾಡುತ್ತಿದ್ದು, ಹೋಟೆಲ್‌ಗಳು ಬಂದ್ ಆಗುತ್ತಿವೆ. ಜನ ವಿದ್ಯುತ್ ಒಲೆ ಬಳಸುವ ಅನಿವಾರ್ಯತೆ ಎದುರಾಗಿದೆ. ಕಳೆದ ಹದಿನೈದು ದಿನಗಳಿಂದ ರಾಜ್ಯದಲ್ಲಿ ವಿದ್ಯುತ್ ಬಳಕೆ ಪ್ರಮಾಣ ಶೇ.10ರಷ್ಟು ಏರಿಕೆಯಾಗಿದೆ. ಕೇಂದ್ರ ಸರ್ಕಾರ ಜನರಿಗೆ ಸೌದೆ ಭಾಗ್ಯ ನೀಡಿದೆ ಎಂದು ಲೇವಡಿ ಮಾಡಿದರು.

ಕೇಂದ್ರ ಬಿಜೆಪಿ ಸರ್ಕಾರ ಜನರಿಗೆ ಉಜ್ವಲ ಯೋಜನೆ ಬದಲಾಗಿ ಸೌದೆ ಒಲೆ ಯೋಜನೆ ನೀಡಿದೆ. ಅಚ್ಛೇದಿನ ಏನಾಯ್ತು? ಈಗ ಇರುವುದನ್ನು ಕಚ್ಚಾ ದಿನ ಎಂದು ಹೇಳಬೇಕಾ? ಎಂದು ಬಿಜೆಪಿ ನಾಯಕರನ್ನು ಕೇಳಬಯಸುತ್ತೇನೆ ಎಂದು ವಾಗ್ದಾಳಿ ನಡೆಸಿದರು. ಅಡುಗೆ ಅನಿಲ ಸಿಲಿಂಡರ್ ಬೆಲೆ ಏರಿಕೆ ಮಾತ್ರವಲ್ಲ, ಟೋಲ್ ಶುಲ್ಕ, ರೈಲ್ವೆ ಟಿಕೆಟ್ ದರ ಎಲ್ಲವೂ ಹೆಚ್ಚಾಗಿದೆ. ಕೆಲವು ಅನಿವಾರ್ಯ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರ ಬೆಲೆ ಏರಿಕೆ ತೀರ್ಮಾನ ಮಾಡಿದಾಗ ಯಾವ ರೀತಿ ಟೀಕೆ ಟಿಪ್ಪಣಿ ಬಂದಿವೆ ಎಂದು ಎಲ್ಲರಿಗೂ ಗೊತ್ತಿದೆ ಎಂದರು.

> ಇಂದಿನಿಂದ ಕೇಂದ್ರ ಬಿಜೆಪಿ ಸರ್ಕಾರ ಕನ್ನಡಿಗರು ಹಾಗೂ ದೇಶದ ಜನರ ಮೇಲೆ ಬೆಲೆ ಏರಿಕೆ ದಾಳಿ ಮಾಡಲಿದೆ. ಬೆಲೆ ಏರಿಕೆಯು ಜನರ ಪರಿಶ್ರಮದ ಹಣವನ್ನು ವಂಚಿಸಿ, ಲೂಟಿ ಮಾಡಿ, ದೋಚುವ ಸಾಧನವಾಗಿದೆ.
> ■ **ರಣದೀಪ್ ಸಿಂಗ್ ಸುರ್ಜೇವಾಲ,** ಎಐಸಿಸಿ ಪ್ರಧಾನ ಕಾರ್ಯದರ್ಶಿ

ಜನತೆಗೆ ನೆರವಾಗಲಿ
ನಾವು ಗ್ಯಾರಂಟಿ ನೀಡಿದ ಕಾರಣಕ್ಕೆ ಜನ ಸ್ವಲ್ಪ ಉಸಿರಾಡುತ್ತಿದ್ದಾರೆ. ಇದೇ ರೀತಿ ಕೇಂದ್ರ ಸರ್ಕಾರ ಪರ್ಯಾಯ ವ್ಯವಸ್ಥೆ ಮಾಡಬೇಕು. ಜನಸಾಮಾನ್ಯರ ಬವಣೆಯ ಜೊತೆ ಕೇಂದ್ರ ನಿಲ್ಲುತ್ತಿಲ್ಲ. ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ಜನರಿಗೆ ಕೇಂದ್ರ ಸರ್ಕಾರ ನೆರವಾಗಬೇಕು ಎಂದು ಆಗ್ರಹಿಸುತ್ತೇವೆ ಎಂದರು.

ಆಂಧ್ರ ಪ್ರದೇಶದ ಹಣಕಾಸು ಸಚಿವ ಪಾಯವುಲ ಕೇಶವ ವಿಶ್ವಾಸ

ಟಿಬಿ ಡ್ಯಾಂನಲ್ಲಿ ನೂತನ ಕ್ರಸ್ಟ್‌ಗೇಟ್

• **ವಿಜಯನಗರ:** ತುಂಗಭದ್ರಾ ಜಲಾಶಯದ ಎಲ್ಲ 32 ಕ್ರಸ್ಟ್ ಗೇಟ್‌ಗಳ ಅಳವಡಿಕೆ ಕಾರ್ಯ ಮೇ ಅಂತ್ಯದೊಳಗೆ ಮುಕ್ತಾಯವಾಗಿದ್ದು, ಮುಂದಿನ 50 ವರ್ಷಗಳ ವರೆಗೆ ಅಭಾದಿತ ಎಂದು ಆಂಧ್ರ ಪ್ರದೇಶದ ಹಣಕಾಸು ಸಚಿವ ಪಾಯವುಲ ಕೇಶವ ವಿಶ್ವಾಸ ವ್ಯಕ್ತಪಡಿಸಿದರು.



ಹೊಸಪೇಟೆ ಸಮೀಪದ ತುಂಗಭದ್ರಾ ಅಣೆಕಟ್ಟೆಗೆ ಭೇಟಿ ನೀಡಿದ ಅವರು, ನೂತನ ಕ್ರಸ್ಟ್ ಗೇಟ್‌ಗಳ ಅಳವಡಿಕೆ ಕಾರ್ಯವನ್ನು ಪರಿಶೀಲಿಸಿದರು. ಇದೇ ವೇಳೆ ಜಲಾಶಯದಲ್ಲಿ ನಡೆರುವ ಕ್ರಸ್ಟ್ ಗೇಟ್‌ಗಳ ಅವಳಡಿಕೆ ಹಾಗೂ ದುರಸ್ತಿ ಕಾರ್ಯಗಳ ಬಗ್ಗೆ ತುಂಗಭದ್ರಾ ಬೋರ್ಡ್‌ನ ತಾಂತ್ರಿಕ ತಜ್ಞರು ಸಚಿವರಿಗೆ ಮಾಹಿತಿ ಒದಗಿಸಿದರು.

ಬಳಿಕ ಸುದ್ದಿಗಾರೊಂದಿಗೆ ಮಾತನಾಡಿದ ಸಚಿವ ಪಾಯವುಲ ಕೇಶವ ಅವರು, ತುಂಗಭದ್ರಾ ಜಲಾಶಯ ನಿರ್ಮಾಣಗೊಂಡು ಹಲವು ದಶಕಗಳು ಕಳೆದಿವೆ. 19ನೇ ಕ್ರಸ್ಟ್ ಗೇಟ್ ಕಳಚಿ ಬಿದ್ದ ಬಳಿಕ ಜಲಾಶಯ ಸುರಕ್ಷತಾ ಪ್ರಾಧಿಕಾರದ ತಜ್ಞರ ಸಲಹೆ ಮೇರೆಗೆ ಎಲ್ಲ ಗೇಟ್‌ಗಳನ್ನು ಹೊಸದಾಗಿ ಅಳವಡಿಸಲಾಗುತ್ತಿದೆ. ಮೇ ತಿಂಗಳ ಒಳಗಾಗಿ ಎಲ್ಲ ಕ್ರಸ್ಟ್ ಗೇಟ್‌ಗಳು ಅಳವಡಿಕೆಯಾಗಲಿದೆ. ಅಷ್ಟರೊಳಗೆ ಮುಂಗಾರು ಮಳೆ ಚುರುಕುಗೊಳ್ಳುವ ಬಗ್ಗೆ ಹವಾಮಾನ ಇಲಾಖೆಯೂ ಮುನ್ಸೂಚನೆ ನೀಡಿದ್ದರಿಂದ ಈ ಬಾರಿ ಮುಂಗಾರು ಹಂಗಾಮು ರೈತರಿಗೆ ವರವಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಟಿಬಿ ಡ್ಯಾಂ ಮೂರು ರಾಜ್ಯಗಳಿಗೆ ಸಂಬಂಧಿಸಿದ್ದರಿಂದ ಎಲ್ಲ ರಾಜ್ಯಗಳು ತಮ್ಮ ಪಾಲಿನ ಅನುದಾನವನ್ನು ಈಗಾಗಲೇ ಒದಗಿಸಿದೆ. ಮುಂದಿನ ದಿನಗಳಲ್ಲಿ ಅಗತ್ಯವಾದರೆ, ಮತ್ತಷ್ಟು ಅನುದಾನ ನೀಡಲು ಆಂಧ್ರಪ್ರದೇಶ ಸರ್ಕಾರ ಸಿದ್ಧವಾಗಿದೆ. ಅನುದಾನ ವಿನಿಯೋಗ ಹಾಗೂ ತಾಂತ್ರಿಕ ವಿಚಾರಗಳನ್ನು ಟಿಬಿ ಬೋರ್ಡ್ ನಿರ್ಧರಿಸಲಿದೆ. ಇದರಲ್ಲಿ ಯಾವುದೇ ಸರ್ಕಾರದ ಹಸ್ತಕ್ಷೇಪವಿಲ್ಲ, ಈಗ ನಡೆದಿರುವ ನೂತನ ಕ್ರಸ್ಟ್ ಗೇಟ್‌ಗಳ ಅವಳಡಿಕೆ ಹಾಗೂ ಇತರೆ ದುರಸ್ತಿ ಕಾರ್ಯಗಳಿಂದಾಗಿ ಜಲಾಶಯಧ ಆಯಸ್ಸು 50 ವರ್ಷಗಳಷ್ಟು ಹೆಚ್ಚಲಿದೆ ಎಂದು ಅಭಿಪ್ರಾಯಪಟ್ಟರು. ಆಂಧ್ರಪ್ರದೇಶ ಸರ್ಕಾರದ ಮುಖ್ಯ ಸಚೇತಕ ಕಲವಾ ಶ್ರೀನಿವಾಸಲು, ತುಂಗಭದ್ರಾ ಮಂಡಳಿಯ ಕಾರ್ಯದರ್ಶಿ ಓ.ಆರ್.ಕೆರೆಡ್ಡಿ, ಅಧೀಕ್ಷಕ ಅಭಿಯಂತರ ನಾರಾಯಣ ನಾಯಕ್, ಶಾಖಾಧಿಕಾರಿ ಕಿರಣ್ ಇದ್ದರು.

ವಿಪಕ್ಷ ನಾಯಕರ ಹೇಳಿಕೆ ವಿರುದ್ಧ ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ

ಆಯವ್ಯಯ ಪತ್ರವೇ ಸರ್ಕಾರದ ಶ್ವೇತ ಪತ್ರ

• **ಬೆಂಗಳೂರು:** ರಾಜ್ಯ ಸರ್ಕಾರದ ಆರ್ಥಿಕಸ್ಥಿತಿ ಬಗ್ಗೆ ಶ್ವೇತಪತ್ರ ಹೊರಡಿಸಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಒತ್ತಾಯಿಸಿರುವುದು ಆರ್ಥಿಕ ಕ್ಷೇತ್ರದ ಬಗೆಗಿನ ಅವರ ಅಜ್ಞಾನ, ಆಡಳಿತದ ಅನುಭವದ ಕೊರತೆ ಮತ್ತು ರಾಜಕೀಯ ಹತಾಶೆಯನ್ನು ತೋರಿಸುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದ್ದಾರೆ.

ಈ ಕುರಿತು ಮಾಧ್ಯಮ ಹೇಳಿಕೆ ನೀಡಿರುವ ಅವರು, ಕಳೆದ ತಿಂಗಳಷ್ಟೇ ಈ ಆರ್ಥಿಕ ವರ್ಷದ ಆಯವ್ಯಯ ಪತ್ರವನ್ನು ನಾನು ಮಂಡಿಸಿದ್ದೇನೆ, ಅದು ಅಂಕಿ ಅಂಶಗಳ ಕಾಗದದ ಕಂತೆ ಅಲ್ಲ, ರಾಜ್ಯದ 7 ಕೋಟಿ ಕನ್ನಡಿಗರಿಗೆ ಒಪ್ಪಿಸಿರುವ ಪ್ರಾಮಾಣಿಕ ಲೆಕ್ಕ ಪತ್ರ. ಆ ಆಯವ್ಯಯವನ್ನು ವಿಧಾನಮಂಡಲದ ಉಭಯ ಸದನಗಳು ಒಪ್ಪಿಕೊಂಡು ಅಂಗೀಕರಿಸಿವೆ. ಇದೇ ನಮ್ಮ ಶ್ವೇತಪತ್ರ ಎಂದು ಸ್ಪಷ್ಟಪಡಿಸಿದ್ದಾರೆ. ಆಯವ್ಯಯದ ಬಗ್ಗೆ ವಿಧಾನಮಂಡಲದ ಉಭಯ ಸದನಗಳಲ್ಲಿ ಕೂಲಂಕಷವಾಗಿ ಚರ್ಚೆ ನಡೆದಿದೆ. ಇದರ ಬಗ್ಗೆ ಇನ್ನೂ ನಿಮಗೆ ಅನುಮಾನಗಳಿದ್ದರೆ ವಿವರಣೆ ಕೊಡಲು ನಾನು ಸಿದ್ಧನಿದ್ದೇನೆ. ಚುನಾವಣೆಯ ಅಖಾಡದಲ್ಲಿಯೇ ನಿಮ್ಮ ಜೊತೆ ಬಹಿರಂಗ ಚರ್ಚೆಗೂ ನಾನು ಸಿದ್ಧನಿದ್ದೇನೆ. ದಯವಿಟ್ಟು ಕೇವಲ ರಾಜಕೀಯ ಮಾತನಾಡಬೇಕೆಂಬ ಬಾಯಿ ಚಪಲಕ್ಕಾಗಿ ಆಯವ್ಯಯ ಪತ್ರದ ಪಾವಿತ್ರ್ಯವನ್ನು ಹಾಳು ಮಾಡಲು ಹೋಗಬೇಡಿ ಎಂದು ಕುಟುಕಿದ್ದಾರೆ.

ರಾಜ್ಯ ದಿವಾಳಿ ಸ್ಥಿತಿಯಲ್ಲಿದೆ ಎಂಬ ಆರೋಪದ ಹಿಂದೆ ನಮ್ಮ ಸರ್ಕಾರವನ್ನು ರಾಜಕೀಯವಾಗಿ ಎದುರಿಸಲಾಗದ ಬಿಜೆಪಿ ನಾಯಕರ ಅಸಹಾಯಕತೆ, ಹತಾಶೆ ಮತ್ತು ಅಸೂಯೆ ಇದೆ. ಯಾವ ಇಲಾಖೆಯೂ ನೌಕರರಿಗೆ ಸಂಬಳ ನೀಡಲಾಗದ ದಿವಾಳಿ ಸ್ಥಿತಿಯಲ್ಲಿಲ್ಲ, ನಮ್ಮ ಸರ್ಕಾರ ಆರ್ಥಿಕವಾಗಿ ಮಾತ್ರವಲ್ಲ ರಾಜಕೀಯವಾಗಿಯೂ ಸುಭದ್ರವಾಗಿದೆ. ರಾಜ್ಯದ ಜನತೆ ನೆಮ್ಮದಿಯಿಂದ ಇದ್ದಾರೆ ಎಂದಿದ್ದಾರೆ. 2025-26 ರಲ್ಲಿ ದೇಶದ ಜಿಡಿಪಿಯ ಬೆಳವಣಿಗೆ ಶೇ.7.4 ರಷ್ಟಿದ್ದರೆ, ರಾಜ್ಯದ ಜಿಎಸ್‌ಡಿಪಿ ಶೇ.8.1 ರಷ್ಟು ಬೆಳವಣಿಗೆ ದಾಖಲಿಸಿದೆ. ಕರ್ನಾಟಕದ ಜಿಎಸ್‌ಡಿಪಿ ದೇಶದ ಜಿಡಿಪಿ ಬೆಳವಣಿಗೆಗಿಂತ ಹೆಚ್ಚಿರುವುದು ನಮ್ಮ ಸರ್ಕಾರದ ಆರ್ಥಿಕ ಸುಭದ್ರತೆಗೆ ಸಾಕ್ಷಿಯಾಗಿದೆ. ಈ ವರ್ಷ ನಮ್ಮ ಜಿಎಸ್‌ಡಿಪಿ ರೂ.33,05,500 ಕೋಟಿಯಷ್ಟಿದೆ ಎಂದು ವಿವರಿಸಿದ್ದಾರೆ.

ಸರ್ಕಾರದಿಂದ ವಿತ್ತೀಯ ಶಿಸ್ತು

ನಾನು ಮಂಡಿಸಿರುವ 17 ಬಜೆಟ್‌ಗಳಲ್ಲಿಯೂ ವಿತ್ತೀಯ ಶಿಸ್ತನ್ನು ಕಾಪಾಡಿಕೊಂಡು ಬಂದಿದ್ದೇನೆ. ಆರ್ಥಿಕ ಹೊಣೆಗಾರಿಕೆ ಅಧಿನಿಯಮಕ್ಕೆ ಅನುಗುಣವಾಗಿ ನಮ್ಮ ಒಟ್ಟು ಹೊಣೆಗಾರಿಕೆಗಳು ಜಿಎಸ್‌ಡಿಪಿಯ ಶೇ.25 ರೊಳಗೆ ಇರಬೇಕು, ನಮ್ಮದು ಶೇ.24.94 ರಷ್ಟಿದೆ. ಕೇಂದ್ರ ಸರ್ಕಾರದ ಹೊಣೆಗಾರಿಕೆಗಳು ಜಿಡಿಪಿಯ ಶೇ.40 ರೊಳಗೆ ಇರಬೇಕಾಗುತ್ತದೆ. ಅದು ಶೇ.55.6 ರಷ್ಟಿದೆ. ದಿವಾಳಿಯಾಗಿರುವುದು ಯಾವ ಸರ್ಕಾರ ಎಂದು ಪ್ರಶ್ನಿಸಿದ್ದು, 16ನೇ ಹಣಕಾಸು ಆಯೋಗದ ಮಾರ್ಗಸೂಚಿ ಅನುಸಾರ ವಿತ್ತೀಯ ಕೊರತೆ ರಾಜ್ಯಗಳಲ್ಲಿ ಜಿಎಸ್‌ಡಿಪಿಯ ಶೇ.3 ರೊಳಗೆ ಹಾಗೂ ಕೇಂದ್ರ ಸರ್ಕಾರ ಜಿಡಿಪಿಯ ಶೇ.4.2 ರೊಳಗೆ ಇರಬೇಕು. ನಮ್ಮ ವಿತ್ತೀಯ ಕೊರತೆಯು ಜಿಎಸ್‌ಡಿಪಿಯ ಶೇ.3 ರ ಒಳಗೆ ಇದೆ. ಆದರೆ ಕೇಂದ್ರದ ವಿತ್ತೀಯ ಕೊರತೆ ಜಿಡಿಪಿಯ ಶೇ.4.3 ರಷ್ಟಿದೆ ಎಂದು ವಿವರಿಸಿದ್ದಾರೆ.

ವಿಶ್ವ ಆರೋಗ್ಯ ಸಂಸ್ಥೆ ವರ್ಗೀಕರಣ ರದ್ದುಗೊಳಿಸಲು ಸಂಸದ ಬಿ.ವೈ.ರಾಘವೇಂದ್ರ ಆಗ್ರಹ

ಅಡಿಕೆಗೆ ಕ್ಯಾನ್ಸರ್‌ಕಾರಕ ಹಣೆಪಟ್ಟಿ ಸರಿಯಲ್ಲ

• **ಹೊಸದಿಲ್ಲಿ:** ವಿಶ್ವ ಆರೋಗ್ಯ ಸಂಸ್ಥೆ ಅಡಿಕೆಗೆ ಅಂಟಿಸಿರುವ ಕ್ಯಾನ್ಸರ್ ಕಾರಕ ಹಣೆಪಟ್ಟಿ ವೈಜ್ಞಾನಿಕವಾಗಿ ಸರಿಯಲ್ಲ, ಈ ಕುರಿತು ಭಾರತ ಸರ್ಕಾರ ಮಧ್ಯಪ್ರವೇಶಿಸಿ ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಅಡಿಕೆ ಬೆಳೆಗಾರರ ಪರ ಪ್ರಬಲವಾಗಿ ವಾದ ಮಂಡಿಸಬೇಕು ಎಂದು ಸಂಸದ ಬಿ.ವೈ.ರಾಘವೇಂದ್ರ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಈ ಕುರಿತು ಹೊಸದಿಲ್ಲಿಯಲ್ಲಿ ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿರುವ ಬಿ.ವೈ.ರಾಘವೇಂದ್ರ, ಅಡಿಕೆ ಬೆಳೆಗಾರರ ಹಿತ ರಕ್ಷಣೆಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ. ದೇಶದ ಒಟ್ಟು ಅಡಿಕೆ ಉತ್ಪಾದನೆಯ ಸುಮಾರು ಶೇ.65ರಷ್ಟನ್ನು ಒದಗಿಸುವ ಮಲೆನಾಡಿನ ಅಡಿಕೆ ಬೆಳೆ ಗಾರರು ತೀವ್ರ, ಆತಂಕ ಮತ್ತು ಸಂಕಷ್ಟದಲ್ಲಿದ್ದಾರೆ. ಸುಮಾರು 1 ಲಕ್ಷ ಕೋಟಿ ರೂ. ಆರ್ಥಿಕತೆ ಹೊಂದಿರುವ ಮತ್ತು 11 ರಾಜ್ಯಗಳ 2 ಕೋಟಿಗೂ ಅಧಿಕ ಜನರ ಜೀವನಾಧಾರ ವಾಗಿರುವ ಅಡಿಕೆ ಬೆಳೆಯ ರಕ್ಷಣೆ ಇಂದು ಆದ್ಯತೆಯ ವಿಷಯವಾಗಬೇಕಿದೆ ಎಂದು ಪ್ರತಿಪಾದಿಸಿದ್ದಾರೆ.



ವಿಶ್ವ ಆರೋಗ್ಯ ಸಂಸ್ಥೆಯ ಅಂಗಸಂಸ್ಥೆ IARC, ಅಡಿಕೆಯನ್ನು Group&I Carcinogen ಎಂದು ವರ್ಗೀಕರಿಸಿರುವುದು ವೈಜ್ಞಾನಿಕವಾಗಿ ದೋಷಪೂರ್ಣ, ಪಕ್ಷಪಾತತನದಿಂದ ಕೂಡಿದೆ. ಭಾರತದ ಐಸಿಎಆರ್ ಸಿಪಿಸಿಆರ್‌ಐ(ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರೀಸರ್ಚ್-ಸೆಂಟ್ರಲ್ ಪ್ಲಾಂಟೇಶನ್ ಕ್ರಾಪ್ಸ್ ರೀಸರ್ಚ್ ಇನ್ಸಿಟ್ಯೂಟ್) ನಡೆಸಿ ರುವ ಸಂಶೋಧನೆಗಳ ಪ್ರಕಾರ, ಐಸಿಎಆರ್ ಉಲ್ಲೇಖಿಸಿರುವ ಬಹಳಷ್ಟು ಅಧ್ಯಯನಗಳು, ತಂಬಾಕು ಮಿಶ್ರಿತ ಉತ್ಪನ್ನಗಳನ್ನು ಶುದ್ಧ ಅಡಿಕೆಯೊಂದಿಗೆ ತಾಳೆ ಮಾಡಿ ತಪ್ಪು ತೀರ್ಮಾನಕ್ಕೆ ಬಂದಿವೆ.

ಅಡಿಕೆಯ ಮುಖ್ಯ ಘಟಕ ಅರೆಕೋಲಿನ್ Group &2B ಯಲ್ಲಿದ್ದರೂ ಅಡಿಕೆಯನ್ನೇ Group&I ಎಂದು ವರ್ಗೀಕರಿಸಿರುವ ಆಂತರಿಕ ವಿರೋಧವೂ ಇದೆ. ಜನವರಿ 2026ರಲ್ಲಿ ಡಬ್ಲ್ಯುಹೆಚ್‌ಒ ವೆಬಿನಾರ್ ನಿರ್ಬಂಧಾತ್ಮಕ ನೀತಿಗಳ ಸಂಕೇತ ನೀಡಿರುವ ಹಿನ್ನೆಲೆಯಲ್ಲಿ ಭಾರತ ಕೂಡಲೇ ಮಧ್ಯ ಪ್ರವೇಶಿಸಿ, ಅಡಿಕೆ ಬೆಳೆಗಾರರ ಹಿತ ಕಾಯಬೇಕು ಎಂದರು.

ಮೇ 2025ರಲ್ಲಿ ಅಮೇರಿಕಾ ವಿಷಕಾರಿ ಕ್ಷಾರ ವಲಸೆ ಎಂಬ ಕಾರಣ ನೀಡಿ ಅಡಿಕೆ ಹಾಳೆ ತಟ್ಟೆಗಳ ಮೇಲೆ ನಿಷೇಧ ಹೇರಿರುವುದು ನಮ್ಮ ಗ್ರಾಮೀಣ ಕೈಗಾರಿಕೆಗಳಿಗೆ ಗಂಭೀರ ಪೆಟ್ಟು ಕೊಟ್ಟಿದೆ. ಮೇಕ್ ಇನ್ ಇಂಡಿಯಾ ಯೋಜನೆಯಡಿ ಪರಿಸರ ಸ್ನೇಹಿ ಆಶಯಗಳಿಗೆ ತದ್ವಿರುದ್ಧವಾಗಿರುವ ಈ ನಿಷೇಧವನ್ನು ವೈಜ್ಞಾನಿಕವಾಗಿ ಮತ್ತು ರಾಜತಾಂತ್ರಿಕತೆ ಮೂಲಕ ಪ್ರಶ್ನಿಸಬೇಕೆಂದು ರಾಘವೇಂದ್ರ ಕೋರಿದ್ದಾರೆ.

ಕೇಂದ್ರ ಸಚಿವರ ಭರವಸೆ

ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರನ್ನು ಖುದ್ದು ಭೇಟಿ ಮಾಡಿ ಸಂಸದ ಬಿ.ವೈ. ರಾಘವೇಂದ್ರ ಮನವಿ ಸಲ್ಲಿಸಿದರು. ಸಚಿವರು ಈ ವಿಷಯದಲ್ಲಿ ಸಕಾರಾತ್ಮಕ ಪ್ರತಿಕ್ರಿಯೆ ನೀಡಿದ್ದಾರೆ. ಸಿಪಿಸಿಆರ್‌ಐ ನಿರ್ದೇಶಕರ ಅಧ್ಯಕ್ಷತೆಯಲ್ಲಿ ದೇಶದ 11 ಪ್ರಮುಖ ರಾಷ್ಟ್ರೀಯ ಸಂಶೋಧನಾ ಸಂಸ್ಥೆಗಳು ಈಗಾಗಲೇ ಅಡಿಕೆ ಕುರಿತು ಸಂಶೋಧನೆ ನಡೆಸುತ್ತಿವೆ. ಶೀಘ್ರದಲ್ಲೇ ಒಂದು ಸಮಗ್ರ ವರದಿ ಸಿದ್ಧವಾಗಲಿದೆ. ಈ ವರದಿಯನ್ನು ಸಿಪಿಸಿಆರ್‌ಐ ಐಸಿಎಂಆರ್‌ಗೆ ಸಲ್ಲಿಸಲಿದ್ದು, ಅಂತಿಮ ವರದಿ ಕೇಂದ್ರ ಸರ್ಕಾರಕ್ಕೆ ಲಭಿಸಿದ ತಕ್ಷಣ, ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು. ಅಡಿಕೆ ಬೆಳೆಗಾರರ ಹಿತ ರಕ್ಷಣೆಗೆ ಮೋದಿ ಸರ್ಕಾರ ಬದ್ಧವಾಗಿದೆ ಎಂದು ಭರವಸೆ ನೀಡಿದ್ದಾರೆ.

ಕಾಂಗ್ರೆಸ್‌ಗೆ ಸೋಲಿನ ಭೀತಿ: ಛಲವಾದಿ

• **ಬಾಗಲಕೋಟೆ:** ರಾಜ್ಯದ ಎರಡು ಉಪ ಚುನಾವಣೆಯಲ್ಲಿ ಬಿಜೆಪಿ ಗೆಲ್ಲುವುದು ನಿಶ್ಚಿತವಾಗಿದೆ. ಇದರಿಂದ ಗಾಬರಿ ಬಿದ್ದಿರುವ ಕಾಂಗ್ರೆಸ್ ಸರ್ಕಾರ ಮತದಾರರಿಗೆ ಗ್ಯಾರಂಟಿ ನಿಲ್ಲಿಸುತ್ತೇವೆ ಎಂದು ಭಯದ ವಾತಾವರಣ ಸೃಷ್ಟಿ ಮಾಡಿ ಧಮ್ಕಿ ಹಾಕುತ್ತಿದ್ದಾರೆ. ಕಾಂಗ್ರೆಸ್ ಸೋತರೆ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸುತ್ತಾರಾ? ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಪ್ರಶ್ನಿಸಿದರು.



ನಗರದ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಮಂಗಳವಾರ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿ, ನೈತಿಕತೆಯಿಂದ ಉಪ ಚುನಾವಣೆ ಎದುರಿಸುತ್ತಿಲ್ಲ, ಸೋಲಿನ ಭೀತಿ ಕಾಂಗ್ರೆಸ್‌ನಲ್ಲಿ ಮನೆ ಮಾಡಿದೆ. ಹೀಗಾಗಿ ಸಿಎಂ ಸಿದ್ದರಾಮಯ್ಯ ಐದು ದಿನ ಬಾಗಲಕೋಟೆ ಪ್ರಚಾರಕ್ಕೆ ಠಿಕಾಣಿ ಹೂಡಿದ್ದಾರೆ. ಸಿಎಂ ಸ್ಥಾನ ಉಳಿಸಿಕೊಳ್ಳಲು ಹೆಣಗಾಡುತ್ತಿದ್ದಾರೆ ಎಂದು ಆರೋಪಿಸಿದರು.

ಅಧಿಕಾರಕ್ಕೆ ಬಂದ ಮೇಲೆ ಕಾಂಗ್ರೆಸ್ ಸರ್ಕಾರ ಐದು ಗ್ಯಾರಂಟಿಗಳನ್ನು ಜಾರಿಗೆ ತಂದಿದೆ. ಆ ಬಳಿಕ ಪ್ರಣಾಳಿಕೆಯಲ್ಲಿ ನೀಡಿದ್ದ ಯಾವುದೇ ಭರವಸೆ ಈಡೇರಿಸಿಲ್ಲ, ಬೋಗಸ್ ಹೇಳಿದ್ದಾರೆ. ಅನೇಕ ನಿಗಮಗಳಿಗೆ ಅನುದಾನ ನೀಡಿಲ್ಲ, ಸದನದಲ್ಲಿ ಕೇಳಿದರೇ ಶಾಸಕರು ಬಳಸಿಲ್ಲ ಎಂದು ಸುಳ್ಳು ಹೇಳುತ್ತಿದ್ದಾರೆ ಎಂದರು.

ಧಮ್ಕಿ ಹಾಕಿ ಮತ ಪಡೆಯಲು ಯತ್ನ

ಕಾಂಗ್ರೆಸ್‌ನವರು ಧಮ್ಕಿ ಹಾಕಿ ಮತ ಪಡೆಯಲು ಹೊರಟಿದ್ದಾರೆ. ಬಾಗಲಕೋಟೆಯ ಜನ ಅದಕ್ಕೆ ಹೆದರುವುದಿಲ್ಲ. ಇಪ್ಪತ್ತು ವರ್ಷಗಳ ಹಿಂದಿನ ಬಾಗಲಕೋಟೆಗೂ ಇಂದಿನ ಬಾಗಲಕೋಟೆಗೂ ಇರುವ ಅಭಿವೃದ್ಧಿ ಬದಲಾವಣೆಯ ಕಾರಣಕರ್ತರನ್ನು ಹುಡುಕಿದರೆ ಸಿಗುವುದು ಚರಂತಿಮಠರು ಮಾತ್ರ. ರಾಜಧಾನಿ ಬೆಂಗಳೂರಿನಲ್ಲಿಯೂ ಈ ಮಾದರಿಯ ಸುಸಜ್ಜಿತ ರಸ್ತೆಗಳಿಲ್ಲ. ರಾಜ್ಯದ ಯಾವ ಜಿಲ್ಲೆಯೂ ಬಾಗಲಕೋಟೆಯಷ್ಟು ವಿಶಾಲವಾಗಿ ಬೆಳೆದಿಲ್ಲ, ಇದೆಲ್ಲವನ್ನು ನೋಡಿದ ಜನ ಯಾರು ಗೆಲ್ಲಬೇಕೆಂದು ತೀರ್ಮಾನ ಮಾಡುತ್ತಾರೆ ಎಂದರು.



1967ರಿಂದ 2026ರವರೆಗಿನ ಆರು ದಶಕಗಳ ಸಮಗ್ರ ಅವಲೋಕನ

ನಕ್ಸಲ್ ಮುಕ್ತ ಭಾರತ

ಭಾರತದ ಆಂತರಿಕ ಭದ್ರತೆಗೆ ಆರು ದಶಕಗಳ ಕಾಲ ಅತಿ ದೊಡ್ಡ ಸವಾಲಾಗಿದ್ದ ನಕ್ಸಲ್ವಾದವು 2026ರ ಮಾರ್ಚ್ 31ರಂದು ಅಧಿಕೃತವಾಗಿ ಅಂತ್ಯ ಕಂಡಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಾ.30ರಂದು ಲೋಕಸಭೆಯಲ್ಲಿ ಭಾರತವು ಸಂಪೂರ್ಣವಾಗಿ ನಕ್ಸಲ್ ಮುಕ್ತವಾಗಿದೆ ಎಂದು ಅಧಿಕೃತವಾಗಿ ಘೋಷಿಸಿದರು. ಮಾವೋವಾದಿ ಸಂಘಟನೆಯ ಕೇಂದ್ರ ಸಮಿತಿ, ಪೊಲಿಟ್ಬ್ಯೂರೊ ಮತ್ತು ರಾಜ್ಯ ಸಮಿತಿಗಳ ಸಂಪೂರ್ಣ ರಚನೆಯನ್ನು ನಾಶಪಡಿಸಲಾಗಿದೆ ಎಂದು ಅವರು ಸಂಸತ್ತಿನಲ್ಲಿ ತಿಳಿಸಿದರು.

ನಕ್ಸಲ್‌ಬಾರಿ ದಂಗೆ (1967)

ನಕ್ಸಲ್‌ವಾದದ ಮೂಲವನ್ನು 1967ರ ಮೇ 25ರಂದು ಪಶ್ಚಿಮ ಬಂಗಾಳದ ದಾರ್ಜಿಲಿಂಗ್ ಜಿಲ್ಲೆಯ ನಕ್ಸಲ್ಬಾರಿ, ಖೋರಿಬಾರಿ ಮತ್ತು ಫಾನ್ಸಿಡೇವಾ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ರೈತ ದಂಗೆಗೆ ಗುರುತಿಸಬಹುದು. ಚಾರು ಮಜುಮ್ದಾರ್, ಕನು ಸನ್ಯಾಲ್ ಮತ್ತು ಜಂಗಲ್ ಸಂಥಾಲ್ ನೇತೃತ್ವದಲ್ಲಿ ಸಿಪಿಐ(ಎಂ) ಪಕ್ಷದ ಒಳಗಿನ ಬಂಡಾಯ ಗುಂಪು ಈ ದಂಗೆಯನ್ನು ನಡೆಸಿತು. 1967ರ ಮಾರ್ಚ್ 3ರಂದು ಸುಮಾರು 150 ರೈತರು ಬಿಲ್ಲು-ಈಟಿಗಳೊಂದಿಗೆ ಭೂಮಾಲೀಕರ ಅಕ್ಕಿ ಮತ್ತು ಭೂಮಿಯನ್ನು ವಶಪಡಿಸಿಕೊಂಡರು. ಜೂನ್ ತಿಂಗಳ ಹೊತ್ತಿಗೆ ರೈತ ಸಮಿತಿಗಳು ನಕ್ಸಲ್ಬಾರಿ ಪ್ರದೇಶದ ಮೇಲೆ ಹಿಡಿತ ಸಾಧಿಸಿದವು. ಮೇ 25ರಂದು ಪೊಲೀಸರು ನಡೆಸಿದ ಗೋಲಿಬಾರ್‌ನಲ್ಲಿ ಒಂಬತ್ತು ಮಹಿಳೆಯರು ಮತ್ತು ಒಂದು ಮಗು ಸಾವನ್ನಪ್ಪಿದರು. ಜುಲೈ 19ರಂದು ಸರ್ಕಾರ ಅರೆಸೈನಿಕ ಪಡೆಗಳನ್ನು ಕಳಿಸಿ ದಂಗೆಯನ್ನು ಹತ್ತಿಕ್ಕಿತು.

ಸಿಪಿಐ(ಮಾವೋವಾದಿ) ರಚನೆ

2004ರ ಸೆ.21ರಂದು ಪೀಪಲ್ಸ್ ವಾರ್ ಗ್ರೂಪ್ (ಪಿಡಬ್ಲ್ಯುಜಿ) ಮತ್ತು ಮಾವೋವಾದಿ ಕಮ್ಯೂನಿಸ್ಟ್ ಸೆಂಟರ್ ಆಫ್ ಇಂಡಿಯಾ (ಎಂಸಿಸಿಐ) ವಿಲೀನಗೊಂಡು ಸಿಪಿಐ(ಮಾವೋವಾದಿ) ಎಂಬ ಏಕೀಕೃತ ಸಂಘಟನೆ ರಚನೆಯಾಯಿತು. ಈ ವಿಲೀನವು ನಕ್ಸಲ್ ಹಿಂಸಾಚಾರವನ್ನು ತೀವ್ರಗೊಳಿಸಿತು. ಅವರ ಸಶಸ್ತ್ರ ವಿಭಾಗ ಪೀಪಲ್ಸ್ ಲಿಬರೇಶನ್ ಗೆರಿಲ್ಲಾ ಆರ್ಮಿ (ಪಿಎಲ್‌ಜಿಎ) ಕಾನೂನುಬಾಹಿರ ಚಟುವಟಿಕೆ (ತಡೆ) ಕಾಯ್ದೆಯ (ಯುಎಪಿಎ) ಅಡಿಯಲ್ಲಿ ಉಗ್ರಗಾಮಿ ಸಂಘಟನೆಯೆಂದು ಘೋಷಿಸಲ್ಪಟ್ಟಿತು. ಸಿಪಿಐ(ಮಾವೋವಾದಿ) ಭಾರತೀಯ ರಾಜ್ಯವನ್ನು ಸಾಮ್ರಾಜ್ಯಶಾಹಿಗಳು, ದಲ್ಲಾಳಿ ಬೂರ್ಜ್ವಾಗಳು ಮತ್ತು ಊಳಿಗಮಾನ್ಯ ಅಧಿಪತಿಗಳ ಸಹಯೋಗದಿಂದ ನಡೆಸಲಾಗುತ್ತಿದೆ ಎಂದು ಪ್ರತಿಪಾದಿಸುತ್ತಿತ್ತು. ದೀರ್ಘಕಾಲೀನ ಸಶಸ್ತ್ರ ಹೋರಾಟದ ಮೂಲಕ ಅಧಿಕಾರವನ್ನು ವಶಪಡಿಸಿಕೊಳ್ಳುವುದು ಅವರ ಗುರಿಯಾಗಿತ್ತು. ಪಕ್ಷದ ಅತ್ಯುನ್ನತ ನಿರ್ಧಾರ ತೆಗೆದುಕೊಳ್ಳುವ ಸಂಸ್ಥೆ ಪೊಲಿಟ್‌ಬ್ಯೂರೋ ಆಗಿದ್ದು, ಅದರಲ್ಲಿ 13-14 ಸದಸ್ಯರಿದ್ದರು. ಪ್ರಾದೇಶಿಕ ಬ್ಯೂರೊಗಳು, ರಾಜ್ಯ ಸಮಿತಿಗಳು, ವಲಯ ಸಮಿತಿಗಳು, ಜಿಲ್ಲಾ ಸಮಿತಿಗಳು ಮತ್ತು ದಳಗಳು (ಸಶಸ್ತ್ರ ತಂಡಗಳು) ಎಂಬ ಶ್ರೇಣೀಕೃತ ರಚನೆ ಇತ್ತು. ಈ ಸಂಘಟನಾ ರಚನೆಯನ್ನು ಸಂಪೂರ್ಣವಾಗಿ ನಾಶಪಡಿಸಲಾಗಿದೆ ಎಂದು ಸರ್ಕಾರ ಹೇಳಿದೆ.

ಪ್ರಮುಖ ನಕ್ಸಲ್ ದಾಳಿಗಳು

ನಕ್ಸಲೀಯರು ನಡೆಸಿದ ಪ್ರಮುಖ ರಕ್ತಪಾತದ ಘಟನೆಗಳು ಈ ಕೆಳಗಿನಂತಿವೆ:

ವರ್ಷ	ಘಟನೆ	ಸಾವಿನ ಸಂಖ್ಯೆ
2010	ದಂತೆವಾಡ ದಾಳಿ (ಛತ್ತೀಸ್‌ಗಢ)	76 ಸಿಆರ್‌ಪಿಎಫ್ ಸಿಬ್ಬಂದಿ ಹತ್ಯೆ
2013	ಜೀರಮ್ ಘಾಟಿ ದಾಳಿ	ಕಾಂಗ್ರೆಸ್ ನಾಯಕ ಮಹೇಂದ್ರ ಕರ್ಮ ಸೇರಿ 29 ಹತ್ಯೆ
2017	ಬುರ್ಕಪಾಲ್ ದಾಳಿ (ಸುಕ್ಮಾ)	25 ಸಿಆರ್‌ಪಿಎಫ್ ಸಿಬ್ಬಂದಿ ಹತ್ಯೆ
2021	ಸುಕ್ಮಾ ದಾಳಿ	22 ಭದ್ರತಾ ಸಿಬ್ಬಂದಿ ಹತ್ಯೆ

ಸೌತ್ ಏಷ್ಯಾ ಟೆರರಿಸಮ್ ಪೋರ್ಟಲ್ ಪ್ರಕಾರ, 2000ರಿಂದ 2025ರ ನಡುವೆ ನಕ್ಸಲ್ ಹಿಂಸಾಚಾರದಲ್ಲಿ 4,134 ನಾಗರಿಕರು, 2,722 ಭದ್ರತಾ ಪಡೆ ಸಿಬ್ಬಂದಿ ಮತ್ತು 4,994 ನಕ್ಸಲೀಯರು ಸೇರಿ ಒಟ್ಟು 12,102 ಜನ ಮೃತಪಟ್ಟಿದ್ದಾರೆ.

ಪ್ರಮುಖ ಕಾರ್ಯಾಚರಣೆಗಳು

2025-26ರ ಅವಧಿಯಲ್ಲಿ ಅನೇಕ ಮಹತ್ವದ ಕಾರ್ಯಾಚರಣೆಗಳು ನಡೆದವು. 2025ರ ಜನವರಿಯಲ್ಲಿ ಒಡಿಶಾ-ಛತ್ತೀಸ್‌ಗಡ ಗಡಿಯಲ್ಲಿ ಕೇಂದ್ರ ಸಮಿತಿ ನಾಯಕ ರಾಮಚಂದ್ರ ರೆಡ್ಡಿ (ಚಳಪತಿ) ಹತನಾದ. ಈ 62 ವರ್ಷದ ನಾಯಕ 1 ಕೋಟಿ ರೂ. ಬಹುಮಾನ ಹೊಂದಿದ್ದ ಮತ್ತು 2018ರ ಮಾರಣಹೋಮ ದಾಳಿಗಳ ಸೂತ್ರಧಾರಿಯಾಗಿದ್ದ. ಸೆಪ್ಟೆಂಬರ್‌ನಲ್ಲಿ ಕೋಸಾ ಎಂಬ ಕೇಂದ್ರ ಸಮಿತಿ ಸದಸ್ಯ ಛತ್ತೀಸ್‌ಗಢದಲ್ಲಿ ಹತನಾದ. ಡಿಸೆಂಬರ್‌ನಲ್ಲಿ ಒಡಿಶಾದ ಕಂಧಮಾಲ ಅರಣ್ಯದಲ್ಲಿ 1.1 ಕೋಟಿ ರೂ. ಬಹುಮಾನದ ಗಣೇಶ್ ಉಯಿಕೆ ಹತನಾದ. 2026ರ ಜನವರಿಯಲ್ಲಿ ಝಾರ್ಖಂಡ್‌ನಲ್ಲಿ ಅನಲ್ ದಾ ಎಂಬ ಕೇಂದ್ರ ಸಮಿತಿ ಸದಸ್ಯ ಹತನಾದ. ವಿಶೇಷ ಕಾರ್ಯಾಚರಣೆಗಳಲ್ಲಿ ಕೆಲವು ಗಮನಾರ್ಹ ಸಂಗತಿಗಳು ಬೆಳಕಿಗೆ ಬಂದವು. ಬಸ್ತರ್ ಐಜಿಪಿ ಸುಂದರ್‌ರಾಜ್ ಅವರ ಪ್ರಕಾರ ಮಾವೋವಾದಿ ಸಂಘಟನೆಯು ಎಲ್‌ಟಿಟಿಇ (ಲಿಬರೇಶನ್ ಟೈಗರ್ಸ್ ಆಫ್ ತಮಿಳ್ ಈಳಂ) ಸೇರಿದಂತೆ ಇತರ ಉಗ್ರಗಾಮಿ ಸಂಘಟನೆಗಳಿಂದ ತರಬೇತಿ ಮತ್ತು ತಾಂತ್ರಿಕ ನೆರವು ಪಡೆದಿತ್ತು. ಪ್ರಧಾನ ಕಾರ್ಯದರ್ಶಿ ಬಸವರಾಜು ಹಿಂಸಾತ್ಮಕ ಕಾರ್ಯಾಚರಣೆಗಳನ್ನು ಯೋಜಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದ. ಗುಂಪು ವಿದೇಶಿ ಉಗ್ರಗಾಮಿ ಸಂಘಟನೆಗಳಿಂದ ತರಬೇತಿ ಪಡೆದಿತ್ತು ಎಂಬ ಬಹಿರಂಗ ಮಾಹಿತಿಯು ನಕ್ಸಲ್ ಸಮಸ್ಯೆಯ ಅಂತಾರಾಷ್ಟ್ರೀಯ ಆಯಾಮವನ್ನು ಬಿಚ್ಚಿಟ್ಟಿತು. 2025ರ ಮಾರ್ಚ್‌ನಲ್ಲಿ ಮಾತ್ರ ಎರಡು ಬೃಹತ್ ಕಾರ್ಯಾಚರಣೆಗಳಲ್ಲಿ ಛತ್ತೀಸ್‌ಗಢದ ಸುಕ್ಮಾ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಕನಿಷ್ಠ 46 ನಕ್ಸಲೀಯರನ್ನು ಹೊಡೆದುರುಳಿಸಲಾಯಿತು. ಮೊದಲ ಕಾರ್ಯಾಚರಣೆಯಲ್ಲಿ ಮಾರ್ಚ್ 20ರಂದು ಬಿಜಾಪುರದಲ್ಲಿ 30 ಮಾವೋವಾದಿಗಳನ್ನು ಹೊಡೆದುರುಳಿಸಲಾಯಿತು. ಕೆಲವು ದಿನಗಳ ನಂತರ ಸುಕ್ಮಾದಲ್ಲಿ ಇನ್ನೂ 16 ಜನರನ್ನು ಗುಂಡಿಕ್ಕಿ ಕೊಲ್ಲಲಾಯಿತು. ಇವು ಯಾದೃಚ್ಛಿಕ ಹತ್ಯೆಗಳಾಗಿರಲಿಲ್ಲ - ನಕ್ಸಲೀಯರ ಕಾರ್ಯತಂತ್ರ ಸಭೆಗಳ ಸಮಯದಲ್ಲಿ ಯೋಜಿತ ಕಾರ್ಯಾಚರಣೆಗಳಾಗಿದ್ದವು. 2025ರ ಫೆಬ್ರವರಿಯಲ್ಲಿ ಒಂದೇ ದಿನ ಬಿಜಾಪುರದಲ್ಲಿ 31 ನಕ್ಸಲೀಯರನ್ನು ಹೊಡೆದುರುಳಿಸಿ ವಾತಾವರಣ ಸೃಷ್ಟಿಸಲಾಗಿತ್ತು.

ವರ್ಷವಾರು ಅಂಕಿಅಂಶಗಳು

ವರ್ಷ	ಎನ್‌ಕೌಂಟರ್‌ನಲ್ಲಿ ಹತರು	ಶರಣಾಗತಿ	ಬಂಧಿತರು
2019-2023	1,149 (ಒಟ್ಟು)	5,880	7,409
2024	290	928	1,090
2025	317+	2,337	800+
2026 (ಮಾರ್ಚ್ ವರೆಗೆ)	100+	630+	-

ಸಮಗ್ರ ಅಂಕಿಅಂಶಗಳು

2026ರ ಮಾರ್ಚ್ 30ರಂದು ಗೃಹ ಸಚಿವ ಅಮಿತ್ ಶಾ ಅವರು ಲೋಕಸಭೆಯಲ್ಲಿ ನೀಡಿದ ಅಧಿಕೃತ ಅಂಕಿಅಂಶಗಳ ಪ್ರಕಾರ:

- ಎನ್ಕೌಂಟರ್‌ನಲ್ಲಿ ಹತರಾದ ನಕ್ಸಲೀಯರು - **706**
- ಬಂಧಿತರು / ಜೈಲುವಾಸ - **2,218**
- ಶರಣಾಗತಿ ಹೊಂದಿದ ನಕ್ಸಲೀಯರು- **4,839**
- ಒಟ್ಟು ನಿಷ್ಕ್ರಿಯಗೊಳಿಸಲಾದ ನಕ್ಸಲೀಯರು-**7,763**



ಹತರಾದ ಪ್ರಮುಖ ನಕ್ಸಲ್ ನಾಯಕರು

2014ರಿಂದ 2026ರ ನಡುವೆ ನಕ್ಸಲ್ ಸಂಘಟನೆಯ ಅಗ್ರ ನಾಯಕತ್ವವನ್ನು ಸಂಪೂರ್ಣವಾಗಿ ನಾಶಪಡಿಸಲಾಯಿತು. ಅಮಿತ್ ಶಾ ಅವರ ಪ್ರಕಾರ, ಅಗ್ರ ನಾಯಕತ್ವದಲ್ಲಿ 12 ಜನ ಹತರಾಗಿದ್ದಾರೆ ಮತ್ತು ಕೇವಲ ಒಬ್ಬ ಮಾತ್ರ ತಲೆಮರೆಸಿಕೊಂಡಿದ್ದಾನೆ.

ನಾಯಕ ಹುದ್ದೆ ಮತ್ತು ಹತ್ಯೆ/ಶರಣಾಗತಿ ವಿವರ

- ನಂಬಳ ಕೇಶವ ರಾವ್ (ಬಸವರಾಜು) ಪ್ರಧಾನ ಕಾರ್ಯದರ್ಶಿ: ಮೇ 2025 - ಛತ್ತೀಸ್‌ಗಢದಲ್ಲಿ ಹತ
- ಮದ್ವಿ ಹಿಡ್ಮಾ: ಕೇಂದ್ರ ಮಿಲಿಟರಿ ಕಮಿಷನ್ ಮುಖ್ಯಸ್ಥ ನವೆಂಬರ್ 2025 - ಆಂಧ್ರಪ್ರದೇಶದಲ್ಲಿ ಹತ
- ರಾಮಚಂದ್ರ ರೆಡ್ಡಿ (ಚಳಪತಿ) ಕೇಂದ್ರ ಸಮಿತಿ ಸದಸ್ಯ ಜನವರಿ 2025 - ಒಡಿಶಾ ಗಡಿಯಲ್ಲಿ ಹತ
- ಗಣೇಶ್ ಉಐಕೆ:ಕೇಂದ್ರ ಸಮಿತಿ ಸದಸ್ಯ: ಡಿಸೆಂಬರ್ 2025 - ಒಡಿಶಾದಲ್ಲಿ ಹತ
- ಮಿಲಿಂದ ತೆಲ್ತುಂಬ್ಡೆಕೇಂದ್ರ ಸಮಿತಿ ಸದಸ್ಯ: ಗಡಚಿರೋಲಿ (ಮಹಾರಾಷ್ಟ್ರ) ಎನ್ಕೌಂಟರ್
- ವಿಕ್ರಮ ಗೌಡ: ಕರ್ನಾಟಕದ ಮೋಸ್ಟ್ ವಾಂಟೆಡ್ ನವೆಂಬರ್ 2024 - ಉಡುಪಿ ಬಳಿ ಹತ
- ಮಲ್ಲೋಜುಲ ವೇಣುಗೋಪಾಲ ರಾವ್ (ಭೂಪತಿ) ಪೊಲಿಟ್‌ಬ್ಯೂರೊ ಸದಸ್ಯ: ಅಕ್ಟೋಬರ್ 2025 - ಮಹಾರಾಷ್ಟ್ರದಲ್ಲಿ ಶರಣಾಗತಿ
- ಥಿಪ್ಪಿರಿ ತಿರುಪತಿ (ದೇವಜಿ)ಪ್ರಧಾನ ಕಾರ್ಯದರ್ಶಿ: ಫೆಬ್ರವರಿ 2026 - ತೆಲಂಗಾಣದಲ್ಲಿ ಶರಣಾಗತಿ
- ಮಲ್ಲ ರಾಜಿ ರೆಡ್ಡಿ: ಕೇಂದ್ರ ಸಮಿತಿ ಸದಸ್ಯ ಫೆಬ್ರವರಿ 2026 - ತೆಲಂಗಾಣದಲ್ಲಿ ಶರಣಾಗತಿ

ಮೋದಿ ಸರ್ಕಾರದ ಶೂನ್ಯ ಸಹಿಷ್ಣುತೆ ನೀತಿ

2014ರಲ್ಲಿ ಅಧಿಕಾರಕ್ಕೆ ಬಂದ ನರೇಂದ್ರ ಮೋದಿ ಸರ್ಕಾರವು ನಕ್ಸಲ್ವಾದದ ವಿರುದ್ಧ ಬಹು-ಆಯಾಮಿ ಕಾರ್ಯತಂತ್ರವನ್ನು ರೂಪಿಸಿತು. 2015ರಲ್ಲಿ ಜಾರಿಗೊಳಿಸಲಾದ ರಾಷ್ಟ್ರೀಯ ನೀತಿ ಮತ್ತು ಕಾರ್ಯಯೋಜನೆಯು ಮೂರು ಪ್ರಮುಖ ಅಂಶಗಳನ್ನು ಒಳಗೊಂಡಿತ್ತು: ಭದ್ರತೆ, ಅಭಿವೃದ್ಧಿ ಮತ್ತು ಪುನರ್ವಸತಿ. ಹಿಂದಿನ ಸರ್ಕಾರಗಳ ಹರಡಿದ ವಿಧಾನವನ್ನು ಬದಲಿಸಿ, ಸಮಗ್ರ ಮತ್ತು ಸಮನ್ವಯಿತ ವಿಧಾನವನ್ನು ಅಳವಡಿಸಲಾಯಿತು. ಗೃಹ ಸಚಿವ ಅಮಿತ್ ಶಾ ಅವರು 2024ರ ಆಗಸ್ಟ್‌ನಲ್ಲಿ ಎಡಪಂಥೀಯ ಉಗ್ರವಾದ ಪರಿಸ್ಥಿತಿಯನ್ನು ಪರಿಶೀಲಿಸಿ, 2026ರ ಮಾರ್ಚ್ 31ರ ಒಳಗೆ ಮಾವೋವಾದವನ್ನು ದೇಶದಿಂದ ನಿರ್ಮೂಲನೆ ಮಾಡಲಾಗುವುದು ಎಂದು ಘೋಷಿಸಿದರು. ಈ ಗಡುವು ಭದ್ರತಾ ಪಡೆಗಳನ್ನು ಕಾರ್ಯಾಚರಣೆಗಳನ್ನು ತೀವ್ರಗೊಳಿಸಲು ಪ್ರೇರೇಪಿಸಿತು ಮತ್ತು ಕೇಂದ್ರ ಹಾಗೂ ರಾಜ್ಯ ಪಡೆಗಳ ನಡುವಿನ ಸಮನ್ವಯವನ್ನು ಬಲಪಡಿಸಿತು.

ಟ್ರೇಸ್-ಟಾರ್ಗೆಟ್-ನ್ಯೂಟ್ರಲೈಸ್ ಕಾರ್ಯತಂತ್ರ

ಭದ್ರತಾ ಕಾರ್ಯಾಚರಣೆಗಳನ್ನು ಟ್ರೇಸ್ (ಪತ್ತೆ), ಟಾರ್ಗೆಟ್ (ಗುರಿ) ಮತ್ತು ನ್ಯೂಟ್ರಲೈಸ್ (ನಿಷ್ಕ್ರಿಯಗೊಳಿಸು) ಎಂಬ ಕಾರ್ಯವಿಧಾನದ ಮೂಲಕ ನಡೆಸಲಾಯಿತು. ಸಿಆರ್‌ಪಿಎಫ್ ಮತ್ತು ಅದರ ಸಂಚಿಕೆ ಕೋಬ್ರಾ, (ಕಮಾಂಡೋ ಬೆಟಾಲಿಯನ್ ಫಾರ್ ರೆಸೊಲ್ಯೂಟ್ ಆಕ್ಷನ್) ಘಟಕಗಳು, ಡಿಸ್ಟ್ರಿಕ್ಟ್ ರಿಸರ್ವ್ ಗಾರ್ಡ್ಸ್ (ಡಿಆರ್‌ಜಿ), ಬಸ್ತರ್ ಫೈಟರ್ಸ್ ಮತ್ತು ಸ್ಪೆಷಲ್ ಟಾಸ್ಕ್ ಫೋರ್ಸ್ (ಎಸ್ಟಿಎಫ್) ಸೇರಿದಂತೆ ಸುಮಾರು ಒಂದು ಲಕ್ಷ ಅರೆಸೈನಿಕ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಸ್ಥಳೀಯ ಭೂಪ್ರದೇಶ ಮತ್ತು ಭಾಷೆಯ ಮೇಲೆ ಹಿಡಿತ ಹೊಂದಿರುವ ಡಿಸ್ಟ್ರಿಕ್ಟ್ ರಿಸರ್ವ್ ಗಾರ್ಡ್ಸ್, ಅದರಲ್ಲೂ, ಶರಣಾಗತಿ ಹೊಂದಿದ ಮಾಜಿ ನಕ್ಸಲೀಯರನ್ನು ಒಳಗೊಂಡ ಈ ಘಟಕಗಳು ಕಾರ್ಯಾಚರಣೆಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಕೆಲಸ ಮಾಡಿದವು.

ಆಪರೇಷನ್ ಕಾಗರ್

2024ರ ಜನವರಿಯಲ್ಲಿ ಆರಂಭವಾದ ಆಪರೇಷನ್ ಕಾಗರ್ ನಕ್ಸಲ್ ಹೋರಾಟದ ಅಂತಿಮ ಹಂತವನ್ನು ಗುರುತಿಸಿತು. ಈ ಕಾರ್ಯಾಚರಣೆಗೆ ನಾಲ್ಕು ಪ್ರಮುಖ ಕಾರ್ಯತಂತ್ರ ಗುರಿಗಳಿದ್ದವು: ಬಸ್ತರ್‌ನಾದ್ಯಂತ ಸಿಆರ್‌ಪಿಎಫ್ ನೆಲೆಗಳ ಸ್ಥಾಪನೆ, ಡ್ರೋನ್ ಮತ್ತು ಉಪಗ್ರಹ ಗುಪ್ತಚರ ಸಂಗ್ರಹ, 612ಕ್ಕೂ ಹೆಚ್ಚು ಪೊಲೀಸ್ ಠಾಣೆಗಳ ಸ್ಥಾಪನೆ, ಮತ್ತು ಶರಣಾಗತಿ ನೀತಿಯ ಜಾರಿ.

ಆಪರೇಷನ್ ಬ್ಲ್ಯಾಕ್ ಫಾರೆಸ್ಟ್ (ಕರ್ರೆಗುಟ್ಟಲು ಬೆಟ್ಟ ಕಾರ್ಯಾಚರಣೆ): 2025ರ ಏಪ್ರಿಲ್ 21ರಿಂದ ಮೇ 11ರವರೆಗೆ 21 ದಿನಗಳ ಕಾಲ ನಡೆದ ಆಪರೇಷನ್ ಬ್ಲ್ಯಾಕ್ ಫಾರೆಸ್ಟ್ ಭಾರತದ ಅತಿ ದೊಡ್ಡ ನಕ್ಸಲ್ ವಿರೋಧಿ ಕಾರ್ಯಾಚರಣೆಯಾಗಿತ್ತು. ಛತ್ತೀಸ್‌ಗಡ-ತೆಲಂಗಾಣ ಗಡಿಯಲ್ಲಿರುವ ಕರ್ರೆಗುಟ್ಟಲು ಬೆಟ್ಟ ಪ್ರದೇಶದಲ್ಲಿ ನಡೆದ ಈ ಕಾರ್ಯಾಚರಣೆಯಲ್ಲಿ 31 ನಕ್ಸಲೀಯರನ್ನು ಹೊಡೆದುರುಳಿಸಲಾಯಿತು. ಈ ಪ್ರದೇಶವು ಪಿಎಲ್ಜಿಎ ಬೆಟಾಲಿಯನ್ 1, ಡಿಕೆಎಸ್ಜೆಡ್‌ಸಿ ಮತ್ತು ಟಿಎಸ್‌ಸಿ ಮುಂತಾದ ಪ್ರಮುಖ ನಕ್ಸಲ್ ಸಂಘಟನೆಗಳ ಏಕೀಕೃತ ಕೇಂದ್ರ ಕಚೇರಿಯಾಗಿತ್ತು. ಈ ಕಾರ್ಯಾಚರಣೆಯಲ್ಲಿ ಸಿಪಿಐ(ಮಾವೋವಾದಿ) ಪ್ರಧಾನ ಕಾರ್ಯದರ್ಶಿ ನಂಬಳ ಕೇಶವ ರಾವ್ (ಬಸವರಾಜು) ಸೇರಿದಂತೆ 27 ನಕ್ಸಲೀಯರನ್ನು ಮೇ 21ರಂದು ಹೊಡೆದುರುಳಿಸಲಾಯಿತು. ಭದ್ರತಾ ಪಡೆಗಳಲ್ಲಿ ಯಾವುದೇ ಸಾವು ಸಂಭವಿಸಲಿಲ್ಲ ಎಂಬುದು ವಿಶೇಷ.

ಭದ್ರತಾ ಮೂಲಸೌಕರ್ಯ ವಿಸ್ತರಣೆ

ಸರ್ಕಾರವು ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ಅಪಾರ ಭದ್ರತಾ ಮೂಲಸೌಕರ್ಯವನ್ನು ನಿರ್ಮಿಸಿದೆ. ನಕ್ಸಲ್ ಪೀಡಿತ ಪ್ರದೇಶಗಳ ಪೊಲೀಸ್ ಠಾಣೆಗಳ ಸಂಖ್ಯೆ 2014ರ 66ರಿಂದ 586ಕ್ಕೆ ಏರಿದೆ. 361 ಹೊಸ ಭದ್ರತಾ ಶಿಬಿರಗಳನ್ನು ಸ್ಥಾಪಿಸಲಾಗಿದೆ ಮತ್ತು 68 ರಾತ್ರಿ-ಲ್ಯಾಂಡ್ ಮಾಡಬಹುದಾದ ಹೆಲಿಪ್ಯಾಡ್‌ಗಳನ್ನು ನಿರ್ಮಿಸಲಾಗಿದೆ. ಡ್ರೋನ್ ಕಣ್ಗಾವಲು, ಉಪಗ್ರಹ ಚಿತ್ರಣ, ಕೃತಕ ಬುದ್ಧಿಮತ್ತೆ ಆಧಾರಿತ ವಿಶ್ಲೇಷಣೆ ಮತ್ತು ಮೊಬೈಲ್ ಡೇಟಾ ವಿಶ್ಲೇಷಣೆ ಮುಂತಾದ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಬಳಸಲಾಗಿದೆ.

ಅಂಶ	2014	2026
ನಕ್ಸಲ್ ಪೀಡಿತ ಜಿಲ್ಲೆಗಳು	126	7-8
ಅತಿ ಹೆಚ್ಚು ಪ್ರಭಾವಿತ ಜಿಲ್ಲೆಗಳು	35	3
ಪೊಲೀಸ್ ಠಾಣೆಗಳು	66	586
ನಕ್ಸಲ್ ಘಟನೆ ದಾಖಲಿಸಿದ ಪೊಲೀಸ್ ಠಾಣೆಗಳು	330 (76 ಜಿಲ್ಲೆ)	52 (22 ಜಿಲ್ಲೆ)
ಭದ್ರತಾ ಸಿಬ್ಬಂದಿ ಮರಣ (ವಾರ್ಷಿಕ)	88	19
ನಾಗರಿಕ ಮರಣ ಇಳಿಕೆ	-	70% ಕಡಿಮೆ
ಹಿಂಸಾಚಾರ ಘಟನೆಗಳು (ವಾರ್ಷಿಕ)	1,080	234

2014 ಮತ್ತು 2026 - ಹೋಲಿಕೆ

2014ಕ್ಕಿಂತ ಮೊದಲು ನಕ್ಸಲ್ ಸಮಸ್ಯೆಯನ್ನು ನಿರ್ವಹಿಸುವಲ್ಲಿ ಕೇಂದ್ರ- ರಾಜ್ಯ ಸರ್ಕಾರಗಳು ಅನೇಕ ಸವಾಲುಗಳನ್ನು ಎದುರಿಸಿದ್ದವು. ನಕ್ಸಲ್‌ವಾದವನ್ನು ರಾಜ್ಯಗಳ ಸಮಸ್ಯೆ ಎಂದು ಪರಿಗಣಿಸಲಾಗುತ್ತಿತ್ತು. ರಾಷ್ಟ್ರೀಯ ನೀತಿ ಇರಲಿಲ್ಲ, ಕೇಂದ್ರ ಮತ್ತು ರಾಜ್ಯ ಪಡೆಗಳ ನಡುವೆ ಸಮನ್ವಯ ಕೊರತೆ ಇತ್ತು. ಗುಪ್ತಚರ ಮಾಹಿತಿ ಹಂಚಿಕೆ ಸಮರ್ಪಕವಾಗಿರಲಿಲ್ಲ, ಸೇನಾ ಕಾರ್ಯಾಚರಣೆ ಮತ್ತು ಅಭಿವೃದ್ಧಿ ಕೆಲಸಗಳ ನಡುವೆ ಸಮತೋಲನ ಇರಲಿಲ್ಲ, 2004ರಿಂದ 2014ರ ನಡುವೆ 19,135 ನಕ್ಸಲ್ ಸಂಬಂಧಿತ ಹಿಂಸಾಚಾರ ಘಟನೆಗಳು ನಡೆದಿದ್ದರೆ, 2015ರ ಜೂನ್‌ನಿಂದ 2025ರ ಮೇ ವರೆಗೆ ಈ ಸಂಖ್ಯೆ 56% ಕಡಿಮೆಯಾಗಿ 7,134ಕ್ಕೆ ಇಳಿದಿದೆ. 2010ರಲ್ಲಿ 1,936 ಘಟನೆಗಳು ನಡೆದಿದ್ದರೆ, 2024ರಲ್ಲಿ ಕೇವಲ 374 ಮತ್ತು 2025ರಲ್ಲಿ ಸುಮಾರು 234 ಘಟನೆಗಳು ನಡೆದಿವೆ. 2010ರಲ್ಲಿ 465 ಪೊಲೀಸ್ ಠಾಣೆಗಳಲ್ಲಿ ನಕ್ಸಲ್ ಹಿಂಸಾಚಾರ ವರದಿಯಾಗಿದ್ದರೆ, 2025ರಲ್ಲಿ ಕೇವಲ 119 ಠಾಣೆಗಳಲ್ಲಿ ಮಾತ್ರ ವರದಿಯಾಗಿದೆ. ನಾಗರಿಕ ಮತ್ತು ಭದ್ರತಾ ಪಡೆ ಸಾವುಗಳೂ ಗಮನಾರ್ಹವಾಗಿ ಕಡಿಮೆಯಾಗಿವೆ. 2010ರಲ್ಲಿ 1,005 ಜನ ಹತರಾಗಿದ್ದರೆ, 2024ರಲ್ಲಿ ಸುಮಾರು 150 ಮತ್ತು 2025ರಲ್ಲಿ ಸುಮಾರು 95-100 ಜನ ಮಾತ್ರ ಹತರಾಗಿದ್ದಾರೆ. ಇದು 85-91 % ಕಡಿಮೆ. ಭದ್ರತಾ ಸಿಬ್ಬಂದಿ ಸಾವಿನ ಸಂಖ್ಯೆ 73% ಕಡಿಮೆಯಾಗಿದೆ ಮತ್ತು ನಾಗರಿಕ ಸಾವಿನ ಸಂಖ್ಯೆ 70% ಕಡಿಮೆಯಾಗಿದೆ.

ಹಿಡ್ಮಾ ಹತ್ಯೆ

2025ರ ನವೆಂಬರ್ 18ರಂದು ಮದ್ವಿ ಹಿಡ್ಮಾ ಎಂಬ ಸಿಪಿಐ(ಮಾವೋವಾದಿ) ಕೇಂದ್ರ ಸಮಿತಿ ಸದಸ್ಯ, ಕೇಂದ್ರ ಮಿಲಿಟರಿ ಕಮಿಷನ್ ಮುಖ್ಯಸ್ಥ ಮತ್ತು ಪಿಎಲ್‌ಜಿಎ ಬೆಟಾಲಿಯನ್ 1ರ ಕಮಾಂಡರ್ ಆಗಿದ್ದ ಹಿಡ್ಮಾ ಆಂಧ್ರಪ್ರದೇಶದ ಅಲ್ಲೂರಿ ಸೀತಾರಾಮರಾಜು ಜಿಲ್ಲೆಯ ಮಾರೆಡುಮಿಲ್ಲಿ ಅರಣ್ಯ ಪ್ರದೇಶದಲ್ಲಿ ಗ್ರೇಹೌಂಡ್ಸ್ ಪಡೆಯ ಎನ್ಕೌಂಟರ್‌ನಲ್ಲಿ ಹತನಾದ. ಅವನ ಪತ್ನಿ ಮದಕಂ ರಾಜೆ ಮತ್ತು ನಾಲ್ಕು ಅಂಗರಕ್ಷಕರಾದ ಲಕ್ಮಲ್, ಕಮ್ಲು, ಮಲ್ಲ ಮತ್ತು ದೇವೆ ಸಹ ಹತರಾದರು. ಹಿಡ್ಮಾ ಮಾವೋವಾದಿ ಕೇಂದ್ರ ಸಮಿತಿಯ ಏಕೈಕ ಬುಡಕಟ್ಟು ಸದಸ್ಯನಾಗಿದ್ದ. ಅವನು ಕನಿಷ್ಠ 26 ಪ್ರಮುಖ ದಾಳಿಗಳಿಗೆ ನೇರ ಹೊಣೆಗಾರನಾಗಿದ್ದ ಮತ್ತು 172 ಭದ್ರತಾ ಸಿಬ್ಬಂದಿಯ ಹತ್ಯೆಗೆ ಕಾರಣನಾಗಿದ್ದ. ಅವನ ತಲೆಗೆ 50 ಲಕ್ಷ ರೂ. ಬಹುಮಾನ ಇತ್ತು. 2010ರ ದಂತೆವಾಡ ದಾಳಿ, 2013ರ ಜೀರಮ್ ಘಾಟಿ ದಾಳಿ, 2017ರ ಬುರ್ಕಪಾಲ್ ದಾಳಿ ಮತ್ತು 2021ರ ತೆಕುಲಗುಡೇಮ್ ದಾಳಿಗಳ ಹಿಂದಿನ ಪ್ರಮುಖ ಸೂತ್ರಧಾರನಾಗಿದ್ದ.

ಕೇಂದ್ರ ಸರ್ಕಾರದ ಶರಣಾಗತಿ-ಸಹ-ಪುನರ್ವಸತಿ ಯೋಜನೆ

ಸೌಲಭ್ಯ	ವಿವರ
ಹಣಕಾಸು ನೆರವು (ಉನ್ನತ ಶ್ರೇಣಿ)	5 ಲಕ್ಷ ರೂ.
ಹಣಕಾಸು ನೆರವು (ಮಧ್ಯಮ/ಕೆಳ ಶ್ರೇಣಿ)	2.5 ಲಕ್ಷ ರೂ.
ಮಾಸಿಕ ವೇತನ (ವೃತ್ತಿ ತರಬೇತಿ ಅವಧಿ)	10,000 ರೂ. (36 ತಿಂಗಳು)
ವಸತಿ	ಸೂಕ್ತ ಮನೆ ನಿವೇಶನ ಹಂಚಿಕೆ
ಶಿಕ್ಷಣ	ಮಕ್ಕಳ ಶಿಕ್ಷಣಕ್ಕೆ ಉಚಿತ ಸೌಲಭ್ಯ
ಉದ್ಯೋಗ	ವೃತ್ತಿ ತರಬೇತಿ ಮತ್ತು ಕೆಲವು ಪ್ರಕರಣಗಳಲ್ಲಿ ಸರ್ಕಾರಿ ಉದ್ಯೋಗ
ಶಸ್ತ್ರ ಒಪ್ಪಿಸಿದ್ದಕ್ಕೆ ಪ್ರೋತ್ಸಾಹ	ಶಸ್ತ್ರ ಪ್ರಕಾರ ಹೆಚ್ಚುವರಿ ಬಹುಮಾನ
ಕಾನೂನು ನೆರವು	ಉಚಿತ ಕಾನೂನು ಸೇವೆ

ಕೇಂದ್ರ ಗೃಹ ಸಚಿವಾಲಯವು 2022ರ ಆಗಸ್ಟ್‌ನಲ್ಲಿ ಪರಿಷ್ಕರಿಸಿದ ಶರಣಾಗತಿ ಮತ್ತು ಪುನರ್ವಸತಿ ಮಾರ್ಗಸೂಚಿಗಳನ್ನು ಅಧಿಸೂಚಿಸಿತು. ಈ ಯೋಜನೆಯಡಿ ಶರಣಾಗತಿ ಹೊಂದಿದ ನಕ್ಸಲೀಯರಿಗೆ ಈ ಕೆಳಗಿನ ಸೌಲಭ್ಯಗಳನ್ನು ನೀಡಲಾಗುತ್ತದೆ



ಕೆಂಪು ಕಾರಿಡಾರ್‌ನ ಪರಿವರ್ತನೆ

ನಕ್ಸಲ್ ಪೀಡಿತ ಪ್ರದೇಶಗಳ ಅಭಿವೃದ್ಧಿಯು ಸರ್ಕಾರದ ಕಾರ್ಯತಂತ್ರದ ಎರಡನೇ ಪ್ರಮುಖ ಸ್ತಂಭವಾಗಿತ್ತು. 2014ರಿಂದ 2025ರ ನಡುವೆ 12,000 ಕಿ.ಮೀ.ಗೂ ಹೆಚ್ಚು ರಸ್ತೆಗಳನ್ನು ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ನಿರ್ಮಿಸಲಾಗಿದೆ. ಗಡಿ ರಸ್ತೆ ಸಂಸ್ಥೆ ಐದು ಪ್ರಮುಖ ರಸ್ತೆಗಳು ಮತ್ತು ಆರು ಸೇತುವೆಗಳನ್ನು ನಿರ್ಮಿಸಿದೆ.

ಈ ಅಭಿವೃದ್ಧಿ ಕಾರ್ಯಕ್ರಮಗಳು ನಕ್ಸಲ್‌ವಾದದ ಸಾಮಾಜಿಕ-ಆರ್ಥಿಕ ಬೇರುಗಳನ್ನು ಕತ್ತರಿಸಿವೆ. ಹಿಂದೆ ಬಂದೂಕು ಹಿಡಿಯುತ್ತಿದ್ದ ಯುವಕರು ಈಗ ಶಿಕ್ಷಣ ಮತ್ತು ಉದ್ಯೋಗದ ಸಾಧನಗಳನ್ನು ಹಿಡಿದಿದ್ದಾರೆ ಎಂದು ಗೃಹ ಸಚಿವರು ಹೇಳಿದ್ದಾರೆ.

ಅಭಿವೃದ್ಧಿ ಅಂಶ	ಅಂಕಿಅಂಶ
ರಸ್ತೆ ನಿರ್ಮಾಣ	12,000+ ಕಿ.ಮೀ.
ಮೊಬೈಲ್ ಟವರ್‌ಗಳು	9,000 (2,343 - 4ಜಿಗೆ ಉನ್ನತೀಕರಣ)
ಹೊಸ ಬ್ಯಾಂಕ್ ಶಾಖೆಗಳು	1,000 +
ಎಟಿಎಂಗಳು	937
ಬ್ಯಾಂಕಿಂಗ್ ಪ್ರತಿನಿಧಿಗಳು	38,000
ಅಂಚೆ ಕಚೇರಿಗಳು	9,000
ಐಟಿಐಗಳು	48
ಕೌಶಲ್ಯ ಅಭಿವೃದ್ಧಿ ಕೇಂದ್ರಗಳು	61 (?465 ಕೋಟಿ)
ಪಿಎಂ ಆವಾಸ್ ಯೋಜನೆ (ಮನೆಗಳು)	2,54,045
ಆಧಾರ್ ನೋಂದಣಿ	24..85 ಲಕ್ಷ
ಆಯುಷ್ಮಾನ್ ಕಾರ್ಡ್‌ಗಳು	21.44 ಲಕ್ಷ
ರೈಲ್ವೆ ಸಂಪರ್ಕ (ದಲ್ಲಿರಾಜ್ಹರಾ-ರಾವ್ಘಾಟ್)	65 ಕಿ.ಮೀ.



ನಗರ ನಕ್ಸಲೀಯರು

ನಗರ ನಕ್ಸಲೀಯರು ಎಂಬ ಪರಿಕಲ್ಪನೆ ಇತ್ತೀಚಿನ ವರ್ಷಗಳಲ್ಲಿ ಪ್ರಮುಖ ಚರ್ಚಾ ವಿಷಯವಾಗಿತ್ತು. ಅಮಿತ್ ಶಾ ಅವರ ಪ್ರಕಾರ, ನಗರ ನಕ್ಸಲೀಯರು ಸಶಸ್ತ್ರ ಮಾವೋವಾದಿಗಳೊಂದಿಗೆ ಮಾತುಕತೆ ನಡೆಸಬೇಕೆಂದು ಒತ್ತಾಯಿಸಿದರು, ಆದರೆ ನಕ್ಸಲ್ ಹಿಂಸಾಚಾರದ ಸಾಮಾನ್ಯ ನಾಗರಿಕ ಬಲಿಪಶುಗಳ ಬಗ್ಗೆ ಕಾಳಜಿ ತೋರಲಿಲ್ಲ, ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) 40 ಕೋಟಿ ರೂ. ಮೌಲ್ಯದ ಆಸ್ತಿ ಮುಟ್ಟುಗೋಲು ಹಾಕಿದರೆ, ಜಾರಿ ನಿರ್ದೇಶನಾಲಯ 12 ಕೋಟಿ ರೂ. ಮುಟ್ಟುಗೋಲು ಹಾಕಿ ನಕ್ಸಲ್‌ವಾದಕ್ಕೆ ಹಣಕಾಸು ಒದಗಿಸುತ್ತಿದ್ದ ಜಾಲಗಳನ್ನು ಛಿದ್ರಗೊಳಿಸಿದೆ.

ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕ ಡಾ.ಲಕ್ಷ್ಮಣ್ ತೆಲಗಾವಿ

ಇತಿಹಾಸ ಸಂಶೋಧನೆಗೆ ಹುಲ್ಲೂರು ಶ್ರೀನಿವಾಸರ ಕೊಡುಗೆ ದೊಡ್ಡದು

ಚಿತ್ರದುರ್ಗ: ಚಿತ್ರದುರ್ಗ ಇತಿಹಾಸ ಸಂಶೋಧನೆಗೆ ಹುಲ್ಲೂರು ಶ್ರೀನಿವಾಸ ಜೋಯಿಸರ ಕೊಡುಗೆ ದೊಡ್ಡದು ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಇತಿಹಾಸ ಪ್ರಾಧ್ಯಾಪಕರಾದ ಡಾ.ಲಕ್ಷ್ಮಣ್ ತೆಲಗಾವಿ ತಿಳಿಸಿದರು.



ರೇಣುಕಾ ಪ್ರಕಾಶನ, ಚಿತ್ರದುರ್ಗ ಇತಿಹಾಸ ಕೂಟ, ಸಂಶೋಧನ ತಂಡ, ರಾಜಾವೀರ ಮದಕರಿನಾಯಕ ಸಾಂಸ್ಕೃತಿಕ ಬಳಗದ ಸಹಯೋಗದೊಂದಿಗೆ ಐ.ಎಂ.ಎ.ಹಾಲ್‌ನಲ್ಲಿ ಏರ್ಪಡಿಸಲಾಗಿದ್ದ ಇತಿಹಾಸ ಸಂಶೋಧನ ಪ್ರಸಕ್ತ ಹುಲ್ಲೂರು ಶ್ರೀನಿವಾಸ ಜೋಯಿಸ ಸ್ಮಾರಕ ಉಪನ್ಯಾಸಮಾಲೆಯಲ್ಲಿ ಜೋಯಿಸರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದರು.

29-3-1892ರಂದು ಜನಿಸಿದ ಹುಲ್ಲೂರು ಶ್ರೀನಿವಾಸ ಜೋಯಿಸಲು 8-11-1956ರಲ್ಲಿ ನಿಧನರಾದರು. 65 ವರ್ಷಗಳ ಕಾಲ ಬದುಕಿದ್ದ ಅವರು 34 ವರ್ಷಗಳನ್ನು ಇತಿಹಾಸ, ಸಂಶೋಧನೆಗಾಗಿಯೇ ಸವೆಸಿದರು. ಹಲವಾರು ಗ್ರಂಥಗಳು ಇವರಿಗೆ ಸಮರ್ಪಣೆಯಾಗಿವೆ. ತ.ರಾ.ಸು.ರವರು ಜೋಯಿಸರ ಜೊತೆ ಹತ್ತಿರದ ಸಂಬಂಧವಿಟ್ಟುಕೊಂಡಿದ್ದರು. ಉನ್ನತ ಸ್ಥಾನಮಾನಗಳನ್ನು ಪಡೆದಿದ್ದರು ಅವರ ಬದುಕು ತುಂಬಾ ಸರಳವಾಗಿತ್ತೆಂದು ಸ್ಮರಿಸಿದರು.

ಸರ್ಕಾರಿ ನೌಕರಿಗೆ ರಾಜಿನಾಮೆಯಿತ್ತು ಚಿತ್ರದುರ್ಗದಲ್ಲಿ ವಕೀಲ ವೃತ್ತಿ ಆರಂಭಿಸಿದ ಹುಲ್ಲೂರು ಶ್ರೀನಿವಾಸ ಜೋಯಿಸರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಸೆರೆವಾಸವನ್ನು ಅನುಭವಿಸಿದರು. ರಂಗಯ್ಯನಬಾಗಿಲು ಬಳಿಯಿರುವ ಪ್ರಾಚ್ಯವಸ್ತು ಸಂಗ್ರಹಾಲಯದ ಸಂಸ್ಥಾಪಕರೆಂದು ಹೇಳಿಕೊಳ್ಳಲು ಹೆಮ್ಮೆಯೆನಿಸುತ್ತದೆ. ಕರ್ನಾಟಕದ ಶ್ರೇಷ್ಠ ಇತಿಹಾಸಕಾರರಲ್ಲಿ ಹುಲ್ಲೂರು ಶ್ರೀನಿವಾಸ ಜೋಯಿಸಲು ಪ್ರಮುಖರು. ಸ್ವಾತಂತ್ರ್ಯ ಪ್ರೇಮಿಯಾಗಿದ್ದ ಇವರು ಗಾಂಧಿ ಅನುಯಾಯಿಯಾಗಿದ್ದರು. ಇವರ ಗಂಡುಗಲಿ ಕುಮಾರರಾಮ ಕಾದಂಬರಿಯಾಗಿದೆ.

ಶಾಸನ, ಇತಿಹಾಸ, ಜಾನಪದ ಹೀಗೆ ನಾಲ್ಕು ಪ್ರಕಾರಗಳಲ್ಲಿ ಇವರ ಸೇವೆ ಅನನ್ಯ. ಚಿತ್ರದುರ್ಗದ ಬಖೈರು ಬಗ್ಗೆ ಸಾಕಷ್ಟು ಲೇಖನಗಳನ್ನು ಬರೆದಿದ್ದಾರೆ. ಮೂರು ತಿಂಗಳ ಕಾಲ ಹೈದರಾಲಿ ಚಿತ್ರದುರ್ಗದ ಕೋಟೆ ಮೇಲೆ ದಾಳಿಯಿಡುತ್ತಾನೆ. ಚಿತ್ರದುರ್ಗದ ಇತಿಹಾಸಕ್ಕೆ ಸಂಬಂಧಿಸಿದಂತೆ ಮೂಲ ದಾಖಲಾತಿಗಳನ್ನು ಸಂಗ್ರಹಿಸಿ ಯಥಾವತ್ತಾಗಿ ಪ್ರಕಟಿಸಿದವರು ಹುಲ್ಲೂರು ಶ್ರೀನಿವಾಸ ಜೋಯಿಸರು ಎಂದು ಗುಣಗಾನ ಮಾಡಿದರು.

ವಿಶ್ರಾಂತ ಜಂಟಿ ನಿರ್ದೇಶಕ ಟಿ.ವಿ.ಸುರೇಶ್ ಗುಪ್ತ ಮಾತನಾಡಿ, ಇತಿಹಾಸ ಕ್ಷೇತ್ರ ಕುರಿತು ಬರೆಯುವವರು ಸಾಕಷ್ಟು ಕಾರ್ಯಕ್ಷೇತ್ರದ ಕೆಲಸ ಮಾಡಬೇಕು. ಹುಲ್ಲೂರು ಶ್ರೀನಿವಾಸ ಜೋಯಿಸರುಮುನ್ನೂರಕ್ಕೂಹೆಚ್ಚುಲೇಖನಗಳನ್ನು ಪ್ರಕಟಿಸಿದ್ದಾರೆ. ಎಲ್ಲದಕ್ಕೂ ಅವರ ಉತ್ತರ ದಾಯಿತ್ವವಿದೆ. ವಕೀಲ ವೃತ್ತಿಯಲ್ಲಿ ತೊಡಗಿದ್ದ ಜೋಯಿಸರಿಗೆ ಸಾಕಷ್ಟು ಕಕ್ಷಿದಾರರಿದ್ದರು. ತಮ್ಮ ಬಳಿ ಬರುತ್ತಿದ್ದ ಕಕ್ಷಿದಾರರುಗಳು ಇತಿಹಾಸ ಪಾತ್ರಧಾರಿಗಳಾಗಿದ್ದರೆಂದು ಒಂದು ಕಡೆ ಬರೆದುಕೊಂಡಿದ್ದಾರೆ. ಪ್ರಾಣಿ ದಯೆ ಅವರಲ್ಲಿತ್ತು.

ಬರವಣಿಗೆಯಲ್ಲಿ ಯಾರೊಂದಿಗೂ ರಾಜಿ ಮಾಡಿಕೊಂಡವರಲ್ಲ, ಕಟು ಸತ್ಯವನ್ನೇ ಬರೆಯುತ್ತೇನೆಂದು ಹೇಳುತ್ತಿದ್ದರು. ದಿಟ್ಟತನ ವೈಶಿಷ್ಟ್ಯಪೂರ್ಣ ಗುಣವುಳ್ಳವರಾಗಿದ್ದ ಹುಲ್ಲೂರು ಶ್ರೀನಿವಾಸ ಜೋಯಿಸರು ಸ್ವಾತಂತ್ರ್ಯ ಸಂಗ್ರಾಮದಲ್ಲಿಯೂ ಭಾಗವಹಿಸಿ ಇಂದಿಗೂ ಎಲ್ಲರ ಮನದಲ್ಲಿ ಮಹಾನ್ ಚೇತನರಾಗಿ ಉಳಿದಿದ್ದಾರೆ ಎಂದರು.

ಮದಕರಿ ನಾಯಕ ಸಾಂಸ್ಕೃತಿಕ ಕೇಂದ್ರದ ಅಧ್ಯಕ್ಷ ಡಿ.ಗೋಪಾಲಸ್ವಾಮಿ ನಾಯಕ ಮಾತನಾಡುತ್ತ ಚಿತ್ರದುರ್ಗದ ಇತಿಹಾಸ ಸಂಶೋಧನೆಗೆ ಆಯಾಮ ಕೊಟ್ಟವರು ಹುಲ್ಲೂರು ಶ್ರೀನಿವಾಸ ಜೋಯಿಸರು. ಚಿತ್ರದುರ್ಗದ ಬೆಟ್ಟ, ಗುಡ್ಡ, ಶಾಸನಗಳನ್ನು ಅಧ್ಯಯನ ಮಾಡದೆ ಹೋಗಿದ್ದರೆ ಇತಿಹಾಸ ನಿರ್ನಾಮವಾಗಿರುತ್ತಿತ್ತು. ಹಾಗಾಗಿ ಜೋಯಿಸರು, ಲಕ್ಷ್ಮಣತೆಲಗಾವಿರವರು ಚಿತ್ರದುರ್ಗದ ಅಮೂಲ್ಯ ರತ್ನಗಳು ಎಂದು ಹೆಮ್ಮೆಯಿಂದ ನುಡಿದರು.

ಚಿತ್ರದುರ್ಗ ಇತಿಹಾಸ ಕೂಟದ ಸಂಚಾಲಕ ಡಾ.ಎನ್.ಎಸ್.ಮಹಂತೇಶ್ ಮಾತನಾಡಿ ಕರ್ನಾಟಕದ ಶ್ರೇಷ್ಠ ವಿದ್ವಾಂಸರಲ್ಲಿ ಹುಲ್ಲೂರು ಶ್ರೀನಿವಾಸ ಜೋಯಿಸರು ಒಬ್ಬರು. ಇತಿಹಾಸ ಸಂಶೋಧನೆ ಎನ್ನುವುದು ದುರ್ಗಮವಾದುದು. ಅನೇಕ ನೋವು-ಅವಮಾನ, ಕಷ್ಟ ಎಲ್ಲವನ್ನು ಸಹಿಸಿಕೊಳ್ಳಬೇಕು. ನಿಸ್ವಾರ್ಥವಾಗಿ ಕೆಲಸ ಮಾಡಿದಾಗ ಯಾವುದೇ ಸಂಶೋಧನೆಯಾಗಲಿ ಗೆಲ್ಲುತ್ತದೆ. ದುರ್ಗದ ಕಲ್ಲುಬಂಡೆಗಳ ಮೇಲೆ ಬಹುದೊಡ್ಡ ಹುಚ್ಚಿಟ್ಟುಕೊಂಡು ಹುಲ್ಲೂರು ಶ್ರೀನಿವಾಸ ಜೋಯಿಸರು ಕೆಲಸ ಮಾಡಿದ್ದಾರೆ.

ಅನೇಕ ವಿದ್ವಾಂಸರುಗಳನ್ನು ಕೊಟ್ಟ ನಾಡು ಚಿತ್ರದುರ್ಗ. ಇತಿಹಾಸ ಸಂಶೋಧನ ಕಾರ್ಯ ಚಟುವಟಿಕೆಗಳನ್ನು ಅಧ್ಯಯನ ಮಾಡುವುದು ಸಂಶೋಧನೆ. ಚಿತ್ರದುರ್ಗದಲ್ಲಿ ಹುಲ್ಲೂರು ಶ್ರೀನಿವಾಸ ಜೋಯಿಸರ ಪುತ್ಥಳಿ/ಪ್ರತಿಮೆಯಾಗಬೇಕು. ಕನಿಷ್ಟ ಪಕ್ಷ ಯಾವುದಾದರೂ ಒಂದು ರಸ್ತೆಗೆ ಜೋಯಿಸರ ಹೆಸರನ್ನಾದರೂ ಇಡಬೇಕು ಎಂದು ಸ್ಥಳೀಯ ಜನಪ್ರತಿನಿಧಿಗಳನ್ನು ಒತ್ತಾಯಿಸಿದರು.

ಕನ್ನಡ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಡಾ. ದೊಡ್ಡಮಲ್ಲಯ್ಯ, ರಾಜಾಜಯಚಂದ್ರ ವೀರಮದಕರಿನಾಯಕ, ಮೃತ್ಯುಂಜಯ, ನಿರಂಜನ ದೇವರಮನೆ, ರೇಣುಕಾ ಪ್ರಕಾಶನದ ಗೌರವಾಧ್ಯಕ್ಷೆ ವೈ.ಗುಣಮತಿ ಮಹಂತೇಶ್ ಸೇರಿದಂತೆ ಹುಲ್ಲೂರು ಶ್ರೀನಿವಾಸ ಜೋಯಿಸರ ಅಪಾರ ಅಭಿಮಾನಿಗಳು ಉಪನ್ಯಾಸ ಮಾಲೆಯಲ್ಲಿ ಭಾಗವಹಿಸಿದ್ದರು.



ಚಿಕ್ಕಮಗಳೂರು: ಸೇವೆಯಿಂದ ವಯೋನಿವೃತ್ತಿ ಹೊಂದಿದ ಜಿಲ್ಲಾ ಪೊಲೀಸ್ ಕಚೇರಿ ಸಿಬ್ಬಂದಿ ಗೋಪಾಲಕೃಷ್ಣ ದಲಾಯತ್ ಅವರನ್ನು ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ಸನ್ಮಾನಿಸಲಾಯಿತು. ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಜಯಕುಮಾರ್ ಹಾಗೂ ಸಿಬ್ಬಂದಿ ಇದ್ದರು.



ಚಿಕ್ಕಮಗಳೂರು: ಕಳುವಾಗಿದ್ದ ಮೊಬೈಲ್ ಫೋನ್‌ಗಳನ್ನು ಸೈಬರ್ ಅಪರಾಧ ಪತ್ತೆ ಪೊಲೀಸರು ಸಿಇಐಆರ್ ಪೋರ್ಟಲ್ ಬಳಸಿ ಪತ್ತೆ ಮಾಡಿ ವಾರಸುದಾರರಿಗೆ ಹಸ್ತಾಂತರಿಸಿದರು.

ಏ.2: ರಾಜ್ಯ ಪೊಲೀಸ್ ಧ್ವಜ ದಿನಾಚರಣೆ

ಚಿಕ್ಕಮಗಳೂರು: ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಏಪ್ರಿಲ್ 2ರಂದು ಬೆಳಗ್ಗೆ 8 ಗಂಟೆಗೆ ರಾಮನಹಳ್ಳಿಯ ಪೊಲೀಸ್ ಕವಾಯತು ಮೈದಾನದಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ಧ್ವಜ ದಿನಾಚರಣೆ ನಡೆಯಲಿದೆ.

ಮುಖ್ಯ ಅತಿಥಿಯಾಗಿ ನಿವೃತ್ತ ಎಆರ್‌ಎಸ್‌ಐ ತೌಫಿಕ್ ಅಹಮ್ಮದ್ ಭಾಗವಹಿಸಲಿದ್ದು, ವಿಶೇಷ ಆಹ್ವಾನಿತರಾಗಿ ಜಿಲ್ಲಾಧಿಕಾರಿ ಎನ್.ಎಂ. ನಾಗರಾಜ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಹೆಚ್.ಎಸ್. ಕೀರ್ತನಾ ಪಾಲ್ಗೊಳ್ಳುವರು.

ಯಾವುದೇ ಅಡೆತಡೆ ಇಲ್ಲದೆ ಎಲ್‌ಪಿಜಿ ಸರಬರಾಜು

ಚಿಕ್ಕಮಗಳೂರು : ಎಲ್ಲಾ ವಲಯಗಳಿಗೂ ಯಾವುದೇ ಅಡೆತಡೆ ಇಲ್ಲದೆ ಎಲ್‌ಪಿಜಿ ಸರಬರಾಜು ಮಾಡಲಾಗುತ್ತಿದೆ. ಅಲ್ಲದೇ ವಿಶೇಷವಾಗಿ ಆಟೋ ಎಲ್‌ಪಿಜಿಗೆ ಯಾವುದೇ ರೀತಿಯ ಕೊರತೆ ಇಲ್ಲ ಎಂದು ರಾಜ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ತಿಳಿಸಿದೆ.

ರಾಜ್ಯದಲ್ಲಿ ಎಲ್‌ಪಿಜಿ ಸರಬರಾಜು ವ್ಯವಸ್ಥೆಯನ್ನು, ವಿಶೇಷವಾಗಿ ಆಟೋ ಎಲ್‌ಪಿಜಿ ಪೂರೈಕೆಯನ್ನು ರಾಜ್ಯ ಸರ್ಕಾರವು ನಿಕಟವಾಗಿ ಗಮನಿಸುತ್ತಿದೆ. ಕರ್ನಾಟಕದಾದ್ಯಂತ ಒಟ್ಟು 72 ಆಟೋ ಎಲ್‌ಪಿಜಿ ಡಿಸ್ಪೆನ್ಸಿಂಗ್ ಸ್ಟೇಷನ್‌ಗಳು ಕಾರ್ಯ ನಿರ್ವಹಿಸುತ್ತಿವೆ. ಇವುಗಳಲ್ಲಿ ಕೇವಲ ಬೆಂಗಳೂರು ನಗರವೊಂದರಲ್ಲೇ 31 ಕೇಂದ್ರಗಳು ಲಭ್ಯವಿವೆ.

ಸಾರ್ವಜನಿಕ ವಲಯದ ಪ್ರಮುಖ ತೈಲ ಮಾರಾಟ ಕಂಪನಿಗಳಾದ (ಒಎಂಸಿಎಸ್) ಐಒಸಿಎಲ್, ಬಿಪಿಸಿಎಲ್ ಮತ್ತು ಹೆಚ್‌ಪಿಸಿಎಲ್ ಮೂಲಕ ಆಟೋ ಎಲ್‌ಪಿಜಿ ಸರಬರಾಜು ಮಾಡಲಾಗುತ್ತಿದೆ. ಪ್ರಸ್ತುತ ಈ ಸಂಸ್ಥೆಗಳು ಪ್ರತಿ ಲೀಟರ್‌ಗೆ ರೂ. 77.74 ರ ದರದಲ್ಲಿ ಆಟೋ ಎಲ್ ಪಿಜಿ ಪೂರೈಸುತ್ತಿವೆ.

ಕಳೆದ ವಾರದಲ್ಲಿ ದಿನಕ್ಕೆ ಸರಾಸರಿ 64.9 ಮೆಟ್ರಿಕ್ ಟನ್ ಆಟೋ ಎಲ್‌ಪಿಜಿಯನ್ನು ತರಿಸಲಾಗಿದೆ. ಸಂಘರ್ಷದ ಮೊದಲು ಈ ಪ್ರಮಾಣವು ದಿನಕ್ಕೆ 57.6 ಮೆಟ್ರಿಕ್ ಟನ್ ಇತ್ತು. ಇದು ಪೂರೈಕೆಯಲ್ಲಿನ ಗಮನಾರ್ಹ ಹೆಚ್ಚಳವನ್ನು ತೋರಿಸುತ್ತದೆ.

ರಾಜ್ಯದಾದ್ಯಂತ ಪ್ರತಿದಿನ ಸುಮಾರು 4 ಲಕ್ಷ ಗೃಹ ಬಳಕೆ ಎಲ್‌ಪಿಜಿ ಸಿಲಿಂಡರ್‌ಗಳು ಹಾಗೂ ಸುಮಾರು 18,000 ವಾಣಿಜ್ಯ ಬಳಕೆ ಸಿಲಿಂಡರ್‌ಗಳನ್ನು ಪೂರೈಕೆ ಮಾಡಲಾಗುತ್ತಿದೆ. ಎಲ್ಲಾ ವಲಯಗಳಿಗೂ ಯಾವುದೇ ಅಡೆತಡೆ ಇಲ್ಲದೆ ಎಲ್‌ಪಿಜಿ ಸರಬರಾಜು ಆಗುವುದನ್ನು ಖಚಿತಪಡಿಸಿಕೊಳ್ಳಲು ರಾಜ್ಯ ಸರ್ಕಾರವು ನಿರಂತರವಾಗಿ ಪರಿಸ್ಥಿತಿಯ ಮೇಲೆ ನಿಗಾ ಇರಿಸಲಾಗಿದೆ ಎಂದು ಇಲಾಖೆ ತಿಳಿಸಿದೆ.



ಜ್ಯೇಷ್ಠತೆ ಆಧಾರದಲ್ಲಿ ಮನೆಗಳಿಗೆ ಸಿಲಿಂಡರ್

ಚಿಕ್ಕಮಗಳೂರು : ಗೃಹಬಳಕೆ ಎಲ್‌ಪಿಜಿ ಸಿಲಿಂಡರ್‌ಗಳನ್ನು ಎಂದಿನಂತೆ ಜ್ಯೇಷ್ಠತೆ ಆಧಾರದ ಮೇಲೆ ಗ್ರಾಹಕರ ಮನೆಗಳಿಗೆ ಸಂಬಂಧಿಸಿದ ಗ್ಯಾಸ್ ಏಜೆನ್ಸಿಗಳ ಮೂಲಕ ತಲುಪಿಸಲಾಗುತ್ತಿದ್ದು, ಗ್ರಾಹಕರು ಆತಂಕಪಡುವ ಅಗತ್ಯವಿಲ್ಲ. ಈ ಹಿನ್ನೆಲೆಯಲ್ಲಿ ಗ್ರಾಹಕರು ಗ್ಯಾಸ್ ಏಜೆನ್ಸಿಯ ಕಚೇರಿ, ಗೋದಾಮುಗಳಿಗೆ ಸಿಲಿಂಡರ್ ಪಡೆಯಲು ಹೋಗಬಾರದು ಎಂದು ಆಹಾರ ಮತ್ತು ನಾಗರಿಕ ಇಲಾಖೆ ಉಪ ನಿರ್ದೇಶಕರು ತಿಳಿಸಿದ್ದಾರೆ.

ಗ್ರಾಹಕರಸುರಕ್ಷತೆಹಾಗೂಎಲ್‌ಪಿಜಿಸಿಲಿಂಡರ್ ಸುಗಮ ವಿತರಣೆ ದೃಷ್ಟಿಯಿಂದ ಯಾವುದೇ ಕಾರಣಕ್ಕೂ ಗ್ಯಾಸ್ ಏಜೆನ್ಸಿ ಗೋದಾಮುಗಳಲ್ಲಿ ಗ್ರಾಹಕರಿಗೆ ಸಿಲಿಂಡರ್ ವಿತರಿಸದಂತೆ ಜಿಲ್ಲೆಯ ಎಲ್ಲಾ ಗ್ಯಾಸ್ ಏಜೆನ್ಸಿ ಮಾಲೀಕರಿಗೆ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.

ಗ್ರಾಹಕರು ಮನೆ ಬಳಿಯೇ ಸಿಲಿಂಡರ್ ಪಡೆದು ಎಲ್‌ಪಿಜಿಯನ್ನು ಮಿತವಾಗಿ ಬಳಸುವ ಮೂಲಕ ಸಹಕರಿಸಬೇಕೆಂದು ಅವರು ಕೋರಿದ್ದಾರೆ.

ಸಂಪಾದಕೀಯ

ಇಂಥ ಆಸೆ ಪ್ರಜಾಪ್ರಭುತ್ವ ವಿರೋಧಿ

ಐಪಿಎಲ್ ಆರಂಭವಾಗಿದೆ. ರಾಜ್ಯ ವಿಧಾನಸಭಾ ಅಧಿವೇಶನ ಮುಗಿದಿದೆ. ಇವೆರಡರ ತುಲನೆಯಿಂದ ಯಾವ ವಿಷಯವನ್ನು ಹೇಳಲಾರಂಭಿಸಬಹುದು ಎಂಬುದು ಕೂಡ ಈಗ ರಾಜ್ಯಕ್ಕೆ ತಿಳಿದಿದೆ! ಕೆಲವು ಶಾಸಕರು ತಮಗೆ ಐಪಿಎಲ್ ಟಿಕೇಟುಗಳನ್ನು ಉಚಿತವಾಗಿ ನೀಡಬೇಕೆಂದು ಇಟ್ಟ ಬೇಡಿಕೆಯನ್ನು ಸರ್ಕಾರ ಈಡೇರಿಸಿದೆ. ಓರ್ವ ಶಾಸಕರಂತೂ ಸರದಿ ಸಾಲಿನಲ್ಲಿ ನಿಂತು ಟಿಕೇಟ್ ಖರೀದಿಸಲು ನಾವೇನು ಸಾಮಾನ್ಯರೇ ಎಂಬ ಪ್ರಶ್ನೆಯನ್ನೇ ಹಾಕಿದ್ದರು. ಅದನ್ನು ಸಂಬಂಧಪಟ್ಟವರು ಪುರಸ್ಕರಿಸಿ ಇದೀಗ ಅಧಿಕಾರದಲ್ಲಿರುವ ರಾಜಕಾರಣಿಗಳೆಲ್ಲರೂ ಸಾಮಾನ್ಯರಲ್ಲ ಎಂದು ಷರಾ ಬರೆದಿದೆ. ಕಳೆದ ಕೆಲ ದಿನಗಳಿಂದ ರಾಜ್ಯದಲ್ಲಿ ಮಾತ್ರವಲ್ಲ, ಇಡೀ ದೇಶದಲ್ಲಿ ಇದು ಚರ್ಚೆಯಾಗುತ್ತಿರುವ ಸಂಗತಿ.

ಹಲವು ಆಯಾಮಗಳ ಮೂಲಕ ಈ ಪ್ರಕರಣವನ್ನು ಅವಲೋಕಿಸಬೇಕಾಗಿದೆ. ಏಕೆಂದರೆ ಐಪಿಎಲ್ ಎಂದರೆ ಇಂದು ಕೇವಲ ಕ್ರಿಕೇಟ್ ಆಗಿ ಉಳಿದಿಲ್ಲ, ಶ್ರೀಮಂತಿಕೆ ಮತ್ತು ಮನರಂಜನೆಗಳನ್ನು ಬಿಟ್ಟರೆ ಅದರಲ್ಲಿ ಉಳಿದಿದ್ದೇನೂ ಇಲ್ಲ, ಕ್ರೀಡೆಯೊಂದರಲ್ಲಿ ಇನ್ನು ಇರಬೇಕಾದುದು ತಾನೇ ಏನು ಪ್ರಶ್ನೆ ಇಲ್ಲಿ ಹುಟ್ಟಬಹುದು.



ಕ್ರೀಡೆಯನ್ನು ಮನರಂಜನಾ ಕ್ಷೇತ್ರವಾಗಿ ಪರಿವರ್ತಿಸಿದ ಮೇಲೆ ಅಲ್ಲಿ ಕ್ರೀಡಾ ಮೌಲ್ಯಗಳು ಉಳಿದಿರುತ್ತವೆಯೇ ಎಂಬ ಉತ್ತರ ಅನೇಕರಿಗೆ ಹಿಡಿಸದಿರಬಹುದು. ಕ್ರೀಡೆಯಲ್ಲೂ ಮೌಲ್ಯಗಳೇ ಎಂದು ಕೂಡ ಪ್ರಶ್ನಿಸಬಹುದು. ಅದಕ್ಕೂ ಉತ್ತರ ರಾಜ್ಯ ವಿಧಾನಮಂಡಲದಲ್ಲಿ ಚರ್ಚೆಯಾದ ಟಿಕೇಟ್ ಪ್ರಕರಣ ಮತ್ತು ಶಾಸಕರಿಗೆ ಮಂಜೂರಾಗುವ ಉಚಿತ ಟಿಕೇಟ್! ಈ ಪ್ರಕರಣವನ್ನು ನೋಡಬೇಕಾದ ಮತ್ತೊಂದು ಕೋನವೆಂದರೆ ಇಂಥ ಕ್ರೀಡಾಕೂಟಕ್ಕೆ ಉಚಿತ ಟಿಕೇಟುಗಳನ್ನು ಕೇಳುವುದೆಷ್ಟು ಸರಿ ಎನ್ನುವುದು. ಐಪಿಎಲ್ ಎಂದರೆ ಶಾಸಕರೆಲ್ಲರೂ ಕಡ್ಡಾಯವಾಗಿ ನೋಡಬೇಕಾದುದಲ್ಲ, ಆದರೆ ಶಾಸಕರು ಕೂಡ ಮನುಷ್ಯರೆ. ಸಮಾಜಕ್ಕೆ ಐಪಿಎಲ್‌ನ ಹುಚ್ಚು ಇರುವಂತೆ ಶಾಸಕರಿಗೆ ಇರಬಾರದು ಎಂದೇನಿಲ್ಲ, ಆದರೆ ಶಾಸಕರಾದ ಒಂದೇ ಕಾರಣಕ್ಕೆ ಟಿಕೇಟ್ ಅಥವಾ ಪಾಸ್ ಅನ್ನು ಕ್ರಿಕೇಟ್ ಸಂಸ್ಥೆಗಳು ಉಚಿತವಾಗಿ ನೀಡಬೇಕೇ ಎನ್ನುವುದು ಎನ್ನುವುದು ಪ್ರಶ್ನೆ. ಶಾಸಕರೇ ಆಸೆಪಟ್ಟ ಮೇಲೆ ಕೊಡಬಾರದೇ ಎನ್ನುವುದು ಸಂಸ್ಥೆಗಳ ಉತ್ತರವಾಗಬಹುದು. ಅಂತಿಮವಾಗಿ ಅದು ಮುಟ್ಟುವುದು ಶಾಸಕರ ಮನಸ್ಥಿತಿಯೆಡೆಗೆ. ಒಂದೆಡೆ ಸಂವಿಧಾನದ ಸಮಾನತೆಯ ಹಕ್ಕುಗಳನ್ನು ಪುಂಖಾನುಪುಂಖವಾಗಿ ಉದುರಿಸುತ್ತಾ ರಾಜಕಾರಣಕ್ಕೆ ಬರುವ ಮಂದಿಯ ಗುಣಮಟ್ಟ ಈ ಹಂತಕ್ಕೆ ಇಳಿಯಿತೇ ಎನ್ನುವಲ್ಲಿಯವರೆಗೆ ಪ್ರಕರಣವನ್ನು ವ್ಯಾಖ್ಯಾನಿಸಬಹುದು. ಅದರಲ್ಲೂ ಸರದಿ ಸಾಲಿನಲ್ಲಿ ನಿಲ್ಲಲು ನಾವೇನು ಜನಸಾಮಾನ್ಯರೇ ಎನ್ನುವ ಹೇಳಿಕೆ ನೇರವಾಗಿ ಪ್ರಜಾಪ್ರಭುತ್ವ ವಿರೋಧಿ. ಪ್ರಜೆಗಳೇ ಪ್ರಭುಗಳು ಎನ್ನುವುದು ಪ್ರಜಾಪ್ರಭುತ್ವದ ಆಶಯ. ಆದರೆ ಇಂದಿನ ರಾಜಕಾರಣದಲ್ಲಿ ಶಾಸಕರೇ ತಾವು ಜನಸಾಮಾನ್ಯರಿಗಿಂತ ಭಿನ್ನ ಎಂದು ಸದನದಲ್ಲೇ ಹೇಳಿಕೊಳ್ಳುತ್ತಾರೆಂದರೆ ಅವರ ಮಾನಸಿಕತೆ ಹೇಗಿರಬಹುದು? ರಾಜಕಾರಣದ ಮೌಲ್ಯಗಳು ಎಷ್ಟು ಉಳಿದಿರಬಹುದು? ಆಶ್ಚರ್ಯವೆಂದರೆ ಇಂಥ ಮಾನಸಿಕತೆ ಎಲ್ಲಾ ರಾಜಕೀಯ ಪಕ್ಷಗಳಲ್ಲೂ ವ್ಯಾಪಿಸಿರುವುದು. ರಾಜಕಾರಣಕ್ಕೆ ಬರುವಾಗಲೇ ಸಂವೇದನೆಯನ್ನು, ಬುದ್ಧಿಮಟ್ಟವನ್ನು ಗಂಟುಕಟ್ಟಿ ಇಟ್ಟುಬರಬೇಕು ಎಂಬ ಮಾತಿಗೆ ಇಂಥ ಪ್ರಕರಣಗಳು ಬಲನೀಡುತ್ತವೆ. ಏನೇ ಆದರೂ ಇಂಥ ಮನಸ್ಥಿತಿಯನ್ನು ಎಲ್ಲಾ ಪಕ್ಷಗಳು ಶಿಸ್ತಿನ ಕ್ರಮದ ಮೂಲಕ ಹತ್ತಿಕ್ಕಬೇಕಾಗಿದೆ.

ಸಿಲಿಂಡರ್ ನಿರ್ಭರದಿಂದ ಆತ್ಮನಿರ್ಭರವಾಗುವತ್ತ

ಖಾರಾ ಬಾತ್

• ವಿನಾಯಕ ಭಟ್ಟ ಮೂರೂರು
vakradanta@gmail.com



ರಾಜ್ಯದಲ್ಲಿ ಅಥವಾ ದೇಶದಲ್ಲಿ ಯಾರಿಗೆಲ್ಲ ಸಾಧ್ಯವಿದೆಯೊ ಅವರೆಲ್ಲ ಈ ರೀತಿಯ ಬಯೋ ಗ್ಯಾಸ್ ಪ್ಲ್ಯಾಂಟ್‌ಗಳನ್ನು ಅಳವಡಿಸಿಕೊಂಡರೆ, ನಾವೆಲ್ಲ ಗ್ಯಾಸ್ ಸಿಲಿಂಡರ್ ಬಳಕೆಯನ್ನು ಕನಿಷ್ಠ ಅರ್ಧದಷ್ಟು ಕಡಿಮೆ ಮಾಡಲು ಸಾಧ್ಯವಿದೆ.

ಮೊದಲು ಸರ್ಕಾರದ ಯೋಜನೆಯೂ ಇತ್ತು. ಅದರ ಜತೆಗೆ ಗ್ರಾಮೀಣ ಪ್ರದೇಶದ ಜನರೂ ಬೇರೆ ಉರುವಲುಗಿಂತ ಗ್ಯಾಸ್ ಉತ್ತಮ ಎಂದು ಗೋಬರ್ ಗ್ಯಾಸ್ ತಯಾರಿಸಿಕೊಳ್ಳುವ ಗ್ಯಾಸ್ ಪ್ಲ್ಯಾಂಟ್‌ಗಳನ್ನು ಮನೆಗಳಲ್ಲೇ ಹೊಂದಿದ್ದರು. ಆಗ ಯಾರೂ ಈಗಿನ ರೀತಿ ಗ್ಯಾಸ್ ಸಿಲಿಂಡರ್ ಮೇಲೆ ಅವಲಂಬಿತರಾಗಿರಲಿಲ್ಲ, ಕಟ್ಟಿಗೆ ಒಲೆ ಇತ್ತು. ಅದರ ನಂತರ ಕಟ್ಟಿಗೆ ಆಧಾರಿತ, ಆದರೆ ಸುಧಾರಿತ ಅಸ್ತ್ರ ಒಲೆ ಬಂತು. ಅದರಿಂದ ಹೊಗೆಯ ಸಮಸ್ಯೆಯೂ ಅಷ್ಟು ಇಲ್ಲವಾಗಿತ್ತು. ಇನ್ನೂ ಕೆಲವು ಹೊಸ ಮಾದರಿಯ ಒಲೆಗಳು ಬರುತ್ತಿದ್ದವು.

ಆದರೆ ನಮ್ಮದೇ ಸರ್ಕಾರಗಳು ಜನರು ಗ್ಯಾಸ್ ಸಿಲಿಂಡರ್ ಮೇಲೆ ಅವಲಂಬಿತವಾಗುವಂತೆ ಮಾಡಿದವು. ಪರಿಸರಕ್ಕೆ ಹಾನಿ, ಇನ್ನೊಂದು ಮತ್ತೊಂದು ಕಾರಣಕ್ಕೆ ಕಟ್ಟಿಗೆ ಬೇಡ, ಹೊಗೆ ಆರೋಗ್ಯಕ್ಕೆ ಹಾನಿಕರ ಎಂದೆಲ್ಲ ಹೇಳಿ ಸರ್ಕಾರಗಳೇ ನಮ್ಮ ಪಾರಂಪರಿಕ ಇಂಧನ ಪದ್ಧತಿ ಬಿಡುವಂತೆ ಮಾಡಿದವು. ಕಟ್ಟಿಗೆ ಒಲೆ ಬಳಸುವುದು ಅಂದರೆ ಹಿಂದುಳಿದಿರುವುದರ ಸಂಕೇತ, ಗ್ಯಾಸ್ ಬಳಸಿದರೆ ಅದು ಆಧುನಿಕತೆಯ, ಅಭಿವೃದ್ಧಿಯ ಸಂಕೇತ ಎಂದು ಬಿಂಬಿಸಿದವು.



ಮನೆಗೆ ಮೊದಲು ಒಂದು ಸಿಲಿಂಡರ್ ಇತ್ತು. ಗ್ರಾಮಾಂತರ ಪ್ರದೇಶಗಳಲ್ಲಿ ಗ್ಯಾಸ್ ಸಿಲಿಂಡರ್ ಸಿಗುವುದೇ ಕಷ್ಟವಿತ್ತು. ಸಿಕ್ಕರೂ ದರ ಜಾಸ್ತಿ, ಅದನ್ನು ಪೇಟೆಯಿಂದ ತರುವುದು ಕಷ್ಟ ಅಥವಾ ತಂದವನಿಗೂ ಹೆಚ್ಚುವರಿ ಹಣ ನೀಡಬೇಕು ಎಂಬೆಲ್ಲ ಸಮಸ್ಯೆ ಇತ್ತು. ಒಂದು ಸಿಲಿಂಡರ್ ಇದ್ದಾಗ ಮತ್ತು ಸಿಗುವುದು ಕಷ್ಟ ಇದ್ದಾಗ ಜನ ಗೋಬರ್ ಗ್ಯಾಸ್ ಮತ್ತು ಇತರ ಇಂಧನ ಮೂಲಗಳನ್ನು ಸಂಪೂರ್ಣ ಬಿಟ್ಟಿರಲಿಲ್ಲ, ಯಾಕೆಂದರೆ ಸಿಲಿಂಡರ್ ಖಾಲಿಯಾದರೆ, ಬದಲಿ ವ್ಯವಸ್ಥೆ ಇರಲೇಬೇಕಿತ್ತು. ಬಹುಶಃ ಅಟಲ್ ಬಿಹಾರಿ ವಾಜಪೇಯಿ ಅವರು ಪ್ರಧಾನಿಯಾಗಿದ್ದಾಗ ಇರಬೇಕು, ಮನೆಗೆ ಎರಡು ಗ್ಯಾಸ್ ಸಿಲಿಂಡರ್ ಕೊಟ್ಟರು. ಸಿಲಿಂಡರ್ ಪೂರೈಕೆ ಕೂಡ ಭಾರೀ ಪ್ರಮಾಣದಲ್ಲಿ ಹೆಚ್ಚಿತು. ಯಾರಿಗೆ ಯಾವಾಗ ಕೇಳಿದರೂ ಸಿಲಿಂಡರ್ ಸಿಗುತ್ತಿತ್ತು. ನೀವು ಖಾಲಿಯಾದ ಸಿಲಿಂಡರ್ ಕೊಟ್ಟು, ತುಂಬಿದ ಸಿಲಿಂಡರ್ ತರುವಷ್ಟು ಸುಲಭವಾಗಿ ಸಿಲಿಂಡರ್ ಸಿಗಲಾರಂಭಿಸಿತು. ಆಗ ಜನರಿಗೆ ಬೆಳಗ್ಗೆದ್ದು ಸೆಗಣಿ ಕರಡಿ, ಆಮೇಲೆ ಅದರ ಸ್ಲರಿ ತೆಗೆದು ತೋಟಕ್ಕೊ, ಇನ್ನೆಲ್ಲೋ ಹಾಕುವ ಕೆಲಸಕ್ಕಿಂತ ಸೀದಾ ಅಂಗಡಿಯಿಂದ ಸಿಲಿಂಡರ್ ತರುವುದೇ ಸುಲಭ ಅನ್ನಿಸಲಾರಂಭಿಸಿತು. ಸರ್ಕಾರ ಸಿಲಿಂಡರ್‌ಗೆ ಸಬ್ಸಿಡಿಯನ್ನೂ ನೀಡುತ್ತಿತ್ತು. ಅಷ್ಟು ಸುಲಭವಾಗಿ ಸಿಕ್ಕರೆ ಯಾರಿಗೆ ಬೇಡ. ಜನರೆಲ್ಲ ಸಿಲಿಂಡರ್ ಮೊರೆ ಹೋದರು.

ಹಾಗೆನೋಡಿದರೆ ಆಗ ಗ್ರಾಮೀಣ ಭಾರತ ನಿಜವಾಗಿ ಆತ್ಮನಿರ್ಭರವಾಗಿತ್ತು. ಹಾಗಿದ್ದವರನ್ನು ಸಿಲಿಂಡರ್ ಅವಲಂಬಿಯಾಗಿ ಮಾಡಿದ್ದೇ ನಮ್ಮ ವ್ಯವಸ್ಥೆ. ಈಗ ಬಹುತೇಕ ಜನ ಸಿಲಿಂಡರ್ ದಾಸರಾಗಿಯಾಗಿದೆ. ಬಹುಶಃ ಇದ್ದವರು ಕೂಡ ಗೋಬರ್ ಗ್ಯಾಸ್ ಬಳಸುವುದು ಬಿಟ್ಟು ದಶಮಾನಗಳೇ ಕಳೆದಿವೆ. ಹಾಗಾಗಿ ಗೋಬರ್ ಗ್ಯಾಸ್ ಪ್ಲ್ಯಾಂಟ್ ಹಾಳಾಗಿದೆ. ಒಲೆ ಅಳಿಸಿಹಾಕಿಯಾಗಿದೆ. ಈಗಿನ ತಲೆಮಾರಿನವರಿಗೆ ಸೀಮೆಎಣ್ಣೆ ಇಲ್ಲದೆ ಬೆಂಕಿ ಹಚ್ಚಲೇ ಬರುವುದಿಲ್ಲ, ಒಲೆ ಊದಿ ಬೆಂಕಿ ಹೊತ್ತಿಸಬೇಕೆಂದರೆ ಅತ್ಯಂತ ಕಷ್ಟದ ಕೆಲಸ ಅದಕ್ಕಿಂತ ಸ್ವಿಗ್ಗಿ- ಜೊಮೆಟೊನೆ ಸುಲಭ ಅನ್ನಿಸಿಬಿಡುತ್ತದೆ.

ಈಗ ಅಮೆರಿಕ-ಇರಾನ್ ಯುದ್ಧದಿಂದಾಗಿ ದಿಢೀರನೆ ಸಿಲಿಂಡರ್ ಗ್ಯಾಸ್ ಸಮಸ್ಯೆ ಆರಂಭವಾಗಿದೆ. ನಾವೆಷ್ಟೇ ಆತ್ಮನಿರ್ಭರ ಅಂದರೂ, ನಾವೆಷ್ಟು ಅವಲಂಬಿತರಾಗಿದ್ದೇವೆ ಎಂಬುದರ ಅರಿವಾಗಿದೆ. ಈಗ ಸಿಲಿಂಡರ್ ಗ್ಯಾಸ್ ಇಲ್ಲವೆಂದರೆ ನಮಗೆ ಜೀವನವೇ ನಡೆಯುವುದು ಕಷ್ಟವೇನೊ ಎಂಬ ರೀತಿಯಲ್ಲಿ ನಾವು ಆತಂಕಪಡುತ್ತಿದ್ದೇವೆ. ನಾವು ಬೇಕಾಬಿಟ್ಟಿಯಾಗಿ ಗ್ಯಾಸ್ ಬಳಸುವುದನ್ನು ರೂಢಿಸಿಕೊಂಡು, ಮನೆಯಲ್ಲಿ ಸದಾ ಇನ್ನೊಂದು ತುಂಬಿದ ಸಿಲಿಂಡರ್ ಇಟ್ಟುಕೊಂಡು ರೂಢಿಯಾಗಿರುವುದರಿಂದ ಒಂದು ಸಿಲಿಂಡರ್ ಖಾಲಿಯಾಗಿ ನಾಲ್ಕು ದಿನಕ್ಕೆ ನಮಗೆ ಆತಂಕ ಕಾಡಲಾರಂಭಿಸುತ್ತದೆ.

ಈಗ ಯುದ್ಧದಿಂದ ಕಷ್ಟವಾಗುತ್ತಿದ್ದರೂ, ಇದು ನಮಗೆ ಹೊಸ ಆತ್ಮನಿರ್ಭರದ ದಾರಿ ತೋರಿಸಲು ಕಾರಣವಾಗಬಹುದೇ ಎಂಬ ಯೋಚನೆ ಬರುತ್ತಿದೆ. ಕೊರೋನಾ ಕಾಲದಲ್ಲಿ ನಾವು ಸಾಕಷ್ಟು ಹೊಸ ಸಂಗತಿಗಳನ್ನು ರೂಢಿಸಿಕೊಂಡಿದ್ದೇವೆ. ಏನೇನೊ ಹೊಸ ಮಾರ್ಗ ಕಂಡುಕೊಂಡಿದ್ದೇವೆ. ಈಗ ಅಡುಗೆ ಅನಿಲಕ್ಕಾಗಿ ಹೊಸ ಹೊಸ ಆವಿಷ್ಕಾರಗಳನ್ನು ಬಳಸಿಕೊಳ್ಳುವ ಮೂಲಕ ನಾವು ಆತ್ಮನಿರ್ಭರ ಮನೆಯಾಗುವತ್ತ ಗಮನಹರಿಸಲು ಸಕಾಲವೇನೊ.

ಹತ್ತಿಪ್ಪತ್ತು-ಮೂವತ್ತು ವರ್ಷ ಹಿಂದಿನ ತಂತ್ರಜ್ಞಾನಕ್ಕೆ ಹೋಲಿಸಿದರೆ ಈಗ ತುಂಬಾ ಬದಲಾವಣೆಗಳಾಗಿವೆ. ಆಗ ಗೋಬರ್ ಗ್ಯಾಸ್ ಪ್ಲ್ಯಾಂಟ್ ಮಾಡಬೇಕೆಂದರೆ ತುಂಬಾ ಜಾಗ ಬೇಕಿತ್ತು. ಕೆಲಸವೂ ಅಷ್ಟೇ ಇತ್ತು. ಆದರೆ ಈಗ ಬದಲಾದ ತಂತ್ರಜ್ಞಾನದ ಸಹಾಯದಿಂದ ಸಣ್ಣ ಸಣ್ಣ ಗ್ಯಾಸ್ ಪ್ಲ್ಯಾಂಟ್‌ಗಳನ್ನು ಮಾಡಲು ಸಾಧ್ಯವಿದೆ. ಗೋಬರ್ ಗ್ಯಾಸ್ ಅಷ್ಟೇ ಅಲ್ಲ, ಬಯೋ ಗ್ಯಾಸ್ ಪ್ಲ್ಯಾಂಟ್‌ಗಳನ್ನು ನಾವೇ ನಮ್ಮ ಮನೆಗಳಲ್ಲಿ ನಿರ್ಮಿಸಿಕೊಳ್ಳಲು ಸಾಧ್ಯವಿದೆ. ನಗರ ಪ್ರದೇಶದಲ್ಲಿ ದಿನವೂ ಸಾವಿರಾರು ಟನ್ ಕಸ ಸೃಷ್ಟಿಯಾಗುತ್ತದೆ. ನಾವೇ ನಮ್ಮ ಮನೆಗಳಲ್ಲಿ ದಿನವೂ ಒಣಕಸ ಮತ್ತು ಹಸಿ ಕಸ ಬೇರ್ಪಡಿಸಿ, ಸ್ಥಳೀಯ ಸಂಸ್ಥೆಯ ಕಸ ಸಂಗ್ರಾಹಕರಿಗೆ ನೀಡುತ್ತೇವೆ. ಅಷ್ಟೆಲ್ಲ ಕಸವನ್ನು ಇಟ್ಟುಕೊಂಡು ಸ್ಥಳೀಯ ಸಂಸ್ಥೆಗಳೇ ಬಯೋ ಗ್ಯಾಸ್ ಪ್ಲ್ಯಾಂಟ್ ತಯಾರಿಸಿ, ಅದನ್ನು ಅಗತ್ಯ ಇರುವ ಹೊಟೆಲ್‌ಗಳಿಗೆ ಅಥವಾ ಸಮೀಪದ ಮನೆಗಳಿಗೆ ಪೈಪ್ ಮೂಲಕ ಪೂರೈಕೆ ಮಾಡಬಹುದೇನೊ, ಅದು ದೊಡ್ಡ ಯೋಜನೆಗಳಾದವು. ಈಗ ಕನಿಷ್ಠ 20,000 ರೂಪಾಯಿಯಿಂದ ಒಂದು ಲಕ್ಷದ ಒಳಗೆ ಮನೆ, ತೋಟದ ಮನೆಗಳಿಗೆ ಅಗತ್ಯವಿರುವಷ್ಟು ಗಾತ್ರದ ಸಿದ್ಧವಿರುವ ಬಯೋ ಗ್ಯಾಸ್ ಪ್ಲ್ಯಾಂಟ್‌ಗಳು ಲಭ್ಯವಿದೆ. ಆಮೆಜಾನ್‌ನಂತಹ ತಾಣಗಳಲ್ಲೂ ಸಿಗುತ್ತಿವೆ. ಇವುಗಳನ್ನು ಬಳಸಿ ನಮ್ಮ ನಮ್ಮ ಮನೆಯ ಹಸಿ ಕಸ ಜತೆಗೆ ಇದಕ್ಕೆ ಬಳಕೆಯಾಗಬಲ್ಲ ಒಣಕಸವನ್ನು ಬಳಸಿ, ನಾವೇ ನಮ್ಮ ಮನೆಗೆ ಬೇಕಾಗುವಷ್ಟು ಬಯೋ ಗ್ಯಾಸ್ ತಯಾರಿಸಿಕೊಳ್ಳಲು ಸಾಧ್ಯವಿದೆ. ಅದಕ್ಕೆ ಗುಂಡಿ ತೋಡಿ ಮುಚ್ಚಬೇಕಾದ ಅಗತ್ಯ ಕೂಡ ಈಗ ಇಲ್ಲ, ಕಸದಬುಟ್ಟಿ ಇಟ್ಟಂತೆ ಇಟ್ಟು ಬಯೋ ಗ್ಯಾಸ್ ತಯಾರಿಸಿಕೊಳ್ಳುವ ಟ್ಯಾಂಕ್‌ಗಳು ಕೂಡ ಬಂದಿವೆ.

ಯಾವ್ಯಾವುದನ್ನೋ ಉಚಿತವಾಗಿ ಕೊಡುವ ಸರ್ಕಾರ, ಗ್ಯಾಸ್ ಸಿಲಿಂಡರಿಗೆ ಸಬ್ಸಿಡಿ ಕೊಡುವ ಸರ್ಕಾರ, ಈ ರೀತಿಯ ಸಣ್ಣ ಸಣ್ಣ ಮನೆ ಬಳಕೆಯ ಬಯೋ ಗ್ಯಾಸ್ ಪ್ಲ್ಯಾಂಟ್‌ಗಳನ್ನು ಹಾಕಿಕೊಳ್ಳಲು ಜನರಿಗೆ ಪ್ರೋತ್ಸಾಹ ನೀಡಬಹುದು. ಈಗ ಗ್ಯಾಸ್ ಸಿಗುತ್ತಿಲ್ಲ ಎಂದು ಕೇಂದ್ರ ಸರ್ಕಾರದ ಮೇಲೆ ಆರೋಪ ಮಾಡುತ್ತ, ಅದರಲ್ಲಿ ಹೇಗೆ ಲಾಭ ಮಾಡಿಕೊಳ್ಳಬಹುದು ಎಂದು ಪ್ರಯತ್ನಿಸುವ ಬದಲು, ನಮ್ಮ ರಾಜ್ಯದಲ್ಲಿ ಇನ್ನು ಮುಂದೆ ಯಾವುದೇ ಕಾರಣಕ್ಕೂ ಗ್ಯಾಸ್ ಕೊರತೆ ಆಗದ ಹಾಗೆ ನಾವೇನು ಮಾಡಬಹುದು ಎಂದು ಯಾಕೆ ಯೋಚಿಸಬಾರದು?

ವಿಶೇಷವಾಗಿ ನಗರದಿಂದ ಹೊರಗೆ ಇರುವ ಹೊಟೆಲ್‌ಗಳಲ್ಲಿ ಯಾರಿಗೆಲ್ಲ ಸಾಧ್ಯವಿದೆಯೊ ಅವರೆಲ್ಲ ಬಯೋ ಗ್ಯಾಸ್ ಪ್ಲ್ಯಾಂಟ್ ಹಾಕಿಕೊಳ್ಳಬಹುದು. ಹೊಟೆಲ್‌ಗಳಲ್ಲಂತೂ ಹಸಿ ಕಸ, ಆಹಾರ ತ್ಯಾಜ್ಯ ವಿಪರೀತವಾಗಿರುತ್ತದೆ. ಅದನ್ನು ವಿಲೇವಾರಿ ಮಾಡುವ ವ್ಯವಸ್ಥೆಗೆ ದುಡ್ಡು ಕೊಡುವ ಬದಲು, ಅದೇ ಹಣದಲ್ಲಿ ಬಯೋಗ್ಯಾಸ್ ಪ್ಲ್ಯಾಂಟ್ ನಿರ್ಮಿಸಿಕೊಂಡು, ಆ ಮೂಲಕ ಗ್ಯಾಸ್ ಖರ್ಚನ್ನು ಉಳಿಸಲು ಸಾಧ್ಯವಿದೆ. ಅಂತಹ ಕೆಲಸಕ್ಕೆ ಸರ್ಕಾರವೂ ಪ್ರೋತ್ಸಾಹ ನೀಡಿದರೆ, ಆಗ ಸಹಜವಾಗಿ ಉದ್ಯಮಿಗಳು ಅದನ್ನು ಬೇಗ ಅಳವಡಿಸಿಕೊಳ್ಳುತ್ತಾರೆ.

ರಾಜ್ಯದಲ್ಲಿ ಅಥವಾ ದೇಶದಲ್ಲಿ ಯಾರಿಗೆಲ್ಲ ಸಾಧ್ಯವಿದೆಯೊ ಅವರೆಲ್ಲ ಈ ರೀತಿಯ ಬಯೋ ಗ್ಯಾಸ್ ಪ್ಲ್ಯಾಂಟ್‌ಗಳನ್ನು ಅಳವಡಿಸಿಕೊಂಡರೆ, ನಾವೆಲ್ಲ ಗ್ಯಾಸ್ ಸಿಲಿಂಡರ್ ಬಳಕೆಯನ್ನು ಕನಿಷ್ಠ ಅರ್ಧದಷ್ಟು ಕಡಿಮೆ ಮಾಡಲು ಸಾಧ್ಯವಿದೆ. ಸಂಪೂರ್ಣ ಬಯೋ ಗ್ಯಾಸ್‌ನಿಂದಲೇ ನಮ್ಮ ಜೀವನ ನಡೆಯದೇ ಇರಬಹುದು. ಆದರೆ ಸಿಲಿಂಡರ್ ಮೇಲಿನ ಅವಲಂಬನೆಯನ್ನು ಅರ್ಧದಷ್ಟು ಕಡಿಮೆ ಮಾಡಲು ಖಂಡಿತ ಸಾಧ್ಯವಿದೆ. ದೇಶಾದ್ಯಂತ ಅರ್ಧದಷ್ಟು ಸಿಲಿಂಡರ್ ಬಳಕೆ ಕಡಿಮೆಯಾದರೆ ನಾವು-ನಮ್ಮ ದೇಶ ಅದೆಷ್ಟು ಆತ್ಮನಿರ್ಭರವಾಗಬಹುದು ನೀವೇ ಯೋಚಿಸಿ.

ಭಾಷೆ-ಅಂಕಗಳ ತೂಗುಯ್ಯಾಲೆ

• ಡಾ. ಮೈತ್ರಿ ಭಟ್, ವಿಟ್ಲ



ಭಾಷಾ ವೈವಿಧ್ಯತೆಯೇ ಜಗತ್ತಿನ ಸೌಂದರ್ಯ. ಭಾಷಾ ಕಲಿಕೆಯ ಮನೋಭಾವವನ್ನು ಬೆಳೆಸುವುದೇ ಭಾಷೆಯ ಉಳಿವಿಗೆ ಭದ್ರ ಬುನಾದಿ.

ಒಂದು ದೇಶ ಅಥವಾ ರಾಜ್ಯದ ಅಭಿವೃದ್ಧಿಯ ಸೂಚಕವಾಗಿ ರಸ್ತೆ, ಆರೋಗ್ಯ, ನೀರಾವರಿ, ಮೂಲಸೌಕರ್ಯ ಸೇರಿದಂತೆ ವಿವಿಧ ಅಂಶಗಳಿದ್ದರೂ ಭವಿಷ್ಯವನ್ನು ನಿರ್ಧರಿಸುವುದು ಶಿಕ್ಷಣ ಕ್ಷೇತ್ರವೇ ಆಗಿದೆ. ಈ ಶಿಕ್ಷಣದ ತಳಹದಿ ಭಾಷೆಯೇ ಆಗಿದೆ. ಮಾತೃಭಾಷೆಯಲ್ಲಿ ಶಿಕ್ಷಣ ನೀಡುವುದು ವಿದ್ಯಾರ್ಥಿಗಳಿಗೆ ಕಲಿಕೆಗೆ ಸಹಕಾರಿ ಎಂದೂ ಹೇಳಲಾಗಿದೆ. ಮಾತ್ರವಲ್ಲ, ಯಾವ ಸರಕಾರವು ಶಿಕ್ಷಣಕ್ಕೆ ಒತ್ತು ನೀಡುವುದೋ ಆಗ ಆ ಪ್ರದೇಶದ ಭವಿಷ್ಯ ಉಜ್ವಲವಾಗಿರುತ್ತದೆ ಎಂದೇ ಭಾವಿಸಲಾಗಿದೆ. ಹೀಗಿರುವಾಗ ಶಿಕ್ಷಣ ಕ್ಷೇತ್ರದಲ್ಲಿ ತೆಗೆದುಕೊಳ್ಳುವ ನಿರ್ಧಾರಗಳು ಭವಿಷ್ಯ ನಿರ್ಧಾರಕಗಳು ಆಗಿರುವುದನ್ನು ಮನಗಂಡು ಯಾರೇ ಆಗಲಿ, ಯಾವ ಸರಕಾರವೇ ಆಗಲಿ ಯಾವುದೇ ಬದಲಾವಣೆ ಮಾಡುವ ಮೊದಲು ವಿವಿಧ ಮಗ್ಗುಲುಗಳಲ್ಲಿ, ಹತ್ತಾರು ಆಯಾಮದಲ್ಲಿ ಆಲೋಚಿಸದೇ ಮುಂದುವರಿಯುವುದು ಸರಿಯಲ್ಲ. ಆದರೆ ಅದೇಕೋ ನಮ್ಮ ಕರ್ನಾಟಕದಲ್ಲಿ ಶಿಕ್ಷಣ ಇಲಾಖೆಯು ತರಾತುರಿಯಲ್ಲಿ ಎಸ್ಎಸ್ಎಲ್‌ಸಿ ಪರೀಕ್ಷೆ ಆರಂಭವಾದ ಮೇಲೆ ಎಂಬಂತೆ ತೆಗೆದುಕೊಂಡ ತೀರ್ಮಾನವೊಂದು ವಿದ್ಯಾರ್ಥಿಗಳನ್ನಷ್ಟೇ ಅಲ್ಲದೇ ಇಡೀ ರಾಜ್ಯವನ್ನೇ ಗೊಂದಲಕ್ಕೀಡು ಮಾಡಿದೆ. ಇಲ್ಲಿ ಅಧ್ಯಾಪಕರ ಆತಂಕ ಒಂದು ಬಗೆಯದಾದರೆ, ವಿದ್ಯಾರ್ಥಿಗಳ ಆತಂಕ ಮತ್ತೊಂದು ಬಗೆಯದು.

ಈಗಾಗಲೇ ಶಿಕ್ಷಣ ಇಲಾಖೆಯು ಮಕ್ಕಳನ್ನು ಒಂದನೇ ತರಗತಿಗೆ ಸೇರಿಸಲು ಮಗುವಿಗೆ ಕಡ್ಡಾಯವಾಗಿ ಆರು ವರ್ಷವಾಗಿರಬೇಕು ಎನ್ನುವ ನಿಯಮದ ಬದಲು 60 ದಿನಗಳ ವಿನಾಯಿತಿಯನ್ನು ಪ್ರಸಕ್ತ ಶೈಕ್ಷಣಿಕ ವರ್ಷಕ್ಕೆ ಸೀಮಿತಗೊಳಿಸಿ ತೀರ್ಮಾನಿಸಿದ್ದು, ಮುಂದಿನ ಶೈಕ್ಷಣಿಕ ವರ್ಷದ ವೇಳೆಗೆ ಅದಕ್ಕೆ ಪರಿಹಾರ ಕಂಡುಕೊಳ್ಳುವುದಾಗಿ ಹೇಳಿಕೆ ನೀಡಿದ ಕುರಿತ ಪರ-ವಿರೋಧದ ಚರ್ಚೆ ಮುಗಿಯುವ ಮೊದಲೇ, ತರಾತುರಿಯಲ್ಲಿ ಎಂಬಂತೆ ತುರ್ತು ಸುದ್ದಿಗೋಷ್ಠಿ ಕರೆದ ಶಿಕ್ಷಣ ಸಚಿವರು ಎಸ್ಎಸ್ಎಲ್‌ಸಿ ಪರೀಕ್ಷಾ ಫಲಿತಾಂಶದಲ್ಲಿ ತೃತೀಯ ಭಾಷೆಗೆ ಅಂಕವನ್ನು ನೀಡುವ ಬದಲು ಗ್ರೇಡಿಂಗ್ ನೀಡಲಾಗುವುದು ಎಂದು ಹೇಳಿದರು. ವಿದ್ಯಾರ್ಥಿಗಳ ಮೇಲಿನ ಒತ್ತಡದ ಹೊರೆಯನ್ನು ತಗ್ಗಿಸುವ ಹಾಗೂ ಕರ್ನಾಟಕದಲ್ಲಿ ಹಿಂದಿ ಹೇರಿಕೆಯನ್ನು ತಡೆಯುವ ಉದ್ದೇಶದಿಂದ ಎಂಬಂತೆ ಅವರು ನೀಡಿದ ಈ ಹೇಳಿಕೆ ವಿದ್ಯಾರ್ಥಿಗಳಿಗೂ ಅಧ್ಯಾಪಕರಿಗೂ ಚಡಪಡಿಕೆ ಉಂಟುಮಾಡಿದೆ.

ನಮ್ಮ ಸರಕಾರ ಮತ್ತು ಶಿಕ್ಷಣ ಇಲಾಖೆ ಅದೇಕೆ ಇಂತಹ ಆತುರದ ನಿರ್ಧಾರ ತೆಗೆದುಕೊಳ್ಳಲು ಮುಂದಾಗುವುದೋ ಅರ್ಥವಾಗದು. ವಿದ್ಯಾರ್ಥಿಗಳ ಭವಿಷ್ಯ, ಶಿಕ್ಷಣ ಎರಡೂ ಮುಖ್ಯ. ಅದನ್ನೇ ಅಡಕತ್ತರಿಯಲ್ಲಿ ಇಟ್ಟಂತೆ ಮಾಡುವುದು ತರವಲ್ಲ. ಅಷ್ಟಕ್ಕೂ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿ ಏನಾದರೂ ನಿರ್ಧಾರ ತೆಗೆದುಕೊಳ್ಳಲೇಬೇಕು ಎಂದಿದ್ದರೆ ಆ ನಿರ್ಧಾರಗಳನ್ನು ಆಯಾ ಶೈಕ್ಷಣಿಕ ವರ್ಷದ ಆರಂಭದಲ್ಲಿಯೇ ತೆಗೆದುಕೊಳ್ಳುವುದು ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಸೂಕ್ತವಾದುದು.

ಭಾಷೆ ಎಂಬುದು ನಮ್ಮ ಅಸ್ತಿತ್ವದ ಮೂಲ. ಭಾಷೆ ಕೇವಲ ಪದಗಳ ಸಮೂಹವಲ್ಲ; ಅದು ಆತ್ಮಗೌರವದ ಸಂಕೇತ. ಭಾಷಾ ವೈವಿಧ್ಯತೆಯೇ ಜಗತ್ತಿನ ಸೌಂದರ್ಯ. ಒಂದು ಹೂವಿನ ತೋಟವನ್ನು ಹೇಗೆ ನಾನಾ ಬಣ್ಣದ ಹೂವುಗಳು ಸುಂದರಗೊಳಿಸುತ್ತವೆಯೋ ಹಾಗೆಯೇ ನಾನಾ ಭಾಷೆಗಳು ಜಗತ್ತನ್ನು ಸುಂದರಗೊಳಿಸುತ್ತವೆ. ನಾವು ಎಷ್ಟೇ ಭಾಷೆ ಕಲಿತರೂ ಮೂಲ ಯೋಚನೆಗಳೆಲ್ಲ ರೂಪುಗೊಳ್ಳುವುದು, ಭಾವನೆಗಳು ಹುಟ್ಟಿ ಅವು ಮಾತಿನ ಅನುಭೂತಿಗೆ ನಿಲುಕುವುದೆಲ್ಲ ಮಾತೃಭಾಷೆಯಲ್ಲಿಯೇ. ಕಲಿಯುವಿಕೆ ಮತ್ತು ಕಲಿಸುವಿಕೆಯ ಮೂಲಕ ಭಾಷೆಯು ಸಂಸ್ಕೃತಿಯಾಗಿ ಪಸರಿಸುತ್ತದೆ. ಮನೆಯಲ್ಲಿ ಪೋಷಕರ ಮೂಲಕ ತಮ್ಮ ಭಾವನೆಗಳನ್ನು, ಬಯಕೆಗಳನ್ನು ಮೂಲ ಅವಶ್ಯಕತೆಯ ಹಂಚಿಕೆಯ ಕಾರಣಕ್ಕಾಗಿ ಮಕ್ಕಳು ಭಾಷೆಯನ್ನು ಕಲಿತರೆ, ಶಾಲೆಯಲ್ಲಿ ಅದು ಔಪಚಾರಿಕ ಶಿಕ್ಷಣದ ರೂಪದಲ್ಲಿ ತೆರೆದುಕೊಳ್ಳುತ್ತದೆ.

ಹೀಗಿರುವಾಗ ಸರಕಾರದ ನಿರ್ಧಾರದ ಜೊತೆಗೆ ಕನ್ನಡಪರ ಸಂಘಟನೆಗಳೂ ಕೂಡಾ 'ಹಿಂದಿ ಹೇರಿಕೆ ಸಲ್ಲದು' ಎನ್ನುತ್ತಿದ್ದಾರೆ. ಜೊತೆಗೆ ಇದು ವಿದ್ಯಾರ್ಥಿಗಳ ಮೇಲಿನ ಹೆಚ್ಚುವರಿ ಹೊರೆಯನ್ನು ತಗ್ಗಿಸಲಿದೆ ಎನ್ನುತ್ತಿದ್ದಾರೆ. ಒಂದೆಡೆ ಸರಕಾರದ ನಿಲುವಿನ ಬಗೆಗೆ ಚರ್ಚೆಗಳಾಗುತ್ತಿದ್ದರೆ ಮತ್ತೊಂದೆಡೆ ಈ ನಿರ್ಧಾರ ತೆಗೆದುಕೊಂಡ ಸಮಯದ ಬಗೆಗೂ ಮಾತುಗಳು ಕೇಳಿ ಬರುತ್ತಿವೆ. ಶೈಕ್ಷಣಿಕ ವರ್ಷದ ಆರಂಭದಲ್ಲಿ ಅಥವಾ ಪರೀಕ್ಷಾ ವೇಳಾಪಟ್ಟಿ ಘೋಷಣೆಗೂ ಮುನ್ನ ನಿರ್ಧಾರ ತೆಗೆದುಕೊಳ್ಳದೆ ಈ ತುರ್ತಿನ ನಿರ್ಧಾರ ಏಕೆ ಎಂಬುದು ನಿಜಕ್ಕೂ ಎಲ್ಲರನ್ನೂ ಕಾಡುತ್ತಿರುವ ಪ್ರಶ್ನೆ.

ಆಸಕ್ತಿ ಇದ್ದವರಿಗೆ ಭಾಷೆ ಕಲಿಯುವುದು ಕಷ್ಟವೇನಲ್ಲ. ಅವರು ಹೇಗಾದರೂ ಕಲಿಯುತ್ತಾರೆ. ಅದಕ್ಕೆ ಶಾಲಾ ಶಿಕ್ಷಣದ ಚೌಕಟ್ಟು ಬೇಕಿಲ್ಲ. ಏನೇ ಆದರೂ ಸರಕಾರ ಇನ್ನು ಹದಿನೈದು ದಿನ ಕಾದಿದ್ದರೆ ಪರೀಕ್ಷೆ ಮುಗಿದು ಹೋಗುತ್ತಿತ್ತು. ಈ ಸಲದ ಎಸ್ಎಸ್ಎಲ್‌ಸಿ ವಿದ್ಯಾರ್ಥಿಗಳು ಹೇಗಿದ್ದರೂ ಈಗಾಗಲೇ ಪರೀಕ್ಷಾ ತಯಾರಿ ನಡೆಸಿ ಆಗಿತ್ತು. ಆದುದರಿಂದ ಈ ಶೈಕ್ಷಣಿಕ ವರ್ಷದ ಬಳಿಕ ತೀರ್ಮಾನ ತೆಗೆದುಕೊಂಡರೂ ಸಾಕಿತ್ತು.

ಇದರ ನಡುವೆ ಸರಕಾರ ಹಾಗೂ ಕನ್ನಡಪರ ಹೋರಾಟಗಾರರು ಯೋಚಿಸದೇ ಬಿಟ್ಟಿರುವ ಆಯಾಮವೊಂದಿದೆ. ಕರ್ನಾಟಕದಲ್ಲಿ ಸಾವಿರಾರು ವಿದ್ಯಾರ್ಥಿಗಳು ತೃತೀಯ ಭಾಷೆಯಾಗಿ ಕನ್ನಡವನ್ನೂ ಕಲಿಯುತ್ತಿದ್ದಾರೆ! ಹಾಗಾಗಿ ಈ ನಿರ್ಧಾರವು ಇದು ಕನ್ನಡದ ಬೆಳವಣಿಗೆಗೂ ಕೊಡಲಿ ಏಟು ಕೊಟ್ಟಂತೆ ಅಲ್ಲವೇ?

ಆರೋಗ್ಯ ಹಾಗೂ ಶಿಕ್ಷಣವು ದೇಶದ ಆಧಾರ ಸ್ತಂಭಗಳಿದ್ದಂತೆ. ಈ ಕ್ಷೇತ್ರಗಳಿಗೆ ಸಂಬಂಧಿಸಿದ ತೀರ್ಮಾನಗಳನ್ನು ತೆಗೆದುಕೊಳ್ಳುವಾಗ ಎಷ್ಟು ಎಚ್ಚರ ತೆಗೆದುಕೊಂಡರೂ ಸಾಲದು. ಹೀಗಿರುವಾಗ ಸಂಪುಟ ಸಭೆಯಲ್ಲಿ ಚರ್ಚಿಸಿ, ತಜ್ಞರ ಅಭಿಪ್ರಾಯ ಪಡೆದು, ಸರಿಯಾಗಿ ವಿಮರ್ಶೆ-ವಿಶ್ಲೇಷಣೆ ನಡೆಸಿ, ಅಧ್ಯಯನಗಳ ಆಧಾರದಲ್ಲಿ ತೆಗೆದುಕೊಳ್ಳಬೇಕಾಗಿದ್ದ ತೀರ್ಮಾನ ಹೀಗೆ ಗೊಂದಲದ ಗೂಡಂತೆ ಹೊರಬರಬೇಕಿತ್ತೇ?

ಈಗಾಗಲೇ ಬಿಜೆಪಿ ಸರಕಾರ ಜಾರಿಗೊಳಿಸಿದ ರಾಷ್ಟ್ರೀಯ ಶಿಕ್ಷಣ ನೀತಿ ಬೇಡ ಎಂದು ರಾಜ್ಯ ಶಿಕ್ಷಣ ನೀತಿ ಅನುಸರಿಸಲಾಗುತ್ತಿದೆ. ಒಂದನೇ ತರಗತಿಗೆ ಸೇರ್ಪಡೆಗೆ 6 ವರ್ಷಗಳಾಗಿರಬೇಕು ಎಂಬ ನೀತಿಯಲ್ಲಿ ಈ ವರ್ಷ ಮತ್ತೆ ಸಡಿಲಿಕೆ ಮಾಡಲಾಗಿದೆ. ಎತ್ತ ಸಾಗುತ್ತಿದೆ ನಮ್ಮ ಮಕ್ಕಳ, ವಿದ್ಯಾರ್ಥಿಗಳ ಭವಿಷ್ಯ? ಅಧಿಕಾರಕ್ಕೆ ಬಂದ ಪಕ್ಷಕ್ಕೆ ಸ್ವಪ್ರತಿಷ್ಠೆ ಮುಖ್ಯವೇ ಅಥವಾ ದೇಶದ ಯುವ ಸಂಪತ್ತಿನ ಭವಿಷ್ಯ ಮುಖ್ಯವೇ?

ಒಟ್ಟಿನಲ್ಲಿ ಸರಕಾರ ಅಂಕಗಳಿಗೆ ಸಂಬಂಧಿಸಿ ನಿರ್ಧಾರ ತೆಗೆದುಕೊಂಡರೂ ಭಾಷೆಯ ಕುರಿತಾಗಿ ನಾವೂ ಯೋಚಿಸಬೇಕಿದೆ. ಭಾಷೆ ಯಾವುದೇ ಇರಲಿ, ಅದರ ಪ್ರಭಾವಶಾಲಿ ಚಲನೆ ಸಾಧ್ಯವಾಗುವುದು ಮಾಧ್ಯಮಗಳು ಹಾಗೂ ಶಿಕ್ಷಣದಲ್ಲಿ. ಹೀಗಿರುವಾಗ ಈ ಹೊಸ ಆತುರದ ನಿರ್ಧಾರ ಭಾಷೆಯ ಬಗೆಗೆ ಹೊಸ ಗೊಂದಲವೊಂದನ್ನು ಹುಟ್ಟುಹಾಕಿದೆ. ಈ ವಿಚಾರವನ್ನು ಪರಿಹರಿಸುವ ಸಂದರ್ಭದಲ್ಲಿ ನಮ್ಮನ್ನು ನಾವು ವಿಮರ್ಶೆಗೊಳಪಡಿಸಬೇಕಾಗಿದೆ. ನಮಗೆ ಮಾದರಿಯಾಗಬೇಕಾಗಿರುವುದು ಯಾರು ಎಂಬುದನ್ನು ಯೋಚಿಸಬೇಕಾಗಿದೆ.

ಮಕ್ಕಳಲ್ಲಿ ಕನ್ನಡ ಭಾಷಾ ಅಭಿಮಾನ, ಪ್ರೀತಿ ಬೆಳೆಸುವಲ್ಲಿ ನಾವು ಸೋತಿದ್ದೇವೆ. ಹಾಗಿದ್ದರೆ ಈಗ ನಾವು ಮಾಡಬೇಕಾಗಿರುವುದಾದರೂ ಏನು? ಮೊದಲಿಗೆ ನಮ್ಮ ಮಕ್ಕಳಿಗೆ ನಾವು ಕನ್ನಡವನ್ನು ಕಲಿಸೋಣ. ಮಕ್ಕಳಲ್ಲಿ, ಹೆತ್ತವರಲ್ಲಿ ನಮ್ಮ ಭಾಷೆ, ಸಂಸ್ಕೃತಿಯ ಬಗ್ಗೆ ಅಭಿಮಾನ, ಒಲವು, ಗೌರವವನ್ನು ಮೂಡಿಸೋಣ. ಆ ಮೂಲಕ ಯಾರೇ ಆಗಲಿ ಕನ್ನಡವನ್ನು ಮನದುಂಬಿ ಕಲಿಯುವಂತೆ ಮಾಡೋಣ. ಅವರವರನ್ನು ಅವರವರದೇ ಭಾಷೆಯಲ್ಲಿ ಮಾತನಾಡಿಸುವ ನಮ್ಮ ಉದಾರತೆಯನ್ನು ಇನ್ನಾದರೂ ತೊರೆಯೋಣ. ಆ ಮೂಲಕ ಕನ್ನಡ ಭಾಷೆ ಬೆಳೆಸೋಣ. ನಮ್ಮ ನಾಡು-ನುಡಿಯ ಬಗೆಗಿನ ಗೌರವವನ್ನು ವ್ಯಕ್ತಪಡಿಸುವುದು ಹೇಗೆ ಎಂಬುದನ್ನು ಅರಿಯೋಣ. ಏಕೆಂದರೆ ಬೇರೆಯವರು ನಮ್ಮ ನಾಡು-ನುಡಿಯ ಬಗ್ಗೆ ಗೌರವವನ್ನು ಸೂಚಿಸುತ್ತಿಲ್ಲ ಎಂದಾದಲ್ಲಿ ಅದರ ಹಿಂದಿನ ಕಾರಣೀಭೂತರೂ ನಾವೇ ಆಗಿದ್ದೇವೆ. ಹಾಗೆಂದು ಕಡ್ಡಾಯಗೊಳಿಸುವ ಮೂಲಕ ಕಲಿಸುತ್ತೇವೆ ಅಂದುಕೊಂಡರೆ ಅದು ನಮ್ಮ ಮೂರ್ಖತನವಾದೀತು. ಅಲ್ಲಿ ಭಾಷೆಯ ಬಗೆಗೆ ಯಾವುದೇ ರೀತಿಯ ಅಭಿಮಾನವಾಗಲೀ ಪ್ರೀತಿಯಾಗಲೀ ಇರಲಾರದು.

ಭಾಷಾ ಕಲಿಕೆಯ ಮನೋಭಾವವನ್ನು ಬೆಳೆಸುವುದೇ ಭಾಷೆಯ ಉಳಿವಿಗೆ ಭದ್ರ ಬುನಾದಿ. ಬಲವಂತದ ಹೇರಿಕೆ ಎಂದಿದ್ದರೂ ಅಪಾಯಕಾರಿಯೇ. ಒಂದು ಪ್ರದೇಶದಲ್ಲಿ ವಿವಿಧ ಭಾಷೆಗಳನ್ನಾಡುವ ಜನರು ಜೊತೆಗಿದ್ದಾಗ ಸೌಹಾರ್ದಯುತ ಜೀವನವನ್ನು ನಡೆಸಲು ಸ್ಥಳೀಯ ಭಾಷೆಯನ್ನು ಕಲಿಯುವುದು ಅನುಕೂಲಕರ. ಆದರೆ ಕಲಿಯಬೇಕೇ ಬೇಡವೇ ಅನ್ನುವುದು ವೈಯಕ್ತಿಕ ವಿಚಾರ.

ನಾವಿಂದು ಯೋಚಿಸಬೇಕಾಗಿರುವುದು ಕೇವಲ ಸರಕಾರದ ನೀತಿ ನಿರ್ಧಾರಗಳ ಬಗೆಗೆ ಮಾತ್ರವಲ್ಲ, ನಮ್ಮ ಭಾಷೆಯ ಬಗೆಗೂ ಆಗಿದೆ. ವ್ಯಕ್ತಿ ಬಹುಭಾಷೆ ಕಲಿಯುವುದು ಭವಿಷ್ಯಕ್ಕೆ ಪೂರಕ. ಅಂತಾರಾಷ್ಟ್ರೀಯ ಭಾಷೆ ಎಂದು ಇಂಗ್ಲಿಷ್ ಅನ್ನು ಪುರಸ್ಕರಿಸುವ ನಮಗೆ ಉಳಿದ ಭಾಷೆಗಳು ಮಾತ್ರ ಕಿರಿಕಿರಿ ಉಂಟು ಮಾಡುತ್ತಿರುವುದು ಅಭಾಸಕರ. 'ಇಂಗ್ಲಿಷ್ ಬಲ್ಲವ ಮಾತ್ರ ಜಾಣ' ಎಂಬ ಭಾವ ಮನದೊಳಗಿದೆ. ಕಾರಣ- ನಮ್ಮ ನಾಡು-ನುಡಿಯ ಹಿರಿಮೆಯನ್ನು ತೋರಿಸುವ ಪ್ರಜ್ಞೆ, ಕೌಶಲ್ಯ, ಕ್ಷಮತೆಯ ಕೊರತೆಯು ನಮ್ಮಲ್ಲಿದೆ. ಅಂದರೆ ಸೃಜನಶೀಲ ನಿರ್ವಹಣೆಯ ಕೊರತೆ ನಮ್ಮದು. ಅದನ್ನು ಕೊನೆಗಾಣಿಸಿ ನಮ್ಮ ಸಂಸ್ಕೃತಿಯ ವಿಶಿಷ್ಟತೆಯನ್ನು ಮನಗಾಣಿಸಬೇಕಿದೆ; ಸಾಹಿತ್ಯದ ಬಗ್ಗೆ ಪ್ರೇರೇಪಿಸಿ, ಅಭಿಮಾನ ಬೆಳೆಸಬೇಕಿದೆ. ನಮ್ಮ ಸಂಸ್ಕೃತಿಯನ್ನು ನಾವೇ ಸರಿಯಾಗಿ ಬಿಂಬಿಸದೆ ಇತರರು ಆದರಿಸುತ್ತಿಲ್ಲ, ಗೌರವಿಸುತ್ತಿಲ್ಲ ಎಂದು ಅತ್ತರೇನು ಫಲವಿಲ್ಲ. ಆದುದರಿಂದ ಪ್ರತಿಭಟನೆ, ಕಡ್ಡಾಯಗೊಳಿಸುವಿಕೆಗಳ ಬದಲಾಗಿ ನಮ್ಮ ಸಂಸ್ಕೃತಿ, ಭಾಷೆಯನ್ನು ಉತ್ತಮವಾಗಿ ಬಿಂಬಿಸುವ ಸಕಾರಾತ್ಮಕ ಕಾರ್ಯಗಳಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳುವ ಮೂಲಕ ಭಾಷೆಯನ್ನು ಉಳಿಸಿ ಬೆಳೆಸಬೇಕಾಗಿದೆ.

ಭಜನ, ಯುವಜನ ಮತ್ತು ಸಮಾಜ ಪ್ರಬೋಧನ

ಕಾಲ ಬದಲಾದರೂ ಭಜನೆಯ ಮಹತ್ವ ಕಡಿಮೆಯಾಗಿಲ್ಲ, ಬದಲಿಗೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ.

ಪದಸಂಚಲನ

• ಡಾ. ವಿಶ್ವನಾಥ ಸುಂಕಸಾಳ
sunkasalvishwa@gmail.com



ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಮ್ ।
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಮ್ ॥ ಎಂಬ ಭಾಗವತದ ಉಕ್ತಿಯಂತೆ ಒಂಬತ್ತು ವಿಧದ ಭಕ್ತಿಗಳಲ್ಲಿ ಕೀರ್ತನೆಯೂ ಕೂಡ ಒಂದು. ಕೀರ್ತನವೆಂದರೆ ನಾಮಸ್ಮರಣೆ ಅಥವಾ ಭಗವಂತನ ಮಾಹಾತ್ಮ್ಯದ ವರ್ಣನೆ. ಇದು ಭಜನ, ಕೀರ್ತನ, ನಾಮಸ್ಮರಣೆ, ಜಪ, ಸ್ತೋತ್ರ ಮೊದಲಾದ ಆಯಾಮಗಳಲ್ಲಿ ಪ್ರಕಟವಾಗುತ್ತದೆ. ಭಜನವು ಅತ್ಯಂತ ಪ್ರಾಚೀನಕಾಲದಿಂದಲೂ ಭಗವದ್ಭಕ್ತಿಯ ಅಭಿವ್ಯಕ್ತಿಯ ಸಾಧನವಾಗಿದೆ. ಭಜನದ ಮೂಲಕ ಮನಸ್ಸು ಪರಮಾತ್ಮನಲ್ಲಿ ನೆಲೆಯಾಗಲು ಸಹಾಯಕವಾಗಿದೆ. ಭಜ ಸೇವಾಯಾಂ ಎಂಬ ಧಾತುವಿನಿಂದ ನಿಷ್ಪನ್ನಗೊಂಡ ಭಜನವೆಂಬ ಶಬ್ದವು ಸೇವೆಯೆಂಬ ಅರ್ಥವನ್ನು ಹೊಂದಿದೆ. ಪರಮಾತ್ಮನ ಮಾನಸವಾದ ಸೇವೆಯ ರೂಪದಲ್ಲಿ ಭಜನೆಯು ನಮ್ಮ ಮತ್ತು ಪರಮಾತ್ಮನ ನಡುವಿನ ಸೇತುವೆಯೇ ಆಗಿದೆ. ಭಜನೆಗೆ ಪ್ರಾಚೀನ ಕಾಲದ ಇತಿಹಾಸವಿದೆ. ಉಪನಿಷತ್ತಿನಲ್ಲಿಯೇ ನಾಮಸ್ಮರಣೆಯ ಬಗ್ಗೆ ಉಲ್ಲೇಖವಿದೆ. ಕಲಿಸಂತರಣೋಪನಿಷತ್ ಮೊದಲಾದವುಗಳಲ್ಲಿ ನಾಮಜಪದ ಬಗೆಗೆ ಉಲ್ಲೇಖಗಳಿವೆ. ನಾಮಸ್ಮರಣೆಯನ್ನು ಗಾಯನದ ಮೂಲಕ ಮಾಡಿದಾಗ ಅದು ಭಜನೆ ಎನಿಸಿಕೊಳ್ಳುತ್ತದೆ. ಇದು ಭಗವದ್ಭಕ್ತಿಯ ಅಭಿವ್ಯಕ್ತಿಗೆ ಅತ್ಯುತ್ತಮವಾದ ಸಾಧನವಾಗಿದೆ.

ಭಜನೆಯಲ್ಲಿ ಭಗವಂತನ ರೂಪದ, ಆತನ ಐಶ್ವರ್ಯದ ಮತ್ತು ಚರಿತೆಯ ವರ್ಣನೆಯನ್ನು ಮತ್ತು ಸ್ತುತಿಯನ್ನು ಮಾಡಲಾಗುತ್ತದೆ. ಆ ಮೂಲಕ ದೀರ್ಘಕಾಲ ಮನಸ್ಸು ಒಂದೇ ವಿಷಯದಲ್ಲಿ ನಿಲ್ಲುವಂತೆ ಮಾಡುತ್ತದೆ. ರಾಮಾಯಣದಲ್ಲಿ ಲವಕುಶರು ಶ್ರೀರಾಮನ ಚರಿತ್ರೆಯನ್ನು ಹಾಡುತ್ತಾ ಅಯೋಧ್ಯೆಗೆ ಬರುವ ಪ್ರಸಂಗವಿದೆ. ಈ ರೀತಿಯಲ್ಲಿ ಭಗವಂತನ ವಿಭೂತಿಯನ್ನು ಸ್ಮರಿಸಿಕೊಳ್ಳುತ್ತಾ, ತನ್ನ ಚಿತ್ತವನ್ನು ಶುದ್ಧಗೊಳಿಸಿಕೊಳ್ಳುವುದಕ್ಕೆ ಇದೊಂದು ಸಮರ್ಥವಾದ ಮಾಧ್ಯಮವಾಗಿದೆ. ಒಂದೇ ನಾಮವನ್ನು ಅಥವಾ ವಾಕ್ಯವನ್ನು ಮತ್ತೆ ಮತ್ತೆ ಉಚ್ಚರಿಸುವುದರಿಂದ ಸಮಾನವಿಷಯಕವಾದ ಮನೋವೃತ್ತಿಯುಂಟಾಗುತ್ತದೆ. ಇದು ಮನಸ್ಸಿನಲ್ಲಿ ಉಂಟಾಗುವ ಉಳಿದೆಲ್ಲ ಆಲೋಚನಾತ್ಮಕವಾದ ವೃತ್ತಿಗಳನ್ನು ನಿರೋಧಿಸುವ ಮೂಲಕ ಧ್ಯಾನಸ್ಥಿತಿಗೆ ಕೊಂಡೊಯ್ಯುತ್ತದೆ. ಹಾಗಾಗಿ ಸಾಮಾನ್ಯರಿಂದ ಸಾಧಕರವರೆಗೆ ಮನಸ್ಸಿನ ನಿಗ್ರಹದ ಜೊತೆಗೆ ಅದರ ಏಕಾಗ್ರತೆಯನ್ನು ಸಾಧಿಸಲು ಪ್ರಭಾವಕಾರಿಯಾದ ಸಾಧನವಾಗಿದೆ. ಭಜನೆಯು ಮನಸ್ಸಿನಲ್ಲಿ ಸಕಾರಾತ್ಮಕವಾದ ತರಂಗವನ್ನು ಉಂಟುಮಾಡುವ ಮೂಲಕ ಶಾಂತಿಯನ್ನೂ, ಹೊಸ ಉತ್ಸಾಹವನ್ನೂ, ಪ್ರೇರಣೆಯನ್ನೂ ಒದಗಿಸುತ್ತದೆ.

ನಾವು ಸಣ್ಣ ವಯಸ್ಸಿನಲ್ಲಿದ್ದಾಗ ಅವಿಭಕ್ತಕುಟುಂಬದ ಎಲ್ಲ ಹಿರಿಯರು ಕಿರಿಯರೊಂದಿಗೆ ಸಾಯಂಕಾಲದಲ್ಲಿ ದೇವರ ಎದುರು ಕೂತು ಭಜನೆಯನ್ನು ಮಾಡುವ ಸಂಪ್ರದಾಯವಿತ್ತು. ಆಗ ದೂರದರ್ಶನವಾಗಲೀ, ಮೊಬೈಲ್ ಆಗಲೀ ಇಲ್ಲದ ಕಾರಣ ಎಲ್ಲರೂ ಭಜನೆಯನ್ನು ಮಾಡುತ್ತಾ ಭಗವದ್ಭಕ್ತಿಯಲ್ಲಿ ಮುಳುಗುತ್ತಿದ್ದರು. ಈ ಮೂಲಕ ಕುಟುಂಬದ ಎಲ್ಲ ಸದಸ್ಯರೂ ತಮ್ಮ ಹಗಲಿನ ಶ್ರಮವನ್ನೆಲ್ಲ ಮರೆಯುತ್ತಿದ್ದರು. ಜೊತೆಗೆ ಕುಟುಂಬದ ಎಲ್ಲ ಸದಸ್ಯರ ಜೊತೆಗೆ ಸೌಮನಸ್ಯವನ್ನು ಕಾಪಾಡಿಕೊಳ್ಳುವಲ್ಲಿ ಭಜನೆಯು ನೆರವಾಗುತ್ತಿತ್ತು. ಗಣೇಶ ಚತುರ್ಥಿ ಮೊದಲಾದ ಹಬ್ಬಗಳ ಸಂದರ್ಭದಲ್ಲಿಯಂತೂ ಊರವರೆಲ್ಲ ಸೇರಿ ಸಾಮೂಹಿಕ ಭಜನೆಯನ್ನು ಮಾಡುತ್ತಿದ್ದರು. ಆ ಮೂಲಕ ಭಜನೆಯು ಊರಿನ ಎಲ್ಲರನ್ನೂ ಒಂದುಗೂಡಿಸುತ್ತಿತ್ತು. ಇಲ್ಲಿ ಎಲ್ಲರೂ ಒಂದೇ ಎಂಬ ಏಕತೆಯ ಭಾವವನ್ನು ಅದು ಉಂಟುಮಾಡುತ್ತಿತ್ತು. ಎಲ್ಲೆಡೆಯೂ ಭಜನಾಮಂಡಳಿಗಳು ಇರುತ್ತಿದ್ದವು. ಹೀಗೆ ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ನಮ್ಮ ಪರಂಪರೆಯನ್ನು, ಸಂಸ್ಕೃತಿಯನ್ನು ತಲುಪಿಸುವ ಮಾಧ್ಯಮವಾಗಿಯೂ, ಕುಟುಂಬದ ಸದಸ್ಯರ ಜೊತೆಗೆ ಇಡೀ ಊರಿನ ಸದಸ್ಯರನ್ನೆಲ್ಲರನ್ನೂ ಒಂದಾಗಿಸುವ ಮತ್ತು ಏಕತೆಯನ್ನು, ಸೌಹಾರ್ದವನ್ನು ಬೆಳೆಸುವ ಮಾಧ್ಯಮವೂ ಆಗಿತ್ತು.

ಇಂದಿನ ವೇಗದ ಜೀವನದಲ್ಲಿ ನಾವೆಲ್ಲ ತಂತ್ರಜ್ಞಾನ ಮತ್ತು ಮಾಹಿತಿಯ ಪ್ರವಾಹದ ನಡುವೆ ಸಿಕ್ಕಿಹಾಕಿಕೊಂಡಿದ್ದೇವೆ. ಸಾಮಾಜಿಕ ಜಾಲತಾಣಗಳು, ನಿರಂತರ ಸ್ಪರ್ಧೆ, ಜೀವನದ ಒತ್ತಡಗಳು-ಇವುಗಳ ಪರಿಣಾಮವಾಗಿ ಮನಸ್ಸಿನ ಶಾಂತಿ ಕುಂದುತ್ತಿದೆ. ಇಂದಿನ ಯುವಸಮುದಾಯ ಅತಿ ಹೆಚ್ಚು ಶಾಂತಿಯನ್ನು ಅರಸುತ್ತಿದೆ. ಚಿಕ್ಕ ವಯಸ್ಸಿನಲ್ಲಿಯೇ ಯುವಕರು ಅನೇಕ ವಿಧದ ಮಾನಸಿಕ ಒತ್ತಡಗಳಿಗೆ ಸಿಲುಕುತ್ತಿದ್ದಾರೆ. ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ನಿರ್ಧರಿಸುವಲ್ಲಿ ಹೆಚ್ಚು ಎಡವುತ್ತಿದ್ದಾರೆ. ಅದಕ್ಕೆ ಕಾರಣ ಲೋಕದ ಆಕರ್ಷಣೆಯೇ ಆಗಿದೆ. ಉದ್ಯೋಗವನ್ನು ಹಿಡಿದು ಹಣದ ಸಂಪಾದನೆಯನ್ನು ಮಾಡಿ, ಅದನ್ನು ನಾನಾವಿಧದಲ್ಲಿ ವ್ಯಯಿಸುವುದೇ ಆನಂದದ ಮೂಲ



ಎಂಬ ಭ್ರಾಂತಿಗೆ ಎಲ್ಲರೂ ಒಳಗಾಗಿದ್ದಾರೆ. ಹಾಗಾಗಿ ಹೆಚ್ಚು ಹೆಚ್ಚು ಸಂಪಾದಿಸುವುದೇ ಮುಖ್ಯ ಎಂಬಂತಾಗಿದೆ. ಈ ನಡುವೆ ಅಗಾಧವಾದ ಒತ್ತಡ ಹಾಗೂ ಮಾನಸಿಕ ಅಶಾಂತಿಗೆ ಎಲ್ಲರೂ ಈಡಾಗುತ್ತಿದ್ದಾರೆ. ಎರಡು ನಿಮಿಷ ಕೂತು ಸುಧಾರಿಸಿಕೊಳ್ಳುವಷ್ಟು ಕೂಡ ಯಾರಿಗೂ ವ್ಯವಧಾನವಿಲ್ಲ. ತಾಳ್ಮೆಯನ್ನು ಅಪ್ಪರಮಟ್ಟಿಗೆ ಕೆಡಿಸಿಕೊಂಡಿದ್ದೇವೆ. ಇಂಥ ಕಾಲಘಟ್ಟದಲ್ಲಿ ಭಜನೆಯ ಮಹತ್ವ ಇನ್ನಷ್ಟು ಹೆಚ್ಚುತ್ತಿದೆ. ನಿಧಾನವಾಗಿ ಭಜನೆಗಳು ಮತ್ತೆ ಪ್ರಸ್ತುತತೆಯನ್ನು ಪಡೆದುಕೊಳ್ಳುತ್ತಿವೆ. ಈ ಮೂಲಕ ಭಾರತೀಯ ಜೀವನ ಪದ್ಧತಿಯು ಎಲ್ಲ ಕಾಲಕ್ಕೂ ಸೂಕ್ತವಾದುದು ಎಂಬುದು ಸಮಾಜ ಅರಿವಿಗೆ ಮತ್ತೊಮ್ಮೆ ಬರುತ್ತಿದೆ. ನಮ್ಮ ಹಿರಿಯರ ಜೀವನ ಪದ್ಧತಿಯನ್ನು ಅನುಸರಿಸುವುದೇ ಎಲ್ಲ ಆಧುನಿಕ ಸಮಸ್ಯೆಗಳಿಗೂ ಪರಿಹಾರವೆಂಬ ಎಚ್ಚರ ಮೂಡುತ್ತಿರುವುದು ಒಳ್ಳೆಯ ಬೆಳವಣಿಗೆಯೇ ಹೌದು.

ಕಾಲ ಬದಲಾದರೂ ಭಜನೆಯ ಮಹತ್ವ ಕಡಿಮೆಯಾಗಿಲ್ಲ, ಬದಲಿಗೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಯಾವ ಸಾಮಾಜಿಕ ಜಾಲತಾಣಗಳು ಅತ್ಯಧಿಕ ಮಾನಸಿಕ ವಿಕ್ಷೇಪವನ್ನು ಉಂಟುಮಾಡಲು ಕಾರಣವಾಗಿವೆಯೋ, ಅವುಗಳೇ ಮತ್ತೊಮ್ಮೆ ಹೊಸ ಹೊಸ ರೂಪದಲ್ಲಿ ಭಜನೆಗಳನ್ನು ಯುವಸಮುದಾಯಕ್ಕೆ ತಲುಪಿಸುತ್ತಾ, ಭಜನೆಯತ್ತ ಆಕರ್ಷಿಸುವ ಮಾಧ್ಯಮವೂ ಆಗಿವೆ. ಇವತ್ತು ಉಳಿದೆಲ್ಲ ಸಂಗೀತದ ಕಾರ್ಯಕ್ರಮಗಳಂತೆ, ಆಧುನಿಕ ಪರಿಕರಗಳೊಂದಿಗೆ ನಡೆಸಲಾಗುವ ಭಜನೆ, ಕೀರ್ತನೆಗಳ ಕಾರ್ಯಕ್ರಮಗಳೂ ಜನಪ್ರಿಯವಾಗುತ್ತಿವೆ. ಈ ಕಾರಣಕ್ಕಾಗಿ ಜೆನ್-ಝೀ ಇನ್ನಿಲ್ಲದಷ್ಟು ಭಜನೆಗಳತ್ತ ಆಕರ್ಷಿತರಾಗುತ್ತಿದ್ದಾರೆ. ಯೂಟ್ಯೂಬ್, ಇನ್ಸ್ಟಾಗಳಲ್ಲಿ ಭಜನೆಗಳನ್ನು ಆಧರಿಸಿದ ಕಲಾವಿದರಿಗೆ ಹೆಚ್ಚೆಚ್ಚು ದೃಶ್ಯಾಂಕಗಳು ದೊರೆಯುತ್ತಿವೆ. ಸಂಗೀತದ ಮೂಲಕ ಇದನ್ನು ಮೊದಲು ಆರಂಭಿಸಿದವರು ಕುಲದೀಪ ಪೈ ಅಂಥವರು. ಅವರು ತಮ್ಮ ಯೂಟ್ಯೂಬ್ ಚಾನೆಲ್ ಮೂಲಕ ಬಾಲಪ್ರತಿಭೆಗಳ ಸಂಗೀತವನ್ನು ಪ್ರಸ್ತುತಪಡಿಸುತ್ತಾ ಸೂರ್ಯಗಾಯತ್ರಿಯಂಥ ಅನೇಕ ಪ್ರತಿಭೆಗಳನ್ನು ಲೋಕಕ್ಕೆ ಪರಿಚಯಿಸಿದರು. ಈಗ ಸೂರ್ಯಗಾಯತ್ರಿ, ರಾಹುಲ ವೆಳ್ಳಾಲ ಮೊದಲಾದವರು ದೇವರ ನಾಮವನ್ನು ಸಂಗೀತದ ಮೂಲಕ ಪ್ರಸ್ತುತಪಡಿಸುತ್ತಾ ಲಕ್ಷಾಂತರ ಜನರನ್ನು ಸೆಳೆಯುತ್ತಿದ್ದಾರೆ. ಮೈಥಿಲಿ ಠಾಕೂರ್, ರಾಧಿಕಾ ದಾಸ್ ಮೊದಲಾದವರು ಭಜನೆಗಳಿಗೆ ಹೊಸ ಶ್ರೋತೃವರ್ಗವನ್ನು ಸೃಷ್ಟಿಸಿದ್ದಾರೆ. ಭಜನೆಗಳಿಗೆ ಹೊಸ ಆಯಾಮವನ್ನೂ ಒದಗಿಸಿದ್ದಾರೆ.

ಇಂದು ಭಜನೆಯೆಂಬುದು ಹೊಸ ರೂಪದೊಂದಿಗೆ ಮತ್ತೆ ಪ್ರಸಿದ್ಧವಾಗುತ್ತಿದೆ. ಶಂಕರರು ನಿರ್ಮಿಸಿದ ಸ್ತೋತ್ರಗಳಿಂದ ಹಿಡಿದು, ದಾಸರ ಪದ, ಮರಾಠಿ ಅಭಂಗಗಳವರೆಗೆ ಎಲ್ಲ ಪ್ರಾಚೀನ ಕೃತಿಗಳು ಹೊಸ ರೂಪದೊಂದಿಗೆ ಮತ್ತೆ ಎಲ್ಲರ ಬಾಯಲ್ಲಿ ನಲಿಯುತ್ತಿವೆ. ಶಂಕರಾಚಾರ್ಯರು ಸಾವಿರಾರು ವರ್ಷಗಳ ಹಿಂದೆಯೇ ಸ್ತೋತ್ರಸಾಹಿತ್ಯದ ಮೂಲಕ ಕೇವಲ ಭಗವದ್ಭಕ್ತಿಯ ಜಾಗರಣೆಯನ್ನು ಮೂಡಿಸಿದ್ದಷ್ಟೇ ಅಲ್ಲ, ಉಪನಿಷತ್ತುಗಳ, ಶಾಸ್ತ್ರಗಳ ಸಾರವನ್ನು ನಿತ್ಯವೂ ಸಾಮಾನ್ಯನ ಬಾಯಲ್ಲಿ ನಲಿಯುವಂತೆ ಮಾಡಲು ಕಾರಣರಾಗಿದ್ದರು. ಇವತ್ತು ಮತ್ತೆ ಅಂಥ ಕೃತಿಗಳು ಸಮಾಜದಲ್ಲಿ ಅನುರಣನಗೊಳ್ಳುತ್ತಿವೆ. ಸ್ತೋತ್ರ, ಭಜನೆಗಳು ಮತ್ತೆ ಮುನ್ನೆಲೆಗೆ ಬರುತ್ತಿರುವ ಈ ಹೊತ್ತಿನಲ್ಲಿ ಇದಕ್ಕೆ ಇನ್ನಷ್ಟು ವೇಗವನ್ನು ಕೊಡುವ ಉದ್ದೇಶದಿಂದ ರಾಷ್ಟ್ರೀಯ ಸ್ವಯಂಸೇವಕ ಸಂಘವು ಕೂಡ ಪಂಚ ಪರಿವರ್ತನೆಗಳಲ್ಲಿ ಭಜನೆಯನ್ನೂ ಸೇರಿಸಿಕೊಂಡಿದೆ. ಯಾಕೆಂದರೆ ಭಜನೆಯು ವ್ಯಕ್ತಿತ್ವದ ನಿರ್ಮಾಣದಲ್ಲಿಯೂ ಕೂಡ ಮಹತ್ವದ ಪಾತ್ರವನ್ನು ವಹಿಸುತ್ತದೆ. ಜೊತೆಗೆ ಸಾಮಾಜಿಕ ಸಮರಸತೆಗೆ ಸೇತುವೂ ಆಗಿದೆ.

ಮಠಗಳು ಭಜನೆ ಮತ್ತು ಕೀರ್ತನೆಗಳ ವ್ಯಾಪಕ ಪ್ರಚಾರವನ್ನು ಮಾಡುತ್ತಿವೆ. ಏಕಸ್ವರದಲ್ಲಿ ಲಕ್ಷಕಂಠದ ಸ್ತೋತ್ರಪಾರಾಯಣದ ಸಮರ್ಪಣೆಯಂಥ ಕಾರ್ಯಕ್ರಮಗಳು ಮಹಾನಗರಗಳಲ್ಲಿ ಯಶಸ್ವಿಯಾಗಿ ನಡೆಯುತ್ತಿವೆ. ಇತ್ತೀಚೆಗೆ ಭಜನೆಗೆ ಪರಿಸರ ಸಂರಕ್ಷಣೆಯ ಹೊಸ ಮುಖವೊಂದನ್ನು ಸ್ವರ್ಣವಲ್ಲಿಯ ಶ್ರೀ ಶ್ರೀ ಮದ್ಗಂಗಾಧರೇಂದ್ರ ಸ್ವಾಮಿಗಳು ಕೊಟ್ಟಿದ್ದಾರೆ. ಉತ್ತರ ಕನ್ನಡದ ನದಿಗಳ ತಿರುವು ಯೋಜನೆಯ ವಿರುದ್ಧದ ಜನರ ಧ್ವನಿಯಾಗಿರುವ ಸ್ವರ್ಣವಲ್ಲೀ ಸ್ವಾಮಿಗಳು ಶಿರಸಿ, ಬೆಂಗಳೂರು ಮುಂತಾದ ಕಡೆಗಳಲ್ಲಿ ಸಮಾವೇಶಗಳನ್ನು ನಡೆಸಿದ್ದಷ್ಟೇ ಅಲ್ಲ, ಈ ಬಗ್ಗೆ ವ್ಯಾಪಕವಾದ ಜನಜಾಗರಣದ ದೃಷ್ಟಿಯಿಂದ ಮತ್ತು ಪರಿಸರ ಸಂರಕ್ಷಣೆಯ ಅಭಿಯಾನಕ್ಕೆ ಆಧ್ಯಾತ್ಮಿಕ ಹಿನ್ನೆಲೆಯನ್ನೂ ಜೋಡಿಸುವ ಉದ್ದೇಶದಿಂದ ತಮ್ಮೆಲ್ಲ ಶಿಷ್ಯವಲಯಕ್ಕೆ ನಿರಂತರವಾಗಿ ಭಜನೆಗಳನ್ನು ಮಾಡುವ ಅಭಿಯಾನಕ್ಕೆ ಕರೆ ಕೊಟ್ಟಿದ್ದಾರೆ. ಆಯಾ ಊರಿನ ಎಲ್ಲರೂ ಒಂದು ದೇವಾಲಯದಲ್ಲಿ ಸೇರಿ ನಿತ್ಯವೂ ಒಂದು ಘಂಟೆಯ ಕಾಲ ಭಜನೆಯನ್ನು ಮಾಡಬೇಕೆಂಬ ಶ್ರೀಗಳ ಅಪ್ಪಣೆಯಂತೆ ಉತ್ತರಕನ್ನಡದ ಎಲ್ಲ ಊರುಗಳಲ್ಲಿಯೂ ಯಶಸ್ವಿಯಾಗಿ ಭಜನೆಯನ್ನು ನಡೆಸಲಾಗುತ್ತಿದೆ.

ಹೀಗೆ ಭಜನೆಯು ವ್ಯಕ್ತಿತ್ವನಿರ್ಮಾಣದ, ಆಧ್ಯಾತ್ಮಿಕ ಸಾಧನೆಯ, ಸಾಮಾಜಿಕ ಸಮರಸತೆಯ, ಪರಂಪರೆಯ ಸಂರಕ್ಷಣೆಯ ಅನೇಕ ಮಜಲುಗಳಲ್ಲಿ ಒಂದು ಪ್ರಖರ ಮಾಧ್ಯಮವಾಗಿದ್ದು ಮತ್ತೊಮ್ಮೆ ಸಮಾಜದಲ್ಲಿ ಮುನ್ನಲೆಗೆ ಬರುತ್ತಿರುವುದು ಅತ್ಯಂತ ಸಂತಸದ ವಿಷಯ. ನಮ್ಮ ಮನೆಗಳಲ್ಲೂ ಭಜನೆಯು ನಿರಂತರ ನಡೆಯುವಂತೆ ಪ್ರಯತ್ನಿಸಿದಲ್ಲಿ ಸುಖ, ಶಾಂತಿ, ಸಮೃದ್ಧಿಗಳು ಉಂಟಾಗುವುದರಲ್ಲಿ ಸಂದೇಹವಿಲ್ಲ.

ಜಲಸಂಧಿ ಬಹುತೇಕ ಮುಚ್ಚಿದ್ದರೂ ಯುದ್ಧ ನಿಲ್ಲಿಸಲು ಟ್ರಂಪ್ ಒಲವು

ಹಾರ್ಮುಜ್ ಮುಚ್ಚಿದ್ದರೂ ಯುದ್ಧ ನಿಲ್ಲಿಸ್ತಾರಾ ಟ್ರಂಪ್?

- ಇರಾನ್ ನೌಕಾಪಡೆ ದುರ್ಬಲಗೊಳಿಸುವುದೇ ಗುರಿ
- ಜಲಸಂಧಿ ಅಮೆರಿಕಕ್ಕಿಂತ ಇತರ ರಾಷ್ಟ್ರಗಳಿಗೆ ಬಹು ಮುಖ್ಯ: ಡೊನಾಲ್ಡ್ ಟ್ರಂಪ್



ವಾಷಿಂಗ್ಟನ್: ಹಾರ್ಮುಜ್ ಜಲಸಂಧಿಯನ್ನು ಬಹುತೇಕ ಮುಚ್ಚಿದ್ದರೂ ಸರಿ, ಇರಾನ್ ಯುದ್ಧವನ್ನು ನಿಲ್ಲಿಸಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಿದ್ಧವಾಗಿದ್ದಾರೆಂದು ಅವರ ಆಪ್ತ ವಲಯಗಳು ತಿಳಿಸಿವೆಯೆಂದು ದಿ ವಾಲ್ ಸ್ಟ್ರೀಟ್ ಜರ್ನಲ್ ವರದಿ ಮಾಡಿದೆ.

ಸದ್ಯ ಇರಾನ್ ನಿಯಂತ್ರಣದಲ್ಲಿರುವ ಹಾರ್ಮುಜ್ ಜಲಸಂಧಿಯನ್ನು ವಶಪಡಿಸಿ ಸಂಪೂರ್ಣ ತೆರೆಯುವುದಕ್ಕಾಗಿ



ಕಾರ್ಯಾಚರಣೆ ಕೈಗೆತ್ತಿಕೊಂಡರೆ ಗುರಿಸಾಧಿಸಲು ಇನ್ನೂ ನಾಲ್ಕರಿಂದ ಆರು ವಾರಗಳವರೆಗೆ ಯುದ್ಧ ನಡೆಸುವ ಅಗತ್ಯವಿರುವುದನ್ನು ಟ್ರಂಪ್ ಮತ್ತವರ ಆಪ್ತ ವಲಯ ಮನಗಂಡಿದೆ ಎಂದು ವರದಿಯಾಗಿದೆ.

ಇದರಿಂದಾಗಿ ಅಮೆರಿಕ ಸದ್ಯ ಹಾರ್ಮುಜ್ ವಶಪಡಿಸುವ ಕಾರ್ಯಾಚರಣೆ ಯೋಜನೆಯನ್ನು ಕೈಬಿಟ್ಟಿದೆ. ಹಾರ್ಮುಜ್ ವಶಪಡಿಸುವ ಬದಲಿಗೆ ಇರಾನ್ ಮೇಲಿನ ಸೇನಾ ಕಾರ್ಯಾಚರಣೆಯಲ್ಲಿ ಗುರಿ ಸಾಧಿಸುವುದರ ಬಗ್ಗೆ ಹೆಚ್ಚಿನ ಗಮನಹರಿಸುತ್ತಿದೆ. ಇರಾನ್ ನೌಕಾಪಡೆಯನ್ನು ದುರ್ಬಲಗೊಳಿಸುವುದು, ಇರಾನ್ ಕ್ಷಿಪಣಿ ಸಂಗ್ರಹಾಗಾರಗಳ ನಾಶ ಮತ್ತು ರಾಜತಾಂತ್ರಿಕ ಮಾತುಕತೆ ಮೂಲಕ ಒತ್ತಡ ಹಾಕುವುದರ ಮೇಲೆ ಅಮೆರಿಕ ಗಮನ ಹರಿಸಲಿದೆ ಎಂದು ವರದಿಯಾಗಿದೆ.

ಜಾಗತಿಕ ತೈಲ ಮತ್ತು ಅನಿಲ ಪೂರೈಕೆಯಲ್ಲಿ ಹಾರ್ಮುಜ್ ಜಲಸಂಧಿ ಎಷ್ಟೊಂದು ಪ್ರಮುಖ ಪಾತ್ರವಹಿಸುತ್ತದೆ ಎಂಬ ಸಂದೇಶವನ್ನು ಸಾಮಾನ್ಯ ಜನರಿಗೆ ಈಗಾಗಲೇ ಅಧ್ಯಕ್ಷ ಟ್ರಂಪ್ ರವಾನಿಸಿದ್ದಾರೆ. ಜಲಸಂಧಿಯನ್ನು ತೆರೆಯದಿದ್ದರೆ ಇರಾನ್ ಇಂಧನ ಮೂಲಸೌಕರ್ಯಗಳ ಮೇಲೆ ಬಾಂಬ್ ದಾಳಿ ನಡೆಸುವುದಾಗಿ ಬೆದರಿಕೆಯೊಡ್ಡುವ ಮೂಲಕ ಜಲಸಂಧಿಯ ಪ್ರಾಮುಖ್ಯತೆ ಕುರಿತು ಅರಿವು ಮೂಡಿಸಿದ್ದಾರೆ. ಇದಲ್ಲದೆ, ಜಲಸಂಧಿಯು ಅಮೆರಿಕಕ್ಕಿಂತ ಹೆಚ್ಚು ಇತರ ರಾಷ್ಟ್ರಗಳ ಸಾಗರೋತ್ತರ ವ್ಯವಹಾರಕ್ಕೆ ನಿರ್ಣಾಯಕ ಪಾತ್ರ ವಹಿಸುತ್ತಿದೆ ಎಂದೂ ಟ್ರಂಪ್ ಮನದಟ್ಟು ಮಾಡಿದ್ದಾರೆ.

ಹಾರ್ಮುಜ್ ಬಂದ್: ವ್ಯಾಪಾರ ಅನಿಶ್ಚಿತತೆ

ಜಾಗತಿಕ ತೈಲ ಪೂರೈಕೆಯ ಶೇ.20ರಷ್ಟು ಭಾಗ ಹಾರ್ಮುಜ್ ಜಲಸಂಧಿಯನ್ನು ದಾಟಿ ಹೋಗಬೇಕಾಗುತ್ತದೆ. ಹೀಗಾಗಿ ಇರಾನ್ ಮೇಲಿನ ಯುದ್ಧದಿಂದ ಜಲಸಂಧಿ ಮುಚ್ಚಿರುವುದರಿಂದ ಶೇ.20ರಷ್ಟು ತೈಲ ಪೂರೈಕೆ ವ್ಯತ್ಯಯ ಸೃಷ್ಟಿಸಿದೆ. ಇದಲ್ಲದೆ ವಿಶ್ವದ ದೊಡ್ಡ ದೊಡ್ಡ ತೈಲ ಮಾರುಕಟ್ಟೆಗಳ ಮೇಲೆ ಹಾರ್ಮುಜ್ ನೇರ ಪರಿಣಾಮವನ್ನು ಬೀರುತ್ತದೆ. ಈ ಹಿಂದೆ ಜಲಸಂಧಿಯನ್ನು ಯಾವುದೇ ಅಡೆತಡೆಗಳಿಲ್ಲದೆ ದಾಟುತ್ತಿದ್ದ ರಾಷ್ಟ್ರಗಳನ್ನೂ ಯುದ್ಧ ಪರಿಸ್ಥಿತಿ ಬಾಧಿಸಿದೆ. ಜಾಗತಿಕ ಮಟ್ಟದಲ್ಲಿ ತೈಲ ಅಥವಾ ಅನಿಲ ಪೂರೈಕೆಯಷ್ಟೇ ಅಲ್ಲದೆ, ರಸಗೊಬ್ಬರ, ಹೀಲಿಯಂ, ಸೆಮಿಕಂಡಕ್ಟರ್, ಗ್ಲಾಸ್ ಬಾಟಲ್ ಉತ್ಪಾದನೆ ಇತ್ಯಾದಿ ಉದ್ಯಮಗಳನ್ನೂ ಬಾಧಿಸಿದೆ. ಜಾಗತಿಕವಾಗಿ ಒಂದು ಬ್ಯಾರೆಲ್ ತೈಲ ಬೆಲೆಯು 100 ಡಾಲರ್ ಹೆಚ್ಚಾಗಿದೆ.

ಅಮೆರಿಕದ ಸಿಗೋನೆಲ್ಲಾ ವಾಯುನೆಲೆ ಬಳಸಲು ಅನುಮತಿಸದ ಇಟಲಿ!

ರೋಮ್: ಸಿಸಿಲಿಯಲ್ಲಿರುವ ಸಿಗೋನೆಲ್ಲಾ ಮಿಲಿಟರಿ ವಾಯುನೆಲೆಯನ್ನು ಸಾಮಾನ್ಯೇತರ ಕಾರ್ಯಾಚರಣೆಗಳಿಗಾಗಿ ಬಳಸಲು ಅಮೆರಿಕಕ್ಕೆ ಇಟಲಿ ಅನುಮತಿ ನಿರಾಕರಿಸಿದೆ. ಈ ಮೂಲಕ ಮತ್ತೊಮ್ಮೆ ಟ್ರಂಪ್‌ಗೆ ಭಾರೀ ಮುಖಭಂಗವಾಗಿದೆ. ಮಧ್ಯಪ್ರಾಚ್ಯದತ್ತ ತೆರಳುತ್ತಿದ್ದ ಅಮೆರಿಕದ ಬಾಂಬರ್ ವಿಮಾನಗಳ ಹಾರಾಟ ಯೋಜನೆಯನ್ನು ಗಮನಿಸಿದ ರಕ್ಷಣಾ ಸಚಿವ ಗ್ವಿಡೋ ಕ್ರೊಸೆಟ್ಟೊ ಈ ನಿರ್ಧಾರ ಕೈಗೊಂಡಿದ್ದಾರೆ. ವಿಮಾನಗಳು ಈಗಾಗಲೇ ಟೇಕ್-ಆಫ್ ಆದ ನಂತರವಷ್ಟೇ ಇಟಲಿ ಅಧಿಕಾರಿಗಳಿಗೆ ಈ ಮಿಷನ್ ಬಗ್ಗೆ ಮಾಹಿತಿ ಸಿಕ್ಕಿತ್ತು. ಪ್ರಾಥಮಿಕ ತಪಾಸಣೆಯ ನಂತರ, ಈ ಹಾರಾಟಗಳು ಕೇವಲ ಲಾಜಿಸ್ಟಿಕಲ್ ಉದ್ದೇಶದ್ದಲ್ಲ ಮತ್ತು ಅಸ್ತಿತ್ವದಲ್ಲಿರುವ ದ್ವಿಪಕ್ಷೀಯ ಒಪ್ಪಂದಗಳ ವ್ಯಾಪ್ತಿಗೆ ಬರುವುದಿಲ್ಲ ಎಂದು ಖಚಿತಪಡಿಸಿಕೊಳ್ಳಲಾಯಿತು. ಇಂತಹ ಕಾರ್ಯಾಚರಣೆಗಳಿಗೆ ಪೂರ್ವಭಾವಿ ರಾಜಕೀಯ ಮತ್ತು ಮಿಲಿಟರಿ ಸಮಾಲೋಚನೆಗಳ ಅಗತ್ಯವಿರುತ್ತದೆ. ಸಾಮಾನ್ಯ ಕಾರ್ಯಾಚರಣೆಗಳ ಹೊರತಾದ ಯಾವುದೇ ಚಟುವಟಿಕೆಗಳಿಗೆ ಸಂಸತ್ತಿನ ಅನುಮೋದನೆ ಅಗತ್ಯ ಎಂದು ಪ್ರಧಾನಿ ಜಾರ್ಜಿಯಾ ಮೆಲೋನಿ ಈ ಹಿಂದೆ ತಿಳಿಸಿದ್ದರು. ಸಿಗೋನೆಲ್ಲಾ ನೆಲೆಯು ಅಮೆರಿಕ ಸೇನೆಗೆ ಮೆಡಿಟರೇನಿಯನ್ ಪ್ರದೇಶದಲ್ಲಿ ಆಯಕಟ್ಟಿನ ಕೇಂದ್ರವಾಗಿದೆ. ಇರಾನ್ ವಿರುದ್ಧದ ಸಂಘರ್ಷಕ್ಕೆ ಸ್ಪೇನ್ ತನ್ನ ವಾಯುಪ್ರದೇಶವನ್ನು ಮುಚ್ಚಿದ ಬೆನ್ನಲ್ಲೇ ಇಟಲಿಯೂ ಈ ನಿರ್ಧಾರ ತೆಗೆದುಕೊಂಡಿದೆ.

ಇಂಧನ ಬೇಕಿದ್ದರೆ, ಜಲಸಂಧಿಗೆ ತೆರಳಿ!

ಇರಾನ್ ಯುದ್ಧದಲ್ಲಿ ಬೆಂಬಲಿಸದ ಮಿತ್ರರಾಷ್ಟ್ರಗಳಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ನಿಮಗೆ ಬೇಕಿರುವ ತೈಲ ನೀವೇ ಸಂಗ್ರಹಿಸಿಕೊಳ್ಳಿ ಎಂದು ಖಡಕ್ ಎಚ್ಚರಿಕೆ ನೀಡಿದ್ದಾರೆ. ಹಾರ್ಮುಜ್ ಜಲಸಂಧಿಯನ್ನು ವಶಪಡಿಸಲು ಯುದ್ಧ ನೌಕೆಗಳನ್ನು ಕಳುಹಿಸಲು ಅಮೆರಿಕ ಮನವಿಯನ್ನು ತಿರಸ್ಕರಿಸಿದ್ದ ಮಿತ್ರ ರಾಷ್ಟ್ರಗಳು ತಮಗೆ ತೈಲ ಬೇಕಾಗಿದ್ದರೆ ಅಮೆರಿಕದಿಂದ ಖರೀದಿಸಲಿ ಅಥವಾ ಹಾರ್ಮುಜ್‌ಗೆ ಹೋಗಿ ಅಲ್ಲಿಂದ ನೇರ ಸಂಗ್ರಹಿಸಿಕೊಳ್ಳಲಿ ಎಂದು ಟ್ರಂಪ್ ಕುಹಕವಾಡಿದ್ದಾರೆ. ಬ್ರಿಟನ್ ಸೇರಿದಂತೆ ಎಲ್ಲಾ ಮಿತ್ರರಾಷ್ಟ್ರಗಳು ಹಾರ್ಮುಜ್ ಮೂಲಕ ತೈಲ ಆಮದು ಮಾಡಿಕೊಳ್ಳುತ್ತವೆ. ಇಂತಹ ರಾಷ್ಟ್ರಗಳ ಮುಂದೆ ಎರಡು ಆಯ್ಕೆಗಳಿವೆ. ಅಮೆರಿಕದಿಂದ ತೈಲ ಖರೀದಿಸುವುದು ಅವರಿಗಿರುವ ಮೊದಲ ಆಯ್ಕೆ. ಸ್ವಲ್ಪ ತಡವಾದರೂ ಧೈರ್ಯ ಮಾಡಿಕೊಂಡು ಹಾರ್ಮುಜ್ ಜಲಸಂಧಿಗೆ ನೇರ ಹೋಗಿ ತೈಲ ಸಂಗ್ರಹಿಸುವುದು ಎರಡನೇ ಆಯ್ಕೆ ಎಂದು ಟ್ರಂಪ್ ಟ್ರುತ್ ಸೋಶಿಯಲ್‌ನಲ್ಲಿ ಬರೆದಿದ್ದಾರೆ. ನಿಮಗೋಸ್ಕರ ಹೋರಾಡಲು ಕಲಿಯಿರಿ: ನಿಮಗೋಸ್ಕರ ನೀವೇ ಹೋರಾಡಲು ಕಲಿತುಕೊಳ್ಳಿ. ನೀವು ಹೇಗೆ ನಮಗೆ ಸಹಾಯ ಮಾಡಿಲ್ಲವೋ ಹಾಗೆ ಮುಂದೆ ನಿಮಗೇನಾದರೂ ಸಮಸ್ಯೆಯಾದರೆ ಅಮೆರಿಕ ಸಹಾಯ ಮಾಡಲ್ಲ ಎಂದು ಅಧ್ಯಕ್ಷ ಟ್ರಂಪ್ ಯುರೋಪ್ ರಾಷ್ಟ್ರಗಳನ್ನು ಎಚ್ಚರಿಸಿದ್ದಾರೆ.

ಇಸ್ಫಾಹಾನ್ ಮೇಲೆ ಬೃಹತ್ ದಾಳಿ



ಸುಮಾರು 23 ಲಕ್ಷ ಜನಸಂಖ್ಯೆ ಹೊಂದಿರುವ ಮತ್ತು ಬದ್ಧ, ಸೇನಾ ವಿಮಾನ ನಿಲ್ದಾಣವಿರುವ 'ಇಸ್ಫಾಹಾನ್' ನಗರದ ಮದ್ದುಗುಂಡು ಸಂಗ್ರಹಣಾ ಕೇಂದ್ರದ ಮೇಲೆ ಅಮೆರಿಕ ಸೇನೆ 2,000 ಪೌಂಡ್ (ಸುಮಾರು 907 ಕೆಜಿ) ತೂಕದ ಬಂಕರ್ ಬಸ್ಟರ್ ಬಾಂಬ್‌ಗಳನ್ನು ಬಳಸಿ ದಾಳಿ ನಡೆಸಿದೆ. ಈ ದಾಳಿಯಿಂದಾಗಿ ಸರಣಿ ಸ್ಫೋಟಗಳು ಮತ್ತು ಬಲವಾದ ಆಘಾತಕಾರಿ ಅಲೆಗಳು ಸೃಷ್ಟಿಯಾಗಿವೆ. ಇರಾನ್ ತನ್ನ ಬಳಿಯಿರುವ ಸುಮಾರು 540 ಕೆಜಿ ಪುಷ್ಟೀಕರಿಸಿದ ಯುರೇನಿಯಂ ಅನ್ನು ಈ ನಗರದ ಭೂಗತ ಕೇಂದ್ರಕ್ಕೆ ಸ್ಥಳಾಂತರಿಸಿರಬಹುದು ಎಂಬ ವರದಿಗಳ ಬೆನ್ನಲ್ಲೇ ಈ ದಾಳಿ ನಡೆದಿದೆ.

ಮೂಲಸೌಕರ್ಯಗಳ ನಾಶದ ಬೆದರಿಕೆ: ಒಂದು ವೇಳೆ ಯುದ್ಧ ನಿಲ್ಲಿಸಲು ಶೀಘ್ರವೇ ಒಪ್ಪಂದಕ್ಕೆ ಬರದಿದ್ದರೆ ಮತ್ತು ಹಾರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸದಿದ್ದರೆ ಇರಾನ್‌ನ ಇಂಧನ ಸಂಪನ್ಮೂಲಗಳು, ಪರಮಾಣು ಕೇಂದ್ರಗಳು ಮತ್ತು ನೀರಿನ ಪ್ಲಾಂಟ್‌ಗಳನ್ನು ನಾಶಪಡಿಸುವುದಾಗಿ ಟ್ರಂಪ್ ಎಚ್ಚರಿಸಿದ ಒಂದು ದಿನದ ನಂತರ ಈ ಕಾರ್ಯಾಚರಣೆ ನಡೆದಿದೆ.

ಬಂಕರ್ ಬಸ್ಟರ್ ತಂತ್ರಜ್ಞಾನ: ಈ ದಾಳಿಯಲ್ಲಿ ಬಳಸಲಾದ ಬಿಎಲ್‌ಯು-109 ನಂತಹ ಬಾಂಬ್‌ಗಳು ಗಟ್ಟಿಯಾದ ಉಕ್ಕಿನ ಕವಚವನ್ನು ಹೊಂದಿದ್ದು, ಮಣ್ಣು ಮತ್ತು ಕಾಂಕ್ರೀಟ್ ಪದರಗಳನ್ನು ಕೊರೆದು ಒಳಗೆ ಹೋದ ನಂತರವೇ ಸ್ಫೋಟಗೊಳ್ಳುತ್ತವೆ. ಇವುಗಳಲ್ಲಿ ಕೆಲವು ಸ್ಮಾರ್ಟ್ ಫ್ಯೂಸ್‌ಗಳನ್ನು ಹೊಂದಿದ್ದು ಕಟ್ಟಡದ ಎಷ್ಟು ಮಹಡಿಗಳನ್ನು ದಾಟಬೇಕು ಅಥವಾ ಶಬ್ದಗಳನ್ನು ಕೇಳಿಸಿಕೊಂಡ ನಂತರವೇ ಸ್ಫೋಟಗೊಳ್ಳಬೇಕೆಂಬುದನ್ನು ನಿರ್ಧರಿಸುವ ತಂತ್ರಜ್ಞಾನ ಹೊಂದಿವೆ.

ಪ್ರಾದೇಶಿಕ ಹಿನ್ನೆಲೆ: ಈ ಸಂಘರ್ಷ ಎರಡನೇ ತಿಂಗಳಿಗೆ ಕಾಲಿಟ್ಟಿದೆ. ಇರಾನ್ ಪರಮಾಣು ಅಸ್ತ್ರ ತಯಾರಿಕೆಗೆ ಹತ್ತಿರದಲ್ಲಿದೆ ಎಂದು ಅಮೆರಿಕ ಮತ್ತು ಇಸ್ರೇಲ್ ಆರೋಪಿಸುತ್ತಿದ್ದರೂ, ವಿಶ್ವಸಂಸ್ಥೆಯ ಪರಮಾಣು ಕಾವಲು ಸಂಸ್ಥೆ ಈ ವಾದವನ್ನು ಬೆಂಬಲಿಸಿಲ್ಲ. ಕಳೆದ ವರ್ಷ ಕೂಡ 'ಆಪರೇಷನ್ ಮಿಡ್‌ನೈಟ್ ಹ್ಯಾಮರ್' ಅನ್ವಯದಲ್ಲಿ ಇಸ್ಫಾಹಾನ್ ನಗರವನ್ನು ಗುರಿಯಾಗಿಸಲಾಗಿತ್ತು.

ಟ್ರಂಪ್ ಷರತ್ತುಗಳಿಗೆ ಒಪ್ಪಿದರಷ್ಟೇ ಯುದ್ಧ ಅಂತ್ಯ



ವಾಷಿಂಗ್ಟನ್: ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಷರತ್ತುಗಳಿಗೆ ಒಪ್ಪಿದರಷ್ಟೇ ಯುದ್ಧ ಕೊನೆಗಾಣಲಿದೆ. ಮುಂದಿನ ಕೆಲವು ದಿನಗಳು ಮಧ್ಯಪ್ರಾಚ್ಯ ಯುದ್ಧದಲ್ಲಿ ಬಹಳ ನಿರ್ಣಾಯಕ ದಿನಗಳಾಗಲಿವೆ ಎಂದು ಅಮೆರಿಕ ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ಹಾಗೂ ರಕ್ಷಣಾ ಜಂಟಿ ಮುಖ್ಯಸ್ಥ ಜನರಲ್ ಡಾನ್ ಕೇನ್ ಮಂಗಳವಾರ ಘೋಷಿಸಿದ್ದಾರೆ. ಮಧ್ಯಪ್ರಾಚ್ಯ ಯುದ್ಧವು ಮುಂದಿನ ದಿನಗಳಲ್ಲಿ ಅನಿಶ್ಚಿತ ತಿರುವುಗಳನ್ನು ಕಾಣಲಿದೆ ಎಂದು ಹೆಗ್ಸೆತ್ ಹೇಳಿದ್ದಾರೆ. ಇರಾನ್‌ಗೆ ಸೈನ್ಯವನ್ನು ಕಳುಹಿಸಲು ಅಮೆರಿಕ ಬಯಸುವುದಿಲ್ಲ. ಆದರೆ ಒಂದು ವೇಳೆ ನಾವು ಸೈನ್ಯ ಕಳುಹಿಸಿದರೆ ಯಾರಿಗೂ ಹೇಳಲಾರೆ ಎಂದು ಎಚ್ಚರಿಕೆ ನೀಡಿದ್ದಾರೆ. ಇರಾನ್‌ನಲ್ಲಿ ಅಮೆರಿಕ ತನ್ನ ಎಫ್-35 ಕಾರ್ಯಾಚರಣೆಯನ್ನು ಮುಂದುವರಿಸಲು ಸಿದ್ಧವಾಗಿದೆ ಎಂದು ಹೆಗ್ಸೆತ್ ತಿಳಿಸಿದ್ದಾರೆ.

ಗೂಗಲ್, ಮೈಕ್ರೋಸಾಫ್ಟ್‌ಗೆ ಇರಾನ್‌ನಿಂದ ದಾಳಿ ಬೆದರಿಕೆ

Google Microsoft

- ಪಶ್ಚಿಮ ಏಷ್ಯಾ ಯುದ್ಧ ಉಲ್ಬಣ
- ಅಮೆರಿಕದ ಟೆಕ್ ದೈತ್ಯ ಸಂಸ್ಥೆಗಳ ಮೇಲೆ ದಾಳಿ ಎಚ್ಚರಿಕೆ

ಟೆಹ್ರಾನ್: ಪಶ್ಚಿಮ ಏಷ್ಯಾದಲ್ಲಿ ಯುದ್ಧದ ತೀವ್ರತೆ ಹೆಚ್ಚಾಗುತ್ತಿರುವ ಹಿನ್ನೆಲೆ, ಇರಾನ್ ಅಮೆರಿಕದ ಪ್ರಮುಖ ತಂತ್ರಜ್ಞಾನ ಕಂಪನಿಗಳಿಗೆ ನೇರ ಬೆದರಿಕೆ ಹಾಕಿದೆ. ಅಮೆರಿಕ ಮತ್ತು ಇಸ್ರೇಲ್ ನಡೆಸುತ್ತಿರುವ ಭಯೋತ್ಪಾದಕ ಕಾರ್ಯಾಚರಣೆಗಳಿಗೆ ಪ್ರತಿಯಾಗಿ, ಮೈಕ್ರೋಸಾಫ್ಟ್, ಆ್ಯಪಲ್, ಗೂಗಲ್, ಇಂಟೆಲ್, ಬೋಯಿಂಗ್ ಸೇರಿದಂತೆ ಹಲವು ಕಂಪನಿಗಳನ್ನು ಗುರಿಯಾಗಿಸಲಾಗುವುದು ಎಂದು ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ಎಚ್ಚರಿಸಿದೆ. ಅಮೆರಿಕದ ಐಸಿಟಿ ಮತ್ತು ಕೃತಕ ಬುದ್ಧಿಮತ್ತೆ(ಎಐ) ಕಂಪನಿಗಳು ಈ ಭಯೋತ್ಪಾದಕ ಕಾರ್ಯಾಚರಣೆಗಳನ್ನು ರೂಪಿಸುವ ಮತ್ತು ಜಾರಿಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ ಎಂದು ಆರೋಪಿಸಲಾಗಿದೆ. ಈ ಹಿನ್ನೆಲೆಯಲ್ಲಿ ಇರಾನ್‌ನಲ್ಲಿ ನಡೆಯುವ ಪ್ರತಿಯೊಂದು ದಾಳಿಗೂ ಪ್ರತಿಯಾಗಿ ಈ ಕಂಪನಿಗಳ ಮೂಲಸೌಕರ್ಯಗಳ ಮೇಲೆ ದಾಳಿ ನಡೆಸಲಾಗುವುದು ಎಂದು ಸ್ಪಷ್ಟಪಡಿಸಲಾಗಿದೆ. ಈ ಬೆದರಿಕೆಯ ಭಾಗವಾಗಿ, ಕಂಪನಿಗಳ ಕಚೇರಿಗಳ ಸುತ್ತಮುತ್ತ ಒಂದು ಕಿಲೋಮೀಟರ್ ವ್ಯಾಪ್ತಿಯಲ್ಲಿರುವ ಉದ್ಯೋಗಿಗಳು ಮತ್ತು ನಿವಾಸಿಗಳಿಗೆ ಸ್ಥಳಾಂತರಗೊಳ್ಳುವಂತೆ ಸೂಚಿಸಲಾಗಿದೆ. ಏ. 1ರಂದು ಟೆಹ್ರಾನ್ ಸಮಯ ರಾತ್ರಿ 8 ಗಂಟೆಯಿಂದ ಪ್ರತೀಕಾರ ಕಾರ್ಯಾಚರಣೆಗಳು ಆರಂಭವಾಗಲಿವೆ ಎಂದು ಅದು ಎಚ್ಚರಿಕೆ ನೀಡಿದೆ. ಇದಕ್ಕೂ ಮುನ್ನವೂ ಇರಾನ್ ಇದೇ ರೀತಿಯ ಎಚ್ಚರಿಕೆ ನೀಡಿದ್ದರೂ, ಯಾವುದೇ ಸ್ಪಷ್ಟ ದಾಳಿ ನಡೆದಿರಲಿಲ್ಲ. ಆದರೆ ಈ ಬಾರಿ ಪರಿಸ್ಥಿತಿ ಹೆಚ್ಚು ಗಂಭೀರವಾಗಿದೆ ಎಂಬ ಆತಂಕ ವ್ಯಕ್ತವಾಗಿದೆ. ಇದಕ್ಕೆ ಪ್ರತಿಕ್ರಿಯೆಯಾಗಿ ಅಮೆರಿಕವೂ ಕಠಿಣ ನಿಲುವು ತಾಳಿದೆ. ಮುಂದಿನ ದಿನಗಳಲ್ಲಿ ನಾವು ತೀವ್ರ ರೀತಿಯಲ್ಲಿ ದಾಳಿ ನಡೆಸಲಿದ್ದೇವೆ. ಕೆಲವು ದಿನಗಳು ನಿರ್ಣಾಯಕವಾಗಿವೆ ಎಂದು ಹೇಳಿದೆ.



ಕಿರುಸುದ್ದಿ

ಟೆನಿಸ್ ದಂತಕಥೆ ಲಿಯಾಂಡರ್ ಬಿಜೆಪಿಗೆ

ಕೋಲ್ಕತ್ತಾ: ಭಾರತೀಯ ಟೆನಿಸ್ ದಂತಕಥೆ ಲಿಯಾಂಡರ್ ಪೇಸ್ ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ. ಪಶ್ಚಿಮ ಬಂಗಾಳ ಚುನಾವಣೆಗೂ ಮುನ್ನ ಈ ಬೆಳವಣಿಗೆ ನಡೆದಿದೆ. ಕೇಂದ್ರ ಸಚಿವ ಕಿರಣ್ ರಿಜಿಜು ಸೇರಿದಂತೆ ಪಕ್ಷದ ಹಿರಿಯ ನಾಯಕರ ಸಮ್ಮುಖದಲ್ಲಿ ಅವರು ಬಿಜೆಪಿ ಸೇರ್ಪಡೆಯಾಗಿದ್ದಾರೆ. ಟೆನಿಸ್ ತಾರೆ ಲಿಯಾಂಡರ್ ಪೇಸ್ ಇತ್ತೀಚೆಗೆ ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ನವೀನ್ ಅವರನ್ನು ಭೇಟಿಯಾದ ಬಳಿಕ ಅವರು ಬಿಜೆಪಿಗೆ ಸೇರ್ಪಡೆಯಾಗುತ್ತಾರೆಂಬ ಊಹಾಪೋಹಗಳು ಸೃಷ್ಟಿಯಾಗಿತ್ತು.

ಕಾಲ್ತುಳಿತ: 9 ಭಕ್ತರ ಸಾವು

ಪಾಟ್ನಾ: ಭಕ್ತರ ಸಂದಣಿಯಿಂದ ಬಿಹಾರದ ನಳಂದ ಜಿಲ್ಲೆಯ ಶೀತಲ ದೇವಸ್ಥಾನದಲ್ಲಿ ಉಂಟಾದ ಕಾಲ್ತುಳಿತದಲ್ಲಿ ಕನಿಷ್ಠ 9 ಮಹಿಳಾ ಭಕ್ತರು ಮೃತಪಟ್ಟಿದ್ದು, ಅನೇಕರು ಗಾಯಗೊಂಡಿದ್ದಾರೆ.ಧಾರ್ಮಿಕ ಸಭೆ ವೇಳೆ ಈ ದುರಂತ ಸಂಭವಿಸಿದೆ. ಮಹಾವೀರ ಜಯಂತಿ ಹಿನ್ನೆಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ನೆರೆದಿದ್ದರು. ಇದರಿಂದಾಗಿ ಜನದಟ್ಟಣೆ ಉಂಟಾಗಿದ್ದು, ಬ್ಯಾರಿಕೇಡ್ ಮುರಿದು, ಒಬ್ಬರ ಮೇಲೆ ಒಬ್ಬರಂತೆ ಕೆಳಗೆ ಬಿದ್ದಿದ್ದಾರೆ.

ಭಾರತದತ್ತ ಮತ್ತೆ ಇರಾನ್ ಕಚ್ಚಾ ತೈಲ ಹೊತ್ತ ಟ್ಯಾಂಕರ್

ಹೊಸದಿಲ್ಲಿ: ಆರು ವರ್ಷಗಳ ಹಿಂದೆ ಸ್ಥಗಿತಗೊಂಡಿದ್ದ ಇರಾನ್ ಮೂಲದ ಕಚ್ಚಾ ತೈಲ ಖರೀದಿ ಮತ್ತೆ ಆರಂಭವಾಗುವ ಲಕ್ಷಣಗಳು ಕಾಣಿಸುತಿವೆ. ಅಮೆರಿಕದ ತಾತ್ಕಾಲಿಕ ನಿರ್ಬಂಧ ಸಡಿಲಿಕೆ ಬೆನ್ನಲ್ಲೇ ಸುಮಾರು 6 ಲಕ್ಷ ಬ್ಯಾರೆಲ್ ಇರಾನಿಯನ್ ಕಚ್ಚಾ ತೈಲವನ್ನು ಹೊತ್ತ ಟ್ಯಾಂಕರ್ ಒಂದು ಗುಜರಾತ್ ತೀರದ ವಡಿನಾರ್ ಬಂದರಿಗೆ ಮುಖ ಮಾಡಿದೆ ಎಂಬ ಮಾಹಿತಿ ಹಡಗು ಟ್ರ್ಯಾಕಿಂಗ್ ಡೇಟಾದಿಂದ ತಿಳಿದು ಬಂದಿದೆ.

- ಗುಜರಾತ್ ತೀರಕ್ಕೆ ಮೊದಲ ಕಾರ್ಗೋ ಆಗಮನ ಸಾಧ್ಯತೆ

ಅಮೆರಿಕ ಸರ್ಕಾರ 30 ದಿನಗಳ ಅವಧಿಗೆ ಸಮುದ್ರದಲ್ಲಿರುವ ಇರಾನ್ ತೈಲ ಖರೀದಿಗೆ ಸಡಿಲಿಕೆ ನೀಡಿದ್ದು, ಇದರ ಪರಿಣಾಮವಾಗಿ ಭಾರತ ಸೇರಿ ಕೆಲ ದೇಶಗಳು ಮತ್ತೆ ಈ ತೈಲವನ್ನು ಖರೀದಿಸಲು ಮುಂದಾಗಿವೆ. ಈ ಹಿನ್ನೆಲೆ ಪಿಂಗ್ ಶುನ್ ಎಂಬ ಅಫ್ರಮ್ಯಾಕ್ಸ್ ಟ್ಯಾಂಕರ್ ಮಾರ್ಚ್ ಆರಂಭದಲ್ಲಿ ಖರ್ಗ್ ದ್ವೀಪದಿಂದ ಹೊರಟು ಏಪ್ರಿಲ್ 4ರಂದು ವಡಿನಾರ್ ತಲುಪುವ ನಿರೀಕ್ಷೆಯಿದೆ.

ಕಾಮೊಡಿಟಿ ಮಾರುಕಟ್ಟೆ ವಿಶ್ಲೇಷಕ ಸಂಸ್ಥೆ ಕ್ಲೆಪ್ಲರ್‌ನ ಸಂಶೋಧನಾ ವಿಶ್ಲೇಷಕ ಸುಮಿತ್ ರಿತೋಲಿಯಾ ಪ್ರಕಾರ, 2019ರ ಮೇ ಬಳಿಕ ಭಾರತಕ್ಕೆ ಬರುತ್ತಿರುವ ಮೊದಲ ಇರಾನಿಯನ್ ತೈಲ ಸರಕು ಇದು.

ಪಾವತಿ ಸಮಸ್ಯೆ ಮುಂದುವರಿಕೆ: ಅಮೆರಿಕ ನೀಡಿರುವ ಸಡಿಲಿಕೆ ಕೇವಲ ತಾತ್ಕಾಲಿಕವಾಗಿದ್ದು, ಏಪ್ರಿಲ್ 19ರವರೆಗೆ ಮಾತ್ರ ಮಾನ್ಯವಾಗಿದೆ. ಜಾಗತಿಕ ಬ್ಯಾಂಕಿಂಗ್ ಸಂಪರ್ಕ ವ್ಯವಸ್ಥೆಯಾದ ಸ್ವಿಫ್ಟ್‌ನಿಂದ ಇರಾನ್ ಹೊರಗಿಡಲ್ಪಟ್ಟಿರುವುದರಿಂದ ಪಾವತಿ ಹೇಗೆ ನಡೆಯಲಿದೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

ಅಸ್ಸಾಂ ಬಿಜೆಪಿ ಪ್ರಣಾಳಿಕೆ: ಏನಾಸಂ ಜಾರಿ ಭರವಸೆ

ಗುವಾಹಟಿ: ಮುಂಬರುವ ಅಸ್ಸಾಂ ವಿಧಾನಸಭಾ ಚುನಾವಣೆಗಾಗಿ ಭಾರತೀಯ ಜನತಾ ಪಾರ್ಟಿ ಮಂಗಳವಾರ ತನ್ನ ಪ್ರಣಾಳಿಕೆ ಬಿಡುಗಡೆ ಮಾಡಿದ್ದು, ಅಧಿಕಾರಕ್ಕೆ ಬಂದ ಮೂರು ತಿಂಗಳೊಳಗೆ ಏಕರೂಪ ನಾಗರಿಕ ಸಂಹಿತೆ (ಏನಾಸಂ) ಜಾರಿಗೆ ತರುವುದಾಗಿ ಭರವಸೆ ನೀಡಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ಮುಖ್ಯಮಂತ್ರಿ ಹಿಮಂತ ಬಿಸ್ವಶರ್ಮಾ, 31 ಭರವಸೆಗಳನ್ನೊಳಗೊಂಡ ಸಂಕಲ್ಪ ಪತ್ರವನ್ನು ಬಿಡುಗಡೆ ಮಾಡಿದರು. ಲವ್ ಜಿಹಾದ್ ಮತ್ತು 'ಲ್ಯಾಂಡ್ ಜಿಹಾದ್' ವಿರುದ್ಧ ಕಾನೂನು ತರುವುದಾಗಿ ಪಕ್ಷ ಪ್ರತಿಜ್ಞೆ ಮಾಡಿದೆ. ಬುಡಕಟ್ಟು ಸಮುದಾಯಗಳ ಅವರನ್ನು ಏನಾಸಂ ವ್ಯಾಪ್ತಿಯಿಂದ ಹೊರಗಿಡಲಾಗುವುದು, ಎಂದು ತಿಳಿಸಲಾಗಿದೆ.

ಅಕ್ರಮ ವಲಸಿಗರ ಪತ್ತೆಗೆ 'ವಲಸಿಗರ (ಅಸ್ಸಾಂನಿಂದ ಹೊರಹಾಕುವಿಕೆ) ಕಾಯ್ದೆ, 1950' ಅನ್ನು ಜಾರಿಗೆ ತರುವುದಾಗಿ ಪ್ರಣಾಳಿಕೆ ವಿವರಿಸಿದೆ. 'ಮಿಷನ್ ಬಸುಂಧರಾ' ಅನ್ವಯದಲ್ಲಿ ಅತಿಕ್ರಮಿತ ಭೂಮಿಯನ್ನು ಮುಕ್ತಗೊಳಿಸಿ ಅಧಿಕೃತ ನಾಗರಿಕರಿಗೆ ಹಕ್ಕುಗಳನ್ನು ನೀಡುವ, ಅತಿಕ್ರಮಣಕ್ಕೊಳಗಾದ ಧಾರ್ಮಿಕ ಸ್ಥಳಗಳನ್ನು ತೆರವುಗೊಳಿಸುವ ಭರವಸೆಯೂ ಒಳಗೊಂಡಿದೆ.

ಮೂಲಸೌಕರ್ಯಕ್ಕಾಗಿ 5 ಲಕ್ಷ ಕೋಟಿ ರೂ. ಮತ್ತು ಪ್ರವಾಹ ನಿಯಂತ್ರಣಕ್ಕಾಗಿ 18,000 ಕೋಟಿ ರೂ. ಹೂಡಿಕೆ ಮಾಡುವ ಪ್ರಸ್ತಾವನೆ ಇಡಲಾಗಿದೆ. 2 ಲಕ್ಷ ಸರ್ಕಾರಿ ಉದ್ಯೋಗಗಳು, ಅರುಣೋದೋಯ ಯೋಜನೆಯಡಿ ಮಾಸಿಕ ಧನಸಹಾಯವನ್ನು 3,000 ರೂ.ಗೆ ಏರಿಕೆ ಮತ್ತು ಚಹಾ ತೋಟದ ಕಾರ್ಮಿಕರ ದಿನಗೂಲಿಯನ್ನು 500 ರೂ.ಗೆ ಹೆಚ್ಚಿಸುವ ಭರವಸೆ ನೀಡಲಾಗಿದೆ.

ಇನ್‌ಫ್ಲುಯೆನ್ಸರ್ಸ್ ಮೇಲೆ ಕೇಂದ್ರದ ಹದ್ದಿನ ಕಣ್ಣು

ಹೊಸದಿಲ್ಲಿ: ಸಾರ್ವಜನಿಕ ಅಭಿಪ್ರಾಯ ಸಂಗ್ರಹಿಸುವುದಕ್ಕಾಗಿ ಹೊಸ ಐಟಿ (ಡಿಜಿಟಲ್) ನಿಯಮ 2026 ಕಾಯ್ದೆ ಕರಡು ಪ್ರತಿಯನ್ನು ಕೇಂದ್ರ ಸರ್ಕಾರ ಬಿಡುಗಡೆಗೊಳಿಸಿದೆ. ಇನ್‌ಫ್ಲುಯೆನ್ಸರ್‌ಗಳು ಮತ್ತು ವೈಯಕ್ತಿಕ ಬಳಕೆದಾರರು ಅಪ್ಲೋಡ್ ಮಾಡುವ ಡಿಜಿಟಲ್ ಕಂಟೆಂಟ್ ಮೇಲೆ ಹೆಚ್ಚಿನ ನಿಗಾ ಇರಿಸುವುದಕ್ಕಾಗಿ ಕೇಂದ್ರ ಸರ್ಕಾರ ಹೊಸ ಐಟಿ ಕಾಯ್ದೆಯನ್ನು ಪರಿಚಯಿಸಲು ಮುಂದಾಗಿದೆ.

- ಸರ್ಕಾರ ಅಥವಾ ಕೋರ್ಟ್ ಆದೇಶಿಸಿದರೆ 3 ಗಂಟೆಗಳಲ್ಲಿ ಪೋಸ್ಟ್ ಅಳಿಸಿಹಾಕಬೇಕು (ಈ ಹಿಂದೆ 36 ಗಂಟೆಗಳಲ್ಲಿ)
- ಡೀಪ್‌ಫೇಕ್ ನಗ್ನತೆ ಅಥವಾ ದ್ವೇಷಪೂರಿತ ನೀಲಿ ಚಿತ್ರಗಳ ಪೋಸ್ಟ್ ಅನ್ನು 2 ಗಂಟೆಗಳಲ್ಲಿ ಅಳಿಸಿಹಾಕಬೇಕು
- ಡೀಪ್‌ಫೇಕ್ ಪ್ರಕರಣದಲ್ಲಿ 3 ವರ್ಷ ಜೈಲು ಮತ್ತು ದಂಡ, ಕಂಟೆಂಟ್ ನಗ್ನತೆಯಿಂದ ಕೂಡಿದ್ದರೆ 5 ವರ್ಷ ಜೈಲು
- ಎಐ ಸುದ್ದಿ ವಿಡಿಯೋ, ವಾಯ್ಸ್ ಓವರ್ ಅಥವಾ ಚಿತ್ರಗಳನ್ನು ಪೋಸ್ಟ್ ಮಾಡುವ ಕ್ರಿಯೇಟರ್ಸ್ ಅದರಲ್ಲಿ ಎಐ-ಜನರೇಟೆಡ್ ವಾಟರ್‌ಮಾರ್ಕ್ ಬಳಸುವುದು ಕಡ್ಡಾಯ
- ವಯೋಮಾನ ಆಧಾರಿತ ಡಿಜಿಟಲ್ ಕಂಟೆಂಟ್ ಜಾರಿಗೆ ಬರಲಿದ್ದು, ಯು (ಯುನಿವರ್ಸಲ್), 7+, 13+, 16+ ಅಥವಾ ಎ(ಅಡಲ್ಟ್) ಲೇಬಲ್ ಬಳಕೆ ಸಾಧ್ಯತೆಯಿದೆ.
- ಕೋಮು ಗಲಭೆ ಅಥವಾ ಚುನಾವಣೆ ವೇಳೆ ಸರ್ಕಾರಿ ನಿರ್ದೇಶ ಉಲ್ಲಂಘಿಸುವುದು ಐಟಿ ನಿಯಮ ಉಲ್ಲಂಘನೆ ಎನಿಸಿಕೊಳ್ಳಲಿದೆ.

ಬಿಇಎಲ್ ಜತೆ ₹1,950 ಕೋಟಿ ಒಪ್ಪಂದಕ್ಕೆ ಸಹಿ

ಹೊಸದಿಲ್ಲಿ: ಅತಿ ಸೂಕ್ಷ್ಮ ಸಂವೇದಿ ಗಡಿ ವಲಯಗಳಲ್ಲಿ ದೇಶದ ವಾಯು ರಕ್ಷಣಾ ಸಾಮರ್ಥ್ಯಗಳ ಬಲವರ್ಧನೆಗಾಗಿ ಭಾರತ ಸರಕಾರ ಅತ್ಯಂತ ಮಹತ್ವದ ಹೆಜ್ಜೆಯಿರಿಸಿದೆ .ಇದರಂಗ ದುರ್ಗಮ ಪರ್ವತ ಪ್ರದೇಶಗಳಲ್ಲಿ ಸುಲಭವಾಗಿ ಸಾಗಣೆಯೂ ಸಾಧ್ಯವಿರುವ ಎರಡು ರಾಡಾರ್‌ಗಳ ಖರೀದಿ ಮತ್ತು ಇವುಗಳಿಗೆ ಸಂಬಂಧಿಸಿದ ಮೂಲಸೌಕರ್ಯಗಳ ಒದಗಣೆಗಾಗಿ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ಜತೆ 1950ಕೋಟಿ ರೂ.ಮೊತ್ತದ ಒಪ್ಪಂದಕ್ಕೆ ಸರಕಾರ ಸಹಿ ಹಾಕಿದೆ.

ಅತ್ಯೆತ್ತರದ ದುರ್ಗಮ ಪರ್ವತ ಪ್ರದೇಶಗಳಲ್ಲಿ ಸಾಂಪ್ರದಾಯಿಕ ರಾಡಾರ್‌ಗಳ ಲಭ್ಯತೆ ತೀರಾ ಸೀಮಿತವಿದೆ. ಇಂತಹ ಪ್ರದೇಶಗಳಲ್ಲಿ ವಿಮಾನ, ಹೆಲಿಕಾಪ್ಟರ್‌ಗಳು, ಡ್ರೋನ್‌ಗಳ ಮುಖೇನ ಎದುರಾಗುವ ಯಾವುದೇ ಬೆದರಿಕೆಗಳ ಪತ್ತೆ ಮಾಡಲು ಪ್ರಸ್ತಾವಿತ ಪರ್ವತ ರಾಡಾರ್‌ಗಳು ತುಂಬು ಪೂರಕವಾಗಲಿದೆ.

ಕೇರಳ ವಿಧಾನಸಭೆ: ಆರೋಗ್ಯ ಕಾರ್ಡ್, ಶಬರಿಮಲೆ ತನಿಖೆ ಸಿಬಿಐಗೆ ಸೇರಿ ಹಲವು ಭರವಸೆ

ಬಿಜೆಪಿ ಚುನಾವಣಾ ಪ್ರಣಾಳಿಕೆ ಬಿಡುಗಡೆ

ತಿರುವನಂತಪುರಂ: ಕೇರಳ ವಿಧಾನಸಭಾ ಚುನಾವಣೆಗಾಗಿ ಬಿಜೆಪಿ ತನ್ನ ಪ್ರಣಾಳಿಕೆಯನ್ನು ಮಂಗಳವಾರ ಬಿಡುಗಡೆಗೊಳಿಸಿದ್ದು, ಇದರಂತೆ, ಅನೇಕ ಅಭಿವೃದ್ಧಿ ಯೋಜನೆ, ಆರೋಗ್ಯ ಸಂಬಂಧಿ ಯೋಜನೆ ಮತ್ತು ಮೂಲ ಸೌಕರ್ಯ ಒದಗಿಸುವ ಬಗ್ಗೆ ಜನತೆಗೆ ಭರವಸೆ ನೀಡಿದೆ.

ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರು ಇಲ್ಲಿನ ಇಡಪಳಂಜಿಯಲ್ಲಿನ ಆರ್‌ಡಿಆರ್ ಕನ್ವೆನ್ಷನ್ ಸೆಂಟರ್‌ನಲ್ಲಿ ನಡೆದ ಸಮಾರಂಭದಲ್ಲಿ ಬಿಜೆಪಿಯ ಕೇರಳ ಚುನಾವಣಾ ಪ್ರಣಾಳಿಕೆಯನ್ನು ಬಿಡುಗಡೆಗೊಳಿಸಿದರು.

ಕೇರಳದಲ್ಲಿ ಬಿಜೆಪಿ ಈ ಬಾರಿ ಬೃಹತ್ ಸಾಧನೆಯ ಗುರಿ ಹೊಂದಿ ಕೆಲಸ ಮಾಡುತ್ತಿದ್ದು, 2026ರ ವಿಧಾನಸಭಾ ಚುನಾವಣೆಯಲ್ಲಿ ಅತ್ಯಂತ ಪ್ರಬಲ ಶಕ್ತಿಯಾಗಿ ಮೂಡಿಬಂದಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ''ವಿಕಸಿತ ಕೇರಳಂ''ನ ಧ್ಯೇಯದೊಂದಿಗೆ ಕೇರಳದ ಆರ್ಥಿಕ ಬೆಳವಣಿಗೆ ಮತ್ತು ಕೇರಳದ ಅಸ್ಮಿತೆಗಳನ್ನು ರಕ್ಷಿಸುವ ನಿರ್ದಿಷ್ಟ ಭರವಸೆಗಳೊಂದಿಗೆ ಆಳುವ ಎಡರಂಗ ಮತ್ತು ಕಾಂಗ್ರೆಸ್ ನೇತೃತ್ವದ ಯುಡಿಎಫ್‌ಗೆ ಪರ್ಯಾಯ



ಪಕ್ಷವಾಗಿ ಬಿಜೆಪಿ ಮೂಡಿಬಂದಿದೆ.

ಶಬರಿಮಲೆ ತನಿಖೆ: ಕೇರಳದ ಹಿಂದುಗಳ ಪರಮಪವಿತ್ರ ಕ್ಷೇತ್ರವಾದ ಶಬರಿಮಲೆ ಶ್ರೀ ಅಯ್ಯಪ್ಪ ದೇವಾಲಯದಲ್ಲಿ ಭಕ್ತರ ಕಾಣಿಕೆ, ಚಿನ್ನದ ಹೊದಿಕೆ ಲೂಟಿಯಂತಹ ಹೀನ ಪ್ರಕರಣಗಳು ನಡೆದಿರುವುದು ಹಿಂದುಗಳಲ್ಲಿ ತೀವ್ರ ಆಘಾತ ತಂದಿರುವಂತೆಯೇ, ಶಬರಿಮಲೆಯಲ್ಲಿ ನಡೆದ ಚಿನ್ನ ಲೂಟಿ ಹಗರಣಗಳ ಕುರಿತಂತೆ ಕಾಲಮಿತಿಯ ಸಿಬಿಐ ತನಿಖೆ ನಡೆಸುವ ಮತ್ತು ದೇವಾಲಯಗಳ ಆಡಳಿತದಲ್ಲಿ ಭಕ್ತರ ಹೆಚ್ಚಿನ ಪಾಲ್ಗೊಳ್ಳುವಿಕೆ ಹಾಗೂ ಭ್ರಷ್ಟಾಚಾರಕ್ಕೆ ತಡೆಹಾಕುವ ಮೂಲಕ ದೇವಸ್ವಂ ಮಂಡಳಿಗಳನ್ನು ಪುನರಾಚಿಸುವ ಬಗೆಗೂ ಬಿಜೆಪಿ ಸ್ಪಷ್ಟ ಭರವಸೆ ನೀಡುವ ಮೂಲಕ ಅಯ್ಯಪ್ಪ ಭಕ್ತರ ಕಳವಳಕ್ಕೆ ಸ್ಪಂದನ ನೀಡಿದೆ.

ಬಡವರು ಮತ್ತು ಮಹಿಳೆಯರ ಅಭಿವೃದ್ಧಿಗೆ ಒತ್ತು ನೀಡಿರುವ ಪ್ರಣಾಳಿಕೆಯು ,ಬಡ-ದುರ್ಬಲ ವರ್ಗದ ಕುಟುಂಬಗಳಿಗಾಗಿ ಅಭಿವೃದ್ಧಿ ಯೋಜನೆಗಳು ಮತ್ತು ಬಡಕುಟುಂಬದ ಮುಖ್ಯಸ್ಥರಾಗಿರುವ ಮಹಿಳೆಯರು, ವಿಧವೆಯರು, 70ಕ್ಕಿಂತ ಮೇಲಿನ ಹಿರಿಯ ನಾಗರಿಕ ಮಹಿಳೆಯರಿಗೆ ತಿಂಗಳಿಗೆ 3000ರೂ.ಗಳ ಪಿಂಚಣಿ ಯೋಜನೆಯೊಂದನ್ನು ಪ್ರಕಟಿಸಿದೆ.

ಇನ್ನೊಂದು ಪ್ರಮುಖ ಭರವಸೆಯಂತೆ, ಬಡ ಮತ್ತು ಬಿಪಿಎಲ್ ಕುಟುಂಬಗಳ ಮಹಿಳೆಯರಿಗಾಗಿ ''ಭಕ್ಷ್ಯ ಆರೋಗ್ಯ ಸುರಕ್ಷಾ ಕಾರ್ಡ್''ಯೋಜನೆಯೊಂದನ್ನು ಘೋಷಿಸಿದೆ. ಇದರಂತೆ ತಿಂಗಳಿಗೆ 2,500ರೂ.ಗಳ ಮಾಸಿಕ ರಿಚಾರ್ಜ್ ಕಾರ್ಡ್ ಒದಗಿಸಲಾಗುತ್ತದೆ. ಈ ಕಾರ್ಡಿನ ಮೂಲಕ ಈ ಬಡ ಕುಟುಂಬಗಳು ತಮಗೆ ಅಗತ್ಯವಿರುವ ದಿನಸಿಗಳು ಮತ್ತು ಔಷಧಗಳನ್ನು ಖರೀದಿಸಬಹುದಾಗಿದೆ.

ಭಾರತದ ಮೋಸ್ಟ್ ವಾಂಟೆಡ್ ಉಗ್ರ | ಹಲವು ದಾಳಿಯ ಕಿಂಗ್‌ಪಿನ್

ಮಸೂದ್ ಅಜರ್ ಸಹೋದರ ಹತ್ಯೆ

ಹೊಸದಿಲ್ಲಿ: ಜೈಶ್-ಎ-ಮೊಹಮ್ಮದ್ ಮುಖ್ಯಸ್ಥ ಮೌಲಾನಾ ಮಸೂದ್ ಅಜರ್‌ನ ಹಿರಿಯ ಸಹೋದರ, ಭಾರತಕ್ಕೆ ಮೋಸ್ಟ್ ವಾಂಟೆಡ್ ಆಗಿದ್ದ ಉಗ್ರ ಮೊಹಮ್ಮದ್ ತಾಹಿರ್ ಅನ್ವರ್‌ನನ್ನೇ ಅನಾಮದೇಯರು ಹೊಡೆದುರುಳಿಸಿದ್ದಾರೆ.ಈತ ಭಾರತದಲ್ಲಿ ಹಲವು ಉಗ್ರ ದಾಳಿ ನಡೆಸುವಲ್ಲಿ ಪ್ರಮುಖ ಪಾತ್ರವಹಿಸಿದ್ದನು.

ಅನ್ವರ್ ಅಂತಾರಾಷ್ಟ್ರೀಯ ಭಯೋತ್ಪಾದಕ ಮಸೂದ್ ಅಜರ್‌ನ ಐವರು ಸಹೋದರರಲ್ಲಿ ಒಬ್ಬ. ನಿಷೇಧಿತ ಸಂಘಟನೆ ಜೈಶ್-ಎ-ಮೊಹಮ್ಮದ್‌ನ ಕಾರ್ಯಾಚರಣೆಗಳಲ್ಲಿ ಈತನೂ ಪ್ರಮುಖ ಪಾತ್ರ ವಹಿಸಿದ್ದ. ಅನ್ವರ್‌ನ ಅಂತ್ಯಕ್ರಿಯೆ ಪಾಕಿಸ್ತಾನದ ಬಹಾವಲ್ಪುರದ ಜಾಮಿಯಾ ಮಸೀದಿ ಉಸ್ಮಾನ್ ವಾಲಿಯಲ್ಲಿ ಸೋಮವಾರ ನಡೆದಿದೆ. ಪಾಕಿಸ್ತಾನದ ಅಧಿಕಾರಿಗಳಾಗಲಿ ಅಥವಾ ಜೈಶ್-ಎ-ಮೊಹಮ್ಮದ್ ಸಂಘಟನೆಯ ಅಧಿಕೃತ



ಮೂಲಗಳಾಗಲಿ ಆತನ ಸಾವಿಗೆ ದೀರ್ಘಕಾಲದ ಕಾಯಿಲೆ ಅಥವಾ ಹಠಾತ್ ವೈದ್ಯಕೀಯ ತುರ್ತು ಪರಿಸ್ಥಿತಿಯಂತಹ ಯಾವುದೇ ನಿರ್ದಿಷ್ಟ ಕಾರಣವನ್ನು ಉಲ್ಲೇಖಿಸಿಲ್ಲ. ಕೆಲವು ವರದಿಗಳು, ಆತ, ಇತ್ತೀಚೆಗೆ ಸ್ಥಾಪಿಸಲಾದ ಸಂಘಟನೆಯ ಮಹಿಳಾ ವಿಭಾಗ 'ಜಮಾತ್-ಉನ್-ಮೊಮಿನಾತ್' ಕೇಂದ್ರದಲ್ಲಿ ಅಥವಾ ಅದರ ಸಮೀಪ ಮೃತಪಟ್ಟಿರಬಹುದು ಎಂದಿವೆ.

ಕುಟುಂಬ ಸದಸ್ಯರ ಸಾವು: ಕಳೆದ ವರ್ಷ ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತಿಯಾಗಿ ಭಾರತ ನಡೆಸಿದ 'ಆಪರೇಷನ್ ಸಿಂದೂರ್'ನ ವೈಮಾನಿಕ ದಾಳಿಯಲ್ಲಿ ತನ್ನ ಕುಟುಂಬದ 10 ಸದಸ್ಯರು ಮತ್ತು ನಾಲ್ವರು ಸಹಚರರು ಮೃತಪಟ್ಟಿದ್ದರು ಎಂದು ಮಸೂದ್ ಅಜರ್ ಹೇಳಿಕೊಂಡಿದ್ದ.

ಮಸೂದ್ ಅಜರ್ ಹಿನ್ನೆಲೆ: ಮಸೂದ್ ಅಜರ್ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಿಂದ ಪಟ್ಟಿ ಮಾಡಲ್ಪಟ್ಟ ಅಂತಾರಾಷ್ಟ್ರೀಯ ಭಯೋತ್ಪಾದಕ.

1994 ರಲ್ಲಿ ಭಾರತ ಈತನನ್ನು ಬಂಧಿಸಿತ್ತಾದರೂ, ಏರ್ ಇಂಡಿಯಾ ವಿಮಾನ ಐಸಿ 814 ರ ಅಪಹರಣದ ನಂತರ ಬಿಡುಗಡೆ ಮಾಡಲಾಗಿತ್ತು. ಈತ 2001 ರ ಸಂಸತ್ ಭವನದ ದಾಳಿ, 2008 ರ ಮುಂಬೈ ದಾಳಿ, 2016 ರ ಪಠಾಣ್‌ಕೋಟ್ ದಾಳಿ ಮತ್ತು 2019 ರ ಪುಲ್ವಾಮಾ ದಾಳಿ ಸೇರಿದಂತೆ ಹಲವು ಪಿತೂರಿಗಳಲ್ಲಿ ಭಾಗಿಯಾಗಿದ್ದಾನೆ.

ಕಾಂಗ್ರೆಸ್ ಸರ್ಕಾರಕ್ಕೆ ರಾಜ್ಯದ ಅಭಿವೃದ್ಧಿ ಬಗ್ಗೆ ಗಮನವಿಲ್ಲ | ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ವಿರುದ್ಧ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ವಾಗ್ದಾಳಿ

ಸರ್ಕಾರದ ಆಡಳಿತಕ್ಕೆ ಬೇಸತ್ತು ಉಪಚುನಾವಣೆಯಲ್ಲಿ ಜನರಿಂದ ತಕ್ಕಪಾಠ

ದಾವಣಗೆರೆ: ರಾಜ್ಯದಲ್ಲಿನ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರ ಮತ್ತು ಆಡಳಿತ ವೈಫಲ್ಯಗಳಿಂದ ಬೇಸತ್ತಿರುವ ಜನರು ಉಪಚುನಾವಣೆಗಳಲ್ಲಿ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿಶ್ವಾಸ ವ್ಯಕ್ತಪಡಿಸಿದರು.

ಮಂಗಳವಾರ ಸಂಜೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರಕ್ಕೆ ರಾಜ್ಯದ ಅಭಿವೃದ್ಧಿ ಬಗ್ಗೆ ಗಮನವಿಲ್ಲ, ಲೂಟಿ ಹೊಡೆಯುವುದೇ ಸರ್ಕಾರದ ಸಾಧನೆ ಆಗಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿವೃದ್ಧಿಗೆ ಮೀಸಲಿಟ್ಟಿದ್ದ ಸಾವಿರಾರು ಕೋಟಿ ರೂಪಾಯಿ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಲಾಗಿದೆ. ಇದರಿಂದ ದಲಿತ ಸಮುದಾಯಕ್ಕೆ ಅನ್ಯಾಯವಾಗಿದೆ. ಬಿಜೆಪಿ ಜಾರಿಗೆ ತಂದಿದ್ದ ಕಿಸಾನ್ ಸಮ್ಮಾನ್ ಯೋಜನೆಯನ್ನು ಸ್ಥಗಿತಗೊಳಿಸುವ ಮೂಲಕ ರೈತರಿಗೂ ದ್ರೋಹ ಎಸಗಿದೆ ಎಂದು ದೂರಿದರು.

ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಭಾರಿ ಹಗರಣ ನಡೆದಿದ್ದು, ಹಣವನ್ನು ಬೇರೆ ರಾಜ್ಯದ ಚುನಾವಣೆಗೆ ಬಳಸಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಚಿವರೊಬ್ಬರು ರಾಜೀನಾಮೆ ಕೂಡ ನೀಡಿದ್ದಾರೆ. ಇದೆಲ್ಲದರ ಹಿನ್ನೆಲೆಯಲ್ಲಿ ದಾವಣಗೆರೆ ಹಾಗೂ ಬಾಗಲಕೋಟೆ ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಜಯ ಸಾಧಿಸಲಿದ್ದಾರೆ ಎಂದರು.

ದಾವಣಗೆರೆಯ ಅಭಿವೃದ್ಧಿಗೆ ಕೇಂದ್ರ ಸರ್ಕಾರದಿಂದ ಸಾವಿರಾರು ಕೋಟಿ ರೂ. ಅನುದಾನ ಬಂದಿದ್ದರೂ, ರಾಜ್ಯ ಸರ್ಕಾರ ಅದನ್ನು ಸಮರ್ಪಕವಾಗಿ ಬಳಸಿಕೊಂಡಿಲ್ಲ, ಪ್ರಸಕ್ತ ಉಪಚುನಾವಣೆ ಕೇವಲ



ಜನಪ್ರತಿನಿಧಿಯನ್ನು ಆಯ್ಕೆ ಮಾಡುವುದಕ್ಕಷ್ಟೇ ಸೀಮಿತವಲ್ಲ. ಇದು ರಾಜ್ಯದ ಭವಿಷ್ಯವನ್ನು ನಿರ್ಧರಿಸುವ ಚುನಾವಣೆ. ಭ್ರಷ್ಟಾಚಾರಮುಕ್ತ ಆಡಳಿತಕ್ಕಾಗಿ ಜನರು ಬಿಜೆಪಿಯನ್ನು ಬೆಂಬಲಿಸಬೇಕು ಎಂದು ಅವರು ಮನವಿ ಮಾಡಿದರು.

ಮಾಜಿ ಮುಖ್ಯಮಂತ್ರಿ, ಹಾವೇರಿ ಸಂಸದ ಬಸವರಾಜ ಬೊಮ್ಮಾಯಿ ಮಾತನಾಡಿ, ಕಾಂಗ್ರೆಸ್ ಸರ್ಕಾರದಲ್ಲಿ ಆಡಳಿತ ಹಾಗೂ ಆರ್ಥಿಕ ಶಿಸ್ತು ಸಂಪೂರ್ಣವಾಗಿ ಕುಸಿದಿದೆ. ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ನಂತರ ರಾಜ್ಯದಲ್ಲಿ ಟ್ಯಾಕ್ಸ್ ಟೆರರಿಸಂ ಆರಂಭವಾಗಿದೆ. ಮದ್ಯ, ಹಾಲು, ವಿದ್ಯುತ್ ಸೇರಿದಂತೆ ಅಗತ್ಯ ವಸ್ತುಗಳ ಮೇಲಿನ ತೆರಿಗೆ ಹೆಚ್ಚಳದಿಂದ ಜನರ ಬದುಕು ದುಸ್ತರವಾಗಿದೆ. ಕಳೆದ ಮೂರು ವರ್ಷಗಳಲ್ಲಿ ಸುಮಾರು 60,000 ಕೋಟಿಗೂ ಅಧಿಕ ಹೊಸ ತೆರಿಗೆಗಳನ್ನು ಜನರ ಮೇಲೆ ಹೇರಲಾಗಿದೆ ಎಂದು ಆರೋಪಿಸಿದರು.

ಕಾಂಗ್ರೆಸ್ ಸರ್ಕಾರ ಸುಮಾರು 5 ಲಕ್ಷ ಕೋಟಿ ಹೊಸ ಸಾಲ ಮಾಡಿದೆ. ಇದರಿಂದ ರಾಜ್ಯದ ಆರ್ಥಿಕ ಪರಿಸ್ಥಿತಿ ಸಂಕಷ್ಟಕ್ಕೆ ಸಿಲುಕಿದೆ. ಸರ್ಕಾರದ ಪ್ರತಿಯೊಂದು

> **ಕಾಂಗ್ರೆಸ್ ಸರ್ಕಾರ ಸುಮಾರು 5 ಲಕ್ಷ ಕೋಟಿ ಹೊಸ ಸಾಲ ಮಾಡಿದೆ. ಇದರಿಂದ ರಾಜ್ಯದ ಆರ್ಥಿಕ ಪರಿಸ್ಥಿತಿ ಸಂಕಷ್ಟಕ್ಕೆ ಸಿಲುಕಿದೆ. ಸರ್ಕಾರದ ಪ್ರತಿಯೊಂದು ಹಂತದಲ್ಲೂ ಭ್ರಷ್ಟಾಚಾರ ವ್ಯಾಪಿಸಿದೆ.**
> ■ **ಬಸವರಾಜ ಬೊಮ್ಮಾಯಿ, ಮಾಜಿ ಸಿಎಂ**

ಹಂತದಲ್ಲೂ ಭ್ರಷ್ಟಾಚಾರ ವ್ಯಾಪಿಸಿದೆ. ಭೂ ಪರಿವರ್ತನೆ, ನೋಂದಣಿ ಪ್ರಕ್ರಿಯೆ, ಕಚೇರಿಗಳಲ್ಲಿ ವರ್ಗಾವಣೆ ದಂಧೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಲಂಚದ ವ್ಯವಹಾರ ಹೆಚ್ಚಾಗಿದೆ. ಅನ್ನಭಾಗ್ಯ ಯೋಜನೆಯಲ್ಲೂ ಅಕ್ರಮಗಳು ನಡೆಯುತ್ತಿವೆ. ವಿದ್ಯುತ್ ಮೀಟರ್ ಖರೀದಿಯಲ್ಲಿಯೂ ಭ್ರಷ್ಟಾಚಾರವಾಗಿದೆ ಎಂದು ಅವರು ಆಪಾದಿಸಿದರು.

ರಾಜ್ಯದಲ್ಲಿನ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿ ಭ್ರಷ್ಟಾಚಾರ ಹೆಚ್ಚಾಗಿದೆ. ಜನಸಾಮಾನ್ಯರ ಮೇಲೆ ಭಾರೀ ತೆರಿಗೆ ಹೊರೆ ಹಾಕಲಾಗಿದೆ. ಹೀಗಾಗಿ ಉಪಚುನಾವಣೆಯಲ್ಲಿ ಕಾಂಗ್ರೆಸ್ ಸರ್ಕಾರದ ವಿರುದ್ಧ ಜನರು ತೀರ್ಪು ನೀಡಲಿದ್ದಾರೆ ಎಂದರು.

ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ, ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ.ಎ.ಹೆಚ್. ಶಿವಯೋಗಿಸ್ವಾಮಿ, ಬಿಜೆಪಿ ಜಿಲ್ಲಾಧ್ಯಕ್ಷ ಎನ್. ರಾಜಶೇಖರ ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

ದಾವಣಗೆರೆ, ಬಾಗಲಕೋಟೆಯಲ್ಲಿ ಬಿಜೆಪಿ ಜಯ ಖಚಿತ

ದಾವಣಗೆರೆ: ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಗಳು ರಾಜ್ಯ ರಾಜಕೀಯದಲ್ಲಿ ಮಹತ್ವದ ತಿರುವು ತರಲಿದ್ದು, ಈ ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು ಮುಂಬರುವ ಸಾರ್ವತ್ರಿಕ ಚುನಾವಣೆಗೆ ದಿಕ್ಸೂಚಿಯಾಗಲಿದೆ ಎಂದು ಶಾಸಕ ವಿ.ಸುನಿಲ್ ಕುಮಾರ್ ಹೇಳಿದರು.

ನಗರದಲ್ಲಿ ಮಂಗಳವಾರ ನಡೆದ ಪಕ್ಷದ ಪ್ರಮುಖರು ಮತ್ತು ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಉಪಚುನಾವಣೆಗಳು ಕೇವಲ ಕ್ಷೇತ್ರ ಮಟ್ಟಕ್ಕೆ ಸೀಮಿತವಾಗಿಲ್ಲ. ರಾಜ್ಯದ ರಾಜಕೀಯ ಭವಿಷ್ಯವನ್ನು ನಿರ್ಧರಿಸುವಂತಿವೆ. ಉಪಚುನಾವಣೆಯ ಕಾವು ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಕಾರ್ಯಕರ್ತರು ನಿರ್ಮಿಸಿರುವ ಉತ್ಸಾಹಭರಿತ ವಾತಾವರಣವು ಬಿಜೆಪಿ ಗೆಲುವಿನ ಸೂಚಕವಾಗಿದೆ. ರಾಜ್ಯದ ಎಲ್ಲೆಡೆಯಿಂದ ಕಾರ್ಯಕರ್ತರು ಈ ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ಗೆಲ್ಲಬೇಕು ಎಂಬ ದೃಢ ಸಂಕಲ್ಪದೊಂದಿಗೆ ಕೆಲಸ ಮಾಡುತ್ತಿದ್ದಾರೆ ಎಂದರು.

ಪಕ್ಷವು ಯಾವುದೇ ಶ್ರೀಮಂತರು ಅಥವಾ ಪ್ರಭಾವಿಗಳಿಗಿಂತಲೂ ಸಾಮಾನ್ಯ ಕುಟುಂಬದಿಂದ ಬಂದ ನಿಷ್ಠಾವಂತ ಕಾರ್ಯಕರ್ತನಿಗೆ ದಾವಣಗೆರೆ ದಕ್ಷಿಣದಲ್ಲಿ ಟಿಕೆಟ್ ನೀಡಿರುವುದು ವಿಶೇಷ. ಹೀಗಾಗಿ ಪ್ರತಿಯೊಬ್ಬ ಕಾರ್ಯಕರ್ತನು



ತಾನೇ ಅಭ್ಯರ್ಥಿ ಎಂಬ ಭಾವನೆಯೊಂದಿಗೆ ಜವಾಬ್ದಾರಿಯಿಂದ ಕೆಲಸ ಮಾಡಬೇಕು. ಈ ಉಪಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ್ ದಾಸಕರಿಯಪ್ಪ ಗೆದ್ದರೆ ಅದು ಕೇವಲ ಒಬ್ಬ ಶಾಸಕರ ಗೆಲುವಲ್ಲ, ಭ್ರಷ್ಟ ಕಾಂಗ್ರೆಸ್ ಸರ್ಕಾರದ ಪತನದ ಆರಂಭವಾಗಲಿದೆ. ಈ ಸಂದೇಶವನ್ನು ಮತದಾರರಿಗೆ ತಲುಪಿಸುವ ಜವಾಬ್ದಾರಿ ಕಾರ್ಯಕರ್ತರ ಮೇಲಿದೆ ಎಂದು ಅವರು ತಿಳಿಸಿದರು.

ನಾನು ನಾಲ್ಕು ಬಾರಿ ಶಾಸಕನಾಗಿದ್ದರೂ, ಕ್ಷೇತ್ರದ ಅಭಿವೃದ್ಧಿ ವಿಷಯವಾಗಿ ಉಸ್ತುವಾರಿ ಸಚಿವರನ್ನು ಭೇಟಿಯಾಗಲು ಸಾಧ್ಯವಾಗಿಲ್ಲ. ಓರ್ವ ಶಾಸಕನಿಗೂ ಅವಕಾಶ ಸಿಗದಿದ್ದರೆ, ಸಾಮಾನ್ಯ ಜನರ ಸಮಸ್ಯೆಗಳಿಗೆ ಸ್ಪಂದನೆ ಸಿಗುವುದು ಹೇಗೆ? ಕಾಂಗ್ರೆಸ್ ಹಣದ ಬಲದಿಂದ ಮತದಾರರನ್ನು ಪ್ರಭಾವಿಸಲು ಯತ್ನಿಸುತ್ತಿದೆ. ಮತದಾರರು ಯಾವುದೇ ಆಮಿಷಗಳಿಗೆ ಒಳಗಾಗಬಾರದು. ಒಂದು ವೇಳೆ ಹಣ ನೀಡಿದರೂ, ಮತ ಮಾತ್ರ ಬಿಜೆಪಿಗೆ ನೀಡುವ ಮೂಲಕ ಕಾಂಗ್ರೆಸ್ಸಿಗೆ ತಕ್ಕ ಪಾಠ ಕಲಿಸಬೇಕು. ಇನ್ನುಳಿದಿರುವ ದಿನಗಳಲ್ಲಿ ಕಾರ್ಯಕರ್ತರು ಶ್ರಮಪಟ್ಟು, ಒಗ್ಗಟ್ಟಿನಿಂದ ಕೆಲಸ ಮಾಡಿದರೆ ಬಿಜೆಪಿ ಗೆಲುವು ಖಚಿತ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ, ಪಕ್ಷದ ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್, ಸ್ವಾಭಿಮಾನಿ ಬಳಗದ ರಾಜ್ಯಾಧ್ಯಕ್ಷ ಜಿ.ಬಿ.ವಿನಯಕುಮಾರ ಹಾಜರಿದ್ದರು.

ಬಿಜೆಪಿ ಪ್ರಣಾಳಿಕೆ ಬಿಡುಗಡೆ ಕಾರ್ಯಕ್ರಮದಲ್ಲಿ ವಿಪಕ್ಷ ನಾಯಕ ಆರ್. ಅಶೋಕ್ ವಾಗ್ದಾಳಿ

ಕಾಂಗ್ರೆಸ್‌ನಲ್ಲಿ ನಿಷ್ಠಾವಂತ ಕಾರ್ಯಕರ್ತರಿಗೆ ಇಲ್ಲ ಬೆಲೆ



ದಾವಣಗೆರೆ: ಶಾಮನೂರು ಕುಟುಂಬದಲ್ಲೇ ಮಂತ್ರಿ, ಸಂಸದರು ಇದ್ದರೂ, ಇದೀಗ ಮೂರನೇ ತಲೆಮಾರಿಗೆ ಕಾಂಗ್ರೆಸ್ ಟಿಕೆಟ್ ನೀಡಿದೆ. ಇದೇ ಸ್ಥಿತಿ ಮುಂದುವರೆದರೆ ನಿಷ್ಠಾವಂತ ಕಾರ್ಯಕರ್ತರ ಮುಂದಿನ ತಲೆಮಾರಿಗೂ ಅವಕಾಶ ಸಿಗುವುದಿಲ್ಲ. ಕಾಂಗ್ರೆಸ್ ಸೋತರೆ ಮಾತ್ರ ಕಾರ್ಯಕ್ರರ್ತರಿಗೆ ಭವಿಷ್ಯವಿದೆ ಎಂದು ವಿಧಾನಸಭಾ ವಿಪಕ್ಷ ನಾಯಕ ಆರ್.ಅಶೋಕ್ ತಿಳಿಸಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಮಂಗಳವಾರ ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆ ಹಿನ್ನೆಲೆಯಲ್ಲಿ ಪಕ್ಷದ ಪ್ರಣಾಳಿಕೆ ಬಿಡುಗಡೆಗೊಳಿಸಿ ಮಾತನಾಡಿದ ಅವರು, ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಶಾಮನೂರು ಕುಟುಂಬದ ಮೂರನೇ ತಲೆಮಾರಿಗೆ ಟಿಕೆಟ್ ದೊರೆತಿದೆ. ಹೀಗಾಗಿ ಟಿಕೆಟ್ ಆಕಾಂಕ್ಷಿಗಳಾಗಿದ್ದ ಸಾಮಾನ್ಯ ಕಾರ್ಯಕರ್ತರಿಗೆ ನಿರಾಸೆಯಾಗಿದೆ. ಕಾಂಗ್ರೆಸ್ ಪಕ್ಷದಲ್ಲಿ ಅಲ್ಪಸಂಖ್ಯಾತರು, ದಲಿತ ಹಾಗೂ ಹಿಂದುಳಿದವರಿಗೆ ಅವಕಾಶವೇ ಇಲ್ಲದಂತಾಗಿದೆ. ಕಾಂಗ್ರೆಸ್ ಅಭ್ಯರ್ಥಿ ಗೆದ್ದರೆ ಮುಂದೆ 50 ವರ್ಷಗಳಾದರೂ ಪಕ್ಷಕ್ಕಾಗಿ ದುಡಿದವರ ಮಕ್ಕಳು, ಮೊಮ್ಮಕ್ಕಳಿಗೂ ಟಿಕೆಟ್ ದೊರಕುವುದಿಲ್ಲ, ಆದ್ದರಿಂದ ಜನರು ಎಚ್ಚೆತ್ತುಕೊಂಡು ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸಿ, ಬಿಜೆಪಿ ಗೆಲ್ಲಿಸಬೇಕು ಎಂದು ಸಲಹೆ ನೀಡಿದರು.

ಅಲ್ಪಸಂಖ್ಯಾತ ಸಮುದಾಯಕ್ಕೆ ಕಾಂಗ್ರೆಸ್ ನಿರಂತರವಾಗಿ ದ್ರೋಹವೆಸಗುತ್ತಾ ಬಂದಿದೆ. ಟಿಕೆಟ್ ನೀಡುವುದಾಗಿ ಹೇಳಿ ಈಗ ಕೈಕೊಟ್ಟಿದ್ದಾರೆ. ಈಗಾಗಲೇ ಅಲ್ಪಸಂಖ್ಯಾತ ಸಮುದಾಯದಲ್ಲಿ ಜಾಗೃತಿ ಮೂಡಿದ್ದು, ಬಿಜೆಪಿ ಅಭ್ಯರ್ಥಿ ಗೆಲ್ಲುವ ವಿಶ್ವಾಸವಿದೆ. ಬಿಜೆಪಿ ಬಗ್ಗೆ ಮುಸ್ಲಿಂ ಸಮುದಾಯದಲ್ಲಿ ಭಯ ಹುಟ್ಟಿಸುವ ಕೆಲಸವನ್ನು ಕಾಂಗ್ರೆಸ್ ಮಾಡುತ್ತಿದೆ. ಆದರೆ ನರೇಂದ್ರ ಮೋದಿಯವರ ಆಡಳಿತದಲ್ಲಿ ಯಾವುದೇ ಮುಸಲ್ಮಾನರಿಗೂ ತೊಂದರೆಯಾಗಿಲ್ಲ, ಹಜ್ ಯಾತ್ರೆಗೆ ಹೋಗುವವರ ಸಂಖ್ಯೆ ಈಗ ಹಿಂದಿಗಿಂತಲೂ ಹೆಚ್ಚಾಗಿದೆ ಎಂದು ಅವರು ಸಮರ್ಥಿಸಿಕೊಂಡರು.

ಕಳೆದ 30 ವರ್ಷಗಳಿಂದ ಶಾಮನೂರು ಕುಟುಂಬಕ್ಕೆ ಅಧಿಕಾರ ಸಿಕ್ಕಿದೆ. ಒಂದೇ ಕುಟುಂಬಕ್ಕೆ ಇನ್ನೂ ಎಷ್ಟು ಅವಕಾಶ ಕೊಡುತ್ತೀರಿ? ಇಲ್ಲಿನ ಸಚಿವರು ಸದನಕ್ಕೆ ಬರುವುದಿಲ್ಲ, ಏರಿಯಾದಲ್ಲೂ ಸಿಗುವುದಿಲ್ಲ, ಸಂಸದೆ ಲೋಕಸಭೆಗೆ ಹೋಗಿದ್ದಾರೆ. ಈಗ 27 ವರ್ಷದ ಮಗ ಕಾಂಗ್ರೆಸ್ ಅಭ್ಯರ್ಥಿ. ಜನರು ಹೋದಾಗ ಕಾಂಗ್ರೆಸ್ಸಿಗರು ಯಾವ ರೀತಿ ಸ್ಪಂದಿಸುತ್ತಿದ್ದಾರೆಂಬುದು ಗೊತ್ತಿದೆ. ಈ ಸರ್ವಾಧಿಕಾರ ಧಿಕ್ಕರಿಸಿಯೇ ಬಿಜೆಪಿ ದಲಿತ ಮುಖಂಡ, ಎಸ್ಸಿ ಸಮುದಾಯದ ಶ್ರೀನಿವಾಸ ದಾಸಕರಿಯಪ್ಪಗೆ ಟಿಕೆಟ್ ನೀಡಿದೆ. ನೀವೆಲ್ಲರೂ ಆಶೀರ್ವಾದ ಮಾಡಿ, ಗೆಲ್ಲಿಸಿದರೆ ದಾವಣಗೆರೆ ದಕ್ಷಿಣ ಕ್ಷೇತ್ರದ ಮನೆ ಮಗನಾಗಿ ಕೆಲಸ ಮಾಡುತ್ತಾರೆ ಎಂದು ಅವರು ನುಡಿದರು.

ರಾಜ್ಯದ ಮೇಲೆ ಸಾಲದ ಹೊರೆ

ದಾವಣಗೆರೆ: ರಾಜ್ಯದಲ್ಲಿರುವುದು ಕಾಂಗ್ರೆಸ್ಸಿನ ಫೋನ್ ಪೇ ಲಂಚದ ಸರ್ಕಾರ. ರಾಜ್ಯದ ಜನರ ಮೇಲೆ ಸಾಲದ ಹೊರೆ ಏರಿಸುವ ಮೂಲಕ ಸಿಎಂ ಸಿದ್ದರಾಮ್ಯಯ್ಯನವರು ಸಾಲದರಾಮಯ್ಯ ಆಗಿದ್ದಾರೆ ಎಂದು ವಿಧಾನಸಭಾ ವಿಪಕ್ಷ ನಾಯಕ ಆರ್.ಅಶೋಕ್ ಟೀಕಿಸಿದರು.

ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಅಭಿವೃದ್ಧಿಯನ್ನು ಮರೆತು ಕೇವಲ ಲಂಚ ಪಡೆಯುವುದರಲ್ಲಿ ಮಗ್ನವಾಗಿದೆ. ಲಂಚದ ಹಣವನ್ನು ಫೋನ್ ಪೇ ಮೂಲಕವೇ ಹಾಕಿಸಿಕೊಳ್ಳುತ್ತಿದೆ. ಸಿದ್ದರಾಮ್ಯಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಅಧಿಕಾರಕ್ಕೆ ಬಂದ ಈ ಮೂರು ವರ್ಷಗಳ ಅವಧಿಯಲ್ಲಿ ವಿಪರೀತ ಸಾಲ ಮಾಡುವ ಮೂಲಕ ಆರ್ಥಿಕ ಶಿಸ್ತನ್ನು ಉಲ್ಲಂಘಿಸಿದೆ. ಪ್ರತಿಯೊಬ್ಬ ನಾಗರಿಕರ ಮೇಲೆ 1.12 ಲಕ್ಷ ರೂ. ಸಾಲ ಹೊರಿಸಿದೆ ಎಂದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಅಭಿವೃದ್ಧಿ ಕಾರ್ಯಗಳು ಸಂಪೂರ್ಣ ಕುಂಠಿತಗೊಂಡಿವೆ. ಕೋವಿಡ್ ನಲ್ಲಿ ಪೋಷಕರನ್ನು ಕಳೆದುಕೊಂಡಿದ್ದ ಅನಾಥ ಮಕ್ಕಳಿಗೆ ಹಾಗೂ ಭಿಕ್ಷುಕರಿಗೆ ನೀಡಲು ಇಟ್ಟಿದ್ದ ಹಣ, ಪರಿಶಿಷ್ಟರ ಅನುದಾನವನ್ನೂ ಈ ಸರ್ಕಾರ ತಿಂದುಹಾಕಿದೆ. ವಯನಾಡ್ ಭಾಗಕ್ಕೆ ಎರಡು ಬಾರಿ ಹಣ ಬಿಡುಗಡೆ ಮಾಡಿರುವುದು ನಾಚಿಕೆಗೇಡು. ಕರ್ನಾಟಕದ ಜನರ ಹಣವನ್ನು ರಾಹುಲ್ ಗಾಂಧಿ ಮೆಚಿಸಲು ವಿನಿಯೋಗಿಸುತ್ತಿರುವ ಇವರು ಯಾವ ಮುಖ ಇಟ್ಟುಕೊಂಡು ದಾವಣಗೆರೆ ಮತ್ತು ಬಾಗಲಕೋಟೆಯಲ್ಲಿ ಮತ ಕೇಳುತ್ತಾರೆ ಎಂದು ಆರ್.ಅಶೋಕ್ ಪ್ರಶ್ನಿಸಿದರು.

ರಾಜ್ಯದಲ್ಲಿ 3,617 ಕನ್ನಡ ಶಾಲೆಗಳು ಮುಚ್ಚಲ್ಪಟ್ಟಿವೆ. 4,398 ಶಾಲೆಗಳಲ್ಲಿ 10ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿದ್ದಾರೆ. 14,000 ಶಿಕ್ಷಕರ ನೇಮಕಾತಿ ಬಗ್ಗೆ ಮೂರು ಬಜೆಟ್ ಗಳಲ್ಲಿ ಘೋಷಣೆ ಮಾಡಿದರೂ ಯಾವುದೇ ಕ್ರಮ ಕೈಗೊಂಡಿಲ್ಲ, ದಲಿತರ ಹಾಗೂ ಅನಾಥ ಮಕ್ಕಳ ಕಲ್ಯಾಣ ಯೋಜನೆಗಳಲ್ಲಿಯೂ ಸರ್ಕಾರ ನಿರ್ಲಕ್ಷ್ಯ ತೋರಿದೆ. ಎಸ್ಸಿಎಸ್ಪಿ/ಟಿಎಸ್ಪಿ ಯೋಜನೆಯ ಹಣವನ್ನು ಬೇರೆ ಉದ್ದೇಶಗಳಿಗೆ ಬಳಸಲಾಗಿದೆ. ಭ್ರಷ್ಟಾಚಾರ ಹೆಚ್ಚಾಗಿದ್ದು, ಇ ಖಾತಾ ಮಾಡಲು 20-50 ಸಾವಿರ ರೂ. ಲಂಚ ಕೇಳಲಾಗುತ್ತಿದೆ. ಸುಮಾರು 4 ಲಕ್ಷಕ್ಕೂ ಹೆಚ್ಚು ಜನ ಮನೆ ಕಟ್ಟಿಕೊಂಡು ವಿದ್ಯುತ್ ಸಂಪರ್ಕಕ್ಕಾಗಿ ಕಾಯುತ್ತಿದ್ದಾರೆ. ತೆರಿಗೆ ಹೆಚ್ಚಳ ಹಾಗೂ ಬೆಲೆ ಏರಿಕೆಯಿಂದ ಜನರು ಸಂಕಷ್ಟದಲ್ಲಿದ್ದು, ಕೇಂದ್ರ ಸರ್ಕಾರ ತೆರಿಗೆ ಕಡಿತ ಮಾಡಿದರೂ ರಾಜ್ಯ ಸರ್ಕಾರ ಮತ್ತೆ ಹೆಚ್ಚಿಸಿ ಜನರಿಗೆ ಹೊರೆ ಮಾಡುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಹಿಂದಿ ಹೇರಿಕೆ ಬಗ್ಗೆ ಮಾತನಾಡುವ ಕಾಂಗ್ರೆಸ್ ನಾಯಕರು ಇತಿಹಾಸ ನೆನಪಿಸಿಕೊಳ್ಳಬೇಕು. ದೇಶದಲ್ಲಿ ತ್ರಿಭಾಷಾ ಸೂತ್ರ ತಂದವರು ಮಹಾತ್ಮ ಗಾಂಧೀಜಿ, ನೆಹರು ಮತ್ತು ಇಂದಿರಾ ಗಾಂಧಿ. ದೇಶದ ಎಲ್ಲಾ ಜಿಲ್ಲೆ ಮತ್ತು ನಗರಗಳಿಗೆ ಹಿಂದಿಯನ್ನು ತಲುಪಿಸಿದವರು ಕಾಂಗ್ರೆಸ್ಸಿಗರೇ ಹೊರತು ಬಿಜೆಪಿಯಲ್ಲ, ಬೇರೆ ರಾಜ್ಯಗಳಲ್ಲಿ ಕೆಲಸ ನಿರ್ವಹಿಸಲು ಹಿಂದಿ ಭಾಷೆಯ ಜ್ಞಾನ ಅತ್ಯಗತ್ಯ. ವರ್ಷವಿಡೀ ಹಿಂದಿ ಭಾಷೆಯನ್ನು ವ್ಯಾಸಂಗ ಮಾಡಿ ಪರೀಕ್ಷೆಗೆ ಸಿದ್ಧರಾಗಿದ್ದ ಸುಮಾರು 9 ಲಕ್ಷಕ್ಕೂ ಹೆಚ್ಚು ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಸರ್ಕಾರದ ಹಠಾತ್ ನಿರ್ಧಾರದಿಂದ ದೊಡ್ಡ ಅನ್ಯಾಯವಾಗಿದೆ. ಇದೊಂದು ತುಘಲಕ್ ದರ್ಬಾರ್ ಎಂಬುದು ಇದರಿಂದ ತಿಳಿಯುತ್ತದೆ ಎಂದು ಅವರು ವಾಗ್ದಾಳಿ ನಡೆಸಿದರು.

ಮಾಜಿ ಕೇಂದ್ರ ಸಚಿವ ಜಿ.ಎಂ.ಸಿದ್ದೇಶ್ವರ್, ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ, ಪಕ್ಷದ ಜಿಲ್ಲಾಧ್ಯಕ್ಷ ಎನ್.ರಾಜಶೇಖರ, ಮಾಜಿ ಶಾಸಕರಾದ ಮಾಡಾಳು ವಿರೂಪಾಕ್ಷಪ್ಪ, ಎಂ.ಬಸವರಾಜ ನಾಯ್ಕ, ಡಾ.ಎ.ಹೆಚ್. ಶಿವಯೋಗಿಸ್ವಾಮಿ, ವಿಧಾ ಪರಿಷತ್ ಸದಸ್ಯರಾದ ವೈ.ಎ.ನಾರಾಯಣ ಸ್ವಾಮಿ, ಕೆ.ಎಸ್.ನವೀನ್ ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

ಎಐಸಿಸಿ ಪ್ರಧಾನ ಕಾರ್ಯದರ್ಶಿ ಸುರ್ಜೆವಾಲ ವಾಗ್ದಾಳಿ

ಜನರ ಬದುಕಿನ ಮೇಲೆ ಬಿಜೆಪಿ ದಾಳಿ



ದಾವಣಗೆರೆ: ಜನಸಾಮಾನ್ಯರಿಗೆ ಬಿಜೆಪಿ ಸರ್ಕಾರದಿಂದ ಬೆಲೆ ಏರಿಕೆ ಶಾಪ ತಟ್ಟಿದ್ದು, ಪ್ರತಿನಿತ್ಯ ಜನರ ಬದುಕಿನ ಮೇಲೆ ಬಿಜೆಪಿ ದಾಳಿ ಮಾಡುತ್ತಿದೆ. ಏಪ್ರಿಲ್ 1 ಎಂಬುದು ಬಿಜೆಪಿ ಸರ್ಕಾರಕ್ಕೆ ಜನರನ್ನು ದೋಚಿ, ದರೋಡೆ ಮಾಡುವ ದಿನವಾಗಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೆವಾಲ ಟೀಕಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಏಪ್ರಿಲ್ 1 ಬರುತ್ತಿದ್ದಂತೆ ಜನಸಾಮಾನ್ಯರ ಜೇಬನ್ನು ಟೋಲ್ ಏರಿಕೆ ಮೂಲಕ ಹೆದ್ದಾರಿ ದರೋಡೆ ಮಾಡುತ್ತಿದೆ. ಮೋದಿ ಸರ್ಕಾರ ಶೇ.5ರಷ್ಟು ಟೋಲ್ ತೆರಿಗೆ ಏರಿಕೆ ಮಾಡುತ್ತಿದ್ದು, ಕರ್ನಾಟಕ ರಾಜ್ಯದ ಜನರ ಮೇಲೆ ಹೆಚ್ಚುವರಿಯಾಗಿ 250 ಕೋಟಿ ರೂ. ಹೊರೆ ಬೀಳಲಿದೆ. ಬೆಂಗಳೂರು-ಮೈಸೂರು ಹೆದ್ದಾರಿಯಲ್ಲೇ 2023ರಿಂದ ಈವರೆಗೆ 900 ಕೋಟಿ ರೂ. ಸಂಗ್ರಹಿಸಿದ್ದು, ಏ.1ರಿಂದ ಇದರ ಪ್ರಮಾಣ ಇನ್ನಷ್ಟು ಹೆಚ್ಚಲಿದೆ. ಈ ವಿಚಾರವಾಗಿ ಪ್ರಧಾನಮಂತ್ರಿ ಸೇರಿದಂತೆ ಎಲ್ಲಾ ಬಿಜೆಪಿ ನಾಯಕರು ಉತ್ತರ ನೀಡಬೇಕು ಎಂದು ಸುರ್ಜೆವಾಲ ಆಗ್ರಹಿಸಿದರು.

ನರೇಂದ್ರ ಮೋದಿ ಸರ್ಕಾರ 900 ಅಗತ್ಯ ಔಷಧಿಗಳ ದರವನ್ನು ಏರಿಕೆ ಮಾಡುತ್ತಿದೆ. ಮಧುಮೇಹ, ಒತ್ತಡ, ಸೋಂಕಿತ ರೋಗಗಳ ಔಷಧಿಗಳ ದರ ಏರಿಕೆಯಾಗಲಿದೆ. ಐಸಿಯು ಗಳಲ್ಲಿ ಬಳಸಲಾಗುವ ರೋಗನಿರೋಧಕ ಮೆರೊಫೆನಸ್ 500ಎಂಜಿ ಸೇರಿದಂತೆ ಮಧುಮೇಹಕ್ಕೆ ನೀಡಲಾಗುವ 31 ಔಷಧಿಗಳ ಬೆಲೆ ಹೆಚ್ಚಾಗಲಿದೆ. ಜನರ ದುಸ್ಥಿತಿಯಲ್ಲೂ ಲಾಭ ಮಾಡುವುದು ಬಿಜೆಪಿ ಸರ್ಕಾರದ ಕಾಯಕವಾಗಿದೆ. ಅಗತ್ಯ ಔಷಧಿಗಳ ಮೇಲೆ ಜಿ.ಎಸ್.ಟಿ ವಿನಾಯಿತಿಗೆ ಆಗ್ರಹ ವ್ಯಕ್ತವಾಗುತ್ತಿದ್ದರೂ 12ರಷ್ಟು ಜಿ.ಎಸ್.ಟಿ ವಿಧಿಸಿದೆ ಎಂದು ಅವರು ಆರೋಪಿಸಿದರು.

ಬಿಜೆಪಿ ಸರ್ಕಾರವು ಇಂಧನ ತೈಲ, ಅಡುಗೆ ಅನಿಲ, ಪ್ರಯಾಣ ದರ ಏರಿಕೆ ಮೂಲಕ ಜನಸಾಮಾನ್ಯರ ಜೇಬಿಗೆ ಕತ್ತರಿ ಹಾಕಿದೆ. ಗೃಹಬಳಕೆ ಅಡುಗೆ ಅನಿಲ ಸಿಲಿಂಡರ್ ಬೆಲೆ ಒಂದೇ ತಿಂಗಳಲ್ಲಿ 2 ಬಾರಿ ಏರಿಕೆಯಾಗಿದೆ. ಅಂಚೆ ಸೇವೆಗಳು ಕೂಡ ಬೆಲೆ ಏರಿಕೆಯಿಂದ ಹೊರತಾಗಿಲ್ಲ, ಚುನಾವಣೆಗಳಲ್ಲಿ ಮತ ಕೇಳುವ ಮುನ್ನ ಬಿಜೆಪಿ ನಾಯಕರು ಜನರ ಮೇಲೆ ಎಳೆದಿರುವ ಬೆಲೆ ಏರಿಕೆ ಬರೆಯ ಬಗ್ಗೆ ಉತ್ತರ ನೀಡಬೇಕು ಎಂದು ಅವರು ಒತ್ತಾಯಿಸಿದರು.

ಕಾರಾ ಮಂಡಕ್ಕಿ ಅಂಗಡಿಗೆ ಬೆಂಕಿ



ದಾವಣಗೆರೆ: ನಗರದ ಜಯದೇವ ವೃತ್ತದಲ್ಲಿರುವ ಕಾರ ಮಂಡಕ್ಕಿ ಅಂಗಡಿಗೆ ಬೆಂಕಿ ತಗುಲಿ ಸಾಮಾನು-ಸರಂಜಾಮು ಸುಟ್ಟು ಕರಕಲಾಗಿರುವ ಘಟನೆ ಮಂಗಳವಾರ ಮಧ್ಯಾಹ್ನ ಸಂಭವಿಸಿದೆ. ಶಕ್ತಿ ಮಸಾಲ ಮಂಡಕ್ಕಿ ಅಂಗಡಿಯಲ್ಲಿ ಬೆಂಕಿ ಅವಘಡ ಸಂಭವಿಸಿದ್ದು, ಅಡುಗೆ ಅನಿಲ ಸೋರಿಕೆಯೇ ಘಟನೆಗೆ ಕಾರಣ ಎನ್ನಲಾಗಿದೆ.

ಅವಘಡದಲ್ಲಿ ಅಂಗಡಿಯಲ್ಲಿದ್ದ ದಿನನಿತ್ಯ ಬಳಕೆಯ ಸಾಮಾನುಗಳು ಹಾನಿಗೊಂಡಿದ್ದರೂ, ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯವಾಗಿಲ್ಲ, ಸುದ್ದಿ ತಿಳಿದ ಅಗ್ನಿಶಾಮಕ ದಳದವರು ಸ್ಥಳಕ್ಕೆ ಆಗಮಿಸಿ, ಬೆಂಕಿ ನಂದಿಸುವ ಮೂಲಕ ಅಕ್ಕಪಕ್ಕದ ಅಂಗಡಿಗಳಿಗೆ ಬೆಂಕಿ ಪಸರಿಸದಂತೆ ನೋಡಿಕೊಂಡರು.


ಕಾಂಗ್ರೆಸ್ ಅಭ್ಯರ್ಥಿ ದೊಡ್ಡ ಅಂತರದಿಂದ ಜಯ | ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಿಶ್ವಾಸ

ಶಾಮನೂರು ಶಿವಶಂಕರಪ್ಪ ಅವರ ಕೊಡುಗೆ ಜನರ ಮನದಲ್ಲಿದೆ

ದಾವಣಗೆರೆ: ದಿವಂಗತ ಶಾಮನೂರು ಶಿವಶಂಕರಪ್ಪನವರು ಮಾಡಿರುವ ಸೇವೆ, ಕೊಟ್ಟಿರುವ ಕೊಡುಗೆಗಳನ್ನು ಈ ಭಾಗದ ಜನ ಸ್ಮರಿಸುತ್ತಿದ್ದು, ಈ ಬಾರಿಯ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ದೊಡ್ಡ ಅಂತರದ ಗೆಲುವು ಸಾಧಿಸಲಿದ್ದಾರೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ ಮುಖ್ಯಮಂತ್ರಿಗಳು ಉಪಚುನಾವಣೆ ಕ್ಷೇತ್ರಗಳಲ್ಲಿ ಪ್ರಚಾರ ಆರಂಭಿಸಿದ್ದಾರೆ. ನಾನು ಅಸ್ಸಾಂ ನಲ್ಲಿ ಎರಡು ದಿನ ಪ್ರಚಾರ ಮುಗಿಸಿ ಇಲ್ಲಿಗೆ ಬಂದಿದ್ದೇನೆ. ಇಂದು ದಾವಣಗೆರೆ, ನಾಳೆ ಬಾಗಲಕೋಟೆಯಲ್ಲಿ ಪ್ರಚಾರ ಮಾಡುತ್ತೇವೆ. ನಂತರ ಮತ್ತೆ ದಾವಣಗೆರೆ ಹಾಗೂ ಬಾಗಲಕೋಟೆಯಲ್ಲಿ ಪ್ರಚಾರ ಮಾಡುತ್ತೇವೆ. ಈ ಮಧ್ಯೆ ಎರಡು ದಿನ ಕೇರಳಕ್ಕೆ ಹಾಗೂ ಒಂದು ದಿನ ಅಸ್ಸಾಂ ಗೆ ಹೋಗಿ ಪ್ರಚಾರ ಮಾಡುತ್ತೇನೆ ಎಂದರು.

ನಾವು ಎಲ್ಲಾ ಗೊಂದಲಗಳಿಗೆ ತೆರೆ ಎಳೆದಿದ್ದು, ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡುತ್ತಿದ್ದೇವೆ. ಕಾಂಗ್ರೆಸ್ ಪಕ್ಷ ಎಲ್ಲಾ ಸಮಾಜ, ಎಲ್ಲಾ ವರ್ಗಗಳನ್ನು ಒಟ್ಟಿಗೆ ತೆಗೆದುಕೊಂಡು ಹೋಗುತ್ತಿದೆ. ಶಾಮನೂರು ಶಿವಶಂಕರಪ್ಪನವರು ರಾಷ್ಟ್ರೀಯ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷರಾಗಿದ್ದವರು. ಅವರ



ಕೊಡುಗೆ ಅಪಾರವಾಗಿದೆ. ಕೋವಿಡ್ ಸಮಯದಲ್ಲಿ ಶಾಮನೂರು ಶಿವಶಂಕರಪ್ಪನವರು ಮಾಡಿದ ಸಹಾಯ, ಸಹಕಾರವನ್ನು ಜನ ಸ್ಮರಿಸುತ್ತಿದ್ದಾರೆ. ವಿದ್ಯಾ ಕ್ಷೇತ್ರದಲ್ಲಿ ಅವರು ನೀಡಿರುವ ಸೇವೆಯನ್ನು ನೆನೆಯುತ್ತಿದ್ದಾರೆ. ಸಾವಿರಾರು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿರುವ ಶಾಮನೂರು ಕುಟುಂಬಕ್ಕೆ ಶಕ್ತಿ ತುಂಬಲು ಜನ ತೀರ್ಮಾನಿಸಿದ್ದಾರೆ ಎಂದು ಅವರು ತಿಳಿಸಿದರು.

ನಾನು ಇಲ್ಲಿ ಪ್ರತ್ಯೇಕ ಸಮೀಕ್ಷೆ ಮಾಡಿಸಿದ್ದು, ಶೇ.79ರಷ್ಟು ಜನ ಕಾಂಗ್ರೆಸ್ ಅಭ್ಯರ್ಥಿ ಆಯ್ಕೆ ಮಾಡುವುದಾಗಿ ಹೇಳಿದ್ದಾರೆ. ನಮ್ಮ ಗ್ಯಾರಂಟಿಗಳು ಕ್ಷೇತ್ರದ ಮನೆ-ಮನೆಗೂ ತಲುಪಿವೆ. 59 ಸಾವಿರ ಬಡ ಮಹಿಳೆಯರಿಗೆ ಗೃಹಲಕ್ಷ್ಮಿ ಯೋಜನೆ ತಲುಪುತ್ತಿದೆ. 1.40 ಲಕ್ಷ ಜನರಿಗೆ ಅನ್ನ ಭಾಗ್ಯ ಯೋಜನೆ, 59 ಸಾವಿರ ಮನೆಗಳಿಗೆ ಉಚಿತ ವಿದ್ಯುತ್ ಸಿಗುತ್ತಿದೆ. ಮಹಿಳೆಯರು ಬಸ್ ನಲ್ಲಿ ಉಚಿತ ಪ್ರಯಾಣ ಮಾಡುತ್ತಿದ್ದಾರೆ ಎಂದು ಅವರು ವಿವರಿಸಿದರು.

ಗ್ಯಾಸ್, ಪೆಟ್ರೋಲ್, ಡೀಸೆಲ್, ಕಬ್ಬಿಣ, ಸಿಮೆಂಟ್ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗುತ್ತಿದ್ದು, ಇನ್ನು ಮುಂದೆಯೂ ಏರಿಕೆಯಾಗಲಿದೆ. ಈ ಬೆಲೆ ಏರಿಕೆಯಿಂದ ಜನರನ್ನು ರಕ್ಷಣೆ ಮಾಡಲು ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದೆ. ನಮ್ಮ ಈ ಯೋಜನೆ ಮಹತ್ವ ಈಗ ಅರಿವಾಗುತ್ತಿದೆ ಎಂದು ಅವರು ನುಡಿದರು.

ಪಕ್ಷ ಜಮೀರ್ ಅಹಮದ್ ಅವರಿಗೆ ಕೇರಳ ಚುನಾವಣೆ ಪ್ರಚಾರದ ಜವಾಬ್ದಾರಿ ನೀಡಿದೆ. ಇನ್ನುಳಿದ ಅಲ್ಪಸಂಖ್ಯಾತ ನಾಯಕರಿಗೂ ನಾವು ಚುನಾವಣಾ ಪ್ರಚಾರದ ಜವಾಬ್ದಾರಿ ವಹಿಸಿದ್ದೇವೆ. ಒಬ್ಬ ವ್ಯಕ್ತಿ ಮೇಲೆ ಪಕ್ಷ ನಡೆಯುವುದಿಲ್ಲ. ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ, ಜಮೀರ್ ಮೇಲೂ ನಡೆಯುವುದಿಲ್ಲ. ಪಕ್ಷವು ಸಿದ್ಧಾಂತ ಹಾಗೂ ಕಾರ್ಯಕರ್ತರ ಮೇಲೆ ನಡೆಯುತ್ತದೆ. ಚುನಾವಣೆಯಲ್ಲಿ ನಾವು ಮೊದಲಿನಿಂದಲೂ ಕೆಲಸ ಮಾಡಿಕೊಂಡು ಬಂದಿದ್ದೇವೆ. ಅಲ್ಪಸಂಖ್ಯಾತರನ್ನು ರಕ್ಷಣೆ ಮಾಡುವುದು ನಮ್ಮ ಕರ್ತವ್ಯ. ಈ ದೃಷ್ಟಿಯಿಂದಲೇ ನಾವು ಈ ಭಾಗದ ಅಬ್ದುಲ್ ಜಬ್ಬಾರ್ ಅವರಿಗೆ ವಿಧಾನ ಪರಿಷತ್ ಸದಸ್ಯ ಸ್ಥಾನ ನೀಡಿದ್ದೇವೆ. ಶಿಗ್ಗಾಂವ್ ಕ್ಷೇತ್ರದವರಿಗೂ ಸ್ಥಾನ ನೀಡಿದ್ದು, 16 ನಿಗಮ-ಮಂಡಳಿ ಅಧ್ಯಕ್ಷ ಸ್ಥಾನವನ್ನು ಅಲ್ಪಸಂಖ್ಯಾತರಿಗೆ ನೀಡಲಾಗಿದೆ ಎಂದು ಅವರು ಸಮರ್ಥಿಸಿಕೊಂಡರು.

ಮೇಲ್ಮನೆ ಮುಖ್ಯ ಸಚೇತಕ ಸಲೀಮ್ ಅಹ್ಮದ್, ಶಾಸಕ ಯಾಸೀರ್ ಪಠಾಣ್ ಮತ್ತಿತರರು ಹಾಜರಿದ್ದರು.

ಒಂದು ತಿಂಗಳ ಬೇಸಿಗೆ ರಜೆ ನೀಡಬೇಕು



ಹಿರಿಯೂರು: ಅಂಗನವಾಡಿ ಕೇಂದ್ರಗಳಿಗೆ ಕಳೆದ 2025ರಲ್ಲಿ ನೀಡಿದಂತೆ 2026 ರಲ್ಲಿಯೂ ಸಹ ಒಂದು ತಿಂಗಳ ಬೇಸಿಗೆ ರಜೆ ನೀಡಬೇಕು, ಉಳಿದ ದಿನಗಳಲ್ಲಿ ನೋಂದಣಿ ಅಭಿಯಾನ, ಟಿಹೆಚ್ಆರ್ ಹಾಕುವ ಕೆಲಸಗಳನ್ನು ಹಾಕಬೇಕು ಎಂಬುದಾಗಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಗೌರವಾಧ್ಯಕ್ಷರಾದ ಅನಸೂಯಮ್ಮ ಹೇಳಿದರು.

ನಗರದ ಮಹಿಳಾ ಮತ್ತು ಮಕ್ಕಳಅಭಿವೃದ್ಧಿ ಇಲಾಖೆ ಸಭಾಂಗಣದಲ್ಲಿ 2025 ರಲ್ಲಿ ನೀಡಿದಂತೆ 2026ರಲ್ಲಿಯೂ 30 ದಿನಗಳ ಬೇಸಿಗೆ ರಜೆಯನ್ನು ನೀಡುವಂತೆ ಒತ್ತಾಯಿಸಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಮನವಿಪತ್ರ ಸಲ್ಲಿಸಿ, ನಂತರ ಅವರು ಮಾತನಾಡಿದರು.

ಈ 2026ನೇ ಸಾಲಿನ ಬೇಸಿಗೆ ರಜೆ ನೀಡಲು ಸರ್ಕಾರದ ಆದೇಶ ಸಂಖ್ಯೆ 130 ಐಸಿಡಿ 2026 ಮಾರ್ಚ್ 26ರ ಆದೇಶದಲ್ಲಿ 40 ದಿನಗಳ ಬೇಸಿಗೆ ರಜೆಯನ್ನು ಏಪ್ರಿಲ್ 1 ರಿಂದ ಮೇ 10ರವರೆಗೆ ನೀಡಲಾಗಿದೆ. ಏಪ್ರಿಲ್ 16 ರಿಂದ ಏಪ್ರಿಲ್ 30ರವರೆಗೆ ಮಾತ್ರ ಬೇಸಿಗೆ ರಜೆಯ ಅವಧಿ, ಉಳಿದಂತೆ 10 ದಿನಗಳ ನೋಂದಣಿ ಅಭಿಯಾನ ಮತ್ತು 15 ದಿನ ಹೊರತುಪಡಿಸಿ ಉಳಿದಂತೆ ದಿನಗಳಲ್ಲಿ ಕೇಂದ್ರ ತೆರೆದಿರಬೇಕೆಂದು ಆದೇಶಿಸಿದ್ದು, ಇದು ಬದಲಾವಣೆ ಮಾಡಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಗೌರವಾಧ್ಯಕ್ಷರಾದ ಅನಸೂಯಮ್ಮ, ಅಧ್ಯಕ್ಷರಾದ ಬಿ.ಪಿ. ನಿರ್ಮಲ ಇದ್ದರು.

ಕಿರುಸುದ್ದಿ

ಸಚಿವ ಕೆ.ಜೆ. ಜಾರ್ಜ್ ಪ್ರವಾಸ

• **ಚಿಕ್ಕಮಗಳೂರು** : ಇಂಧನ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ.ಜೆ. ಜಾರ್ಜ್ ಅವರು ಏಪ್ರಿಲ್ 1 ರಂದು ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ. ಬೆಳಗ್ಗೆ 10.30 ಗಂಟೆಗೆ ಚಿಕ್ಕಮಗಳೂರು ನಗರಕ್ಕೆ ಆಗಮಿಸುವ ಸಚಿವರು ಶತಮಾನೋತ್ಸವ ಸ್ಟೇಡಿಯಂನಲ್ಲಿ ಶತಮಾನೋತ್ಸವ ಕ್ರೀಡಾಂಗಣದ ನವೀಕರಣ ಕಾಮಗಾರಿಯ ಭೂಮಿಪೂಜೆ ನೆರವೇರಿಸುವರು. ಬೆಳಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯಿತಿ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ತ್ರೈಮಾಸಿಕ ಪ್ರಗತಿ ಪರಿಶೀಲನಾ (ಕೆ.ಡಿ.ಪಿ.) ಸಭೆಯಲ್ಲಿ ಭಾಗವಹಿಸುವರು. ಮಧ್ಯಾಹ್ನ 3 ಗಂಟೆಗೆ ಚಿಕ್ಕಮಗಳೂರಿನಿಂದ ಶಿವಮೊಗ್ಗಕ್ಕೆ ತೆರಳುವರು.

ಇಂದು ಬಾಲಸುಬ್ರಹ್ಮಣ್ಯ ಸ್ವಾಮಿ ರಥೋತ್ಸವ

• **ಶಿವಮೊಗ್ಗ**: ನಗರದ ಬಾಲಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ ಟ್ರಸ್ಟ್ ವತಿಯಿಂದ ಏಪ್ರಿಲ್ 1 ರಂದು ಬೆಳಿಗ್ಗೆ 9 ಗಂಟೆಗೆ ಗುಡ್ಡೇಕಲ್ ದೇವಾಲಯ ಆವರಣದಲ್ಲಿ ಬಾಲಸುಬ್ರಹ್ಮಣ್ಯಸ್ವಾಮಿ ರಥೋತ್ಸವ ನಡೆಯಲಿದೆ. ಭಕ್ತಾದಿಗಳು ಪಾಲ್ಗೊಳ್ಳಬೇಕು ಎಂದು ಕಾರ್ಯದರ್ಶಿ ಎಂ.ಲೋಕೇಶ್ ಪ್ರಕಟಣೆಯಲ್ಲಿ ಕೋರಿದ್ದಾರೆ.

ದಾವಣಗೆರೆ ಉಪ ಚುನಾವಣೆ: ಚೇತನ್ ಕೆ.ಗೌಡ ಉಸ್ತುವಾರಿ

• **ಶಿವಮೊಗ್ಗ** : ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಗೆ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಚೇತನ್ ಕೆ. ಗೌಡ ಅವರನ್ನು ಉಸ್ತುವಾರಿ ಯನ್ನಾಗಿ ನೇಮಕಮಾಡಲಾಗಿದೆ. ದಕ್ಷಿಣ ವಿಧಾನಸಭಾ ಕ್ಷೇತ್ರದ ಬೂತ್ ನಂಬರ್ 260, 261, 262, 263 ಮತ್ತು 264 ರವ್ಯಾಪ್ತಿಯಲ್ಲಿ ಪಕ್ಷಕ್ಕೆ ಹೆಚ್ಚಿನ ಮತಗಳನ್ನು ಬರುವಂತೆ ಕಾರ್ಯಕರ್ತರನ್ನು ಸಂಘಟಿಸಿ, ಪಕ್ಷದ ಗೆಲುವಿಗೆ ಶ್ರಮಿಸುವಂತೆ ಅವರಿಗೆ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೂಚಿಸಿದ್ದಾರೆ. ಚೇತನ್ ಕೆ. ಗೌಡ ಅವರೊಂದಿಗೆ ಶಾಸಕರಾದ ರವಿ ಗಣಿಗ(ಮಂಡ್ಯ), ರಘು ಮೂರ್ತಿ(ಚಳ್ಳಕೆರೆ) ಸೇರಿದಂತೆ ಕಾಂಗ್ರೆಸ್ ಪಕ್ಷದ ಮುಖಂಡರಾದ ಸದಾಶಿವ ಉಲ್ಲಾಳ್, ಡಾ. ರಾಘವೇಂದ್ರ, ಖಾಲಿದ್ ಹುಸೇನ್ ಅವರ ತಂಡವಿದೆ. ಈ ಕುರಿತು ಪ್ರತಿಕ್ರಿಯಿಸಿರುವ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಗೌಡ, ದಾವಣಗೆರೆ ದಕ್ಷಿಣ ವಿಧಾನ ಸಭಾ ಕ್ಷೇತ್ರವು ಮೊದಲಿನಿಂದಲೂ ಕಾಂಗ್ರೆಸ್ ಪಕ್ಷದ ಭದ್ರ ಕೋಟೆ. ಈಗಲೂ ಅದೇ ವಾತಾವರಣವಿದೆ. ಕಾಂಗ್ರೆಸ್ ಪಕ್ಷವು ಇಲ್ಲಿ ಸುಲಭವಾಗಿ ಗೆಲ್ಲಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಇಂಟೆಕ್ ಯೂತ್ ವಿಭಾಗದ ತಾಲೂಕು ಅಧ್ಯಕ್ಷರ ನೇಮಕ

• **ಶಿವಮೊಗ್ಗ**: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಅನುಮೋದನೆಯ ಮೇರೆಗೆ ಹಾಗೂ ರಾಜ್ಯ ಇಂಟೆಕ್ ಯೂತ್ ಅಧ್ಯಕ್ಷ ಡಾ.ಕುಮಾರ್.ಟಿ.ವೈ. ಅವರ ಅನುಮತಿ ಮೇರೆಗೆ ಶಿವಮೊಗ್ಗ ನಗರದ ಇಂಟೆಕ್ ಯೂತ್ ವಿಭಾಗದ ತಾಲ್ಲೂಕು ಅಧ್ಯಕ್ಷರನ್ನಾಗಿ ಬಾಪೂಜಿ ನಗರದ ಅಕ್ಬರ್ ಬಾಷ ಅವರನ್ನು ನೇಮಕ ಮಾಡ ಲಾಗಿದೆ. ತಾವು ಕೂಡಲೇ ಅಧಿಕಾರವನ್ನು ವಹಿಸಿಕೊಂಡು, ಪಕ್ಷದ ಮುಖಂಡರ ಮಾರ್ಗದರ್ಶನ ಹಾಗೂ ಸ್ಥಳೀಯ ನಾಯಕರ ಸಹಕಾರದೊಂದಿಗೆ ತಮಗೆ ನೀಡಲಾಗಿರುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿ, ಪಕ್ಷದ ಸಂಘಟನೆಗೆ ಶ್ರಮಿಸುವಂತೆ ಕಾಂಗ್ರೆಸ್ ಇಂಟೆಕ್ ಯೂತ್ ಜಿಲ್ಲಾ ಅಧ್ಯಕ್ಷ ಆರ್.ಸಂತೋಷ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀ ಡಿ. ದೇವರಾಜ ಅರಸು ಜನಸ್ಪಂದನ ಸೇವಾ ಟ್ರಸ್ಟ್ ಮನವಿಗೆ ಸಂಸದರ ಸ್ಪಂದನೆ

ಪರಿಶುದ್ಧ ಕುಡಿವ ನೀರು ಸರಬರಾಜು

• **ಭದ್ರಾವತಿ** : ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ದೊಣಬಘಟ್ಟ ಮತ್ತು ಬಿಳಿಕಿ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳಿಗೆ ಪರಿಶುದ್ಧವಾದ ಕುಡಿಯುವ ನೀರು ಸರಬರಾಜು ಮಾಡಲು ಭದ್ರಾ ನದಿಯಿಂದ ನೀರು ಒದಗಿಸಲು ಕ್ರಮ ಕೈಗೊಳ್ಳುವಂತೆ ಸಂಸದ ಬಿ.ವೈ ರಾಘವೇಂದ್ರ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗೆ ಪತ್ರ ಬರೆದು ಒತ್ತಾಯಿಸಿದ್ದಾರೆ.



ಈ ಸಂಬಂಧ ಸಂಸದರಿಗೆ ಜನ್ನಾಪುರ ಶ್ರೀ ಡಿ. ದೇವರಾಜ ಅರಸು ಜನಸ್ಪಂದನ ಸೇವಾ ಟ್ರಸ್ಟ್ ಛೇರ್ಮನ್, ನಗರಸಭೆ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಆರ್. ವೇಣುಗೋಪಾಲ್ ಮನವಿ ಸಲ್ಲಿಸಿದ್ದರು.

ಕಳೆದ ಸುಮಾರು 50 ವರ್ಷಗಳಿಂದ ವಿಧಾನಸಭಾ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗಾಗಿ ಹೋರಾಟ ನಡೆಸಿಕೊಂಡು ಬರಲಾಗುತ್ತಿದೆ. ಹೋರಾಟದ ಸ್ಮರಣೆಗಾಗಿ ಗ್ರಾಮೀಣೋತ್ಸವ ಕಾರ್ಯಕ್ರಮ ಹಮ್ಮಿಕೊಂಡಿರುವುದರಿಂದ ಇದಕ್ಕೆ ಪೂರಕವಾಗಿ ವಿಧಾನಸಭಾ ಕ್ಷೇತ್ರದ ದೊಣಬಘಟ್ಟ ಹಾಗೂ ಬಿಳಿಕಿ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳಿಗೆ ಪರಿಶುದ್ಧವಾದ ಕುಡಿಯುವ ನೀರು ಸರಬರಾಜು ಮಾಡಲು ಕ್ರಮ ಕೈಗೊಳ್ಳುವುದು.

ಪ್ರಸ್ತುತ ದೊಣಬಘಟ್ಟ ಮತ್ತು ಬಿಳಿಕಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳಿಗೆ ಬಿಳಿಕಿ ಕೆರೆಯಿಂದ ಕುಡಿಯುವ ನೀರು ಸರಬರಾಜು ಮಾಡುತ್ತಿದ್ದು, ಈ ಕೆರೆಯಲ್ಲಿ ಮೀನುಸಾಕಾಣಿಕೆಮಾಡುತ್ತಿರುವುದರಿಂದಹಾಗು ಸುತ್ತಮುತ್ತಲಿನ ಜಮೀನುಗಳಿಂದ ರಾಸಾಯನಿಕ ಮಿಶ್ರಿತ ನೀರು ಸೇರ್ಪಡೆಗೊಳ್ಳುತ್ತಿರುವುದರಿಂದ ಕೆರೆಯ ನೀರು ಕಲ್ಮಶಗೊಳ್ಳುತ್ತಿದೆ. ಈ ನೀರಿನ ಬಳಕೆಯಿಂದ ಗ್ರಾಮಸ್ಥರು ಅನಾರೋಗ್ಯಕ್ಕೆ ಒಳಗಾಗುತ್ತಿದ್ದಾರೆ. ಈ ನಡುವೆ ಗ್ರಾಮಸ್ಥರು ದೂರದ ನಗರ ಪ್ರದೇಶದ ಕುಡಿಯುವ ನೀರನ್ನು ಅವಲಂಬಿಸುವಂತಾಗಿದೆ. ಗ್ರಾಮಸ್ಥರು ನಗರ ಪ್ರದೇಶಕ್ಕೆ ಬಂದು ಹೋಗಲು ಸಾಕಷ್ಟು ತೊಂದರೆ ಎದುರಿಸುತ್ತಿದ್ದಾರೆಂದು ವೇಣುಗೋಪಾಲ್ ಮನವಿಯಲ್ಲಿ ವಿವರಿಸಿದ್ದರು.

ನಗರಸಭೆ ವ್ಯಾಪ್ತಿಯ ಕಾಗದನಗರ ಸಮೀಪದ ಭದ್ರಾ ನದಿಯಿಂದ ದೊಣಬಘಟ್ಟ ಮತ್ತು ಬಿಳಿಕಿ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳಿಗೆ ಪರಿಶುದ್ಧವಾದ ಕುಡಿಯುವ ನೀರು ಸರಬರಾಜು ಮಾಡಬಹುದಾಗಿದ್ದು, ಈ ಹಿನ್ನಲೆಯಲ್ಲಿ ಸೂಕ್ತ ಕ್ರಮ ಕೈಗೊಳ್ಳುವುದು ಹಾಗು ತಾಲೂಕಿನ ವಿವಿಧ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳಿಗೆ ಹೆಚ್ಚುವರಿ ಕುಡಿಯುವ ನೀರಿನ ಟ್ಯಾಂಕ್‌ಗಳು, ಪೈಪ್ ಲೈನ್ ಅಳವಡಿಕೆ ಮತ್ತು ಫಿಲ್ಟರ್ ಪಂಪ್‌ಹೌಸ್ ನಿರ್ಮಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆಸೂಚಿಸುವಂತೆ ಸಂಸದರಿಗೆ ವೇಣುಗೋಪಾಲ್ ಕೋರಿದ್ದರು.

ಸಂಸದರ ಪತ್ರಕ್ಕೆ ಸಿಇಓ ಸಂದನೆ
ಮನವಿಗೆ ಸ್ಪಂದಿಸಿರುವ ಸಂಸದರು ಅಗತ್ಯ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ಮಾ.20ರಂದು ಪತ್ರ ಬರೆದಿದ್ದು, ಸಂಸದರ ಪತ್ರಕ್ಕೆ ತಕ್ಷಣ ಸ್ಪಂದಿಸಿರುವ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ವರದಿ ಸಲ್ಲಿಸುವಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಿದ್ದಾರೆ.

ಶಾಸಕ ಎಸ್.ಎನ್. ಚನ್ನಬಸಪ್ಪ ಕರೆ

ಸಕಾರಾತ್ಮಕ ಶಿವಮೊಗ್ಗ ನಿರ್ಮಿಸಿ



• **ಶಿವಮೊಗ್ಗ** : ನಗರದ ಸಾಂಸ್ಕೃತಿಕ ವೈಭವ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಜಗತ್ತಿಗೆ ಪರಿಚಯಿಸುವ ಮೂಲಕ ಸಕಾರಾತ್ಮಕ ಶಿವಮೊಗ್ಗವನ್ನು ನಿರ್ಮಿಸಲು ಶಾಸಕ ಎಸ್.ಎನ್. ಚನ್ನಬಸಪ್ಪ ಸಾಮಾಜಿಕ ಜಾಲತಾಣದ ಯುವ ಕ್ರಿಯೇಟರ್‌ಗಳಿಗೆ ಕರೆ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಯಲ್ಲಿ ಶಾಂತಿ, ನಗರದ ಸುಭದ್ರತೆ ಹಾಗೂ ಸೋಷಿಯಲ್ ಮೀಡಿಯಾ ವೇದಿಕೆಗಳ ಜವಾಬ್ದಾರಿಯುತ ಬಳಕೆಯ ಕುರಿತ ವಿಶೇಷ ಸಮಾಲೋಚನಾ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ನಿಖಿಲ್ ಅವರ ಸಮ್ಮುಖದಲ್ಲಿ ನಡೆದ ಈ ಸಭೆಯಲ್ಲಿ, ಅನವರತ ಫೌಂಡೇಷನ್ ಸದಸ್ಯರು ಹಾಗೂ ಶಿವಮೊಗ್ಗ ಜಿಲ್ಲೆಯ ಪ್ರಮುಖ ಸೋಷಿಯಲ್ ಮಿ ಡಿಯಾ ಇನ್‌ಫ್ಲುಯೆನ್ಸರ್‌ಗಳು ಮತ್ತು ಕಂಟೆಂಟ್ ಕ್ರಿಯೇಟರ್‌ಗಳು ಭಾಗವಹಿಸಿದ್ದರು.

ಸಭೆಯಲ್ಲಿ ನಗರದ ಸಂಚಾರ ನಿಯಮಗಳ ಜಾಗೃತಿ, ಸೈಬರ್ ಸುರಕ್ಷತೆ ಮತ್ತು ಗಾಂಜಾಗೆ ಸಂಬಂಧಿಸಿದ ವಿಷಯಗಳಲ್ಲಿ ಪೊಲೀಸ್ ಇಲಾಖೆಯೊಂದಿಗೆ ಕಂಟೆಂಟ್ ಕ್ರಿಯೇಟರ್‌ಗಳು ಕೈಜೋಡಿಸುವ ಕುರಿತು ಚರ್ಚಿಸಲಾಯಿತು.

ಸಭೆಯಲ್ಲಿ ಇನ್‌ಫ್ಲುಯೆನ್ಸರ್‌ಗಳು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರಲ್ಲದೆ, ಜಿಲ್ಲಾಡಳಿತದೊಂದಿಗೆ ಸದಾ ಸಹಕರಿಸುವುದಾಗಿ ಭರವಸೆ ನೀಡಿದರು.

ನಿವೃತ್ತಿ ಹೊಂದಿದ ಪೊಲೀಸ್ ಸಿಬ್ಬಂದಿಗಳಿಗೆ ಬೀಳ್ಕೊಡುಗೆ



• **ಶಿವಮೊಗ್ಗ** : ಕಳೆದ 35ಕ್ಕೂ ಹೆಚ್ಚು ವರ್ಷಗಳಿಂದ ಸೇವೆ ಸಲ್ಲಿಸಿದ ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಎಸ್.ಕೆ. ರಮೇಶ್ ಕುಮಾರ್ ಹಾಗೂ ಎಎಸ್‌ಐ ಲಕ್ಷ್ಮಣ್ ಎಚ್.ಎ ಮತ್ತು ಮುನಿಸ್ವಾಮಿ ಅವರು ಸೇವಾ ನಿವೃತ್ತರಾದ ಹಿನ್ನೆಲೆಯಲ್ಲಿ ಜಿಲ್ಲಾ ರಕ್ಷಣಾಧಿಕಾರಿಗಳ ಕಛೇರಿಯಲ್ಲಿ ಮಂಗಳವಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಿಖಿಲ್ ಬಿ. ಮತ್ತು ಇತರ ಸಿಬ್ಬಂದಿ ನಿವೃತ್ತರನ್ನು ಗೌರವಿಸಿ ಬೀಳ್ಕೊಟ್ಟರು.

ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ಅಧೀಕ್ಷಕ ಬಿ.ನಿಖಿಲ್ ಮಾತನಾಡಿ, ನಿವೃತ್ತಿ ಸಾಮಾನ್ಯ ಪ್ರಕ್ರಿಯೆ. ಪೊಲೀಸ್ ಇಲಾಖೆಗೆ ತಮ್ಮ ಜೀವನದ ಬಹುಭಾಗವನ್ನು ಧಾರೆ ಎರೆದಿದ್ದೀರಿ. ಇನ್ನು ಮುಂದೆ ಕುಟುಂಬಕ್ಕೆ ಸಮಯ ನೀಡಿ. ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ ಮತ್ತು ನಮಗೆ ಮಾರ್ಗದರ್ಶನ ನೀಡುತ್ತೀರಿ ಎಂದು ನಿವೃತ್ತ ಅಧಿಕಾರಿಗಳಿಗೆ ಕಿವಿಮಾತು ಹೇಳಿದರು.

ಈ ಸಂದರ್ಭದಲ್ಲಿ ನಿವೃತ್ತ ಸಿಬ್ಬಂದಿಗಳ ಕುಟುಂಬದೊಂದಿಗೆ ಮಾತನಾಡಿದ ಅವರು, ಪೊಲೀಸರು 24 ಗಂಟೆ ತುರ್ತುಸೇವಾ ನಿರತರಾಗಿರುತ್ತಾರೆ. ಅನೇಕ ಭಾರಿ ರಾತ್ರಿ, ಎರಡು-ಮೂರು ಗಂಟೆಯ ಸಮಯಕ್ಕೆ ಮನೆಗೆ ಬಂದಾಗ ಕೂಡ ಸಿಟ್ಟಾಗದೆ ಕರ್ತವ್ಯಕ್ಕೆ ಪ್ರಾಧಾನ್ಯತೆ ನೀಡಿದ್ದಕ್ಕೆ ನಿಮಗೆ ಅತ್ಯಂತ ಹೃದಯಪೂರ್ವಕ ಧನ್ಯವಾದಗಳು ಎಂದು ತಿಳಿಸಿದರು. ಪೊಲೀಸ್ ಕುಟುಂಬ ಕೂಡ ಅಧೀಕ್ಷಕರಿಗೆ ನಮನ ಸಲ್ಲಿಸಿ ಭಾವನಾತ್ಮಕವಾಗಿ ಬೀಳ್ಕೊಟ್ಟ ಕ್ಷಣಗಳು ಕಂಡು ಬಂದವು.

ಈ ಸಂದರ್ಭದಲ್ಲಿ ಹೆಚ್ಚುವರಿ ಜಿಲ್ಲಾ ಪೊಲೀಸ್ ಅಧೀಕ್ಷಕ ಕಾರ್ಯಪ್ಪ, ಉಪಾಧೀಕ್ಷಕರುಗಳಾದ ಬಾಬು ಅಂಜನಪ್ಪ, ಸಂಜೀವ್‌ಕುಮಾರ್ ಹಾಗೂ ಪಿಐಗಳಾದ ಸಂತೋಷ್‌ಕುಮಾರ್, ರಾಘವೇಂದ್ರ, ಖಂಡಿಕೆ ಮತ್ತು ಹಿರಿಯ ಪೊಲೀಸ್ ಅಧಿಕಾರಿಗಳು ಹಾಗೂ ನಿವೃತ್ತ ಪೊಲೀಸರ ಕುಟುಂಬಸ್ಥರು ಇದ್ದರು.

ರೈತನಿಗೆ ಶಾಸಕ ಆರಗ ಜ್ಞಾನೇಂದ್ರ ಸಾಂತ್ವನ

ಕಬ್ಬಿನ ಗದ್ದೆ ಬೆಂಕಿ ಅವಘಡ



• **ರಿಪ್ಪನ್ ಪೇಟೆ:** ಸಮೀಪದ ಹೆದ್ದಾರಿಪುರ ಗ್ರಾಪಂ ವ್ಯಾಪ್ತಿಯ ಕಲ್ಲೂರು ಗ್ರಾಮದ ಕಬ್ಬಿನ ಗದ್ದೆಗೆ ಆಕಸ್ಮಿಕವಾಗಿ ಬೆಂಕಿ ತಗುಲಿ ರೈತನಿಗೆ ಲಕ್ಷಾಂತರ ರೂಪಾಯಿ ನಷ್ಟ ಉಂಟಾದ ಘಟನೆಗೆ ಸಂಬಂಧಿಸಿ ಶಾಸಕ ಆರಗ ಜ್ಞಾನೇಂದ್ರ, ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಗ್ರಾಮದ ಸರ್ವೆ ನಂ. 60ರಲ್ಲಿ ಕೃಷಿ ಮಾಡುತ್ತಿದ್ದ ರೈತ ಷಣ್ಮುಖಪ್ಪ ಬಿನ್ ಕೃಷ್ಣಪೂಜಾರಿಗೆ ಸೇರಿದ ಜಾಗದಲ್ಲಿ ಈ ಅವಘಡ ಸಂಭವಿಸಿದೆ. ಸುಮಾರು 2 ಎಕರೆ ಪ್ರದೇಶದಲ್ಲಿ ಬೆಳೆದಿದ್ದ ಕಬ್ಬಿನ ಪೈಕಿ 1.5 ಎಕರೆಯಲ್ಲಿದ್ದ 20 ಟನ್ ಕಬ್ಬು ಸಂಪೂರ್ಣವಾಗಿ ಬೆಂಕಿಗೆ ಆಹುತಿಯಾಗಿದೆ. ಇದರಿಂದ ಅಂದಾಜು 4 ರಿಂದ 5 ಲಕ್ಷ ರೂಪಾಯಿ ನಷ್ಟ ಉಂಟಾಗಿದೆ ಎಂದು ರೈತ ತನ್ನ ಅಳಲನ್ನು ತೋಡಿಕೊಂಡಿದ್ದರು.

ಘಟನೆ ನಡೆದ ಸ್ಥಳಕ್ಕೆ ಭೇಟಿ ನೀಡಿದ ಶಾಸಕ ಆರಗ ಜ್ಞಾನೇಂದ್ರ, ಬೆಂಕಿ ಅವಘಡದಿಂದ ಹಾನಿಗೊಳಗಾದ ಗದ್ದೆಯನ್ನು ವೀಕ್ಷಿಸಿ ಹಾನಿಯ ಪ್ರಮಾಣವನ್ನು ಪರಿಶೀಲಿಸಿದರು. ಬಳಿಕ ರೈತ ಷಣ್ಮುಖಪ್ಪ ಅವರೊಂದಿಗೆ ಮಾತನಾಡಿ ಅವರ ಕಷ್ಟ-ನಷ್ಟಗಳನ್ನು ವಿಚಾರಿಸಿ ಸಾಂತ್ವನ ಹೇಳಿದರು.

ಈ ಸಂದರ್ಭದಲ್ಲಿ ಸರ್ಕಾರದಿಂದ ಸಾಧ್ಯವಿರುವ ಪರಿಹಾರವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಸಂಬಂಧಪಟ್ಟ ಅಧಿಕಾರಿಗಳಿಗೆ ತಕ್ಷಣ ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ಸೂಚಿಸಿದರು.

ಈ ಸಂದರ್ಭದಲ್ಲಿ ಸ್ಥಳೀಯ ಮುಖಂಡರಾದ ಕಲ್ಲೂರು ಆದರ್ಶ, ಮೂಗುಡ್ತಿ ಅರುಣ್ ಕುಮಾರ್, ಗಂಗಾಧರ್, ಅನ್ವೇಶ್, ಸದಾನಂದ, ಧರ್ಮಪ್ಪ ಇದ್ದರು.

ಶ್ರೀ ವೀರಮಾರುತಿ ದೇವಸ್ಥಾನ ಪುನರ್ ನಿರ್ಮಾಣ ಕಾರ್ಯಕ್ಕೆ ಏ.3ರಂದು ಚಾಲನೆ



• **ಸಾಗರ** : ನೆಹರೂ ನಗರದ ಹೊಸ ಉಪ್ಪಾರ ಕೇರಿಯ ಶ್ರೀ ವೀರಮಾರುತಿ ದೇವಸ್ಥಾನದ ಪುನರ್ ನಿರ್ಮಾಣ ಕಾರ್ಯಕ್ರಮ ಏ. 3ರಂದು ಬೆಳಿಗ್ಗೆ 11-30ಕ್ಕೆ ಶಾಸಕ ಗೋಪಾಲಕೃಷ್ಣ ಬೇಳೂರು ನೆರವೇರಿಸಲಿದ್ದಾರೆ ಎಂದು ಶ್ರೀ ವೀರ ಮಾರುತಿ ಸೇವಾ ಸಮಿತಿ ಪ್ರಧಾನ ಕಾರ್ಯದರ್ಶಿ ಸತೀಶ್ ಆರ್. ತಿಳಿಸಿದರು.

ಇಲ್ಲಿನ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇವಸ್ಥಾನದ 36ನೇ ವರ್ಷದ ವಾರ್ಷಿಕೋತ್ಸವ ಹಾಗೂ 24ನೇ ವರ್ಷದ ನವಗ್ರಹಗಳ ಪ್ರತಿಷ್ಠಾ ವಾರ್ಷಿಕೋತ್ಸವ ಸಹ ಇದೇ ಸಂದರ್ಭದಲ್ಲಿ ನಡೆಯಲಿದೆ ಎಂದು ಹೇಳಿದರು.

ಶ್ರೀ ವೀರಮಾರುತಿ ದೇವಸ್ಥಾನಕ್ಕೆ 43 ವರ್ಷಗಳ ಇತಿಹಾಸವಿದೆ. ಈ ಭಾಗದ ಕೆಲವು ಪ್ರಮುಖರು ದೇವಸ್ಥಾನ ನಿರ್ಮಾಣಕ್ಕೆ ಶ್ರಮಿಸಿದ್ದಾರೆ. ಪ್ರತಿವರ್ಷ ಹನುಮ ಜಯಂತಿ ಸಂದರ್ಭದಲ್ಲಿ ವಾರ್ಷಿಕೋತ್ಸವ ನಡೆಸಿಕೊಂಡು ಬರಲಾಗುತ್ತಿದ್ದು, ದೇವಸ್ಥಾನದ ಅಭಿವೃದ್ಧಿಗೆ ಸಾರ್ವಜನಿಕರು, ದಾನಿಗಳು ಸಹಕಾರ ನೀಡುತ್ತಾ ಬಂದಿದ್ದಾರೆ. ಇತ್ತೀಚಿನ ಕೆಲವು ವರ್ಷಗಳಲ್ಲಿ ದೇವಸ್ಥಾನದ ಹಿಂಭಾಗ ಶಿಥಿಲಾವಸ್ಥೆ ತಲುಪಿದ್ದು ಅರ್ಚಕರ ಗೃಹ ಸಹ ಬೀಳುವ ಸ್ಥಿತಿಯಲ್ಲಿತ್ತು. ದೇವಸ್ಥಾನ ಪುನರ್ ನಿರ್ಮಾಣ ಕಾಮಗಾರಿಗೆ ಶಾಸಕರಿಗೆ ಸಮಿತಿ ಸಲ್ಲಿಸಿದ್ದ ಮನವಿ ಮೇರೆಗೆ ಶಾಸಕರ ಪ್ರದೇಶಾಭಿವೃದ್ಧಿ ಅನುದಾನದಲ್ಲಿ 10 ಲಕ್ಷ ರೂ. ನೀಡಿದ್ದು, ಅದರ ಶಂಕುಸ್ಥಾಪನಾ ಕಾಮಗಾರಿ ಇದೇ ಸಂದರ್ಭದಲ್ಲಿ ನಡೆಯಲಿದೆ ಎಂದು ಹೇಳಿದರು.

ಬೆಳಿಗ್ಗೆ 9ರಿಂದ 10ರವರೆಗೆ ಸಂಕಲ್ಪ ಪೂಜೆ, ಬೆಳಿಗ್ಗೆ 10ರಿಂದ ಆಂಜನೇಯ ಮೂಲಮಂತ್ರ ಹವನ, ಮಧ್ಯಾಹ್ನ 12ಕ್ಕೆ ಪೂರ್ಣಾಹುತಿ, ಮಧ್ಯಾಹ್ನ 1ಕ್ಕೆ ಸಾರ್ವಜನಿಕ ಅನ್ನ ಸಂತರ್ಪಣೆ ಇರುತ್ತದೆ. ಏ. 2ರಂದು ಬೆಳಿಗ್ಗೆ ವಿವಿಧ ಧಾರ್ಮಿಕ ಕಾರ್ಯಕ್ರಮ ಪ್ರಾರಂಭಗೊಳ್ಳಲಿದ್ದು, ಮಧ್ಯಾಹ್ನ ಮಹಾಗಣಪತಿ ಹವನ ಪೂರ್ಣಾಹುತಿ ಇರುತ್ತದೆ. ಸಂಜೆ 4-30ಕ್ಕೆ ಶ್ರೀ ವೀರಮಾರುತಿ ಸ್ವಾಮಿಯ ರಾಜಬೀದಿ ಪಲ್ಲಕ್ಕಿ ಉತ್ಸವ ಇರುತ್ತದೆ. ಎರಡೂ ದಿನಗಳ ಧಾರ್ಮಿಕ ಕಾರ್ಯಕ್ರಮದಲ್ಲಿ ಸದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ಮನವಿ ಮಾಡಿದರು.

ಗಣೇಶ್ ಶೇಟ್ ಮಾತನಾಡಿದರು. ಗೋಷ್ಠಿಯಲ್ಲಿ ಸಮಿತಿ ಅಧ್ಯಕ್ಷ ಗುರುಚರಣ್, ಪ್ರಮುಖರಾದ ಸುನೀಲ್ ರುದ್ರಪ್ಪ, ಕೇಶವ, ನಾಗರಾಜ್ ಆಚಾರ್ ಹಾಜರಿದ್ದರು.

ವಿದ್ಯಾರ್ಥಿಗಳಿಗೆ ಪರೀಕ್ಷೆಯ ನೈಜ ಅನುಭವ ನೀಡುವ ಉದ್ದೇಶ

ಪಿಇಎಸ್‌ಐಟಿಎಂ ಸಂಸ್ಥೆಯಲ್ಲಿ ಅಣಕು ಸಿಇಟಿ

• **ಶಿವಮೊಗ್ಗ**: ನಗರದ ಪಿ.ಇ.ಎಸ್ ಐ.ಟಿ.ಎಂ ಸಂಸ್ಥೆಯು ಸಿಇಟಿ ಪರೀಕ್ಷೆ ಎದುರಿಸಲಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆಯ ನೈಜ ಅನುಭವವನ್ನು ನೀಡಲು ಅಣಕು ಸಿಇಟಿ ಆಯೋಜಿಸಿತ್ತು.



ಇದರ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕ ನುಡಿಗಳನ್ನು ಆಡಿದ ಪಿ.ಇ.ಎಸ್ ಐ.ಟಿ.ಎಂ ಕಾಲೇಜಿನ ಪ್ರಾಂಶುಪಾಲ ಡಾ. ಸ್ವಾಮಿ ಡಿ.ಆರ್, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ರಚನಾತ್ಮಕ ಸಿದ್ಧತೆ ಮತ್ತು ನಿರಂತರ ಶ್ರಮದ ಹಾಗೂ ಮೌಲ್ಯಮಾಪನದ ಮಹತ್ವವನ್ನು ಒತ್ತಿ ಹೇಳಿದರು. ಟೆಸ್ಟ್ ಮೈ ಸ್ಕಿಲ್ಸ್ ವೇದಿಕೆಯ ಮೂಲಕ ನಡೆಸಲಾಗುವ ಈ ಅಣಕು ಸಿಇಟಿ ಕಾರ್ಯಕ್ರಮವು ಮೌಲ್ಯಮಾಪನ ಮಾಡಲು, ಕಲಿಕೆಯ ಅಂತರವನ್ನು ಗುರುತಿಸಲು ಮತ್ತು ಪರೀಕ್ಷಾ ತಂತ್ರಗಳನ್ನು ಪರಿಷ್ಕರಿಸಲು ವಿಶ್ವಾಸಾರ್ಹ ಕಾರ್ಯವಿಧಾನವಾಗಿ ಕಾರ್ಯನಿರ್ವಹಿಸುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಜಡ್‌ವೈಎಸ್‌ಕೆ ಟೆಕ್ನಾಲಜೀಸ್ ಸಹ ಸಂಸ್ಥಾಪಕ ಸಾರಂಗ್ ಅವರು ಕೃತಕಬುದ್ಧಿಮತ್ತೆ ಚಾಲಿತ ಟೆಸ್ಟ್ ಮೈ ಸ್ಕಿಲ್ಸ್ ವೇದಿಕೆಯ ಸಾಮರ್ಥ್ಯಗಳ ಕುರಿತು ವಿವರಿಸಿದರು. ವಿಷಯವಾರು ಅಣಕು ಪರೀಕ್ಷೆಗಳು, ವಿವರವಾದ ಕಾರ್ಯಕ್ಷಮತೆಯ ವಿಶ್ಲೇಷಣೆ ಮತ್ತು ಉದ್ದೇಶಿತ ತಯಾರಿ, ಬೆಂಬಲದಂತಹ ವೈಶಿಷ್ಟ್ಯಗಳು ವಿದ್ಯಾರ್ಥಿಗಳು ತಮ್ಮ ಮಿತಿಗಳನ್ನು ಅರಿಯಲು ಹಾಗೂ ಕಲಿಕೆಗೆ ಆದ್ಯತೆ ನೀಡಿ ಪರೀಕ್ಷೆಯಲ್ಲಿ ಆತ್ಮವಿಶ್ವಾಸವನ್ನು ಬೆಳೆಸಲು ಅನುವು ಮಾಡಿಕೊಡುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪಿ.ಇ.ಎಸ್ ಟ್ರಸ್ಟ್ ರಿಜಿಸ್ಟ್ರಾರ್ ಡಾ. ನಾಗರಾಜ ಮಾತನಾಡುತ್ತಾ, ವಿದ್ಯಾರ್ಥಿಗಳು ತಮ್ಮ ಗುರಿಯನ್ನು ನಿಗದಿಪಡಿಸಿಕೊಳ್ಳುವುದು, ಶಿಸ್ತುಬದ್ಧವಾದ ಅಧ್ಯಯನದ ಅಭ್ಯಾಸ ಮತ್ತು ಸಮಯದ ಪರಿಣಾಮಕಾರಿ ನಿರ್ವಹಣೆಯ ಕುರಿತು ಅದರ ಮಹತ್ವವನ್ನು ಹೇಳಿದರು. ಅಲ್ಲದೆ ಕೆ.ಸಿ.ಇ.ಟಿ ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಪಡೆಯಲು ವಿಶ್ಲೇಷಣಾತ್ಮಕ ಮತ್ತು ಚಿಂತನಾ ಕೌಶಲ್ಯಗಳನ್ನು ಅಭಿವೃದ್ಧಿ ಪಡಿಸಿಕೊಳ್ಳಲು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ 400ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಪಿ.ಇ.ಎಸ್ ಐ.ಟಿ.ಎಂ ಉಪ ಪ್ರಾಂಶುಪಾಲ ಡಾ. ಶೇಖರ್ ಆರ್ ವಂದಿಸಿದರು. ಪೂಜಾ ಕಾರ್ಯಕ್ರಮ ನಿರೂಪಿಸಿದರು.

ತೀರ್ಥಹಳ್ಳಿ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಜೆನೆಟಿಕ್ ಕಾಯಿಲೆಗೆ ಯಶಸ್ವಿ ಶಸ್ತ್ರಚಿಕಿತ್ಸೆ

• **ಶಿವಮೊಗ್ಗ** : ಅಪರೂಪದ ಜೆನೆಟಿಕ್ ಕಾಯಿಲೆಯಿಂದ ಭವಿಷ್ಯದಲ್ಲಿ ದೊಡ್ಡ ಕ್ಯಾನ್ಸರ್ ಉಂಟಾಗುವ ಅಪಾಯ ತಪ್ಪಿಸಲು ಎಮ್.ಐ.ಓ ತೀರ್ಥಹಳ್ಳಿ ಗ್ರಾಮೀಣ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಪ್ರಮುಖ ಮುನ್ನೆಚ್ಚರಿಕಾ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ನೆರವೇರಿಸಲಾಗಿದೆ.



ಸುಮಾರು 27 ವರ್ಷದ ಯುವತಿ ಕಳೆದ ಎರಡು ತಿಂಗಳಿಂದ ಮಲದಲ್ಲಿ ರಕ್ತ ಹಾಗೂ ಹೊಟ್ಟೆ ನೋವು ಇರುವ ಕಾರಣ ವೈದ್ಯರನ್ನು ಸಂಪರ್ಕಿಸಿದ್ದರು. ಅವರ ಕುಟುಂಬದ ವೈದ್ಯಕೀಯ ಇತಿಹಾಸ ಪರಿಶೀಲಿಸಿದಾಗ ತಾಯಿ ರೆಕ್ಟಮ್ ಕ್ಯಾನ್ಸರ್‌ನಿಂದ ಮೃತಪಟ್ಟಿದ್ದು, ಒಬ್ಬ ಮಾವ ಎಮ್.ಐ.ಓ ನಲ್ಲಿ ರೆಕ್ಟಮ್ ಕ್ಯಾನ್ಸರ್ ಚಿಕಿತ್ಸೆ ಪಡೆದಿದ್ದು, ಮತ್ತೊಬ್ಬ ಮಾವ ಕೂಡ ಕ್ಯಾನ್ಸರ್‌ನಿಂದ ಮೃತಪಟ್ಟಿರುವುದು ತಿಳಿದುಬಂತು.

ಕೋಲೊನೊಸ್ಕೋಪಿ ಪರೀಕ್ಷೆಯಲ್ಲಿ ದೊಡ್ಡ ಆಂತ್ರದಲ್ಲಿ 100ಕ್ಕಿಂತ ಹೆಚ್ಚು ಪೊಲಿಪ್‌ಗಳಿಂದ ಕಂಡುಬಂದವು. ಕೆಲವು ದೊಡ್ಡ ಪೋಲಿಪ್ ಗಳಿಂದ ತೆಗೆದ ಬಯೋಪ್ಸಿಯಲ್ಲಿ ಟ್ಯೂಬ್ಯುಲರ್ ಅಡಿನೋಮಾ ಎಂಬ ಕ್ಯಾನ್ಸರ್ ಪೂರ್ವ ಸ್ಥಿತಿ ಕಂಡುಬಂತು.

ಈ ಕಾಯಿಲೆಯಲ್ಲಿ ದೊಡ್ಡ ಆಂತ್ರ ಮತ್ತು ರೆಕ್ಟಮ್‌ನಲ್ಲಿ ನೂರಾರು ಪೊಲಿಪ್‌ಗಳು ಉಂಟಾಗುತ್ತವೆ ಮತ್ತು ಚಿಕಿತ್ಸೆ ಮಾಡದಿದ್ದರೆ ನಂತರ ಬಹುತೇಕ ಎಲ್ಲರಲ್ಲೂ ಕ್ಯಾನ್ಸರ್ ಉಂಟಾಗುವ ಸಾಧ್ಯತೆ ಇರುತ್ತದೆ. ರೋಗಿ ಮತ್ತು ಕುಟುಂಬದವರಿಗೆ ಸಮಗ್ರ ಸಲಹೆ ನೀಡಿದ ನಂತರ ಶಸ್ತ್ರಚಿಕಿತ್ಸೆ ಮಾಡಲಾಯಿತು. ಈ ಶಸ್ತ್ರ ಚಿಕಿತ್ಸೆಯನ್ನು ಎಮ್.ಐ.ಓ ತೀರ್ಥಹಳ್ಳಿ ಗ್ರಾಮೀಣ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸಾ ತಂಡ ಯಶಸ್ವಿಯಾಗಿ ನೆರವೇರಿಸಿದೆ.

ಮಂಗಳೂರು ಇನ್ಸ್ಟಿಟ್ಯೂಟ್ ಆಫ್ ಆಂಕಾಲಜಿಯ ನಿರ್ದೇಶಕರಾದ ಹಿರಿಯ ಆಂಕಾಲಜಿಸ್ಟ್ ಡಾ. ಸುರೇಶ್ ರಾವ್ ಅವರು ತೀರ್ಥಹಳ್ಳಿಯ ಗ್ರಾಮೀಣ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಈ ದೊಡ್ಡ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಿರ್ವಹಿಸಿದ ಶಸ್ತ್ರಚಿಕಿತ್ಸಾ ತಂಡ ಹಾಗೂ ವೈದ್ಯರಾದ ಡಾ. ದಿವ್ಯ ಜ್ಯೋತಿ ಮತ್ತು ಡಾ. ಸುಹಾಸ್ ನಾವಡ ಅವರ ಪ್ರಯತ್ನಗಳನ್ನು ಪ್ರಶಂಸಿಸಿದರು.

ಹಾಸ್ಟೆಲ್‌ಗೆ ಮೂಲ ಸೌಲಭ್ಯ ಕಲ್ಪಿಸಿ

• **ಶಿವಮೊಗ್ಗ** : ಮೂಲ ಸೌಲಭ್ಯ ಕಲ್ಪಿಸುವಂತೆ ಆಗ್ರಹಿಸಿ ನವುಲೆಯ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳು ಜಿಲ್ಲಾಧಿಕಾರಿಗಳಿಗೆ ಮಂಗಳವಾರ ಮನವಿ ಸಲ್ಲಿಸಿದರು.



ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಕುಡಿಯುವ ನೀರಿನ ಸಮಸ್ಯೆ ಹಾಗೂ ಶೌಚಾಲಯಗಳು ಸ್ವಚ್ಛಗೊಳಿಸದೇ ಇರುವುದು, ವಸತಿ ನಿಲಯದ ಹೊರಾಂಗಣ ಕೂಡ ಸ್ವಚ್ಛ ಇಲ್ಲದೇ ಇರುವುದು, ಗ್ರಂಥಾಲಯದಲ್ಲಿ ಪುಸ್ತಕಗಳ ಕೊರತೆ, ಆಟದ ಸಾಮಗ್ರಿಗಳು ಹಾಗೂ ಮಲಗಲು ಹಾಸಿಗೆ, ದಿಂಬು, ತಟ್ಟೆ, ಲೋಟ, ಅಧ್ಯಯನ ಕುರ್ಚಿ, ಫ್ಯಾನ್, ಬಲ್ಬ್, ಸೊಳ್ಳೆಪರದೆ, ಸಿಸಿ ಟಿವಿ ಇಲ್ಲದೇ ಇರುವುದು ಮತ್ತು ಊಟದ ಸಮಸ್ಯೆ, ಅರ್ಧ ಲೀಟರ್ ಹಾಲಿನಲ್ಲಿ 90 ವಿದ್ಯಾರ್ಥಿಗಳಿಗೆ ಚಹಾ ಮಾಡುತ್ತಿದ್ದು, ಪ್ರತಿ ಬುಧವಾರ ಮೊಸರು ನೀಡುವುದಿಲ್ಲ, ಅರ್ಧ ಲೀಟರ್ ಮೊಸರಿನಲ್ಲೇ ಮಧ್ಯಾಹ್ನದ ಮಜ್ಜಿಗೆಯನ್ನು ಸಿದ್ಧಪಡಿಸುತ್ತಾರೆ ಎಂದು ವಿವರಿಸಿದರು.

ಮೆನು ಪಟ್ಟಿಯ ಪ್ರಕಾರ ಅಡುಗೆ ಮಾಡುವುದಿಲ್ಲ, ಅಡುಗೆ ಸಿಬ್ಬಂದಿ ಸರಿಯಾದ ಸಮಯಕ್ಕೆ ಹಾಜರಾತಿ ನೀಡುವುದಿಲ್ಲ, ನೀರಿನ ತೊಟ್ಟಿ ಸ್ವಚ್ಛಗೊಳಿಸುವುದಿಲ್ಲ, ಹೈಮಾಸ್ಟ್ ದೀಪ ಬಹಳ ದಿನಗಳಿಂದ ಕೆಟ್ಟುಹೋಗಿದೆ. ಸುಮಾರು 2-3 ತಿಂಗಳಾದರೂ ರಿಪೇರಿ ಮಾಡಿಸಿಲ್ಲ, ತಿಂಗಳಾದರೂ ಶೌಚಾಲಯ ಸ್ವಚ್ಛಗೊಳಿಸುವುದಿಲ್ಲ, ಫೋರ್ಜರಿ ಬಯೋಮೆಟ್ರಿಕ್ ಅನ್ನು ನೀಡಲಾಗುತ್ತಿದೆ. ವಿದ್ಯಾರ್ಥಿ ನಿಲಯಕ್ಕೆ ಸೇರಲು ಬಂದ ವಿದ್ಯಾರ್ಥಿಗಳಿಂದ ಹೆಚ್ಚಿನ ಹಣ ಸಂಗ್ರಹಣೆ ಮಾಡಲಾಗುತ್ತಿದೆ. ಇದರ ಬಗ್ಗೆ ಎಡಿ ಅವರಿಗೆ ತಿಳಿಸಿದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಈ ಎಲ್ಲಾ ಸಮಸ್ಯೆಗಳಿಗೆ ಕೂಡಲೇ ಪರಿಹಾರ ಒದಗಿಸಿಕೊಡುವಂತೆ ವಿದ್ಯಾರ್ಥಿಗಳು ಆಗ್ರಹಿಸಿದ್ದಾರೆ.

ಮನವಿ ನೀಡುವ ಸಂದರ್ಭದಲ್ಲಿ ಹಾಸ್ಟೆಲ್ ವಿದ್ಯಾರ್ಥಿಗಳಿದ್ದರು.

ಪಟ್ಟಣ ಪಂಚಾಯಿತಿ 2026-27ನೇ ಸಾಲಿನ ಬಜೆಟ್ ಮಂಡನೆ

• **ತೀರ್ಥಹಳ್ಳಿ** : ಪಟ್ಟಣ ಪಂಚಾಯಿತಿಯ 2026-27ನೇ ಸಾಲಿನ ಬಜೆಟ್ ಮಂಡನೆಯನ್ನು ಅಧ್ಯಕ್ಷ ರತ್ನಾಕರ್ ಶೆಟ್ಟಿ ಮಂಡಿಸಿದರು.

ಮಂಗಳವಾರ ಪಟ್ಟಣ ಪಂಚಾಯತಿಯ ಬಿ ರವೀಂದ್ರ ಶೆಟ್ಟಿ ಸಭಾಂಗಣದಲ್ಲಿ ನಡೆದ ಬಜೆಟ್ ಮಂಡನೆಯಲ್ಲಿ ಒಟ್ಟು 34 ಕೋಟಿ ರೂ. ವೆಚ್ಚದ ಬಜೆಟ್ ಮಂಡಿಸಲಾಯಿತು.



ಈ ಬಾರಿಯ ಬಜೆಟ್‌ನಲ್ಲಿ ಏನೆಲ್ಲ ಇದೆ:

ಉದ್ದಿಮೆದಾರರಿಗೆ ಅನುಕೂಲವಾಗುವಂತೆ ಮತ್ತು ಪಟ್ಟಣ ಪಂಚಾಯಿತಿಯ ಸ್ವಯಂ ಸಂಪನ್ಮೂಲವನ್ನು ಹೆಚ್ಚಿಸಿಕೊಳ್ಳಲು ರಥಬೀದಿಯಲ್ಲಿ ನೂತನ ವಾಣಿಜ್ಯ ಕಟ್ಟಡ ನಿರ್ಮಾಣಕ್ಕೆ 100 ಲಕ್ಷ ರೂ., ಹಿಂದೂ ರುದ್ರಭೂಮಿಯಲ್ಲಿ ಸ್ನಾನಗೃಹ ನಿರ್ಮಾಣ ಕ್ಕೆ ರೂ.10 ಲಕ್ಷ, ಸೀಬಿನಕೆರೆ ಕೆರೆಯಲ್ಲಿರುವ ಹೂಳನ್ನು ಎತ್ತಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ವಾಕಿಂಗ್ ಟ್ರಾಕ್ ನಿರ್ಮಾಣಕ್ಕೆ 150 ಲಕ್ಷ ರೂ., ಪಟ್ಟಣದ ವ್ಯಾಪ್ತಿಯಲ್ಲಿರುವ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಿ ಅಗತ್ಯ ಆಟಿಕೆಗಳನ್ನು ಅಳವಡಿಸಲು ರೂ.25 ಲಕ್ಷ, ಪಟ್ಟಣದ ಕುಶಾವತಿ ಪಾರ್ಕಿನಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಪಡಿಸಲು ಈಜುಕೊಳ ನಿರ್ಮಾಣಕ್ಕಾಗಿ ರೂ.40 ಲಕ್ಷವನ್ನು ಕಾಯ್ದಿರಿಸಲಾಗಿರುತ್ತದೆ.

ಪಟ್ಟಣದ ಅತ್ಯಂತ ಕಡುಬಡತನದಲ್ಲಿರುವ ಪ್ರತಿಭಾಂತ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ರೂ.2 ಲಕ್ಷ, ಚಿಕಿತ್ಸೆ ಹಾಗೂ ವಿದ್ಯಾಭ್ಯಾಸಕ್ಕಾಗಿ ಹೊರ ಊರುಗಳಿಂದ ಬಂದ ವಿಕಲ ಚೇತನರ ವಾಸ್ತವ್ಯಕ್ಕಾಗಿ ವಸತಿ ಗೃಹ ನಿರ್ಮಾಣಕ್ಕಾಗಿ ರೂ.50 ಲಕ್ಷ, ಬಿಪಿಎಲ್ ಕಾರ್ಡ್ ಹೊಂದಿದ ಹಿರಿಯ ನಾಗರಿಕರ ಆರೋಗ್ಯ ಸುಧಾರಿಸಲು ಔಷಧಿ ಖರೀದಿಗೆ ರೂ.5 ಲಕ್ಷ, ಪೌರಕಾರ್ಮಿಕರಿಗೆ ಪ್ರವಾಸ, ಸುರಕ್ಷಾ ಧರಿಸು, ಪೌರಕಾರ್ಮಿಕರ ದಿನಾಚರಣೆ ಆಚರಣೆಗಾಗಿ ರೂ 15 ಲಕ್ಷ , ರಸ್ತೆ ಬದಿಯ ಮತ್ತು ವ್ಯಾಪಾರಿಗಳಿಗೆ ಫುಡ್ ಕೋರ್ಟ್ ನಿರ್ಮಾಣಕ್ಕೆ ರೂ.100 ಲಕ್ಷ ಕಾಯ್ದಿರಿಸಲಾಗಿರುತ್ತದೆ.

ಪಟ್ಟಣದ ಬೆಟ್ಟಮಕ್ಕಿ ಬಡಾವಣೆಯಲ್ಲಿರುವ ಅಂಬೇಡ್ಕರ್ ಭವನದ ಮುಂದುವರೆದ ಕಾಮಗಾರಿ ಕಾಂಪೌಂಡ್ ಮತ್ತು ಇಂಟರ್‌ಲಾಕ್ ಕಾಮಗಾರಿಗೆ ರೂ 30 ಲಕ್ಷ, ರಸ್ತೆ, ಚರಂಡಿ ಇತ್ಯಾದಿ ಕಾಮಗಾರಿಗಳಿಗಾಗಿ ಪ್ರತಿ ವಾರ್ಡ್‌ಗೆ ತಲಾ 10 ಲಕ್ಷ ಅನುದಾನ ಕಾಯ್ದಿರಿಸಲಾಗಿದೆ.

ಪಟ್ಟಣದ ಮುಖ್ಯ ಸರ್ಕಲ್‌ಗಳಲ್ಲಿ ಸಿಸಿ ಕ್ಯಾಮೆರಾ ಅಳವಡಿಕೆ ರೂ 15 ಲಕ್ಷ , ವ್ಯಾಯಾಮ ಶಾಲೆ ಪರಿಕರಣಗಳ ಖರೀದಿಗೆ ರೂ 10 ಲಕ್ಷ, ನೀರು ಶುದ್ಧೀಕರಣ ಘಟಕದ ಆವರಣದಲ್ಲಿ ವಸತಿ ಗೃಹ ನಿರ್ಮಾಣ ರೂ. 100 ಲಕ್ಷ, ಕುರುವಳ್ಳಿ ತುಂಗಾ ನದಿ ತೀರದಲ್ಲಿ ಪಬ್ಲಿಕ್ ಪಾರ್ಕ್, ಪಟ್ಟಣ ಪಂಚಾಯಿತಿ ಕ್ಯಾಂಟೀನ್ ನಿರ್ಮಾಣಕ್ಕೆ ರೂ 8 ಲಕ್ಷ , ಫುಡ್ ಕೋರ್ಟ್ ನಿರ್ಮಾಣಕ್ಕಾಗಿ ರೂ 50 ಲಕ್ಷ , ಗಾಂಧಿ ಚೌಕದ ಬಳಿ ಅಶೋಕ ಸ್ತಂಭ ನಿರ್ಮಾಣಕ್ಕೆ ರೂ. 15 ಲಕ್ಷ ಕಾಯ್ದಿರಿಸಲಾಗಿದೆ.

ಈ ಸಂದರ್ಭದಲ್ಲಿ ಪಟ್ಟಣ ಪಂಚಾಯಿತಿಯ ಎಲ್ಲಾ ಸದಸ್ಯರು ಭಾಗಿಯಾಗಿದ್ದರು.

ಈಶ್ವರೀಯ ವಿವಿಯಿಂದ 150 ಮಹಿಳೆಯರಿಗೆ ಸನ್ಮಾನ

• **ಚಿಕ್ಕಮಗಳೂರು** : ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ನಗರದ ಪ್ರಜಾಪಿತ ಬ್ರಹ್ಮಾಕುಮಾರೀಸ್ ಈಶ್ವರೀಯ ವಿಶ್ವವಿದ್ಯಾಲಯ ವತಿಯಿಂದ 150 ಮಹಿಳೆಯರಿಗೆ ಸನ್ಮಾನಿಸಲಾಯಿತು.



ಬಸವನಹಳ್ಳಿ ಜ್ಞಾನಪ್ರಕಾಶ ಭವನದಲ್ಲಿ ಶಿವಶಕ್ತಿ ಲೀಡರ್‌ಶಿಪ್ ಅಪ್ರೋಚ್ ಭಾರತ ಮತ್ತು ನೇಪಾಳ ಕಾರ್ಯಕ್ರಮವನ್ನು ಮಹಿಳೆಯರಿಗಾಗಿ ಏರ್ಪಡಿಸಲಾಗಿತ್ತು. ಇದರ ಮುಖ್ಯಸ್ಥರಾದ ರಾಜಸ್ಥಾನದ ಮೌಂಟ್ ಅಬುವಿನ ಹಿರಿಯ ರಾಜಯೋಗಿನಿ ಬ್ರಹ್ಮಾಕುಮಾರಿ ಡಾ. ಸುನೀತಾ ದೀದೀ ಅವರು ಮಾತನಾಡಿ, ಏನೇ ಆಗಲಿ ಸದಾ ಸ್ನೇಹಿ ಶಿವಶಕ್ತಿಯಾಗಿರಬೇಕು ಎಂದರು.

ಮಹಿಳೆಯರು ನಿಸ್ವಾರ್ಥ ಮಾತೃಪ್ರೇಮದಿಂದ ಪರಸ್ಪರ ಪ್ರೀತಿ ಹಾಗೂ ವಿಶ್ವಾಸವನ್ನು ವಿಕಾಸಗೊಳಿಸಿಕೊಳ್ಳಬೇಕು ಎಂದು ತಿಳಿಸಿ, ಧ್ಯಾನದ ಮೂಲಕ ಇದರ ಅನುಭೂತಿ ಮಾಡಿಸಿದರು. ಉಪಸ್ಥಿತರಿದ್ದ ಎಲ್ಲಾ ಮಹಿಳೆಯರು ಎಂತಹದ್ದೇ ಪರಿಸ್ಥಿತಿ ಇರಲಿ ಶಿವನಿಂದ ಶಕ್ತಿಯನ್ನು ಪಡೆದು ಸದಾ ಸ್ನೇಹಿ ಶಿವಶಕ್ತಿ ಯಾಗಿರುತ್ತೇವೆ ಎಂಬ ಸಂಕಲ್ಪ ಮಾಡಿದರು.

ಇದೇ ವೇಳೆ ದೀದೀಯವರು ಪರಮಾತ್ಮನ ಪತ್ರ, ಟ್ರೋಫಿ, ಶಿವಶಕ್ತಿ ಸ್ವಭಿಮಾನದ ಪುಸ್ತಕ ವಿತರಿಸಿದರು. ಬ್ರಹ್ಮಾಕುಮಾರಿ ಡಾ. ಭಾಗ್ಯಕ್ಕ ಅವರಿಂದ ಈಶ್ವರೀಯ ಕಾಣಿಕೆ, ಸಿಹಿ ಹಾಗೂ ಬ್ರಹ್ಮಭೋಜನ ಏರ್ಪಡಿಸಲಾಯಿತು.

ಶಾಸಕ ತಮ್ಮಯ್ಯ ಅವರ ಪತ್ನಿ ಮಂಗಳ ಹಾಗೂ ಪರಿವಾರದವರು, ಅಣುವ್ರತ್ ಸಮಿತಿ ಅಧ್ಯಕ್ಷರಾದ ಮಂಜು ಬನ್ಸಾಲಿ, ಬಿಜೆಪಿ ನಗರಸಭೆ ಸದಸ್ಯೆ ಕವಿತಾ ಶೇಖರ್, ಸ್ತ್ರೀರೋಗ ತಜ್ಞರಾದ ಡಾ. ಶಾಲಿನಿ, ಆಯುಶ್ ಅಧಿಕಾರಿಗಳಾದ ಡಾ. ಗೀತಾ, ಕ್ರೀಡಾ ಹಾಗೂ ಯುವ ಸಬಲೀಕರಣ ಇಲಾಖೆಯ ಮಂಜುಳಾ ಹುಲ್ಲಳ್ಳಿ, ಸುಮ ಪ್ರಸಾದ್ ಇತರರ ಭಾಗವಹಿಸಿದ್ದರು. ಜ್ಞಾನ ರಶ್ಮಿ ಶಾಲೆಯ ಮಕ್ಕಳಿಂದ ಸುಂದರವಾದ ಶಿವನ ಸ್ತುತಿ ಗೀತೆಯ ನೃತ್ಯ ಮನಮೋಹಕವಾಗಿತ್ತು.

ಎಲ್ರ ಕಾಲೆಳೆಯುತ್ತೆ ಕಾಲ ಮಾತು ಮಧುರ.. ಹಾಡು



ಈ ಹಿಂದೆ ಕಾರ್ನಿ, ಕೃಷ್ಣ ಟಾಕೀಸ್ ಚಿತ್ರಗಳನ್ನು ನಿರ್ಮಿಸಿದ್ದ ಗೋವಿಂದರಾಜು ಅವರ ನಿರ್ಮಾಣದ ಮತ್ತೊಂದು ಚಿತ್ರ ಎಲ್ರ ಕಾಲೆಳೆಯುತ್ತೆ ಕಾಲ. ಒಂದು ಘಟನೆ ವ್ಯಕ್ತಿಯೊಬ್ಬನ ಜೀವನದಲ್ಲಿ ಯಾವ ರೀತಿ ಪ್ರಮುಖ ಪಾತ್ರ ವಹಿಸುತ್ತದೆ, ಅಲ್ಲದೆ ಕಾಲ ಎನ್ನುವುದು ಯಾರನ್ನೂ ಸಹ ಬಿಡುವುದಿಲ್ಲ, ಎಲ್ಲರ ಕಾಲನ್ನೂ ಎಳೆಯುತ್ತದೆ ಎಂಬ ಕಾನ್ಸೆಪ್ಟ್ ಇಟ್ಟುಕೊಂಡು ಸುಜಯ್ ಶಾಸ್ತ್ರಿ ಅವರು ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದಾರೆ.

ಈಗಾಗಲೇ ತನ್ನ ಟೀಸರ್, ಚಂದನ್ ಶೆಟ್ಟಿ, ರಾಗಿಣಿ ದ್ವಿವೇದಿ ಅಭಿನಯದ ಪ್ರೊಮೋಷನ್ ಸಾಂಗ್ ಮೂಲಕ ಗಮನ ಸೆಳೆದಿದ್ದ ಚಿತ್ರತಂಡ ಇದೀಗ ಮತ್ತೊಂದು ಸುಂದರ ರೆಟ್ರೋ ಹಾಡಿನೊಂದಿಗೆ ಪ್ರೇಕ್ಷಕರ ಮುಂದೆ ಬಂದಿದೆ. ಹೌದು, ಮಂಗಳವಾರ ಈ ಚಿತ್ರದ ಮಾತು ಮಧುರಾ ಎಂಬ ಹಾಡಿನ ಬಿಡುಗಡೆ ಕಾರ್ಯಕ್ರಮ ನಡೆಯಿತು. ಅನುರಾಧಾ ಭಟ್ ಹಾಗೂ ದರ್ಶನ್ ನಾರಾಯಣ್ ಕಂಠದಲ್ಲಿ ಮೂಡಿಬಂದಿರುವ ಈ ಗೀತೆಯಲ್ಲಿ ನಾಯಕ ಚಂದನ್ ಶೆಟ್ಟಿ ಹಾಗೂ ನಾಯಕಿ ಅರ್ಚನಾ ಕೊಟ್ಟಿಗೆ ಅಭಿನಯಿಸಿದ್ದಾರೆ.



ಅಂದಹಾಗೆ ರೆಟ್ರೋ ಶೈಲಿಯ ಕಥೆ ಹೊಂದಿರುವ ಈ ಚಿತ್ರದಲ್ಲಿ ರ್‍ಯಾಪರ್, ಸಂಗೀತ ನಿರ್ದೇಶಕ ಚಂದನ್ ಶೆಟ್ಟಿ ಅವರು ನಾಯಕನಾಗಿ ಕಾಣಿಸಿಕೊಂಡಿದ್ದಾರೆ. ಈಗಾಗಲೇ ತನ್ನ ಶೂಟಿಂಗ್ ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನು ಮುಗಿಸಿಕೊಂಡಿರುವ ಎಲ್ರ ಕಾಲೆಳೆಯುತ್ತೆ ಕಾಲ ಚಿತ್ರವು ಏಪ್ರಿಲ್ 10ರಂದು ರಾಜ್ಯಾದ್ಯಂತ ತೆರೆಕಾಣಲಿದೆ, ಗೋಕುಲ ಎಂಟರ್‌ಪ್ರೈಸಸ್ ಬ್ಯಾನರ್ ಮೂಲಕ ಗೋವಿಂದರಾಜು ಹಾಗೂ ಉಷಾ ಗೋವಿಂದರಾಜು ಅವರ ನಿರ್ಮಾಣದ ಈ ಚಿತ್ರಕ್ಕೆ ಚಂದನ್‌ಶೆಟ್ಟಿ ಅವರೇ ಸಂಗೀತ ಸಂಯೋಜನೆ ಮಾಡಿದ್ದಾರೆ.

ಈ ಪ್ರೆಸ್‌ಮೀಟ್‌ನ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ನಿರ್ದೇಶಕ ಕಮ್ ನಟ ಸುಜಯ್ ಶಾಸ್ತ್ರಿ ನಾನು ಗುಬ್ಬಿಮೇಲೆ ಬ್ರಹ್ಮಾಸ್ತ್ರ ನಂತರ ನಿರ್ದೇಶಿಸಿರುವ ಚಿತ್ರವಿದು. 80-90ರ ದಶಕದಲ್ಲಿ ನಡೆಯೋ ರೆಟ್ರೋ ಕಥೆಯನ್ನು ಈ ಚಿತ್ರದಲ್ಲಿ ಹೇಳಿದ್ದೇನೆ, ಅದೇ ಶೈಲಿಯಲ್ಲಿ ಚಿತ್ರದ ಪ್ರಮೋಷನ್ ಕೂಡ ಮಾಡ್ತಾ ಇದ್ದೇವೆ. ಕನಕಪುರದ ಸುತ್ತಮುತ್ತ ಚಿತ್ರದ ಶೂಟಿಂಗ್ ನಡೆಸಿದ್ದೇವೆ. ತಾರಾ, ದತ್ತಣ್ಣ, ರಾಕೇಶ್ ಪೂಜಾರಿ, ಮಂಜು ಪಾವಗಡ ಮುಂತಾದವರು ಅಭಿನಯಿಸಿರುವ ತಿಳಿಹಾಸ್ಯದಿಂದ ಕೂಡಿದ ಕೌಟುಂಬಿಕ ಚಿತ್ರವಿದು. ಸಮಯಕ್ಕೆ ನಾವು ಅಗೌರವ ಕೊಟ್ಟರೆ, ಅದು ನಮಗೆ ಅಗೌರವ ಕೊಡುತ್ತದೆ. ಚಿತ್ರದಲ್ಲಿ ನಾಯಕನ ಪರಿಸ್ಥಿತಿ ನಮಗೆ ಹಾಸ್ಯವಾಗಿಯೇ ಕಾಣುತ್ತದೆ ಎಂದರು.



ನಿರ್ಮಾಪಕ ಗೋವಿಂದರಾಜು ಮಾತನಾಡುತ್ತ ನಮ್ಮ ಗೋಕುಲ ಎಂಟರ್‌ಪ್ರೈಸಸ್ ಬ್ಯಾನರ್ ಅಡಿ ಹೊರಬರುತ್ತಿರುವ ಮೂರನೇ ಚಿತ್ರವಿದು. ನಮ್ಮ ಸಿನಿಮಾ ಪ್ರೇಕ್ಷಕರನ್ನು 80-90ನೇ ಸೆಂಚುರಿಗೆ ಕರೆದುಕೊಂಡು ಹೋಗುತ್ತದೆ. ನಿರ್ದೇಶಕರು ಅದ್ಭುತವಾಗಿ ಈ ಚಿತ್ರವನ್ನು ಕಟ್ಟಿಕೊಟ್ಟಿದ್ದಾರೆ. ಇಡೀ ಕುಟುಂಬ ಕುಳಿತು ನೋಡುವಂತ ಸಂಪೂರ್ಣ ಮನರಂಜನಾತ್ಮಕ ಚಿತ್ರ ಇದಾಗಿದ್ದು, ಚಿತ್ರವನ್ನು ಏಪ್ರಿಲ್ 17ರಂದು ರಿಲೀಸ್ ಮಾಡುತ್ತಿದ್ದೇವೆ ಎಂದರು.

ನಾಯಕನಟ ಚಂದನ್ ಶೆಟ್ಟಿ ಮಾತನಾಡುತ್ತ ನಾನು ನಾಯಕನಾಗಬೇಕೆಂದು ಆಯ್ಕೆ ಮಾಡಿಕೊಂಡ ಮೊದಲ ಚಿತ್ರವಿದು, ಸುಜಯ್ ಅವರ ಗುಬ್ಬಿ ಮೇಲೆ ಬ್ರಹ್ಮಾಸ್ತ್ರ ಚಿತ್ರ ನೋಡಿದಾಗ ಇಷ್ಟವಾಗಿತ್ತು. ತುಂಬಾ ಫಾಸ್ಟ್ ಆಗಿ ಸಿನಿಮಾ ಮಾಡಿದ್ರು, ಆದರೆ ರಿಲೀಸ್ ಆಗಲು ತುಂಬಾ ಸಮಯ ತೆಗೆದುಕೊಂಡಿತು. ನಿರ್ದೇಶಕ ಹೇಳಿದಂತೆ ಅಭಿನಯ ಮಾಡಿದ್ದೇನೆ. ಆಗ ನಟನೆ ನನಗೆ ತೀರಾ ಹೊಸದು ಎಂದರು,

ಸಂಗೀತ ನಿರ್ದೇಶಕ ಪ್ರವೀಣ್ ಮಾತನಾಡಿ 90ರ ಕಾಲಘಟ್ಟದಲ್ಲಿದ್ದ ಸಂಗೀತವನ್ನೇ ಚಿತ್ರದಲ್ಲಿ ಬಳಸಿಕೊಂಡಿದ್ದೇವೆ. ಚಿತ್ರದಲ್ಲಿ ಒಟ್ಟು 5 ಹಾಡುಗಳಿದ್ದು, ಇದು ನಾಲ್ಕನೇ ಹಾಡು, ಈ ಹಾಡನ್ನು ನಾನೇ ಬರೆದು ಸಂಗೀತ ಸಂಯೋಜನೆ ಮಾಡಿದ್ದೇನೆ, ರೆಟ್ರೋ ಸ್ಟೈಲ್‌ನಲ್ಲಿಯೇ ಸಂಗೀತ ಮಾಡೋದು ಚಾಲೆಂಜ್ ಆಗಿತ್ತು ಎಂದರು.

ನಾಯಕಿ ಅರ್ಚನಾ ಕೊಟ್ಟಿಗೆ ಮಾತನಾಡಿ ಚಿತ್ರದಲ್ಲಿ ನನ್ನ ಪಾತ್ರದ ಹೆಸರು ವಸಂತ. ಮೆಸ್ ನಡೆಸುವ ಹುಡುಗಿ ಎಂದು ಹೇಳಿದರು, ಕಥೆ ಬರೆದ ರಾಜಗುರು ಹೊಸಕೋಟೆ ಮಾತನಾಡಿ ಕಾಲದ ಮೇಲೆ ನಮ್ಮ ಸಿನಿಮಾ ಇದ್ದಿದ್ದರಿಂದ ಈ ಶೀರ್ಷಿಕೆ ಇಡಲಾಯಿತು. ಕಥೆಯಲ್ಲಿ ಸಮಯಕ್ಕೆ ಬೆಲೆ ಕೊಡಬೇಕು ಇಲ್ಲಾಂದ್ರೆ ಏನಾಗುತ್ತದೆ ಎಂಬುದನ್ನು ಹೇಳಿದ್ದೇವೆ ಎಂದರು,

ವಿಶ್ವಜೀತ್‌ರಾವ್ ಅವರ ಛಾಯಾಗ್ರಹಣ, ಪ್ರವೀಣ್ ಅವರ ಸಂಗೀತ ಈ ಚಿತ್ರಕ್ಕಿದೆ.

ಐವತ್ತರ ಸಂಭ್ರಮದಲ್ಲಿ ಮಗ್ಗಿಪುಸ್ತಕ

ಹರಿವರಾಸನಂ ತಾವೇ ಬರೆದ ಅವನಿ ಎಂಬ ಕಾದಂಬರಿಯನ್ನಾಧರಿಸಿ ನಿರ್ಮಾಣವಾದ ಚಿತ್ರ ಮಗ್ಗಿ ಪುಸ್ತಕ ಇದೀಗ ಯಶಸ್ವಿಯಾಗಿ 50ದಿನಗಳನ್ನು ಪೂರೈಸಿ ಮುನ್ನಡೆದಿದೆ, ಅವನಿ ಎಂಬ ಮಗುವಿನ ಸುತ್ತ ನಡೆಯುವ ಘಟನೆಗಳನ್ನು ಇಟ್ಟುಕೊಂಡು ಹರಿವರಾಸನಂ ಅವರೇ ಚಿತ್ರಕಥೆ, ಸಂಭಾಷಣೆ ಬರೆದು ಈ ಚಿತ್ರವನ್ನು ನಿರ್ದೇಶನ ಮಾಡಿದ್ದರು, ಮಗ್ಗಿಪುಸ್ತಕ ಚಿತ್ರದ ಐವತ್ತರ ಸಂಭ್ರಮದ ಸಮಾರಂಭ ಮಂಗಳವಾರ ನಡೆಯಿತು, ಈ ಸಂದರ್ಭದಲ್ಲಿ ಚಿತ್ರದಲ್ಲಿ ಕೆಲಸ ಮಾಡಿ ಗೆಲುವಿಗೆ ಕಾರಣರಾದ ಕಲಾವಿದರು ಹಾಗೂ ತಂತ್ರಜ್ಞರಿಗೆ ಸ್ಮರಣ ಫಲಕ ನೀಡಿ ಗೌರವಿಸಲಾಯಿತು, 4 ಆಯಾಮಗಳಲ್ಲಿ ನಡೆಯುವ ಕಥೆಯಿರುವ ಈ ಚಿತ್ರದಲ್ಲಿ ಮಕ್ಕಳ ಜತೆಗೆ ಪೋಷಕರಿಗೂ ಉತ್ತಮವಾದ ಸಂದೇಶ ಈ ಚಿತ್ರದಲ್ಲಿದೆ.

ನಿರ್ದೇಶಕ ಹರಿವರಾಸನಂ ಅವರು ತಮ್ಮ ಮೊದಲ ಪ್ರಯತ್ನದಲ್ಲೇ ಪ್ರೇಕ್ಷಕರ ನಾಡಿಮಿಡಿತವನ್ನರಿತು ನಿರೂಪಿಸಿದ್ದಾರೆ. ಅವರ ಪ್ರಥಮ ಚಿತ್ರವೇ 50 ದಿನಗಳನ್ನು ಪೂರೈಸಿದೆ. ರಾಜ್ಯಾದ್ಯಂತ ಸಾವಿರಾರು ಸಂಖ್ಯೆಯ ವಿದ್ಯಾರ್ಥಿಗಳು, ಪೋಷಕರು ಚಿತ್ರ ವೀಕ್ಷಿಸಿ ಮೆಚ್ಚಿಕೊಂಡಿದ್ದಾರೆ. ಸದ್ಯ ಈ ಚಿತ್ರ ಉತ್ತರ ಕರ್ನಾಟಕದಲ್ಲಿ ಭರ್ಜರಿ ಪ್ರದರ್ಶನ ಕಾಣುತ್ತಿದೆ.



ಚಿನ್ನಸ್ವಾಮಿ ಫಿಲಂಸ್ ಅಡಿ ಎತಿರಾಜ್ ಅವರು ಈ ಚಿತ್ರವನ್ನು ನಿರ್ಮಿಸಿದ್ದಾರೆ. ಮಗ್ಗಿಪುಸ್ತಕವೆಂಬುದು ಬದುಕಿನ ಲೆಕ್ಕಾಚಾರವಾಗಿದ್ದು, ಜೀವನವೇ ಒಂದು ಮಗ್ಗಿಪುಸ್ತಕವಿದ್ದಂತೆ, ಇದರಲ್ಲಿ ಒಳ್ಳೆಯದನ್ನು ಕೂಡಬೇಕು, ಕೆಟ್ಟದ್ದನ್ನು ಕಳೆಯಬೇಕು, ಜ್ಞಾನವನ್ನು ಗುಣಿಸಬೇಕು, ಅಜ್ಞಾನವನ್ನು ಭಾಗಿಸಬೇಕು ಎಂಬ ಸಂದೇಶವಿದೆ, ನಾಲ್ಕು ಆಯಾಮಗಳಲ್ಲಿ ನಡೆಯುವ ಹೈಪರ್ ಲಿಂಕ್ ಕಥೆ ಈ ಚಿತ್ರದಲ್ಲಿದೆ.

ವೇದಿಕೆಯಲ್ಲಿ ಮಾತನಾಡಿದ ಹರಿವರಾಸನಂ ಇಡೀ ಚಿತ್ರತಂಡದ ಪರಿಶ್ರಮವೇ ಈ ಯಶಸ್ಸಿಗೆ ಕಾರಣ. ನಮ್ಮ ಚಿತ್ರ 100 ದಿನಗಳನ್ನೂ ಪೂರೈಸಬೇಕೆಂಬ ಆಸೆಯಿದೆ, ಚಿತ್ರವೀಗ 13 ಥೇಟರ್‌ಗಳಲ್ಲಿ ರನ್ ಆಗುತ್ತಿದೆ. ಮುಂದಿನ ವಾರದಿಂದ ರಜೆಗಳು ಪ್ರಾರಂಭವಾಗುತ್ತಿದ್ದು, ಮತ್ತಷ್ಟು ಥೇಟರ್‌ಗಳು ಸೇರ್ಪಡೆಯಾಗುತ್ತಿವೆ ಎಂದು ಹೇಳಿದರು. ನಿರ್ಮಾಪಕ ಎತಿರಾಜ್ ಮಾತನಾಡುತ್ತ ನಮ್ಮ ಚಿತ್ರ 50 ದಿನ ಓಡಿದ್ದೇ ಖುಷಿಯ ವಿಚಾರ, ಈ ಯಶಸ್ಸಿಗೆ ಸಹಕರಿಸಿದ ಎಲ್ಲ ತಂತ್ರಜ್ಞರು, ಕಲಾವಿದರಿಗೆ ನನ್ನ ಕೃತಜ್ಞತೆಗಳು ಎಂದು ಹೇಳಿದರು,



ಸಂಗೀತ ನಿರ್ದೇಶಕ ಯಶಸ್ ನಾಚಪ್ಪ ಮಾತನಾಡುತ್ತ 50 ದಿನ ಅನ್ನೋದೇ ವಿಶೇಷ. ನನ್ನ ಮೊದಲ ಚಿತ್ರವೇ 50 ದಿನ ಆಗಿದೆ. 7 ಹಾಡುಗಳನ್ನು 17 ಜನ ಸಿಂಗರ್ಸ್ ಹಾಡಿದ್ದಾರೆ ಎಂದು ಹೇಳಿದರೆ, ಛಾಯಾಗ್ರಾಹಕ ನಂದಕುಮಾರ್ ಮಾತನಾಡುತ್ತ ಈ ಸಕ್ಸಸ್ಸಿಗೆ ಕಾರಣ ನಮ್ಮ ನಿರ್ದೇಶಕರು. ಅವರು ಚಿತ್ರಕ್ಕಾಗಿ ತುಂಬಾ ಕಷ್ಟಪಟ್ಟಿದ್ದಾರೆ. ಈಗಿನ ದಿನಗಳಲ್ಲಿ 50 ದಿನ ಓಡೋದು ತುಂಬಾ ಕಮ್ಮಿ, ನನ್ನ ಇಷ್ಟು ದಿನಗಳ ಜರ್ನಿಯಲ್ಲಿ 50 ದಿನ ಕಂಡ ಮೊದಲ ಚಿತ್ರವಿದು ಎಂದು ಸಂತಸ ವ್ಯಕ್ತಪಡಿಸಿದರು,

ಸದ್ಯ ಪರೀಕ್ಷೆಗಳು ಮುಗಿಯುತ್ತಿದ್ದು, ಈವಾರ ಭೂಮಿಕಾ ಸೇರಿದಂತೆ ಮತ್ತಷ್ಟು ಸೆಂಟರ್‌ಗಳಲ್ಲಿ ಚಿತ್ರ ರಿಲೀಸಾಗುತ್ತಿದೆ, ಚಿತ್ರದ ಕಲೆಕ್ಷನ್ ಕೂಡ ಜಾಸ್ತಿಯಾಗುವ ನಿರೀಕ್ಷೆಯಿದೆ, ಅಲ್ಲದೆ ನಮ್ಮ ಚಿತ್ರದ ಓಟಿಟಿ ಹಕ್ಕನ್ನು ಅಮೆಜಾನ್ ಸಂಸ್ಥೆ ಪಡೆದಿದೆ ಎಂದೂ ನಿರ್ದೇಶಕರು ಹೇಳಿಕೊಂಡರು,

ಬೆಂಗಳೂರು, ಮೈಸೂರು, ಮಂಗಳೂರು, ನಂಜನಗೂಡು, ಶ್ರೀರಂಗಪಟ್ಟಣ, ಹೆಚ್.ಡಿ.ಕೋಟೆ ಸುತ್ತಮುತ್ತಲ ಪ್ರದೇಶಗಳಲ್ಲಿ ಸುಮಾರು 80ಕ್ಕೂ ಹೆಚ್ಚು ದಿನಗಳ ಕಾಲ ಈ ಚಿತ್ರದ ಚಿತ್ರೀಕರಣ ನಡೆಸಲಾಗಿದೆ. ಮಗ್ಗಿಪುಸ್ತಕ ಚಿತ್ರದಲ್ಲಿ ಒಟ್ಟು 7 ಹಾಡುಗಳಿದ್ದು ಎಸ್.ಎಸ್.ನಾಚಪ್ಪ ಅವರ ಸಂಗೀತ ಸಂಯೋಜನೆಯಿದೆ. ಎಂ.ಎಂ. ಕೀರವಾಣಿ ಅವರು ಚಿತ್ರದ ಹಾಡೊಂದಕ್ಕೆ ದನಿಯಾಗಿರುವುದು ವಿಶೇಷ. ಉಳಿದಂತೆ ಕನ್ನಡ ಗಾಯಕರಾದ ರಾಜೇಶ್ ಕೃಷ್ಣನ್, ವಿಜಯ ಪ್ರಕಾಶ್, ಕಂಭದ ರಂಗಯ್ಯ, ನವೀನ್ ಸಜ್ಜು, ಇಂದು ನಾಗರಾಜ್, ಗುರುರಾಜ್ ಹೊಸಕೋಟೆ, ಸೈಂಧವಿ, ವೈಕಂ ವಿಜಯಲಕ್ಷ್ಮಿ ಹಾಗೂ ರವೀಂದ್ರ ಸೊರಗಾವಿ ಸೇರಿದಂತೆ 17 ಜನ ಈ ಚಿತ್ರದಲ್ಲಿ ಹಾಡಿದ್ದಾರೆ.

ಒಬ್ಬ ಪ್ರಬುದ್ಧ ನಟಿ, ಲೇಖಕಿಯಾಗಿಯೂ ಗುರುತಿಸಿಕೊಂಡಿರುವ ರಂಜನಿ ರಾಘವನ್ ಅವರು ನಿರ್ದೇಶನ ಮಾಡುತ್ತಿರುವ ಚಿತ್ರದ ಹೆಸರು ಡೀ ಡೀ ಢಿಕ್ಕಿ. ಗುರುಶಿಷ್ಯರು, ಲ್ಯಾಂಡ್‌ಲಾರ್ಡ್ ಚಿತ್ರಗಳ ನಿರ್ದೇಶಕ ಹಾಗೂ ಕಾಟೇರ ಚಿತ್ರದ ಕಥೆಗಾರ ಜಡೇಶ್ ಕೆ.ಹಂಪಿ ಅವರ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ನೆನಪಿರಲಿ ಪ್ರೇಮ್ ಈ ಚಿತ್ರದಲ್ಲಿ ನಾಯಕನಾಗಿ ನಟಿಸಿದ್ದಾರೆ. ಅಲ್ಲದೆ ಗೋಲ್ಡನ್‌ಸ್ಟಾರ್ ಗಣೇಶ್ ಅವರ ಪುತ್ರ ಮಾಸ್ಟರ್ ವಿಹಾನ್ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಈಗಾಗಲೇ ಈ ಚಿತ್ರದ ಚಿತ್ರೀಕರಣ ಸಂಪೂರ್ಣವಾಗಿದೆ.

ಚಿತ್ರೀಕರಣ ಮುಗಿಸಿದ ಡೀ ಡೀ ಢಿಕ್ಕಿ

ಇದು ಊರುಬಿಟ್ಟು ಬಂದವರ ಕಥೆ





ಧಾರಾವಾಹಿಗಳಲ್ಲಿ ನಟಿಸುವ ಮೂಲಕ ಬಣ್ಣದ ಲೋಕಕ್ಕೆ ಎಂಟ್ರಿ ಕೊಟ್ಟ ನಟಿ, ಲೇಖಕಿ ರಂಜನಿ ರಾಘವನ್ ಅವರು ಒಬ್ಬ ಬಹುಮುಖ ಪ್ರತಿಭೆ, ನಟನೆಯ ಜತೆಗೆ ಬರವಣಿಗೆಯನ್ನೂ ಸಹ ಮೈಗೂಡಿಸಿಕೊಂಡು ಬಂದಿರುವ ಇವರು ಇದೀಗ ಒಬ್ಬ ನಿರ್ದೇಶಕಿಯಾಗಿಯೂ ಸಹ ತಮ್ಮ ಪ್ರತಿಭಾವಂತಿಕೆಯನ್ನು ಮೆರೆದಿದ್ದಾರೆ, ಈಗ ನಿರ್ದೇಶಕಿಯಾಗಿ ಪ್ರಥಮ ಪ್ರಯತ್ನದಲ್ಲೇ ಮ್ಯೂಸಿಕ್ ಮಾಸ್ಟರೋ ಲೆಜೆಂಡ್ ಇಳಯರಾಜಾ ಅವರ ಜತೆ ಕೆಲಸ ಮಾಡುವ ಅದೃಷ್ಟ ಪಡೆದಿದ್ದಾರೆ.

ಒಬ್ಬ ಪ್ರಬುದ್ಧ ನಟಿ, ಲೇಖಕಿಯಾಗಿಯೂ ಗುರುತಿಸಿಕೊಂಡಿರುವ ರಂಜನಿ ರಾಘವನ್ ಅವರು ನಿರ್ದೇಶನ ಮಾಡುತ್ತಿರುವ ಚಿತ್ರದ ಹೆಸರು ಡೀ ಡೀ ಢಿಕ್ಕಿ. ಗುರುಶಿಷ್ಯರು, ಲ್ಯಾಂಡ್ ಲಾರ್ಡ್ ಚಿತ್ರಗಳ ನಿರ್ದೇಶಕ ಹಾಗೂ ಕಾಟೇರ ಚಿತ್ರದ ಕಥೆಗಾರ ಜಡೇಶ್ ಕೆ.ಹಂಪಿ ಅವರ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ನೆನಪಿರಲಿ ಪ್ರೇಮ್ ಈ ಚಿತ್ರದಲ್ಲಿ ನಾಯಕನಾಗಿ ನಟಿಸಿದ್ದಾರೆ. ಅಲ್ಲದೆ ಗೋಲ್ಡನ್‌ಸ್ಟಾರ್ ಗಣೇಶ್ ಅವರ ಪುತ್ರ ಮಾಸ್ಟರ್ ವಿಹಾನ್ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಈಗಾಗಲೇ ಈ ಚಿತ್ರದ ಚಿತ್ರೀಕರಣ ಸಂಪೂರ್ಣವಾಗಿದೆ. ಈ ಹಿಂದೆ ಡಬ್ಬಿ ಪುಸ್ತಕ ಎಂಬ ಕಥೆ ಬರೆದು ಓದುಗರನ್ನ ಸೆಳೆದಿರುವ ರಂಜನಿ ರಾಘವನ್ ಅವರು ಈಗ ಡೀ ಡೀ ಢಿಕ್ಕಿ ಸಿನಿಮಾದ ಚಿತ್ರೀಕರಣವನ್ನು ಯಶಸ್ವಿಯಾಗಿ ಮುಗಿಸಿದ್ದಾರೆ, ಈ ಮೂಲಕ ಕನ್ನಡ ಚಿತ್ರರಂಗಕ್ಕೆ ಮತ್ತೊಬ್ಬ ಯುವ ನಿರ್ದೇಶಕಿಯಾಗಿ ಕಾಲಿಡುತ್ತಿದ್ದಾರೆ. ಜಡೇಶ್ ಕೆ ಹಂಪಿ ಅವರ ನಿರ್ಮಾಣದ ಈ ಚಿತ್ರದ ಕ್ರಿಯೇಟಿವ್ ಹೆಡ್ ಆಗಿ ತರುಣ್ ಕಿಶೋರ್ ಸುಧೀರ್ ಅವರು ಚಿತ್ರತಂಡಕ್ಕೆ ಜತೆಯಾಗಿದ್ದಾರೆ, ಚಿತ್ರದ ಕುರಿತಂತೆ ನಿರ್ದೇಶಕಿ ರಂಜನಿ ರಾಘವನ್ ಮಾತನಾಡುತ್ತ ನಿರ್ದೇಶಕಿಯಾಗಬೇಕೆಂಬುದು ನನ್ನ ಬಹುದಿನಗಳ ಕನಸಾಗಿತ್ತು, ಈ ಕಥೆ ಬರೆಯುವಾಗ ನನಗೆ ಅನೇಕರು ಸಾಥ್ ನೀಡಿದರು. ಕಥೆ ಅಂತಿಮ ಹಂತವನ್ನು ತಲುಪಿದಾಗ ಇದರಲ್ಲಿ ಪ್ರೇಮ್ ಅವರೆ ನಾಯಕನಾಗಿ ನಟಿಸಬೇಕೆಂಬುದು ಎಲ್ಲರ ಆಸೆಯಾಗಿತ್ತು. ಹಾಸ್ಯದ ಮೂಲಕ ಭಾವನಾತ್ಮಕ ಸನ್ನಿವೇಶಗಳನ್ನು ತೋರಿಸುವ ಪ್ರಯತ್ನವಾಗಿ ಡಿ ಡಿ ಢಿಕ್ಕಿ ಮೂಡಿಬಂದಿದೆ. ಸಂಗೀತ ಕ್ಷೇತ್ರದ ಲೆಜೆಂಡ್ ಇಳಯರಾಜ ಅವರು ಚಿತ್ರದ ನಾಲ್ಕು ಹಾಡುಗಳಿಗೆ ಸಂಗೀತ ಸಂಯೋಜನೆ ಮಾಡಿದ್ದು, ಇದೊಂದು ಸಂಗೀತ ಪ್ರಧಾನ ಚಿತ್ರವೂ ಆಗಲಿದೆ ಎಂದು ಹೇಳಿದರು.



ವಿಶೇಷವಾಗಿ ಈ ಚಿತ್ರದಲ್ಲಿ ನಟ ನೆನಪಿರಲಿ ಪ್ರೇಮ್ ಮತ್ತು ಗೋಲ್ಡನ್ ಸ್ಟಾರ್ ಗಣೇಶ್ ಅವರ ಪುತ್ರ ವಿಹಾನ್ ಗಣೇಶ್ ಅಪ್ಪ ಮಗನಾಗಿ ನಟಿಸುತ್ತಿದ್ದಾರೆ. ಡೀ ಡೀ ಢಿಕ್ಕಿ ಸಿನಿಮಾದ ಚಿತ್ರೀಕರಣ ಇತ್ತೀಚೆಗಷ್ಟೇ ಕಂಪ್ಲೀಟ್ ಆಗಿದೆ. ಆರೂರು ಸುಧಾಕರ್ ಶೆಟ್ಟಿ ಅವರ ಛಾಯಾಗ್ರಹಣ, ಕೆ.ಎಂ.ಪ್ರಕಾಶ್ ಅವರ ಸಂಕಲನ ಡೀ ಡೀ ಢಿಕ್ಕಿ ಚಿತ್ರಕ್ಕಿದೆ.

ವಾಸಿಯಾಗದೆ ಇರುವಂಥ ಖಾಯಿಲೆ, ಅದನ್ನು ಬೇಸ್ ಮಾಡಿಕೊಂಡು ಹೆಣೆದಿರುವ ವಿಶೇಷವಾದ ಕಥೆಯಿದು, ಸೊಸೈಟಿಯಲ್ಲಿ ಅದನ್ನು ಹೈಡ್ ಮಾಡಿಕೊಂಡು ಹೇಗೆ ಜೀವನವನ್ನು ಎದುರಿಸಬಹುದು ಎಂಬುದನ್ನು ಹೇಳುವ ಪ್ರಯತ್ನವೇ ಈ ಚಿತ್ರದ ಆಶಯ. ನಾಯಕ ಜೆಕೆ ಅವರ ಪಾತ್ರದ ಹೆಸರೇ ಕಾಡಾ. ಇದೊಂದು ಥ್ರಿಲ್ಲರ್ ಜಾನರ್ ಚಿತ್ರವಾದ್ದರಿಂದ ಪ್ರೇಕ್ಷಕರಿಗೆ ಏನು ಬೇಕೋ ಅಷ್ಟನ್ನು ಮಾತ್ರವೇ ಕೊಟ್ಟು ನಿರೂಪಿಸಲಾಗಿದೆ

ಏ.10ಕ್ಕೆ ಸೈಕಲಾಜಿಕಲ್ ಥ್ರಿಲ್ಲರ್ ಕಾಡಾ



ಈ ಹಿಂದೆ ಥ್ರಿಲ್ಲರ್ ಜಾನರ್ ಕಥಾಹಂದರ ಒಳಗೊಂಡ ರಿಂಗ್ ಮಾಸ್ಟರ್ ಹಾಗೂ ಹಾರರ್ ಕಂಟೆಂಟ್ ಇರುವ ಮಂಜರಿ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದ ನಿರ್ದೇಶಕ ವಿಶ್ರುತ್ ನಾಯಕ್ ಅವರು ಮತ್ತೊಂದು ಚಿತ್ರವನ್ನು ನಿರ್ದೇಶಿಸಿ ತೆರೆಗೆ ತರುತ್ತಿದ್ದಾರೆ. ಏಪ್ರಿಲ್ 10ರಂದು ರಾಜ್ಯಾದ್ಯಂತ ತೆರೆಕಾಣುತ್ತಿರುವ ಆ ಚಿತ್ರದ ಹೆಸರು ಕಾಡಾ. ಸೈಕಲಾಜಿಕಲ್ ಥ್ರಿಲ್ಲರ್ ಕಥಾಹಂದರ ಒಳಗೊಂಡ ಈ ಚಿತ್ರದಲ್ಲಿ ಜಯರಾಮ್ ಕಾರ್ತೀಕ್ (ಜೆಕೆ) ಅವರು ನಾಯಕನಾಗಿ ಕಾಣಿಸಿಕೊಂಡಿದ್ದಾರೆ. ಅಲ್ಲದೆ ಕಾವ್ಯ ಶೆಟ್ಟಿ ಅವರು ನಾಯಕಿಯ ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆ. ಇದೊಂದು ಸೈಕಲಾಜಿಕಲ್, ಥ್ರಿಲ್ಲರ್ ಸಬ್ಜೆಕ್ಟ್ ಹೊಂದಿರೋ ಚಿತ್ರವಾಗಿದ್ದುಢ, ಸಾಕಷ್ಟು ಟ್ವಿಸ್ಟ್ ಅಂಡ್ ಟರ್ನ್‌ಗಳನ್ನು ಚಿತ್ರಕಥೆ ಒಳಗೊಂಡಿದೆ.

ವಿಶ್ರುತ್ ನಾಯಕ್ ಅವರ ಕಥೆ, ಚಿತ್ರಕಥೆ ಹಾಗೂ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಮೂರನೇ ಚಿತ್ರ ಇದಾಗಿದ್ದುಢ, ಮಂಜರಿ ಚಿತ್ರದಲ್ಲಿನ ಅವರ ಅತ್ಯುತ್ತಮ ಅಭಿನಯಕ್ಕೆ ರಾಜ್ಯಪ್ರಶಸ್ತಿಯ ಗೌರವ ಕೂಡ ಸಂದಿತ್ತು.

ಕಾಡಾ ಚಿತ್ರದ ಕುರಿತಂತೆ ಮಾತನಾಡಿದ ವಿಶ್ರುತ್ ನಾಯಕ್ ಅವರು ನಾನು ಈ ಕಥೆ ಮಾಡಿಕೊಂಡಾಗ ಹೊಸಬರನ್ನಿಟ್ಟುಕೊಂಡು ಮಾಡಬೇಕೆಂಬ ಆಲೋಚನೆಯಿತ್ತು. ಸ್ನೇಹಿತರೊಬ್ಬರು ಜೆ.ಕೆ. ಅವರ ಹೆಸರನ್ನು ಸೂಚಿಸಿದಾಗ ಅವರಿಗೆ ಈ ಕಥೆಯನ್ನು ಹೇಳಿದೆ. ಅವಗರು ಕಥೆಯನ್ನು ತುಂಬಾ ಇಷ್ಟಪಟ್ಟು ಪಾತ್ರ ನಿರ್ವಹಿಸಲು ಒಪ್ಪಿಕೊಂಡರು. ಬೆಂಗಳೂರು, ಸಕಲೇಶಪುರ ಹಾಗೂ ಇತರ ಭಾಗಗಳಲ್ಲಿ ಕಾಡಾ ಚಿತ್ರದ ಚಿತ್ರೀಕರಣವನ್ನು ನಡೆಸಿದ್ದೇವೆ.



ವಾಸಿಯಾಗದೆ ಇರುವಂಥ ಖಾಯಿಲೆ, ಅದನ್ನು ಬೇಸ್ ಮಾಡಿಕೊಂಡು ಹೆಣೆದಿರುವ ವಿಶೇಷವಾದ ಕಥೆಯಿದು, ಸೊಸೈಟಿಯಲ್ಲಿ ಅದನ್ನು ಹೈಡ್ ಮಾಡಿಕೊಂಡು ಹೇಗೆ ಜೀವನವನ್ನು ಎದುರಿಸಬಹುದು ಎಂಬುದನ್ನು ಹೇಳುವ ಪ್ರಯತ್ನವೇ ಈ ಚಿತ್ರದ ಆಶಯ. ನಾಯಕ ಜೆಕೆ ಅವರ ಪಾತ್ರದ ಹೆಸರೇ ಕಾಡಾ. ಇದೊಂದು ಥ್ರಿಲ್ಲರ್ ಜಾನರ್ ಚಿತ್ರವಾದ್ದರಿಂದ ಚಿತ್ರಕಥೆಯಲ್ಲಿ ಎಲ್ಲೂ ಬೋರ್ ಹೊಡೆಸದ ಹಾಗೆ ಪ್ರೇಕ್ಷಕರಿಗೆ ಏನು ಬೇಕೋ ಅಷ್ಟನ್ನು ಮಾತ್ರವೇ ಕೊಟ್ಟು ನಿರೂಪಿಸುತ್ತಿದ್ದೇವೆ, ಸ್ಪ್ಲೆಂಡಿಡ್ ಫಿಲಂಸ್ ನಿರ್ಮಾಣದ ಈ ಚಿತ್ರಕ್ಕೆ ನಂದು ಅವರು ಸಂಗೀತ ಸಂಯೋಜನೆ ಮಾಡಿದ್ದು, ಅರುಣ್ ಸುರೇಶ್ ಅವರು ಕ್ಯಾಮೆರಾ ವರ್ಕ್ ನಿಭಾಯಿಸಿದ್ದಾರೆ.

ಡಾ.ರಾಜ್‌ಕುಮಾರ್ ಹುಟ್ಟುಹಬ್ಬಕ್ಕೆ ಪುನೀತ್‌ನಿವಾಸ ಬಿಡುಗಡೆ

ಪುನೀತ್ ರಾಜ್‌ಕುಮಾರ್ ಕನ್ನಡಿಗರ ಆರಾಧ್ಯದೈವ, ಪುನೀತ್ ಅವರ ಆದರ್ಶಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡು 'ಪುನೀತ್‌ನಿವಾಸ' ಕಟ್ಟಿದ ಬಡ ಅಭಿಮಾನಿಯೊಬ್ಬನ ಕಥೆಯನ್ನು ಹೇಳುವ ಚಿತ್ರ ಪುನೀತ್‌ನಿವಾಸ ಏಪ್ರಿಲ್ 24ರಂದು ಡಾ|| ರಾಜ್ ಕುಮಾರ್ ಅವರ ಹುಟ್ಟುಹಬ್ಬದ ದಿನವೇ ತೆರೆಕಾಣಲಿದೆ.

ಶ್ರೀಪಂಚಮಿ ಸಿನಿ ಕ್ರಿಯೇಷನ್ಸ್ ಮೂಲಕ ಪುನೀತ್ ಅಪ್ಪಟ ಅಭಿಮಾನಿಯೂ ಆದ ಎಸ್. ಮೋಹನ್ ಅವರು ಈ ಚಿತ್ರವನ್ನು ನಿರ್ಮಿಸಿದ್ದಾರೆ. ಈ ಚಿತ್ರಕ್ಕೆ ನಾಗೇಂದ್ರಪ್ರಸಾದ್ ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ. ಕನ್ನಡ ರಾಜು ಅವರು ಇಡೀ ಚಿತ್ರತಂಡಕ್ಕೆ ಬೆನ್ನೆಲುಬಾಗಿ ನಿಂತಿದ್ದಾರೆ.

ಪುನೀತ್ ಅವರ ಅಪ್ಪಟ ಅಭಿಮಾನಿ ಮಲ್ಲು ಒಬ್ಬ ಅನಾಥ ಹುಡುಗ. ಕಟ್ಟಡ ಕೂಲಿಕೆಲಸ ಮಾಡಿಕೊಂಡಿದ್ದ, ಒಮ್ಮೆ ಆತ ತನ್ನ ಮಾಲೀಕನ ಮನೆಯನ್ನು ಒಳ್ಳೇ ಬೆಲೆಗೆ ಮಾರಾಟ ಮಾಡಿಸಿಕೊಡುತ್ತಾನೆ. ಆಗ ಮಾಲೀಕ ನೀಡಿದ 5 ಲಕ್ಷ ಕಮೀಷನ್ ಹಣದಲ್ಲಿ ಕನಸಿನ ಪುನೀತ್ ನಿವಾಸವನ್ನು ನಿರ್ಮಿಸುತ್ತಾನೆ. ನಂತರ ಆ ಪುನೀತ್ ನಿವಾಸದ ಒಳಗೆ ಬಂದಾಗ ಅಲ್ಲಿ ಆತನಿಗೆ ಪುನೀತ್ ಅವರೇ ಕಾಣಸ್ತಾರೆ. ಅದು ಹೇಗೆ ಕಾಣಸುತ್ತಾರೆ ಅನ್ನೋದೇ ಚಿತ್ರದ ಕುತೂಹಲ.



ಅಲ್ಲೇ ತಾನೊಂದು ಸಿನಿಮಾ ಮಾಡಬೇಕೆಂದು ಹೊರಟ ಮಲ್ಲು ಸಿನಿಮಾ ಮಾಡಿದನೇ, ಇಲ್ಲವೇ, ಪುನೀರ್‌ರ ಆದರ್ಶಗಳನ್ನೇ ಪಾಲಿಸಿಕೊಂಡು ಬಂದ ಆತನ ಕನಸು ನನಸಾಯಿತೇ ಇಲ್ಲವೇ ಎಂಬುದನ್ನು ಈ ಚಿತ್ರದಲ್ಲಿ ನಿರ್ದೇಶಕರು ಹೇಳಿದ್ದಾರೆ.

ನಿರ್ಮಾಪಕ ಎಸ್. ಮೋಹನ್ ಕೂಡ ರಾಜಕುಮಾರ್, ಪುನೀತ್ ಅವರ ಆದರ್ಶಗಳಿಂದ ಪ್ರೇರಿತರಾದವರು. ಟೈಟಲ್ ಗಾಗಿಯೇ ಅವರು 50 ಕಥೆಗಳನ್ನು ಮಾಡಿಕೊಂಡಿದ್ದಾರೆ, ಕೊನೆಗೆ ಈ ಕಥೆ ಸೂಕ್ತ ಎಂದು ಫೈನಲ್ ಮಾಡಿದ್ದಾರೆ.

ಹಣ ಕೂಡಿಟ್ಟುಕೊಂಡಿದ್ದ ಒಬ್ಬ ಬಡ ಹುಡುಗ ಕೊನೆಗೆ ತನ್ನ ಕನಸಿನ ಚಿತ್ರವನ್ನು ಹೇಗೆ ನಿರ್ಮಿಸುತ್ತಾನೆ ಅನ್ನೋದೇ ಕಥಾಹಂದರ, ಈ ಚಿತ್ರಕ್ಕಾಗಿ ಕೆಲವು ಸೀನ್‌ಗಳನ್ನು ನಾನು, ನಿರ್ದೇಶಕರು ಸೇರಿ ಸೆಟ್‌ನಲ್ಲೇ ರೆಡಿ ಮಾಡಿಕೊಂಡಿದ್ದೆವು ಎಂದು ನಿರ್ಮಾಪಕ ಮೋಹನ್ ಚಿತ್ರೀಕರಣದ ಅನುಭವ ಹೇಳಿಕೊಂಡಿದ್ದಾರೆ,

ಈ ಚಿತ್ರದ ಪ್ರಮುಖ ಪಾತ್ರದಲ್ಲಿ ಹಿರಿಯ ನಟ ಅಭಿಜಿತ್ ಕಾಣಿಸಿಕೊಂಡಿದ್ದಾರೆ. ಪುನೀತ್‌ರ ಆದರ್ಶಗಳನ್ನು ಮೈಗೂಡಿಸಿಕೊಂಡಿರುವ ನಿರ್ಮಾಪಕ ಮೋಹನ್ ಅವರು ಚಿತ್ರೀಕರಣಕ್ಕಾಗಿ ನಿಜವಾದ ಮನೆಯನ್ನೇ ಕಟ್ಟಿಸಿದ್ದಾರೆ.

ಮಲ್ಲು ಪಾತ್ರದಲ್ಲಿ ಮಾಸ್ಟರ್ ವಿಠ್ಠಲ್ ಕಾಣಿಸಿಕೊಂಡಿದ್ದಾರೆ, ಹಿರಿಯನಟ ಶಂಕರ್‌ಭಟ್, ಗಂಡಸಿ ಸದಾನಂದಸ್ವಾಮಿ, ಕರಿಸುಬ್ಬು ಶ್ರೇಯಸ್, ಐಶ್ವರ್ಯ, ಎಂ.ಎಸ್. ಉಮೇಶ್, ಡಿಂಗ್ರಿ ನಾಗರಾಜ್, ಟೆನ್ನಿಸ್ ಕೃಷ್ಣ, ರೇಖಾದಾಸ್, ಗಣೇಶರಾವ್ ಕೇಸರಕರ್ ಹಾಗೂ ಇತರರು ಪುನೀತ್ ನಿವಾಸ ಚಿತ್ರದ ಪ್ರಮುಖ ಪಾತ್ರಗಳಲ್ಲಿದ್ದಾರೆ.

ಎಸ್, ಬಾಲು ಅವರ ಛಾಯಾಗ್ರಹಣ, ಎಂ.ಎನ್. ಕೃಪಾಕರ್ ಅವರ ಸಂಗೀತ ನಿರ್ದೇಶನ, ಜೆಮ್ ಶಿವು ಅವರ ಸಂಭಾಷಣೆ, ಮುತ್ತುರಾಜ್ ಅವರ ಸಂಕಲನ ಪುನೀತ್ ನಿವಾಸ ಚಿತ್ರಕ್ಕಿದೆ.

ಎನ್‌ಡಿಆರ್‌ಎಫ್ ಹಿರಿಯ ತರಬೇತುದಾರ ದೇವರಾಜ್

ಆಪತ್ತು ಮಿತ್ರ ತರಬೇತಿ ಸಹಕಾರಿ



• **ಶಿವಮೊಗ್ಗ:** ಆಪತ್ತು ಮಿತ್ರ ತರಬೇತಿಯು ಬಾರಿ ದುರ್ಘಟನೆಗಳ ಪರಿಣಾಮಗಳಿಗೆ ನಾವು ಹೇಗೆ ತಯಾರಿ ನಡೆಸುತ್ತೇವೆ, ಪ್ರತಿಕ್ರಿಯೆ ನೀಡುತ್ತೇವೆ ಮತ್ತು ಅದರಿಂದ ಏನು ಕಲಿಯುತ್ತೇವೆ ಎಂಬ ಪ್ರಕ್ರಿಯೆಯಾಗಿದೆ ಎಂದು ಎನ್‌ಡಿಆರ್‌ಎಫ್ ಹಿರಿಯ ತರಬೇತುದಾರ ದೇವರಾಜ್ ಹೇಳಿದರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ ಆಶ್ರಯದಲ್ಲಿ ರಾಷ್ಟ್ರೀಯ ಮತ್ತು ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಅಗ್ನಿ ಮತ್ತು ತುರ್ತು ಸೇವಾ ಇಲಾಖೆ, ಪೊಲೀಸ್ ಇಲಾಖೆ ಸಹಯೋಗದಲ್ಲಿ ಜಿಲ್ಲಾ ಸ್ಕೌಟ್ ಭವನದಲ್ಲಿ ಜಿಲ್ಲೆಯ ವಿವಿಧ ಪ್ರಥಮದರ್ಜೆ ಕಾಲೇಜಿನ ರೋವರ್ಸ್ ಮತ್ತು ರೇಂಜರ್ಸ್ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಯುವ ವಿಪತ್ತು ಮಿತ್ರ ತರಬೇತಿಯಲ್ಲಿ ಮಾತನಾಡಿದರು.

ರಕ್ಷಣಾ ಪಡೆಗಳು ಬರುವ ಮುಂಚಿತವಾಗಿ ಸ್ಥಳೀಯರು ಅದರಲ್ಲೂ ತರಬೇತಿ ಹೊಂದಿದ ಯುವಜನರು ರಕ್ಷಣಾ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ತಯಾರು ಮಾಡುವುದೇ ಈ ಯುವ ಆಪತ್ತು ಮಿತ್ರ ಯೋಜನೆಯ ಮೂಲ ಉದ್ದೇಶ ಎಂದು ತಿಳಿಸಿದರು.

2006ರಲ್ಲಿ ಸ್ಥಾಪಿತವಾದ ಎನ್‌ಡಿಆರ್‌ಎಫ್ ದೇಶದಾದ್ಯಂತ ಒಟ್ಟು 12 ಬೆಟಾಲಿಯನ್ ಹೊಂದಿದೆ. ಕರ್ನಾಟಕ 10ನೇ ಬೆಟಾಲಿಯನ್ ವಿಜಯವಾಡಕ್ಕೆ ಸೇರಿದ್ದು, ಈವರೆಗೂ ಕರ್ನಾಟಕ ರಾಜ್ಯದ ಹಲವಾರು ಕಡೆಗಳಲ್ಲಿ ಹುಡುಕಾಟ ಮತ್ತು ರಕ್ಷಣಾ ಕಾರ್ಯದಲ್ಲಿ ತೊಡಗಿಸಿಕೊಂಡು ಬಹಳಷ್ಟು ಜನರನ್ನು ಉಳಿಸಿದೆ ಎಂದು ಹೇಳಿದರು.

ತರಬೇತಿ ಅವಧಿಯಲ್ಲಿ ಸಿಪಿಆರ್, ಪ್ರಾಥಮಿಕ ಮಟ್ಟದ ಶೋಧನೆ ಮತ್ತು ರಕ್ಷಣೆ, ರೋಗಿಯನ್ನು ಹೊತ್ತೊಯ್ಯುವುದು, ಸಮುದಾಯ ಆಧಾರಿತ ಆರೋಗ್ಯ ಪ್ರಥಮ ಚಿಕಿತ್ಸೆ, ಮೃದು ಅಂಗಾಂಶದ ಗಾಯ, ಮುಂತಾದ ವಿಚಾರಗಳ ಬಗ್ಗೆ ತಂಡವು ತಿಳಿಸಿಕೊಟ್ಟಿತು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಮುಖ್ಯ ಆಯುಕ್ತೆ ಶಕುಂತಲಾ ಚಂದ್ರಶೇಖರ ಮಾತನಾಡಿದರು. ಶಿಬಿರದ ಸಂಯೋಜಕ ರಾಜೇಶ್ ವಿ ಅವಲಕ್ಕಿ, ಜಿಲ್ಲಾ ಕಾರ್ಯದರ್ಶಿ ಕೆ.ವಿ.ಚಂದ್ರಶೇಖರಯ್ಯ, ಕೇಂದ್ರ ಸ್ಥಾನಿಕ ಆಯುಕ್ತ ಜಿ.ವಿಜಯ್ ಕುಮಾರ್, ಸಹಾಯಕ ಜಿಲ್ಲಾ ಆಯುಕ್ತ ಮಲ್ಲಿಕಾರ್ಜುನ ಕಾನೂರ್, ಸಹಾಯಕ ರಾಜ್ಯ ಸಂಘಟನಾ ಆಯುಕ್ತೆ ಸುಮನಾ ಶೇಖರ್, ಹಿರಿಯ ಗೈಡರ್ ಶಾಂತಮ್ಮ, ಹಿರಿಯ ಸ್ಕೌಟರ್ ರುದ್ರಪ್ಪ ಚೀಲೂರ್, ಎನ್‌ಡಿಆರ್‌ಎಫ್ ತಂಡದ ಮುಖ್ಯಸ್ಥ ವಿವೇಕ್ ಮತ್ತು ಇತರೆ ಸದಸ್ಯರು ಉಪಸ್ಥಿತರಿದ್ದರು.

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಹೇಮಾವತಿ ನಾಲಾ ವಿಭಾಗ, ಎಡಿಯೂರು-572 142, ಪೋ: 7338590199
ಇ-ಮೇಲ್: eeyediyur1@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ
ಸಂಖ್ಯೆ-21/2025-26 ದಿನಾಂಕ : 24.03.2026

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಮೈಸೂರು/ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಒಟ್ಟು 02 ಕಾಮಗಾರಿಗಳಿಗಾಗಿ ಐಟಂವಾರು ದರದ ಟೆಂಡರ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.
ಟೆಂಡರ್‌ಗಿಟ್ಟ ಮೊತ್ತ ರೂ.394.77ಲಕ್ಷ ರೂಪಾಯಿಗಳು & ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ.286.53ಲಕ್ಷ ರೂಪಾಯಿಗಳು.
ಕೆಲಸ ಪೂರ್ಣಗೊಳಿಸಲು ನಿಗಧಿಪಡಿಸಿರುವ ಅವಧಿ 05 ತಿಂಗಳು ಇ.ಎಂ.ಡಿ ಹಣ ಹಾಗೂ ಪ್ರೊಸೆಸಿಂಗ್ ಶುಲ್ಕವನ್ನು ಇ-ಪೇಮೆಂಟ್ ಮೂಲಕ ಸಂದಾಯ ಮಾಡುವುದು, ಟೆಂಡರ್ ಕ್ವಾರಿಸ್/ಕ್ಲಾರಿಫಿಕೇಷನ್ ಕೊನೆಯ ದಿನಾಂಕ: 30.03.2026 ಸಂಜೆ 4.00 ಗಂಟೆಯವರೆಗೆ ಆನ್‌ಲೈನ್ ಮೂಲಕ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ.ಎಂ.ಡಿ ಯೊಂದಿಗೆ ಸಲ್ಲಿಸುವ ಕೊನೆಯ ದಿನಾಂಕ: 04.04.2026 ಮಧ್ಯಾಹ್ನ 4:00 ಗಂಟೆಯವರೆಗೆ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 06.04.2026 ಬೆಳಗ್ಗೆ 11:00 ಗಂಟೆಗೆ ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಹೇಮಾವತಿ ನಾಲಾ ವಿಭಾಗ, ಕಾನೀನಿನಿ., ಎಡಿಯೂರು.
DIPR/TUM/524/KSMCA/2025-26

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಛೇರಿ (ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು-560009.

ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ. ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
ಉತ್ತರ ಪಶ್ಚಿಮ-1	ಬೆಜಮಂ/ಕಾನಿಅ(ಉಪ-1)/ ಪಿಬಿ/6723/2025-26 ದಿನಾಂಕ: 26.03.2026 (3ನೇ ಕರೆ)	ರೂ. 26,47,639/- / ರೂ. 53,000/-	08.04.2026ರ ಸಂಜೆ 5.00 ಗಂಟೆಯವರೆಗೆ	09.04.2026ರ ಸಂಜೆ 5.15 ಗಂಟೆಯ ನಂತರ

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ-ಪಶ್ಚಿಮ-1)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
DIPR/CP/6524/NR/2025-26

ಆಡಳಿತ ವೈದ್ಯಾಧಿಕಾರಿಗಳ ಕಾರ್ಯಾಲಯ,
ಸಾರ್ವಜನಿಕ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ, ಚಿಂತಾಮಣಿ ತಾಲ್ಲೂಕು, ಚಿಂತಾಮಣಿ
ಇ-ಮೇಲ್ ವಿಳಾಸ: amocmy@gmail.com, ದೂರವಾಣಿ ಸಂಖ್ಯೆ: 08154-450758
ಸಂಖ್ಯೆ:ಸಾಆಚಿಂ/ಪಥ್ಯಾಹಾರ ಟೆಂಡರ್/03/2025-26/E-42695
ದಿನಾಂಕ:28.03.2026

ಇ-ಪ್ರೊಕ್ಯೂರ್‌ಮೆಂಟ್ ಇ-ಟೆಂಡರ್ ಅಧಿಸೂಚನೆ

ಸಾರ್ವಜನಿಕ ಆಸ್ಪತ್ರೆ ಚಿಂತಾಮಣಿ ಇಲ್ಲಿ 2026-27 ನೇ ಸಾಲಿಗೆ ಒಳ ರೋಗಿಗಳಿಗೆ ಉತ್ತಮ ದರ್ಜೆಯ ಪಥ್ಯಾಹಾರ ಪದಾರ್ಥಗಳು ಹಾಗೂ ಪ್ರಥಮ ದರ್ಜೆ ಬ್ರೆಡ್ ಸರಬರಾಜು ಮಾಡಲು ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರ್ಮ್‌ನಲ್ಲಿ ದ್ವಿ-ಲಕೋಟೆ ಪದ್ಧತಿಯಲ್ಲಿ ಪಥ್ಯಾಹಾರ ಆಹಾರ ಸಾಮಾಗ್ರಿಗಳು ಮತ್ತು ಬ್ರೆಡ್ ಪೂರೈಕೆಗಾಗಿ kppp.karnataka.gov.in ನಲ್ಲಿ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅವಧಿಯು ಕಾರ್ಯಾದೇಶ ನೀಡುವ ದಿನಾಂಕದಿಂದ ದಿನಾಂಕ: 31.03.2027 ರವರೆಗೆ ಮಾತ್ರ ಇರುತ್ತದೆ. ಒಟ್ಟು ಟೆಂಡರ್‌ನ ಅಂದಾಜು ಮೌಲ್ಯ: ರೂ: 105 ಲಕ್ಷಗಳು. ಟೆಂಡರ್ ವಿವರಗಳು ಈ ಕೆಳಗಿನಂತಿರುತ್ತದೆ.

1	ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ	ಸಾಆಚಿಂ/ಪಥ್ಯಾಹಾರ/ಟೆಂಡರ್/03/ 2025-26/E-42695 ದಿನಾಂಕ:28.03.2026		
2	ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ	ಕ್ರ ಸಂ	ವಿವರ	ಟೆಂಡರ್ ಬಿಡ್ ಮೊತ್ತ (ರೂ. ಲಕ್ಷಗಳಲ್ಲಿ)
		1	Group A: ರೂ.83 ಲಕ್ಷ	EMD Rs.
		2	Group B: ರೂ.22 ಲಕ್ಷ	Rs.2,70,000

(3) E-Portal ಮೂಲಕ ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ: **28.03.2026** (4) E-Portal ಮೂಲಕ ಟೆಂಡರ್ ಲಕೋಟೆಗಳನ್ನು ಸಲ್ಲಿಸುವ ಅಂತಿಮ ದಿನಾಂಕ & ಸಮಯ: **10.04.2026ರ ಸಂಜೆ 3.00 ಗಂಟೆ.** (5) ಪ್ರಿ ಬಿಡ್ ದಿನಾಂಕ ಮತ್ತು ಸಮಯ: ದಿನಾಂಕ: **02.04.2026 ರಂದು ಸಂಜೆ: 03.00 ಗಂಟೆ.** (6) E-Portalನ ಟೆಂಡರ್ ತಾಂತ್ರಿಕ ಲಕೋಟೆಗಳನ್ನು ಪರಿಶೀಲಿಸುವ ದಿನಾಂಕ ಮತ್ತು ಸಮಯ: ದಿನಾಂಕ: **15.04.2026ರಂದು ಸಂಜೆ: 03.00 ಗಂಟೆ.** (7) E-Portal ಆರ್ಥಿಕ ಲಕೋಟೆಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: ದಿನಾಂಕ: **17.04.2026 ರಂದು ಬೆಳಿಗ್ಗೆ: 11.00 ಗಂಟೆ.** ಅಥವಾ ಮೇಲಾಧಿಕಾರಿಗಳು ಸೂಚಿಸಿದ ದಿನಾಂಕದಂದು (8) ಇ.ಎಂ.ಡಿ:ಅನುಬಂಧ-I ರ ನಮೂನೆಯಲ್ಲಿ EMD Declaration ಸಲ್ಲಿಸುವುದರ ಜೊತೆಗೆ ಪಥ್ಯಾಹಾರ ಪದಾರ್ಥಗಳು ಮತ್ತು ಬ್ರೆಡ್ ಟೆಂಡರ್‌ನ ಅಂದಾಜು ಮೌಲ್ಯದ ಶೇ2.5% ರೂ.2,70,000/- (9) ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ: **website:www.kppp.karnataka.gov.in.** ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ಚಿಂತಾಮಣಿ. **e-mail: amocmy@gmail.com** ದೂರವಾಣಿ ಸಂಖ್ಯೆ: 08154-450758

ಸಹಿ/- ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ಚಿಂತಾಮಣಿ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:514/ಕೆಎಸ್‌ಎಂಸಿಎ/2026-27

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.
ಜಾಹೀರಾತು ವ್ಯವಸ್ಥಾಪಕರು

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಂಪನಿ ಕಛೇರಿ, ವಿದ್ಯುತ್ ಭವನ, ಗೋಪನಕೊಪ್ಪ, ಹುಬ್ಬಳ್ಳಿ-580 023.
ದೂರವಾಣಿ : (0836) 2223877 ಫ್ಯಾಕ್ಸ್ ಸಂಖ್ಯೆ : (0836) 2324307
E-Mail : seepmc.hescom@gmail.com Web Site : www.hescom.co.in
Corporate Identity Number (CIN) : U31401KA2002SGC030437
No: HESCOM/SEE(PMC)/EE-P1/AEE-1/2025-26/cys-13045 Date : 27-03-2026

ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ. ಮೂಲಕ ಮಾತ್ರ)

ಅಧೀಕ್ಷಕ ಇಂಜಿನಿಯರ್ (ವಿ), ಪಿಎಮ್‌ಸಿ, ನಿಗಮ ಕಛೇರಿ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ ರವರಿಂದ ಕೆಳಕಂಡ ಕಾಮಗಾರಿಗೆ ಟೆಂಡರಗಳನ್ನು ಆಹ್ವಾನಿಸಲಾಗಿದೆ.

Sl.No.	Particulars	Bid indent No for Others
1	ಹೆಸ್ಕಾಂ ವ್ಯಾಪ್ತಿಯಲ್ಲಿನ ವಿವಿಧ 33/11ಕೆವಿ ಉಪಕೇಂದ್ರಗಳಲ್ಲಿ ಹೆಚ್ಚುವರಿಯಾಗಿ 5 ಎಮ್‌ವಿಎ, 33/11ಕೆವಿ ವಿದ್ಯುತ್ ಪರಿವರ್ತಕಗಳನ್ನು ಒದಗಿಸುವುದು (5 ಎಮ್‌ವಿಎ ವಿದ್ಯುತ್ ಪರಿವರ್ತಕ ಮತ್ತು ಇತರ ಸಾಮಗ್ರಿಗಳನ್ನು ಇಲಾಖಾವಾರು ಪೂರೈಸಲಾಗುವುದು)	HESCOM/2025-26/EL/ WORK_INDENT 1099, 1100,1101, 1102, 1103, 1104, 1105, 1106, 1107, 1108, 1109 & 1110 (12 packages)
2	ಬೆಳಗಾವಿ ಜಿಲ್ಲೆಯ 33/11 ಕೆವಿ ಬಾಳೇಕುಂದ್ರಿ ಮತ್ತು ಉತ್ತರ ಕನ್ನಡ ಜಿಲ್ಲೆಯ 33/11 ಕೆವಿ ಭಟ್ಕಳ ಉಪಕೇಂದ್ರಗಳಲ್ಲಿ 2X5 ಎಮ್.ವಿ.ಎ ಪರಿವರ್ತಕಗಳನ್ನು 2X8 ಎಮ್.ವಿ.ಎ ಪರಿವರ್ತಕಗಳಿಂದ ಬದಲಾಯಿಸುವ ಕಾಮಗಾರಿಗಳು.	HESCOM/2025-26/EL/ WORK_INDENT 1111 & 1112 (2 packages)
3	ಹೆಸ್ಕಾಂ ವ್ಯಾಪ್ತಿಯಲ್ಲಿನ 110/33/11 ಕೆವಿ ಸಬ್ ಸ್ಟೇಷನ್‌ಗಳಿಂದ ವಿವಿಧ 33/11 ಕೆವಿ ಸಬ್‌ಸ್ಟೇಷನ್‌ಗಳಿಗೆ 33 ಕೆವಿ ವಿದ್ಯುತ್ ಮಾರ್ಗಗಳ ನಿರ್ಮಾಣ.	HESCOM/2025-26/EL/ WORK_INDENT 1113, 1114 & 1115 (3 packages)

ಸದರಿ ಟೆಂಡರಗಳ ಪೂರ್ಣ ವಿವರಗಳನ್ನು ವೆಬ್‌ಸೈಟ್, www.kppp.karnataka.gov.in ರಲ್ಲಿ ದಿನಾಂಕ : **31.03.2026** ರ 5:00 PM ನಂತರ ಪಡೆಯಬಹುದು.

ಸಹಿ/- ಅಧೀಕ್ಷಕ ಇಂಜಿನೀಯರರು(ವಿ), (ಪಿಎಮ್‌ಸಿ), ಹೆಸ್ಕಾಂ, ಹುಬ್ಬಳ್ಳಿ
ವಾಸಾಸಂಇ/ಧಾರವಾಡ/ಕೆಎಸ್‌ಎಂಸಿಎ/1406/2025-26

ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ
ಬೆಂಗಳೂರು ವಿಭಾಗ, 2ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು-560 001. ದೂರವಾಣಿ ಸಂಖ್ಯೆ: 080-22133370
ಸಂಖ್ಯೆ: 68/2025-26 ದಿನಾಂಕ:27.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ. ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಗುತ್ತಿಗೆದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ ಆನೇಕಲ್ ಉಪವಿಭಾಗಕ್ಕೆ ಸಂಬಂಧಿಸಿದಂತೆ 01 ಸಂಖ್ಯೆಯ (ರೂ.13.00 ಲಕ್ಷಗಳ) ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ. ಕಾಮಗಾರಿಯ ಇ.ಎಂ.ಡಿ. ಮೊತ್ತವನ್ನು ಮತ್ತು ಟೆಂಡರ್ ಪ್ರೋಸೆಸಿಂಗ್ ಶುಲ್ಕವನ್ನು ಕೆಪಿಪಿ-ಪೋರ್ಟಲ್ https://kppp.karnataka.gov.in ನಲ್ಲಿ ಸೂಚಿಸಲಾಗಿದೆ.
(1) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ-ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ:07.04.2026 ಸಂಜೆ 4.00 ಗಂಟೆಯವರೆಗೆ.
(2) ಟೆಂಡರ್‌ಗಳನ್ನು ಇ-ಪೋರ್ಟಲ್ ಮೂಲಕ ತೆರೆಯುವ ದಿನಾಂಕ: **08.04.2026 ಸಂಜೆ 4.30 ಗಂಟೆಗೆ** ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ. ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು
ವಾಸಾಸಂಇ/ಉಪಿ-ಸಿ.ಪಿ/6516/ಕೆಎಸ್‌ಎಂಸಿಎ/2025-26

ಮಾನ್ಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಸೊರಬ
ಸಿ.ಮಿಸ್.ನಂ : 45/2026

ಅರ್ಜಿದಾರರು : 1) ವರ್ಣಮ್ಮ ಕೋಂ ಗುತ್ಯಪ್ಪ, ಸಮನವಳ್ಳಿ, ಸೊರಬ ತಾಲ್ಲೂಕು, 2) ರೇಣುಕಾ ಕೆರಿಯಪ್ಪ ಚೆನಯ್ಯ ಕೋಂ ಕೆರಿಯಪ್ಪ ಚೆನಯ್ಯ ಕುಪ್ಪಗಡ್ಡೆ, ಶಿರಸಿ ತಾಲ್ಲೂಕು, ಉ.ಕ ಜಿಲ್ಲೆ, 3) ದಾನಮ್ಮ ಕೋಂ ಬುದ್ಧಿವಂತ ಚೌಡಪ್ಪ, ಗುಡವಿ, ಸೊರಬ ತಾಲ್ಲೂಕು, 4)ಸಣ್ಣಮ್ಮ ಕೋಂ ಭೂದೇಪ್ಪ, 67 ವರ್ಷ, 5) ಚಂದ್ರಕಲಾ ಕೋಂ ಗುತ್ಯಪ್ಪ 37 ವರ್ಷ, 6)ಇಂದುಧರ ಬಿನ್ ಬುದೆಪ್ಪ 50 ವರ್ಷ, 7) ಶೇಖಪ್ಪ ಬಿನ್ ಬೂದಪ್ಪ 46 ವರ್ಷ, 8)ಚೌಡಪ್ಪ ಬಿನ್ ಬೂದಪ್ಪ 43 ವರ್ಷ, 4 ರಿಂದ 8ನೇಯವರು ಸಮನವಳ್ಳಿ ಗ್ರಾಮ, ಆನವಟ್ಟಿ ಹೋಬಳಿ ಸೊರಬ ತಾಲ್ಲೂಕು.

ವಿರುದ್ಧ

ಎದುರುದಾರರು : ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯತಿ, ಆನವಟ್ಟಿ ಸೊರಬ ತಾಲ್ಲೂಕು.

ಪತ್ರಿಕಾ ಪ್ರಕಟಣೆ

ಮೇಲ್ಕಂಡ ಅರ್ಜಿದಾರರು ಎದುರುದಾರರ ವಿರುದ್ಧ ಕೆಳಗೆ ನಮೂದಿಸಿದ ವ್ಯಕ್ತಿಯು ಮರಣ ಹೊಂದಿರುವುದರಿಂದ ಮರಣ ದಾಖಲಾತಿಯನ್ನು ಪಡೆದುಕೊಳ್ಳಲು ಸದರಿ ಕೇಸನ್ನು ಸಲ್ಲಿಸಿರುತ್ತಾರೆ.ಮತ್ತು ಇದರ ವಿಚಾರಣೆಯು **ದಿನಾಂಕ:04-04-2026 ರಂದು ಬೆಳಿಗ್ಗೆ 11 ಘಂಟೆಗೆ** ಇರುವುದರಿಂದ ಹಿತಾಸಕ್ತಿ ಇರುವವರು ಅರ್ಜಿದಾರರಾಗಿ ಅಥವಾ ಎದುರುದಾರರಾಗಿ ಅಂದು ಮಾನ್ಯ ನ್ಯಾಯಾಲಯದಲ್ಲಿ ಹಾಜರಾಗಬಹುದು. ಮರಣ ಹೊಂದಿದ ವ್ಯಕ್ತಿಯ ಹೆಸರು, ದಿನಾಂಕ ಮತ್ತು ಸ್ಥಳ : 1ರಿಂದ 3ನೇ ಅರ್ಜಿದಾರರ ತಂದೆ, 4ನೇ ಅರ್ಜಿದಾರರ ಮಾವ, 5 ರಿಂದ 8ನೇ ಅರ್ಜಿದಾರರ ಅಜ್ಜನಾದ **ಫಕೀರಪ್ಪ ಬಿನ್ ಕೆರೆ ಮಂಟಕ್ಕ** ಇವರು ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕು, ಆನವಟ್ಟಿ ಹೋಬಳಿ, ಸಮನವಳ್ಳಿ ಗ್ರಾಮದಲ್ಲಿ **ದಿನಾಂಕ:10-04-1951** ರಂದು ಮರಣ ಹೊಂದಿರುತ್ತಾರೆ. ಆ ಸಂಬಂಧ ಅರ್ಜಿದಾರರ ಗಂಡನ ಮರಣ ದಾಖಲೆ ಪಡೆಯುವ ಸಂಬಂಧ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಅರ್ಜಿದಾರರ ಪರ ವಕೀಲರು	ನ್ಯಾಯಾಲಯದ ಅಪ್ಪಣೆ ಮೇರೆಗೆ
ನಾಗರಾಜ.ಹೆಚ್.	ಸಹಿ/-ಶಿರಸ್ತೇದಾರರು,
ವಕೀಲರು, ಸೊರಬ	ವ್ಯವಹಾರ ನ್ಯಾಯಾಧೀಶರು ಮತ್ತು
ರೋಲ್.ನಂ.ಕೆ.ಎ.ಆರ್. 841/2008	ಜೆ.ಎಂ.ಎಫ್.ಸಿ. ನ್ಯಾಯಾಲಯ, ಸೊರಬ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಕಂಟೋನ್‌ಮೆಂಟ್, ಬಳ್ಳಾರಿ ದೂರವಾಣಿ: 08392-200293
ಸಂ: ಕಾನಿಇಂ/ಸನೀ&ಅಂ.ಅ.ವಿ/ಬ/ಸ.ಇಂ-2/2025-26/2485 ದಿ:26.03.2026

ಟೆಂಡರ್ ಪ್ರಕಟಣೆ
("KPPP" ಪೋರ್ಟಲ್ ಕೆ.ಡಬ್ಲ್ಯೂ-3 ಮುಖಾಂತರ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಲೆಕ್ಕಶೀರ್ಷಿಕೆ 4702-ಪ್ಲಾನ್ ವಿನೀಯೋ ಸಿ.ಎಂ.ಐ.ಡಿ.ಪಿ-ಯೋಜನೆಯಡಿ ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನ 02 ಕಾಮಗಾರಿಗಳಿಗಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಕಾರ್ಯನಿರ್ವಾಹಕ ಇಂಜಿನೀಯರವರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ. 59.02 ಲಕ್ಷ, ಟೆಂಡರಿಗಿಟ್ಟ ಗರಿಷ್ಠ ಮೊತ್ತ ರೂ. 71.24 ಲಕ್ಷಗಳಿರುತ್ತದೆ. ಟೆಂಡರ್‌ನ್ನು ದಿನಾಂಕ: 23.03.2026 ರಿಂದ ದಿನಾಂಕ: 04.04.2026 ರ ಸಂಜೆ 5.30 ಗಂಟೆಯವರಗೆ ಸಲ್ಲಿಸಬಹುದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ದಿನಾಂಕ: 06.04.2026 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹಾಗೂ ಕಾಮಗಾರಿಯ ಆರ್ಥಿಕ ಬಿಡ್‌ನ್ನು ದಿನಾಂಕ: 08.04.2026 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಳನ್ನು "KPPP" ವೆಬ್‌ಸೈಟ್ http://kppp.karnataka.gov.in ನಲ್ಲಿ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಬಳ್ಳಾರಿ
ಡಿಐಪಿಆರ್/ಬಳ್ಳಾರಿ/1198/ಕೆಎಸ್‌ಎಂಸಿಎ/2025-26

ಮಾನ್ಯ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಸೊರಬ
ಸಿ.ಮಿಸ್.ನಂ : 475/2025

ಅರ್ಜಿದಾರರು : ಲಕ್ಷ್ಮಮ್ಮ ಕೋಂ ಮಾಲತೇಶಪ್ಪ,ಸುಮಾರು 49 ವರ್ಷ,ಬಂಕಸಾಣ ಗ್ರಾಮ, ಜಡೆ ಹೋಬಳಿ, ಸೊರಬ ತಾಲ್ಲೂಕು

ವಿರುದ್ಧ

ಎದುರುದಾರರು : ತಹಶೀಲ್ದಾರರು, ಸೊರಬ ತಾಲ್ಲೂಕು ಸೊರಬ.

ಪತ್ರಿಕಾ ಪ್ರಕಟಣೆ

ಮೇಲ್ಕಂಡ ಅರ್ಜಿದಾರರು ಎದುರುದಾರರ ವಿರುದ್ಧ ಕೆಳಗೆ ನಮೂದಿಸಿದ ವ್ಯಕ್ತಿಯು ಮರಣ ಹೊಂದಿರುವುದರಿಂದ ಮರಣ ದಾಖಲೆಯನ್ನು ಪಡೆದುಕೊಳ್ಳಲು ಸದರಿ ಕೇಸನ್ನು ಸಲ್ಲಿಸಿರುತ್ತಾರೆ.ಮತ್ತು ಇದರ ವಿಚಾರಣೆಯು **ದಿನಾಂಕ:30-04-2026 ರಂದು ಬೆಳಿಗ್ಗೆ 11 ಘಂಟೆಗೆ** ಇರುವುದರಿಂದ ಹಿತಾಸಕ್ತಿ ಇರುವುವವರು ಅರ್ಜಿದಾರರಾಗಿ ಅಥವಾ ಎದುರುದಾರರಾಗಿ ಅಂದು ಮಾನ್ಯ ನ್ಯಾಯಾಲಯದಲ್ಲಿ ಹಾಜರಾಗಬಹುದು. ಮರಣ ಹೊಂದಿದ ವ್ಯಕ್ತಿಯ ಹೆಸರು, ದಿನಾಂಕ ಮತ್ತು ಸ್ಥಳ : ಅರ್ಜಿದಾರರ ತಂದೆಯಾದ **ರಾಮಪ್ಪ ಬಿನ್ ನಿಂಗಪ್ಪ** ಆದ ಇವರು **ದಿನಾಂಕ:01-01-1982** ರಂದು ಅರ್ಜಿದಾರರ ಸ್ವಗ್ರಹವಾದ ಸೊರಬ ತಾಲ್ಲೂಕು, ಜಡೆ ಹೋಬಳಿ, ಬಂಕಸಾಣ ಗ್ರಾಮದ ಅರ್ಜಿದಾರರ ಸ್ವಗ್ರಹದಲ್ಲಿ ಮರಣ ಹೊಂದಿದ್ದು, ಅವರ ಮರಣ ಪ್ರಮಾಣ ಪತ್ರದ ಸಲುವಾಗಿ ಅರ್ಜಿದಾರರ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಅರ್ಜಿದಾರರ ಪರ ವಕೀಲರು	ನ್ಯಾಯಾಲಯದ ಅಪ್ಪಣೆ ಮೇರೆಗೆ
ಪವನ ಕೆ.	ಸಹಿ/-ಶಿರಸ್ತೇದಾರರು,
ವಕೀಲರು, ಸೊರಬ	ವ್ಯವಹಾರ ನ್ಯಾಯಾಧೀಶರು ಮತ್ತು
ರೋಲ್.ನಂ.ಕೆ.ಎ.ಆರ್. 1521/2023	ಜೆ.ಎಂ.ಎಫ್.ಸಿ. ನ್ಯಾಯಾಲಯ, ಸೊರಬ

ಮಾನ್ಯ ಎರಡನೇ ಜೆ.ಎಂ.ಎಫ್.ಸಿ. ನ್ಯಾಯಾಲಯ, ಶಿವಮೊಗ್ಗ
ಸಿ.ಮಿಸ್.ನಂ : 61/2025

ಅರ್ಜಿದಾರರು: ಅಂಥೋಣಿ ರಾಜ್ ಬಿನ್ ಲೇಟ್ ಅಪ್ರಂರಾಜ್, ವಯಸ್ಸು 42 ವರ್ಷ, 6ನೇ ತಿರುವು, ಇಂದಿರಾ ಕಾಲೋನಿ, ಶಿವಮೊಗ್ಗ.

ವಿರುದ್ಧ

ಎದುರುದಾರರು : ಸಿ.ಎಂ.ಸಿ. ಶಿವಮೊಗ್ಗ.

ಪತ್ರಿಕಾ ಪ್ರಕಟಣೆಗಾಗಿ

ಮೇಲ್ಕಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಅರ್ಜಿದಾರರು ತಮ್ಮ ತಾಯಿಯವರಾದ **ಮರಿಯಂ ಜ್ಯೋತಿ ಕೋಂ ಅಪ್ರಂ ರಾಜ್** ಇವರು **ದಿನಾಂಕ:22-12-2023** ರಲ್ಲಿ 6ನೇ ತಿರುವು, ಇಂದಿರಾ ಬಡಾವಣೆ ಶಿವಮೊಗ್ಗ ತಮ್ಮ ಮನೆಯಲ್ಲಿ ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ಪಡೆಯಲು ನ್ಯಾಯಾಲಯದಲ್ಲಿ ಅರ್ಜಿಯನ್ನು ಹಾಕಿದ್ದು, ಸದರಿ ಪ್ರಕರಣದ ಮುಂದಿನ ವಿಚಾರಣೆಯು **ದಿನಾಂಕ:09-04-2026 ರಂದು ಬೆಳಿಗ್ಗೆ 11 ಗಂಟೆಗೆ** ಇರುತ್ತದೆ. ಸದರಿ ದಿನದಂದು ಸಾರ್ವಜನಿಕರಲ್ಲಿ ಯಾರಿಗಾದರೂ ಆಸಕ್ತಿ ಇದ್ದಲ್ಲಿ ತಾವು ಖುದ್ದಾಗಿಯಾಗಲೀ ಅಥವಾ ತಮ್ಮ ವಕೀಲರ ಮೂಲಕವಾಗಲಿ ಮಾನ್ಯ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಹೇಳಿಕೆಗಳನ್ನು ಸಲ್ಲಿಸಬಹುದಾಗಿದೆ. ತಪ್ಪಿದಲ್ಲಿ ಮಾನ್ಯ ನ್ಯಾಯಾಲಯವು ತಮ್ಮ ಗೈರು ಹಾಜರಿಯಲ್ಲಿ ಏಕಪಕ್ಷೀಯವಾಗಿ ತೀರ್ಮಾನ ಮಾಡಲಾಗುತ್ತದೆ ಎಂದು ತಿಳಿಯತಕ್ಕದ್ದು.

ಅರ್ಜಿದಾರರ ಪರ ವಕೀಲರು	ನ್ಯಾಯಾಲಯದ ಅಪ್ಪಣೆ ಮೇರೆಗೆ
ವಿನಯ್.ಕೆ.ಎಂ.	ಸಹಿ/-ಶಿರಸ್ತೇದಾರರು,
ಶಿವಮೊಗ್ಗ	ಮಾನ್ಯ ಮೂರನೇ ಜೆ.ಎಂ.ಎಫ್.ಸಿ.
ದಿನಾಂಕ:25-03-2026	ನ್ಯಾಯಾಲಯ, ಶಿವಮೊಗ್ಗ

ಬೆಳಗಾವಿ ಮಹಾನಗರ ಪಾಲಿಕೆ
ಸಿಟಿಎಸ್.ನಂ.4821/26, 4821/27, ಆರ್.ಎಸ್.ನಂ.1005, ಸುಭಾಷನಗರ, ಬೆಳಗಾವಿ. ದೂರವಾಣಿ : 0831-2405304,
Email : itstaff_ulb_belgaum@yahoo.com, Website : www.belgaumcity.mrc.gov.in
ಸಂಖ್ಯೆ : ಮ.ನ.ಪಾ.ಬೆ./ಲೋ.ಶಾ./ಕಾ.ಅ./ಡಿ.ಎಂ./ಟಿ.ಎನ್.ಡಿ./ಇಪ್ರೋ-26/ 2025-26 ದಿನಾಂಕ : 31-03-2026

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ ಇವರಿಂದ ಮಹಾನಗರ ಪಾಲಿಕೆಯ ಅನುದಾನದಡಿಯಲ್ಲಿ **ವಾರ್ಷಿಕ ನಿರ್ವಹಣೆ ಮಾಡುವ ಅಂದರೆ ರಸ್ತೆ, ಒಳಚರಂಡಿ, ವಿಭಾಗಜಕ, ನಾಲಾ ಸ್ವಚ್ಛಗೊಳಿಸುವುದು, ಗಣೇಶ ಹಬ್ಬ, ಸಭೆ ಸಮಾರಂಭ, ಹಬ್ಬ ಮತ್ತು ಉತ್ಸವಗಳಿಗೆ ವಿವಿಧ ವ್ಯವಸ್ಥೆ ಹಾಗೂ ಇತರೆ ಅಭಿವೃದ್ಧಿ ಮಾಡುವ ಕಾಮಗಾರಿಗಳಿಗೆ SC Category - 03, ST Category - 01, CAT-II(A) - 03 ಹಾಗೂ ಸಾಮಾನ್ಯ ಮಿಸಲಾತಿಗೆ 16 ಹೀಗೆ ಒಟ್ಟು 23 ಕಾಮಗಾರಿಗಳಿಗೆ** ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲನಲ್ಲಿ ಪಡೆಯಬಹುದಾಗಿದೆ.

1) ಟೆಂಡರ್ ಕುರಿತು ವಿವರಣೆಗಾಗಿ ಕೊನೆಯ ದಿನಾಂಕ : 09-04-2026 ರ ಸಂಜೆ 5.00 ಘಂಟೆವರೆಗೆ, 2) ಟೆಂಡರಿನ ಮೊದಲನೆ ಸಭೆಯ (Pre-Bid Meeting) ದಿನಾಂಕ : 10-04-2026 ರ ಬೆಳಿಗ್ಗೆ 11.00 ಘಂಟೆಗೆ, ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ ಕಚೇರಿಯಲ್ಲಿ, 3) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : 16-04-2026 ರ ಅಪರಾಹ್ನ 4.00 ಘಂಟೆವರೆಗೆ, 4) ಟೆಂಡರಿನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : 18-04-2026 ರ ಬೆಳಿಗ್ಗೆ 11.00 ಘಂಟೆಗೆ, ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ ಕಚೇರಿಯಲ್ಲಿ, 5) ಟೆಂಡರಿನ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ : 21-04-2026 ರ ಬೆಳಿಗ್ಗೆ 11.00 ಘಂಟೆಗೆ, ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ ಕಚೇರಿಯಲ್ಲಿ.

ಹೆಚ್ಚಿನ ವಿವರಗಳಿಗೆ ಆನ್‌ಲೈನ್ **ವೆಬ್‌ಸೈಟ್ : https://www.kppp.karnataka.gov.in** ನಲ್ಲಿ ವೇಳಾ ಪಟ್ಟಿಯೊಂದಿಗೆ ಪ್ರಕಟಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರಿನಲ್ಲಿ ಯಾವುದಾದರು ಬದಲಾವಣೆಯಾದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಆಯುಕ್ತರು,
ಮಹಾನಗರ ಪಾಲಿಕೆ, ಬೆಳಗಾವಿ.
ಡಿಐಪಿಆರ್/ಬೆಳಗಾವಿ/2174/ಮುಕೆಯಾ/2025-26

ಮಾನ್ಯ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಸೊರಬ
ಸಿ.ಮಿಸ್.ನಂ : 46/2026

ಅರ್ಜಿದಾರರು : 1) ಈರಮ್ಮ ಕೋಂ ರಾಮಪ್ಪ, ಸುಮಾರು 70 ವರ್ಷ, 2) ಕರಿಯಪ್ಪ ಬಿನ್ ರಾಮಪ್ಪ ಸುಮಾರು 58 ವರ್ಷ, ಶ್ಯಾನುವಳ್ಳಿ ಗ್ರಾಮ, ಜಡೆ ಹೋಬಳಿ, ಸೊರಬ ತಾಲ್ಲೂಕು, 3) ಗೌರಮ್ಮ ಕೋಂ ಈರಪ್ಪ ಸುಮಾರು 55 ವರ್ಷ, ಗುಡವಿ ಗ್ರಾಮ, ಕಸಬಾ ಹೋಬಳಿ, ಸೊರಬ ತಾಲ್ಲೂಕು, 4) ಜಯಪ್ಪ ಬಿನ್ ರಾಮಪ್ಪ ಸುಮಾರು 49 ವರ್ಷ, ಶ್ಯಾನುವಳ್ಳಿ ಗ್ರಾಮ, ಜಡೆ ಹೋಬಳಿ ಸೊರಬ ತಾಲ್ಲೂಕು.

ವಿರುದ್ಧ

ಎದುರುದಾರರು : ತಹಶೀಲ್ದಾರರು, ಸೊರಬ ತಾಲ್ಲೂಕು ಸೊರಬ.

ಪತ್ರಿಕಾ ಪ್ರಕಟಣೆ

ಮೇಲ್ಕಂಡ ಅರ್ಜಿದಾರರು ಎದುರುದಾರರ ವಿರುದ್ಧ ಕೆಳಗೆ ನಮೂದಿಸಿದ ವ್ಯಕ್ತಿಯು ಮರಣ ಹೊಂದಿರುವುದರಿಂದ ಮರಣ ದಾಖಲಾತಿಯನ್ನು ಪಡೆದುಕೊಳ್ಳಲು ಸದರಿ ಕೇಸನ್ನು ಸಲ್ಲಿಸಿರುತ್ತಾರೆ.ಮತ್ತು ಇದರ ವಿಚಾರಣೆಯು **ದಿನಾಂಕ:18-04-2026 ರಂದು ಬೆಳಿಗ್ಗೆ 11 ಘಂಟೆಗೆ** ಇರುವುದರಿಂದ ಹಿತಾಸಕ್ತಿ ಇರುವವರು ಅರ್ಜಿದಾರರಾಗಿ ಅಥವಾ ಎದುರುದಾರರಾಗಿ ಅಂದು ಮಾನ್ಯ ನ್ಯಾಯಾಲಯದಲ್ಲಿ ಹಾಜರಾಗಬಹುದು. ಮರಣ ಹೊಂದಿದ ವ್ಯಕ್ತಿಯ ಹೆಸರು, ದಿನಾಂಕ ಮತ್ತು ಸ್ಥಳ : 1ನೇ ಅರ್ಜಿದಾರರ ಗಂಡ, 2 ರಿಂದ 4ನೇ ಅರ್ಜಿದಾರರ ತಂದೆಯಾದ **ರಾಮಪ್ಪ ಬಿನ್ ಗುತ್ಯಪ್ಪ** ಇವರು ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕು, ಜಡೆ ಹೋಬಳಿ, ಶ್ಯಾನವಳ್ಳಿ ಗ್ರಾಮದಲ್ಲಿ **ದಿನಾಂಕ:08-08-1983** ರಂದು ಮರಣ ಹೊಂದಿರುತ್ತಾರೆ. ಆ ಸಂಬಂಧ ಅರ್ಜಿದಾರರ ಗಂಡನ ಮರಣ ದಾಖಲೆ ಪಡೆಯುವ ಸಂಬಂಧ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಅರ್ಜಿದಾರರ ಪರ ವಕೀಲರು	ನ್ಯಾಯಾಲಯದ ಅಪ್ಪಣೆ ಮೇರೆಗೆ
ನಾಗರಾಜ.ಹೆಚ್.	ಸಹಿ/-ಶಿರಸ್ತೇದಾರರು,
ವಕೀಲರು, ಸೊರಬ	ವ್ಯವಹಾರ ನ್ಯಾಯಾಧೀಶರು ಮತ್ತು
ರೋಲ್.ನಂ.ಕೆ.ಎ.ಆರ್. 841/2008	ಜೆ.ಎಂ.ಎಫ್.ಸಿ. ನ್ಯಾಯಾಲಯ, ಸೊರಬ

ಮಾನ್ಯ ಘನ 5ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಶಿವಮೊಗ್ಗ
ಪಿ ಅಂಡ್ ಎಸ್.ಸಿ. ನಂ : 02/2026

ಅರ್ಜಿದಾರರು: 1)ಶ್ರೀಮತಿ ಸುಲೋಚನ ಕೋಂ ಪ್ರಭುಲಿಂಗಶಾಸ್ತ್ರಿ, ವಯಸ್ಸು ಸುಮಾರು 60 ವರ್ಷ, ಗೃಹಿಣಿ, ವಾಸ: #87/1, 1ನೇ ತಿರುವು, ಬಸವಯ್ಯ ಕಾಂಪೌಂಡ್, ಚೆನ್ನಪ್ಪ ಲೇಔಟ್, ಶಿವಮೊಗ್ಗ ತಾ||. 2)ಶರ್ಮ ಆರ್.ಎಸ್ ಬಿನ್ ಲೇಟ್ ಶಿವನಂದ ಶರ್ಮ, ವಯಸ್ಸು ಸುಮಾರು 66 ವರ್ಷ, ವಾಸ: #1704/130,ಶಿವಸಂಕಲ್ಪ, 1ನೇ ತಿರುವು, 1ನೇ ಮೇನ್, ಸರಸ್ವತಿ ನಗರ, ಜಿವಾ ಭೀಮಾ ನಗರ, ದಾವಣಗೆರೆ. 3)ಎಸ್.ವಾಗೀಶ್ ಶರ್ಮ ಬಿನ್ ಲೇಟ್ ಶಿವನಂದ ಶರ್ಮ, ವಯಸ್ಸು ಸುಮಾರು 59 ವರ್ಷ, ವಾಸ: ಶಿವಗಂಗ ನಿಲಯ, 1ನೇ ತಿರುವು, ಚೆನ್ನಪ್ಪ ಲೇಔಟ್, ಶಿವಮೊಗ್ಗ. 4) ಎಸ್.ಬಸವರಾಜ್ ಶರ್ಮ ಬಿನ್ ಲೇಟ್ ಶಿವನಂದ ಶರ್ಮ, ವಯಸ್ಸು ಸುಮಾರು 57 ವರ್ಷ, ವಾಸ: # 87/1, 1ನೇ ತಿರುವು, ಬಸವಯ್ಯ ಕಾಂಪೌಂಡ್, ಚೆನ್ನಪ್ಪ ಲೇಔಟ್, ಶಿವಮೊಗ್ಗ ತಾ||.

ವಿರುದ್ಧ

ಎದುರುದಾರರು : ಯಾರು ಇಲ್ಲ,

ಸಾರ್ವಜನಿಕ ಪ್ರಕಟಣೆ

ಅರ್ಜಿದಾರರು ಮೇಲ್ಕಂಡ ಅರ್ಜಿಯನ್ನು ಮಾನ್ಯ ನ್ಯಾಯಾಲಯದಲ್ಲಿ **Succession Certificate** ಪಡೆಯಲು ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿದಾರರ ಸಹೋದರನಾದ **ಮೋಹನ್ ಶರ್ಮ ಎಸ್ ಬಿನ್ ಎಸ್.ಎಂ.ಶಿವನಂದ ಶರ್ಮ** ಇವರು **ದಿನಾಂಕ:08-05-2022** ರಂದು ಚೆನ್ನಪ್ಪ ಲೇಔಟ್, ಶಿವಮೊಗ್ಗ ಇಲ್ಲಿ ಮರಣ ಹೊಂದಿದ್ದು, ಮೃತ ವಾರಸುದಾರರಿಗೆ ಸಂತಾನವಿರುವುದಿಲ್ಲ, ಇವರು ಶಿವಮೊಗ್ಗ ಸವಳಂಗ ರಸ್ತೆಯಲ್ಲಿ ಇರುವ ಕರ್ನಾಟಕ ಬ್ಯಾಂಕ್‌ನಲ್ಲಿ ಉಳಿತಾಯ ಖಾತೆ **ಸಂಖ್ಯೆ:7322500101639401** ಮತ್ತು ಠೇವಣಿಯನ್ನು ಹೊಂದಿದ್ದು, ಇದರ ಒಟ್ಟು ಮೊತ್ತ **ರೂ.8,98,652/-ಗಳು** ಇರುತ್ತದೆ. ಸದರಿ ಮೇಲ್ಕಂಡ ಮೊತ್ತವನ್ನು ಪಡೆಯಲು ಹಾಗೂ ಇದರ ಬಡ್ಡಿ ಮೊತ್ತವನ್ನು ಪಡೆಯಲು ವಾರಸುದಾರರ ಪ್ರಮಾಣ ಪತ್ರ/ **Succession Certificate** ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಅರ್ಜಿಗೆ ಯಾರದ್ದಾದರೂ ಮತ್ತು ಯಾವುದೇ ರೀತಿಯಲ್ಲಾದರೂ ತಕರಾರುಗಳಿದ್ದಲ್ಲಿ **ದಿನಾಂಕ:02-05-2026 ರಂದು ಬೆಳಿಗ್ಗೆ 11 ಗಂಟೆಗೆ** ಮಾನ್ಯ ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ತಮ್ಮ ನಿಯೋಜಿತ ವಕೀಲರ ಮುಖಾಂತರವಾಗಲೀ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಆಹವಾಲು ಸಲ್ಲಿಸತಕ್ಕದ್ದು, ಇಲ್ಲದಿದ್ದಲ್ಲಿ ಯಾವುದೇ ತಕರಾರು ಇರುವುದಿಲ್ಲ ಎಂದು ಪರಿಗಣಿಸಿ ಮಾನ್ಯ ನ್ಯಾಯಾಲಯವು ಮುಂದಿನ ವಿಚಾರಣೆಯನ್ನು ನಡೆಸಿ ತೀರ್ಮಾನ ಮಾಡಲಾಗುವುದು ಎಂದು ತಿಳಿಯುವುದು.

ಅರ್ಜಿದಾರರ ಪರ ವಕೀಲರು	ನ್ಯಾಯಾಲಯದ ಅಪ್ಪಣೆ ಮೇರೆಗೆ
ಹೆಚ್.ಎಂ.ಪೂರ್ಣಿಮಾ, ನ್ಯಾಯವಾದಿಗಳು	ಸಹಿ/-ಶಿರಸ್ತೇದಾರರು,
ಅಂಬರ 159, 1ನೇ ತಿರುವು, 3ನೇ ಮೇನ್,	ಪ್ರಧಾನ ವ್ಯವಹಾರ ನ್ಯಾಯಾಧೀಶರು
ಎಲ್.ಬಿ.ಎಸ್.ನಗರ ,ಶಿವಮೊಗ್ಗ ,	ಮತ್ತು ಪ್ರ.ದ.ನ್ಯಾ.ದಂ.ಗಳವರು,
ದಿನಾಂಕ:13-03-2026	ಶಿವಮೊಗ್ಗ
ಮೊ: 9844494348	

ಮಾನ್ಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ, ಸೊರಬ
ಸಿ.ಮಿಸ್.ನಂ : 59/2026

ಅರ್ಜಿದಾರರು: 1)ನಾರಾಯಣ ಸ್ವಾಮಿ ಜಿ ಬಿನ್ ಟಿ.ಜಿ.ರಾವ್, ಸುಮಾರು 73 ವರ್ಷ, ಮಳಲಗದ್ದೆ ಗ್ರಾಮ, ಉಳವಿ ಹೋಬಳಿ, ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, 2) ತ್ರಿವೇಣಿ ಕೋಂ ಜಿ.ಜಿ.ಹೆಗಡೆ, ಸುಮಾರು 69 ವರ್ಷ, ಸಿದ್ದಾಪುರ ಟೌನ್ ವಾಸಿ, ಶಿರಸಿ ತಾಲ್ಲೂಕು, ಉ.ಕ.ಜಿಲ್ಲೆ, 3)ಭಾಗೀರಥಿ ಕೋಂ ಲಕ್ಷ್ಮಿ ನಾರಾಯಣ, ಸುಮಾರು 67 ವರ್ಷ, ಕಾಸ್ಪಾಡಿ ಗ್ರಾಮ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, 4)ನಾಗವೇಣಿ ಕೋಂ ಪ್ರದೀಪ್ ಕುಮಾರ್, ಸುಮಾರು 65 ವರ್ಷ, ಸಾಗರ ಟೌನ್ ವಿಜಯ ನಗರ ವಾಸಿ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, 5)ಇಂದಿರಾ ಕೋಂ ದಿವಾಕರ, ಸುಮಾರು 63 ವರ್ಷ, ಬೆಂಗಳೂರು ವಾಸಿ, 6)ಕೃಷ್ಣ ಪ್ರಸಾದ್ ಎನ್ ಬಿನ್ ನಾರಾಯಣ ಸ್ವಾಮಿ, ಸುಮಾರು 40 ವರ್ಷ, ಮಳಲಗದ್ದೆ ಗ್ರಾಮ, ಉಳವಿ ಹೋಬಳಿ, ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ,

ವಿರುದ್ಧ

ಎದುರುದಾರರು : ತಹಶೀಲ್ದಾರ್‌ರವರು ಸೊರಬ, ಸೊರಬ ತಾಲ್ಲೂಕು.

ಪತ್ರಿಕಾ ಪ್ರಕಟಣೆ

ಮೇಲ್ಕಂಡ ಅರ್ಜಿದಾರರು ಎದುರುದಾರರ ವಿರುದ್ಧ ಕೆಳಗೆ ನಮೂದಿಸಿದ ವ್ಯಕ್ತಿಯು ಮರಣ ಹೊಂದಿರುವುದರಿಂದ ಮರಣ ದಾಖಲೆಯನ್ನು ಪಡೆದುಕೊಳ್ಳುವ ಸಲುವಾಗಿ ಈ ಕೇಸನ್ನು ದಾಖಲಿಸಿದ್ದು, ಇದರ ವಿಚಾರಣೆಯು **ದಿನಾಂಕ:02-05-2026 ರಂದು ಬೆಳಿಗ್ಗೆ 11 ಘಂಟೆಗೆ** ಇರುವುದರಿಂದ ಈ ವಿಷಯದಲ್ಲಿ ಹಿತಾಸಕ್ತಿ ಇರುವುವವರು ಅರ್ಜಿದಾರರಾಗಿ ಅಥವಾ ಎದುರುದಾರರಾಗಿ ಅಂದು ಮಾನ್ಯ ನ್ಯಾಯಾಲಯದಲ್ಲಿ ಹಾಜರಾಗಬಹುದು. ಮರಣ ಹೊಂದಿದ ವ್ಯಕ್ತಿಯ ಹೆಸರು, ದಿನಾಂಕ ಮತ್ತು ಸ್ಥಳ : 1 ರಿಂದ 5ನೇ ಅರ್ಜಿದಾರರ ತಾಯಿ ಹಾಗೂ 6ನೇ ಅರ್ಜಿದಾರರ ಅಜ್ಜಿಯಾದ **ಮೀನಾಕ್ಷಮ್ಮ ಕೋಂ ಡಿ.ಜಿ.ರಾವ್** ಇವರು ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕು, ಉಳವಿ ಹೋಬಳಿ, ಮಳಲಗದ್ದೆ ಗ್ರಾಮದಲ್ಲಿ **ದಿನಾಂಕ:07-05-2019** ರಂದು ಮರಣ ಹೊಂದಿರುತ್ತಾರೆ. ಆ ಸಂಬಂಧ ಅರ್ಜಿದಾರರ ಅಜ್ಜಿಯ ಮರಣ ದಾಖಲೆ ಪಡೆಯುವ ಸಂಬಂಧ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಅರ್ಜಿದಾರರ ಪರ ವಕೀಲರು	ನ್ಯಾಯಾಲಯದ ಅಪ್ಪಣೆ ಮೇರೆಗೆ
ಶ್ರೀ ಪ್ರಶಾಂತ್ ಜಿ.	ಸಹಿ/-ಶಿರಸ್ತೇದಾರರು,
ವಕೀಲರು, ಸೊರಬ	ವ್ಯವಹಾರ ನ್ಯಾಯಾಧೀಶರು ಮತ್ತು
ರೋಲ್.ನಂ.ಕೆ.ಎ.ಆರ್. 4183/2006	ಜೆ.ಎಂ.ಎಫ್.ಸಿ. ನ್ಯಾಯಾಲಯ, ಸೊರಬ

Hosadigantha kannada daily Printed & Published by P.S. Prakash on behalf of Jnanabharathi Prakashana Limited. Printed at Digantha Mudrana, New Thirthahalli Road, Shivamogga - 577201 and Published at 'Madhura Nilaya', 4th Cross, Durgigudi, Park Extension, Shivamogga 577202. Ph: (08182) 401752, 8861209076. Editor : P.S. Prakash, Group Editor : Vinayak S. Bhat.

ಆರೆಂಜ್ ಕ್ಯಾಪ್ | ಪರ್ಪಲ್ ಕ್ಯಾಪ್



ರಿಕೆಲ್ಟನ್ (ಮುಂಬೈ) 81 ರನ್ | ಜೇಕಬ್ ಡಫಿ (ಆರ್‌ಸಿಬಿ) 3 ವಿಕೆಟ್

ಕಿರುಸುದ್ದಿ

ಫುಟ್‌ಬಾಲ್: ಭಾರತ ಶುಭಾರಂಭ

ಕೊಚ್ಚಿ: ಇಲ್ಲಿಯ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ನಡೆದ ಎಎಫ್‌ಸಿ ಏಷ್ಯನ್ ಕಪ್ 2027 ಅರ್ಹತಾ ಪಂದ್ಯದಲ್ಲಿ ಭಾರತ 2–1 ಅಂತರದಲ್ಲಿ ಹಾಂಗ್ ಕಾಂಗ್ ತಂಡವನ್ನು ಸೋಲಿಸಿ ನಗರದಲ್ಲಿ ತನ್ನ ಮೊದಲ ಗೆಲುವು ದಾಖಲಿಸಿದೆ. ಪಂದ್ಯದ ಆರಂಭದಲ್ಲೇ ಎಲ್ಲರ ಗಮನ ಸೆಳೆದ ರಿಯಾನ್ ವಿಲಿಯಮ್ಸ್, ತಮ್ಮ ಡೆಬ್ಯೂ ಪಂದ್ಯದಲ್ಲೇ 4ನೇ ನಿಮಿಷದಲ್ಲಿ ಗೋಲು ಬಾರಿಸಿ ಭಾರತಕ್ಕೆ ಮುನ್ನಡೆ ನೀಡಿದರು. ಇದು ಭಾರತೀಯ ಪುರುಷರ ತಂಡದ ಇತಿಹಾಸದಲ್ಲಿ ಡೆಬ್ಯೂ ಆಟಗಾರರಿಂದ ಬಂದ ಅತ್ಯಂತ ವೇಗದ ಗೋಲು ಕೂಡ ಆಗಿದೆ.

ಇನ್ನೊಂದು ಗೋಲು ಆಕಾಶ್ ಮಿಶ್ರಾ ಅವರಿಂದ ಬಂತು. ಅವರು ಭಾರತ ಪರ ತಮ್ಮ ಮೊದಲ ಗೋಲು ದಾಖಲಿಸಿದರು. 65ನೇ ನಿಮಿಷದಲ್ಲಿ ಎವರ್ಟನ್ ಕಮಾರ್ಗೋ ಗೋಲು ಬಾರಿಸಿ ಹಾಂಗ್ ಕಾಂಗ್ ಅಂತರವನ್ನು ಕಡಿಮೆ ಮಾಡಿದರೂ, ಕೊನೆಯವರೆಗೂ ಮುನ್ನಡೆ ಕಾಯ್ದುಕೊಂಡ ಭಾರತ ಜಯ ಸಾಧಿಸಿತು. ಈ ಗೆಲುವಿನೊಂದಿಗೆ ಖಾಲಿದ್ ಜಮೀಲ್ ನೇತೃತ್ವದ ಭಾರತ ತಂಡ ತನ್ನ ಏಷ್ಯನ್ ಕಪ್ ಅರ್ಹತಾ ಅಭಿಯಾನವನ್ನು ಸಕಾರಾತ್ಮಕವಾಗಿ ಮುಕ್ತಾಯಗೊಳಿಸಿದೆ.

ಬ್ರಾಡ್‌ಕಾಸ್ಟಿಂಗ್ ಸಿಬ್ಬಂದಿ ಅನುಮಾನಾಸ್ಪದ ಸಾವು

ಮುಂಬೈ: ಬ್ರಿಟಿಷ್ ನಾಗರಿಕ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಬ್ರಾಡ್‌ಕಾಸ್ಟಿಂಗ್ ಸಿಬ್ಬಂದಿ ಇಯಾನ್ ವಿಲಿಯಮ್ಸ್ ಲ್ಯಾಂಗ್‌ಫೋರ್ಡ್ ಮುಂಬೈನಲ್ಲಿ ಅನುಮಾನಾಸ್ಪದವಾಗಿ ಮೃತಪಟ್ಟರೆಂದು ಮುಂಬೈ ಪೊಲೀಸರು ತಿಳಿಸಿದ್ದಾರೆ. 76 ವರ್ಷದ ಇಯಾನ್ ಮುಂಬೈನ ಖಾಸಗಿ ಹೋಟೆಲಿನಲ್ಲಿ ಮೃತಪಟ್ಟರು. ಐಪಿಎಲ್ ಆಡಳಿತ ಮಂಡಳಿ ಮತ್ತು ಬಿಸಿಸಿಐ ಅವರ ಸಾವಿಗೆ ಸಾಂತ್ವಾನ ತಿಳಿಸಿದೆ. ಪ್ರಕಟಣೆಯಲ್ಲಿ ಐಪಿಎಲ್ ಬ್ರಾಡ್‌ಕಾಸ್ಟಿಂಗ್ ಇಂಜಿನೀಯರ್ ಮೃತರಾದರು. ಬಿಸಿಸಿಐ ಅವರ ಸಾವಿಗೆ ಸಾಂತ್ವಾನ ತಿಳಿಸುತ್ತದೆ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ, ಐಪಿಎಲ್ ಯಶಸ್ಸಿನಲ್ಲಿ ಅವರ ಪಾತ್ರ ನಮಗೆ ಸದಾ ನೆನಪಿರುತ್ತದೆ. ಅವರ ಕುಟುಂಬಕ್ಕೆ ಬೇಕಾದ ಎಲ್ಲಾ ಬೆಂಬಲ ಬಿಸಿಸಿಐ ನೀಡುತ್ತದೆ ಎಂದು ಬರೆದುಕೊಂಡಿದೆ.

ಕನ್ನಡಿಗ ವಿಜಯ್‌ಗೆ 3 ವಿಕೆಟ್ | ಗುಜರಾತ್ 162/6

ವೈಶಾಖ್ ಮಾರಕ ಬೌಲಿಂಗ್ ಪಂಜಾಬ್‌ಗೆ ಸ್ಪರ್ಧಾತ್ಮಕ ಗುರಿ

ಚಂಡೀಗಢ: ಮೊದಲಿಗೆ ಸ್ಫೋಟಕ ಬ್ಯಾಟಿಂಗ್ ಮಾಡಿದರೂ, ಕನ್ನಡಿಗ ವಿಜಯ್‌ಕುಮಾರ್ ವೈಶಾಖ್ ಅವರ ಕರಾರುವಾಕ್ ಬೌಲಿಂಗ್ ದಾಳಿಗೆ ತತ್ತರಿಸಿದ ಗುಜರಾತ್ ಟೈಟಾನ್ಸ್ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ 4ನೇ ಪಂದ್ಯದಲ್ಲಿ ಸ್ಪರ್ಧಾತ್ಮಕ ಗುರಿ ಮಾತ್ರ ನೀಡಲು ಶಕ್ತವಾಯಿತು.

ಗಿಲ್, ಸುದರ್ಶನ್ ಹಾಗೂ ಬಟ್ಲರ್ ಅವರ ಬ್ಯಾಟಿಂಗ್‌ನೊಂದಿಗೆ ಒಂದು ಹಂತದಲ್ಲಿ ದೊಡ್ಡ ಸ್ಕೋರ್‌ನತ್ತ ಸಾಗುತ್ತಿದ್ದ ಗುಜರಾತ್ ಮಧ್ಯಮ ಇನ್ನಿಂಗ್ಸ್‌ನಲ್ಲಿ ಎಡವಿತು. ವೇಗಿ ವಿಜಯ್ ಕುಮಾರ್ ವೈಶಾಖ್ ಅವರ ದಾಳಿಯಲ್ಲಿ ಸಿಲುಕಿಕೊಂಡು ಚಾಹಲ್ ದಾಳಿಗೆ ತತ್ತರಿಸಿತು. ಟಾಸ್ ಸೋಲಿನೊಂದಿಗೆ ಬ್ಯಾಟಿಂಗ್‌ಗಿಳಿದ ಗುಜರಾತ್ 20 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 162 ರನ್ ಗಳಿಸಿದೆ. ಗಿಲ್ ಹೆಚ್ಚು ರನ್ ಗಳಿಸಿದವರಲ್ಲಿ ಬಂದರೆ, ಬಟ್ಲರ್ ಕೂಡ ಉತ್ತಮ ಬ್ಯಾಟಿಂಗ್ ಮಾಡಿದರು. ಬೌಲಿಂಗ್‌ನಲ್ಲಿ ಪಂಜಾಬ್‌ನ ಬಹುತೇಕ ಎಲ್ಲಾ ಬೌಲರ್‌ಗಳು ಮಿಂಚಿದರು. ವೈಶಾಖ್ 3, ಚಾಹಲ್ 2 ವಿಕೆಟ್ ಪಡೆದರು. ಉಳಿದ ಬೌಲರ್‌ಗಳು ಡಾಟ್‌ಗಳ ಮೂಲಕ ಗಮನ ಸೆಳೆದರು.

ಉತ್ತಮ ಆರಂಭ: ಗುಜರಾತ್‌ನ ಸ್ವಾಭಾವಿಕ ಬ್ಯಾಟಿಂಗ್‌ನೊಂದಿಗೆ ಪಂದ್ಯ ಶುರುವಾಯಿತು. ಗಿಲ್ ಮತ್ತು ಸಾಯಿ ಸುದರ್ಶನ್ ಆರಂಭಿಕ ಹಂತದಲ್ಲಿ ಸೆಟ್ ಆಗುವತ್ತ ಗಮನ ಹರಿಸಿದರು. ಆದರೆ ಸೆಟ್ ಆಗುವ ಮೊದಲೇ ಸಾಯಿ ಸುದರ್ಶನ್ ಕ್ಯಾಚ್ ಆದರು. 11 ಎಸೆತ ಎದುರಿಸಿದ ಅವರು 13 ರನ್‌ಗೆ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಬಟ್ಲರ್ ಬಂದು ಒಂದು ಬದಿಯಲ್ಲಿ ಅಂಟಿಕೊಂಡು ನಿಲ್ಲುವ ಜವಾಬ್ದಾರಿ ನಂದೆಂದರು. ಅಷ್ಟರೊತ್ತಿಗಾಗಲೇ ಸೆಟ್ ಆಗಿ ನಿಂತಿದ್ದ ಗಿಲ್ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. 6 ಸ್ಟ್ರೋಕ್‌ಗಳ ಮೂಲಕ ಮನಮೋಹಕ ಬೌಂಡರಿಗಳೊಂದಿಗೆ 27 ಬಾಲ್‌ಗಳಲ್ಲಿ 39 ರನ್ ಗಳಿಸಿ ಔಟಾದರು. ಅನಿರೀಕ್ಷಿತವಾಗಿ ಜಾಸ್ ಬಟ್ಲರ್ ಸೆಟ್ ಆಗುವುದಕ್ಕೆ ಹೆಚ್ಚಿನ ಸಮಯ ತೆಗೆದುಕೊಂಡರು. ನಡುವೆ ಒಂದೆರಡು ಬೌಂಡರಿಗಳನ್ನು ಚಾಡಿಸಿದರೂ, 33 ಬಾಲ್‌ಗಳಲ್ಲಿ ಅವರು ಗಳಿಸಿದ್ದು 38 ರನ್ ಮಾತ್ರ. ಇದರಲ್ಲಿ 3 ಬೌಂಡರಿ ಮತ್ತು 2 ಸಿಕ್ಸರ್ ಸೇರಿವೆ. ಮಧ್ಯಮ ಕ್ರಮಾಂಕದಲ್ಲಿ ಫಿಲಿಪ್ಸ್ ಸರಸರನೇ ಬೌಂಡರಿ ಸಿಕ್ಸರ್‌ಗಳನ್ನು ಬಾರಿಸಿ 25 ಕ್ಕೆ ಕ್ಯಾಚ್ ಆದರು. ಸುಂದರ್ ಔಪಚಾರಿಕತೆ ಮುಗಿಸುವಷ್ಟರಲ್ಲಿ 18ಕ್ಕೆ ವಿಕೆಟ್ ಕೊಟ್ಟರು.



ದಿಢೀರ್ ಕುಸಿತ

ಗಿಲ್, ಬಟ್ಲರ್ ಅವರ ಬ್ಯಾಟಿಂಗ್‌ನೊಂದಿಗೆ ಒಂದು ಹಂತದಲ್ಲಿ ಉತ್ತಮವಾಗಿ ಬ್ಯಾಟಿಂಗ್ ಮಾಡುತ್ತಿದ್ದ ಗುಜರಾತ್ ಅವರ ವಿಕೆಟ್ ಬಿದ್ದ ನಂತರ ನಿಧಾನವಾಯಿತು. ರನ್ ವೇಗ ಕುಸಿಯಿತು, ಒತ್ತಡಕ್ಕೆ ಸಿಲುಕಿಕೊಂಡ ಗುಜರಾತ್, ಭಾರೀ ಹಿನ್ನಡೆ ಅನುಭವಿಸಲಾರಂಭಿಸಿತು. ಆರಂಭದಲ್ಲಿ 200 ರನ್ ದಾಟುವ ಭರವಸೆಯಲ್ಲಿದ್ದ ತಂಡ ಈಗ 160 ರನ್ ದಾಟುವುದಕ್ಕೂ ಪರದಾಟ ನಡೆಸಿದಂತೆ ಮಾಡಿತು. ಯಜ್ವೇಂದ್ರ ಚಾಹಲ್ ಮಾರಕ ಬೌಲಿಂಗ್ ದಾಳಿಯೊಂದಿಗೆ 3 ವಿಕೆಟ್ ಕಿತ್ತರು. ಚಾಹಲ್ 2 ವಿಕೆಟ್ ಕಿತ್ತರು. ಅಂತಿಮದಲ್ಲಿ ಟೆವಾಟಿಯಾ 160ರ ಗಡಿ ದಾಟಿಸಿದರು.

ಸ್ಕೋರ್ ವಿವರ

ಗುಜರಾತ್: 162/6

ಸುದರ್ಶನ್	ಸಿ ಶ್ರೇಯಸ್ ಬಿ ಯಾನ್ಸನ್	13
ಗಿಲ್	ಸಿ ಕೂಪರ್ ಬಿ ಚಾಹಲ್	39
ಬಟ್ಲರ್	ಸಿ ಬಾರ್ಟಲೆಟ್ ಬಿ ಚಾಹಲ್	38
ಫಿಲಿಪ್ಸ್	ಸಿ ಯಾನ್ಸನ್ ಬಿ ವೈಶಾಖ್	25
ಸುಂದರ್	ಸಿ ಅರ್ಶದೀಪ್ ಬಿ ವೈಶಾಖ್	18
ಶಾರುಖ್	ಸಿ ಅರ್ಶದೀಪ್ ಬಿ ವೈಶಾಖ್	4
ಟೆವಾಟಿಯಾ	ನಾಟೌಟ್	11
ರಶಿದ್	ನಾಟೌಟ್	0
ಇತರೆ	14	
ಅರ್ಶದೀಪ್	4-0-42-0	
ಬಾರ್ಟಲೆಟ್	4-0-36-0	
ಯಾನ್ಸನ್	4-0-20-1	
ವೈಶಾಖ್	4-0-34-3	
ಚಾಹಲ್	4-0-28-2	

ಗೆಲುವಿನ ಭರವಸೆಯಲ್ಲಿ ರಿಷಭ್ ಪಂತ್ ಪಡೆ

ಇಂದು ಲಖನೌ vs ದಿಲ್ಲಿ



ಪಿಚ್ ರಿಪೋರ್ಟ್

ಲಖನೌನ ಏಕಾನಾ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಬೌಲರ್‌ಗಳಿಗೆ ಅಲ್ಪ ಅನುವು ಮಾಡಿಕೊಡುವ ಏಕೈಕ ಐಪಿಎಲ್ ಪಿಚ್ ಇದಾಗಿದೆ. ಸ್ಪಿನ್ನರ್‌ಗಳು ಮತ್ತು ವೇಗಿಗಳು ಮಿಂಚುವ ಸಾಧ್ಯತೆ ಇದೆ. ದೊಡ್ಡ ದೊಡ್ಡ ಸ್ಕೋರ್‌ಗಳು ಬಂದರೂ ತೀರಾ ಸ್ಫೋಟಕ ಬ್ಯಾಟಿಂಗ್ ಮಾಡಲಾಗಲ್ಲ. ಪಿಚ್‌ನಲ್ಲಿ ಹೆಚ್ಚಿನ ಬೌನ್ಸ್ ಇರುತ್ತದೆ, ನೇರ ಬ್ಯಾಟ್‌ಗೆ ಬರಬಹುದು.

ಲಖನೌ: ಬದಲಾವಣೆಗಳೊಂದಿಗೆ ಮೈದಾನಕ್ಕಿಳಿಯುತ್ತಿರುವ ದಿಲ್ಲಿ ಕ್ಯಾಪಿಟಲ್ಸ್ ಮತ್ತು ಲಖನೌ ಸೂಪರ್ ಜೇಂಟ್ಸ್ ತಂಡಗಳು ಗುರುವಾರ ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಕಳೆದ ಕೂಟದಲ್ಲಿ ಉತ್ತಮ ಪ್ರದರ್ಶನ ನೀಡಿದ್ದಾದರೂ ದಿಲ್ಲಿ ಕ್ಯಾಪಿಟಲ್ಸ್ ಕೊನೆಯಲ್ಲಿ ಹಿನ್ನಡೆ ಅನುಭವಿಸಿತ್ತು. ಇತ್ತ ಲಖನೌ ಕೂಡ ಆರಂಭಿಕ ಪಂದ್ಯಗಳಲ್ಲಿ ಉತ್ತಮ ಪ್ರದರ್ಶನ ನೀಡಿ ಬಳಿಕ ಹೊರಬಿದ್ದಿತ್ತು. ದಿಲ್ಲಿ ಪಡೆಯಲ್ಲಿ ಮಧ್ಯಮ ಕ್ರಮಾಂಕದ ಬ್ಯಾಟಿಂಗ್ ಮತ್ತು ಲಖನೌ ಬೌಲಿಂಗ್‌ನಲ್ಲಿ ಹಿನ್ನಡೆ ಅನುಭವಿಸಿತ್ತು. ಅರ್ಜುನ್ ತೆಂಡೂಲ್ಕರ್ ಮತ್ತು ಮುಖ್ಯವಾಗಿ ಮೊಹಮ್ಮದ್ ಶಮಿಯವರನ್ನು ಟ್ರೇಡ್ ಮಾಡಿಕೊಂಡಿತ್ತು. ಇತ್ತ ದಿಲ್ಲಿ ಕ್ಯಾಪಿಟಲ್ಸ್ ಬೇಕಾದ ಆಟಗಾರರನ್ನು ಹರಾಜಿನಲ್ಲಿ ಆಯ್ಕೆ ಮಾಡಿಕೊಂಡಿದ್ದಲ್ಲದೆ ನಿತಿಶ್ ರಾಣಾ ಅವರನ್ನು ಟ್ರೇಡ್ ಮಾಡಿಕೊಂಡಿತ್ತು. ಅಗತ್ಯ ಬದಲಾವಣೆಯೊಂದಿಗೆ ಕಣಕ್ಕಿಳಿಯುತ್ತಿರುವ ಉಭಯ ತಂಡಗಳು ಕುತೂಹಲ ಮೂಡಿಸಿವೆ. ಲಖನೌನ ಏಕಾನಾ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ.

ಪಂತ್ ಲಯ ಲಖನೌ ಶಕ್ತಿ: ಬ್ಯಾಟಿಂಗ್‌ನಲ್ಲಿ ಆರಂಭಿಕರು ಮಾರ್ಕ್ರಂ ಮತ್ತು ಮಾರ್ಷ್ ಮತ್ತೊಮ್ಮೆ ತಯಾರಾಗಿ ನಿಂತಿದ್ದಾರೆ. ಕಳೆದ ಬಾರಿ ಬ್ಯಾಟಿಂಗ್‌ನಲ್ಲಿ ವೈಫಲ್ಯ ಎದುರಿಸಿದ್ದ ರಿಷಭ್ ಪಂತ್ ಅಭ್ಯಾಸದಲ್ಲಿ ಬಲಿಷ್ಠರಾಗಿ ಕಾಣಿಸಿಕೊಂಡಿರುವುದೇ ತಂಡಕ್ಕೆ ಆನೆ ಬಲ. ನಿಕೋಲಸ್ ಪೂರನ್ ಸ್ಪಷ್ಟ ಹೊಡೆತಗಳ ಮೂಲಕ ಮಿಂಚಲು ಸಿದ್ಧರಾಗಿದ್ದಾರೆ. ಇನ್ನು ಬಲಿಷ್ಠ ಜೋಶ್ ಇಂಗ್ಲಿಸ್ ಅವರನ್ನು ಆಯ್ಕೆ ಖರೀದಿಸಿದ್ದಾರೆ. ಫಿನಿಶಿಂಗ್‌ಗೆ ಅಬ್ದುಲ್ ಸಮಾದ್, ಆಯುಷ್ ಬದೋನಿ ಅಂಥವರು ಕಣಕ್ಕಿಳಿಯಲಿದ್ದಾರೆ. ಬೌಲಿಂಗ್ ವಿಚಾರದಲ್ಲಿ ಶಾರ್ದೂಲ್ ಠಾಕೂರ್ ಈ ಬಾರಿ ಮುಂಬೈ ಸೇರಿಕೊಂಡಿದ್ದಾರೆ. ಆದಾಗ್ಯೂ ಶಮಿ, ನೋಕಿಯಾ, ಮುಕುಲ್ ಚೌಧ್ರಿ ಅವರನ್ನು ಖರೀದಿಸಿದೆ. ದೇಸಿ ಬೌಲರ್‌ಗಳ ಬಲವೂ ತಂಡಕ್ಕಿದೆ.

ದಿಲ್ಲಿಯಲ್ಲಿ ವಿಶ್ವಾಸ: ಇನ್ನು ಕೆ.ಎಲ್. ರಾಹುಲ್ ಇರುವ ತಂಡ ದಿಲ್ಲಿ ಕೂಡ ಬಲಿಷ್ಠ ಪಡೆಯಾಗಿ ನಿಂತಿದೆ. ಪೃಥ್ವಿ ಶಾ, ಪೋರೆಲ್ ಅಂಥವರು ತಂಡದಲ್ಲಿದ್ದಾರೆ. ಅಕ್ಷರ್ ಪಟೇಲ್ ಮುನ್ನಡೆಸಲಿರುವ ತಂಡಕ್ಕೆ ಸ್ಟಾರ್ಕ್ ಇಲ್ಲದ ಶಾಕ್ ಇದ್ದರೂ ಚಮೀರಾ, ಕೇಲ್ ಜೆಮಿಸನ್, ಟಿ ನಟರಾಜನ್, ಲುಂಗಿ ಎನ್‌ಗಿಡಿ ಅಂತವರು ತಂಡದಲ್ಲಿದ್ದಾರೆ. ಬ್ಯಾಟಿಂಗ್ ವಿಭಾಗವನ್ನು ನಿಸ್ಸಂಕಾ, ನಿತಿಶ್ ರಾಣಾ, ಕರುಣ್ ನಾಯರ್ ಇದ್ದು ಬಲಿಷ್ಠ ತಂಡ ಸಿದ್ಧವಾಗಿದೆ.

ಪಂದ್ಯದ ವಿವರ:
ಯಾವಾಗ?: ಗುರುವಾರ
ಎಲ್ಲಿ: ಏಕಾನಾ, ಲಖನೌ, ಸಮಯ: ಸಂಜೆ 7:30, ಪ್ರಸಾರ: ಸ್ಟಾರ್‌ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಐಪಿಎಲ್‌ನಲ್ಲಿ ಸೂರ್ಯವಂಶಿಯ ಮಿಂಚಿನಾಟ

ವೈಭವ್ ಅಂತಾರಾಷ್ಟ್ರೀಯ ಪದಾರ್ಪಣೆ ಯಾವಾಗ?

ಸೋಮವಾರದ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯದಲ್ಲಿ 15 ವರ್ಷದ ಸಂಚಲನ ವೈಭವ್ ಸೂರ್ಯವಂಶಿ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರಿಸಿರುವುದು ವಿಶ್ವ ಕ್ರಿಕೆಟ್‌ನಲ್ಲಿ ಮತ್ತೊಂದು ಚರ್ಚೆ ಹುಟ್ಟುಹಾಕಿದೆ.

ರಾಜಸ್ಥಾನ ಹಾಗೂ ಚೆನ್ನೈ ನಡುವಿನ ಪಂದ್ಯದಲ್ಲಿ 17 ಬಾಲ್‌ಗಳಲ್ಲಿ ಅವರು ಅರ್ಧಶತಕ ಬಾರಿಸಿದರು. ಇದರೊಂದಿಗೆ ಹೊಸ ಶೈಲಿಯ ಕ್ರಿಕೆಟ್‌ನಲ್ಲಿ ಮತ್ತೊಂದು ದಾಖಲೆ ಮಾಡಿದರು. ರಾಜಸ್ಥಾನ ಆ ಪಂದ್ಯ ಗೆದ್ದಿತು. ಈ ಬಳಿಕ ವಿಶ್ವದ ಗಣ್ಯ ಕ್ರಿಕೆಟಿಗರೆಲ್ಲಾ ವೈಭವ್ ಸೂರ್ಯವಂಶಿ ಅವರನ್ನು ಪುರುಷರ ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಆಯ್ಕೆ ಮಾಡುವ ಕುರಿತು ಮಾತನಾಡಿದ್ದಾರೆ.

ಸೂರ್ಯವಂಶಿ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದಂತೆ ಇತ್ತ ಇಂಗ್ಲೆಂಡಿನ ಮಾಜಿ ನಾಯಕ ಮೈಕಲ್ ವಾಘನ್ ಬಿಸಿಸಿಐಗೆ ಮನವಿ ಸಲ್ಲಿಸಿದ್ದಾರೆ. ಆ ವೈಭವ್ ಸೂರ್ಯವಂಶಿ ಅವರ ಅಂತಾರಾಷ್ಟ್ರೀಯ ತಂಡಕ್ಕೆ ಆಯ್ಕೆ ಯಾವಾಗ? ನಾನು ಕಾಯುತ್ತಿದ್ದೇನೆ, ಅವರು ಒಂದು ತಂಡದಲ್ಲಿ ಮುಖ್ಯ ಪಾತ್ರ ವಹಿಸುತ್ತಾರೆಂದರೆ ಸೀನಿಯರ್ ತಂಡದಲ್ಲಿ ಯಾಕೆ ಆಯ್ಕೆಯಾಗಬಾರದು? ಮುಂದಿನ ದಿನಗಳಲ್ಲಿ ಇಂಗ್ಲೆಂಡ್‌ನೊಂದಿಗೆ ವೈಟ್‌ಬಾಲ್ ಸರಣಿಯಿದೆ ಅಲ್ಲಿ ಅವರನ್ನು ಆಯ್ಕೆ ಮಾಡಿದರೆ ಇತಿಹಾಸ ಆಗುವುದನ್ನು ನೋಡಬಹುದು' ಎಂದಿದ್ದಾರೆ. ಇತ್ತ ಭಾರತ ತಂಡದ ಮಾಜಿ ಆಟಗಾರ ಮೊಹಮ್ಮದ್ ಕೈಫ್ ಕೂಡ ಈ ಬಗ್ಗೆ ಮಾತನಾಡಿ, 'ವೈಭವ್ ಸೂರ್ಯವಂಶಿ ಅಂತಾರಾಷ್ಟ್ರೀಯ ಪಂದ್ಯವಾಡುವುದಕ್ಕೆ ಸಿದ್ಧರಿದ್ದಾರೆ' ಎಂದು ಅಭಿಪ್ರಾಯ ಪಟ್ಟಿದ್ದಾರೆ. ಇತ್ತ ಸಾಮಾಜಿಕ ಜಾಲತಾಣದಲ್ಲೂ ಚರ್ಚೆಗಳು ಜೋರಾಗಿವೆ.

ಭಾರತದ ಸರಣಿಯಲ್ಲಿ ಟಿ20: ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿ ಮುಕ್ತಾಯಗೊಂಡ ನಂತರ ಭಾರತ ಪುರುಷರ ತಂಡ ಇಂಗ್ಲೆಂಡಿನಂತಹ ಪ್ರವಾಸ ಕೈಗೊಳ್ಳಲಿದೆ. ತವರು ಸರಣಿಗಳಲ್ಲಿ ಟಿ20 ಪಂದ್ಯಗಳನ್ನಾಡಲಿದೆ. ವೈಟ್ ಬಾಲ್ ಕ್ರಿಕೆಟಿನಲ್ಲಿ ವೈಭವ್ ಅವರಿಗೆ ಒಂದಾದರೂ ಅವಕಾಶ ನೀಡಬೇಕೆಂಬ ಮಾತು ವಿವಿಧ ಕ್ರಿಕೆಟ್ ಎಕ್ಸ್‌ಪರ್ಟ್‌ಗಳದ್ದಾಗಿದೆ.

ಅಂಡರ್–19ನಲ್ಲಿ ವೈಭವ್‌ಗಿಲ್ಲ ಅವಕಾಶ?: ವಿಶ್ವಕಪ್ ಗೆದ್ದಿರುವ ಭಾರತ ಅಂಡರ್–19 ತಂಡವು ಮುಂದಿನ ದಿನಗಳಲ್ಲಿ ಮತ್ತಷ್ಟು ಅಂಡರ್–19 ಸರಣಿ, ಪಂದ್ಯಾವಳಿಗಳನ್ನು ಆಡಲಿವೆ. ಆದರೆ ಅಂಡರ್–19 ವಿಶ್ವಕಪ್‌ಗಳಲ್ಲಿ ಒಮ್ಮೆ ಆಡಿದ ಆಟಗಾರರನ್ನು ಎರಡನೇ ಬಾರಿ ಆಯ್ಕೆ ಮಾಡಲಾಗಲ್ಲ, ಈಗಾಗಲೇ ಒಂದು ಬಾರಿ ಆಡಿರುವ ವೈಭವ್ ಸೂರ್ಯವಂಶಿ ಇನ್ನೊಂದು ಬಾರಿ ಆಯ್ಕೆಯಾಗಲ್ಲ, ಇದು ಬಿಸಿಸಿಐ ವಾಡಿಕೆ. ಹೀಗಾಗಿ ಐಪಿಎಲ್ ಮುಗಿದ ತಕ್ಷಣ ವೈಭವ್ ದೇಶಿ ಕ್ರಿಕೆಟ್‌ವರೆಗೂ ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಲಿದೆ. ಹೀಗಾಗಿ ವೈಭವ್ ಸೂರ್ಯವಂಶಿಗೆ ಆಯ್ಕೆ ಮಾಡಬೇಕು ಅನ್ನುವ ಅಭಿಪ್ರಾಯಗಳು ಮುಂದೆ ಬರುತ್ತಿವೆ. ಒಟ್ಟಿನಲ್ಲಿ ವೈಭವ್ ಆಯ್ಕೆ ಮಾಡಿದರೆ ಹತ್ತಾರು ದಾಖಲೆಗಳು ಆಗಲಿವೆ. ಕ್ರಿಕೆಟ್ ದೇವರಾದ ಸಚಿನ್ ತೆಂಡೂಲ್ಕರ್ ಅಂತವರ ದಾಖಲೆಗಳನ್ನು ಅವರು ಮುರಿಯಲಿದ್ದಾರೆ. ಆದರೆ ಬಿಸಿಸಿಐನ ಹೊಸ ಮಾನದಂಡಗಳ ಪ್ರಕಾರ ಇಂತಿಷ್ಟು ದೇಶಿ ಕ್ರಿಕೆಟ್ ಪಂದ್ಯಗಳನ್ನಾಡಬೇಕೆಂಬ ನಿಯಮಗಳಿವೆ. ಆದಾಗ್ಯೂ ವೈಭವ್ ದೇಶಿ ಕ್ರಿಕೆಟ್‌ನಲ್ಲೂ ಸಾಧನೆ ಮಾಡಿದ್ದಾರೆ. ಸೂರ್ಯವಂಶಿ ಸಾಧನೆ ಗಮನದಲ್ಲಿಟ್ಟುಕೊಂಡು ಆಯ್ಕೆ ಮಾಡುತ್ತಾ ಎಂಬ ವಿಚಾರ ತಂಡ ಬಿಡಗಡೆ ವೇಳೆ ಗೊತ್ತಾಗಲಿದೆ.



ವೈಭವ್ ದಾಖಲೆ

- 2025ರಲ್ಲಿ ಐಪಿಎಲ್‌ಗೆ ಆಯ್ಕೆಯಾದ ಅತಿ ಕಿರಿಯ ಆಟಗಾರ
- ಐಪಿಎಲ್‌ನಲ್ಲಿ ಶತಕ ಬಾರಿಸಿದ ಅತ್ಯಂತ ಕಿರಿಯ ಆಟಗಾರ
- ಐಪಿಎಲ್‌ನ ವೇಗದ ಶತಕ ಬಾರಿಸಿರುವುದು
- ರಣಜಿ ಆಡಿದ ಅತಿ ಕಿರಿಯ(12 ವರ್ಷ)
- ಒಂದು ಐಪಿಎಲ್ ಆವೃತ್ತಿಯಲ್ಲಿ 300 ರನ್ ಬಾರಿಸಿದ ಅತ್ಯಂತ ಕಿರಿಯ
- ಅಂಡರ್–19 ವಿಶ್ವಕಪ್‌ನಲ್ಲಿ ಸರಣಿಶ್ರೇಷ್ಠ
- ವಿಶ್ವಕಪ್ ಫೈನಲ್‌ನಲ್ಲಿ ಶತಕ
- ಅಂಡರ್–19 ಫೈನಲ್‌ನಲ್ಲಿ ಅತಿ ಹೆಚ್ಚು ರನ್

ವೈಭವ್ ಉದಯ

2024ರಲ್ಲಿ ನಡೆದಿದ್ದ 2025ರ ಐಪಿಎಲ್ ಹರಾಜಿನಲ್ಲಿ 14 ವರ್ಷದ ಬಾಲಕ ನಾಮನಿರ್ದೇಶನ ಮಾಡಿದ್ದ. ಆರ್‌ಆರ್ ತಂಡದ ಪ್ರಮುಖ ಕೋಚ್ ಆಗಿದ್ದ ರಾಹುಲ್ ದ್ರಾವಿಡ್ ಥಟ್ಟನೆ ಖರೀದಿಸಿದರು. ಅಲ್ಲಿಂದ ಐಪಿಎಲ್‌ನಲ್ಲಿ ಹೊಸ ಇತಿಹಾಸ ಶುರುವಾಯಿತು. ಆ ಇತಿಹಾಸ, ಭಾರತದ ಭವಿಷ್ಯದ ಹೆಸರು ವೈಭವ್ ಸೂರ್ಯವಂಶಿ. ಐಪಿಎಲ್ ಪಂದ್ಯದಲ್ಲಿ ಅವಕಾಶ ಸಿಕ್ಕ ನಂತರ 14 ವರ್ಷದ ಬಾಲಕ ಅಂತಾರಾಷ್ಟ್ರೀಯ ಬೌಲರುಗಳನ್ನು ಮನ ಬಂದಂತೆ ದಂಡಿಸಲಾರಂಭಿಸಿದರು. ಎಲ್ಲಿಲ್ಲದ ಸ್ಫೋಟಕ ಬ್ಯಾಟಿಂಗ್, ಬಾನೆತ್ತರದ ಸಿಕ್ಸರ್‌ಗಳನ್ನು ಬಾರಿಸತೊಡಗಿದರು. ಐಪಿಎಲ್‌ನ ವೇಗದ ಶತಕ ಬಾರಿಸಿದರು. ಬಾಲನೊಬ್ಬನ ಸ್ಫೋಟಕ ಬ್ಯಾಟಿಂಗ್ ನೋಡಿ ನಿಬ್ಬೆರಗಾಗಿ ನಿಂತ ಜನರು ಕ್ರಿಕೆಟಿನಲ್ಲಿ ಭಾರತದ ಉಜ್ವಲ ಭವಿಷ್ಯ ಪ್ರತ್ಯಕ್ಷ ಕಂಡರು. ಅಲ್ಲಿಂದ ಭಾರತದಲ್ಲಿ ಹೊಸ ಸಂಚಲನ. ತಕ್ಷಣಕ್ಕೆ ಅವರನ್ನು ಭಾರತ ತಂಡಕ್ಕೆ ಆಯ್ಕೆ ಮಾಡದೆ ಅಂಡರ್–19 ತಂಡದಲ್ಲಿ ಸೇರಿಸಲಾಗಿತ್ತು. ಅಲ್ಲದೆ ದೇಶಿ ಕ್ರಿಕೆಟಿನಲ್ಲಿ ಬಿಹಾರ ತಂಡಕ್ಕೂ ಅವರನ್ನು ಆಯ್ಕೆ ಮಾಡಲಾಗಿತ್ತು. ಅಂಡರ್–19 ತಂಡದ ಏಷ್ಯಾಕಪ್, ವಿಶ್ವಕಪ್ ಪಂದ್ಯಾವಳಿಗಳಲ್ಲಿ ಸ್ಫೋಟಕ ಬ್ಯಾಟಿಂಗ್ ಮೂಲಕ ವಿಶ್ವ ಕ್ರಿಕೆಟ್‌ನಲ್ಲಿ ಅಬ್ಬರದಾಟ ಪ್ರದರ್ಶಿಸಿದ ಸೂರ್ಯವಂಶಿ ಜಾಗತಿಕ ಮಟ್ಟದ ಮಾಧ್ಯಮದಲ್ಲಿ ಹೆಡ್‌ಲೈನ್ ಆದರು. ಸೂರ್ಯವಂಶಿ ಈಗ ವಿಶ್ವದರ್ಜೆಯ ಸ್ಟಾರ್. ಆಸಕ್ತಿದಾಯಕ ಕ್ರಿಕೆಟಿಗರಿಗೆ ವೈಭವ್ ಫೇವರಿಟ್, ಕ್ರಿಕೆಟ್ ಅಭಿಮಾನಿಗಳಿಗೆ ಅವರೊಬ್ಬ ರೋಲ್ ಮಾಡೆಲ್. ಇಂತದ್ದೇ ಸಮಯದಲ್ಲಿ ಮತ್ತೊಂದು ಬಾರಿ ಐಪಿಎಲ್ ಶುರುವಾಗಿದೆ. ಮೊದಲ ಪಂದ್ಯದಲ್ಲೇ ವೈಭವ್ ಸೂರ್ಯವಂಶಿ ದಾಖಲೆಯ ಬ್ಯಾಟಿಂಗ್ ಮಾಡಿದ್ದಾರೆ.

ಏಪ್ರಿಲ್ 9ಕ್ಕೆ ಒಲಿಂಪಿಕ್ಸ್ ಕೂಟದ ಟಿಕೆಟ್ ಲಭ್ಯ

ಹೊಸದಿಲ್ಲಿ: 2028ರ ಲಾಸ್ ಏಂಜಲೀಸ್ ಒಲಿಂಪಿಕ್ ಕ್ರೀಡಾಕೂಟದ ಟಿಕೆಟ್‌ಗಳು ಏಪ್ರಿಲ್ 9 ರಂದು ಸಾರ್ವಜನಿಕರಿಗೆ ಮಾರಾಟಕ್ಕೆ ಬರಲಿವೆ ಎಂದು ಸಂಘಟಕರು ಸೋಮವಾರ ತಿಳಿಸಿದ್ದಾರೆ. ವಿಶೇಷವಾಗಿ ಈ ಬಾರಿ ಅಭಿಮಾನಿಗಳಿಗೆ ಟಿಕೆಟ್ ಭದ್ರತೆಯ ಬಗ್ಗೆ ಭರವಸೆ ನೀಡಲು ಮುಂದಾಗಿದೆ.

ಲಾಸ್ ಏಂಜಲೀಸ್ ಮತ್ತು ಒಕ್ಲಹೋಮ ನಗರದ ಅರ್ಹತಾ ಪ್ರದೇಶಗಳಲ್ಲಿನ ನಿವಾಸಿಗಳಿಗೆ ಪೂರ್ವ–ಮಾರಾಟವು ಏಪ್ರಿಲ್ 2 ರಂದು ಪ್ರಾರಂಭವಾಗಲಿದ್ದು, ಆಯ್ದ ಖರೀದಿದಾರರಿಗೆ ಅಧಿಸೂಚನೆ ಇಮೇಲ್‌ಗಳು ಮಾರ್ಚ್ 31 ರಿಂದ ಏಪ್ರಿಲ್ 4 ರವರೆಗೆ ಬಿಡುಗಡೆಯಾಗಲಿವೆ ಎಂದು ತಿಳಿಸಿದೆ. ಏಪ್ರಿಲ್ 7 ರಂದು, ಸಂಘಟನಾ ಸಮಿತಿಯು ಉಳಿದ ನೋಂದಣಿದಾರರಿಗೆ ಡ್ರಾಪ್ 1 ಎಂದು ಕರೆಯಲ್ಪಡುವ ಮೊದಲ ಸಾಮಾನ್ಯ ಮಾರಾಟ ಸುತ್ತಿನಲ್ಲಿ ಖರೀದಿ ವಿಂಡೋಗೆ ಆಯ್ಕೆಯಾಗಿದೆಯೇ ಎಂದು ತಿಳಿಸುತ್ತದೆ. ಈ ವಾರ ಅಭಿಮಾನಿಗಳು ಎಲ್‌ಎ28 ಒಲಿಂಪಿಕ್ ಕ್ರೀಡಾಕೂಟದಲ್ಲಿ ಸ್ಥಾನವನ್ನು ಪಡೆಯಲು ಮೊದಲ ಅವಕಾಶವನ್ನು ಸೂಚಿಸುತ್ತದೆ ಎಂದು ಎಲ್‌ಎ28 ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರೆನಾಲ್ಡ್ ಹೂವರ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಅಭಯ್, ಅನಾಹತ್ ಸಿಂಗ್ ವರ್ಷದ ಸ್ಕ್ವಾಷ್ ಆಟಗಾರರು

ಹೊಸದಿಲ್ಲಿ: ಭಾರತದ ಸ್ಕ್ವಾಷ್ ಆಟಗಾರ ಅಭಯ್ ಸಿಂಗ್ ಅವರಿಗೆ 2025ನೇ ಸಾಲಿನ ಏಷ್ಯನ್ ಸ್ಕ್ವಾಷ್ ಫೆಡರೇಷನ್ ಪುರುಷರ ವರ್ಷದ ಆಟಗಾರ ಪ್ರಶಸ್ತಿ ಲಭಿಸಿದೆ. ಇನ್ನು ಕಿರಿಯರ ವಿಭಾಗದಲ್ಲಿ ಯುವ ಪ್ರತಿಭೆ ಅನಾಹತ್ ಸಿಂಗ್ ಅತ್ಯುತ್ತಮ ಆಟಗಾರ್ತಿಯಾಗಿ ಆಯ್ಕೆಯಾಗಿದ್ದಾರೆ.


ಈ ನಡುವೆ, ಈಜಿಪ್ಟ್‌ನಲ್ಲಿ ನಡೆದ 2025ರ ವಿಶ್ವ ಜೂನಿಯರ್ ತಂಡ ಚಾಂಪಿಯನ್‌ಶಿಪ್‌ನಲ್ಲಿ ಕಂಚು ಪದಕ ಗೆದ್ದ ಭಾರತೀಯ ಬಾಲಕರ ತಂಡಕ್ಕೂ 'ಪುರುಷರ ತಂಡ' ಪ್ರಶಸ್ತಿ ಲಭಿಸಿದೆ ಎಂದು ಫೆಡರೇಷನ್ ಪ್ರಕಟಿಸಿದೆ. ಪ್ರಸ್ತುತ ವಿಶ್ವ ಶ್ರೇಯಾಂಕದಲ್ಲಿ 25ನೇ ಸ್ಥಾನದಲ್ಲಿರುವ ಅಭಯ್ ಸಿಂಗ್, ಏಷ್ಯನ್ ಗೇಮ್ಸ್ ಹಾಗೂ ಏಷ್ಯನ್ ಚಾಂಪಿಯನ್‌ಶಿಪ್ ಪದಕ ವಿಜೇತರಾಗಿದ್ದು, ಕಳೆದ ವರ್ಷ ಭಾರತ ಗೆದ್ದ ವಿಶ್ವಕಪ್ ಮಿಶ್ರ ಟೀಮ್ ಪ್ರಶಸ್ತಿ ವಿಜೇತ ತಂಡದ ಭಾಗವಾಗಿದ್ದರು.

ವಿಶ್ವ 20ನೇ ಶ್ರೇಯಾಂಕದಲ್ಲಿರುವ ಅನಾಹತ್ ಸಿಂಗ್ ಕೂಡ ಏಷ್ಯನ್ ಗೇಮ್ಸ್ ಮತ್ತು ಏಷ್ಯನ್ ಚಾಂಪಿಯನ್‌ಶಿಪ್ ಪದಕ ವಿಜೇತೆ. 2025ರಲ್ಲಿ ಕೈರೋದಲ್ಲಿ ನಡೆದ ವಿಶ್ವ ಜೂನಿಯರ್ ಚಾಂಪಿಯನ್‌ಶಿಪ್‌ನಲ್ಲಿ ಕಂಚು ಪದಕ ಗೆದ್ದಿದ್ದು, ವಿಶ್ವಕಪ್ ಮಿಶ್ರ ತಂಡ ಚಿನ್ನದ ಸಾಧನೆಯಲ್ಲೂ ಭಾಗಿಯಾಗಿದ್ದರು. ಇದಕ್ಕೂ ಮುನ್ನ 2022ರಲ್ಲಿ ಸೌರವ್ ಘೋಷಾಲ್ ಮತ್ತು ಜೋಷ್ನಾ ಚಿನಪ್ಪಾ ಕ್ರಮವಾಗಿ ಪುರುಷ ಹಾಗೂ ಮಹಿಳಾ ವಿಭಾಗಗಳಲ್ಲಿ ಈ ಪ್ರಶಸ್ತಿಗಳನ್ನು ಪಡೆದಿದ್ದರು.

ಟಿಟಿ ವಿಶ್ವಕಪ್: ಮನಿಕಾ ಆಸೆ ಜೀವಂತ

ಹೊಸದಿಲ್ಲಿ: ಮನಿಕಾ ಬಾತ್ರಾ ಐಟಿಟಿಎಫ್ ಟೇಬಲ್ ಟೆನಿಸ್ ವರ್ಲ್ಡ್ ಕಪ್‌ನಲ್ಲಿ ನಾಕೌಟ್ ಹಂತದ ನಿರೀಕ್ಷೆ ಜೀವಂತವಾಗಿಟ್ಟುಕೊಂಡಿದ್ದಾರೆ.

ಚೀನಾದ ಮಕಾವಿನಲ್ಲಿ ನಡೆದ ಪಂದ್ಯದಲ್ಲಿ ಮನಿಕಾ ಅಮೆರಿಕದ ಲಿಲ್ಲಿ ಝಾಂಗ್ ವಿರುದ್ಧ 3–2 (11–7, 11–2, 14–16, 5–11, 11–6) ಅಂತರದಲ್ಲಿ ಕಠಿಣ ಜಯ ಸಾಧಿಸಿದರು. 43 ನಿಮಿಷಗಳ ಈ ಪಂದ್ಯದಲ್ಲಿ ಮಣಿಕಾ ತಾಳ್ಮೆಯ ಆಟ ಪ್ರದರ್ಶಿಸಿದರು. ಟೂರ್ನಿಯ ಮೊದಲ ಪಂದ್ಯದಲ್ಲಿ ಅವರು ಜಪಾನ್‌ನ ಮಿವಾ ಹರಿಮೋಟೋ ವಿರುದ್ಧ 0–3 ಅಂತರದಲ್ಲಿ ಸೋತಿದ್ದರು.



ಇನ್ನೊಂದೆಡೆ, ವಿಶ್ವದ 43ಶ್ರೇಯಾಂಕದ ಹೊಂದಿರುವ ಶ್ರೀಜಾ ಅಕುಲಾ ತಮ್ಮ ಮೊದಲ ಪಂದ್ಯದಲ್ಲಿ ಪೋರ್ಚುಗಲ್‌ನ ಫು ಯು ವಿರುದ್ಧ 1–3 (11–8, 9–11, 13–15, 8–11) ಅಂತರದಲ್ಲಿ ಸೋಲು ಕಂಡರು. ಅವರು ಮುಂದಿನ ಗುಂಪು ಹಂತದ ಪಂದ್ಯದಲ್ಲಿ ವಿಶ್ವ ನಂ.2 ಚೀನಾದ ವಾಂಗ್ ಮಾನ್ಯು ವಿರುದ್ಧ ಬುಧವಾರ ಆಡಲಿದ್ದಾರೆ. ಪುರುಷರ ವಿಭಾಗದಲ್ಲಿ ಭಾರತದಿಂದ ಏಕೈಕ ಆಟಗಾರ ಮಾನವ್ ಠಕ್ಕರ್, ಕೊರಿಯಾದ ಪಾರ್ಕ್ ಗ್ಯಾಂಗ್ ಹ್ಯೋನ್ ವಿರುದ್ಧ 0–3 ಸೋಲಿನ ನಂತರ, ಸ್ವೀಡನ್‌ನ ಟ್ರುಲ್ಸ್ ಮೊರೆಗಾರ್ಡ್ ವಿರುದ್ಧ ನಡೆಯುವ ಮಹತ್ವದ ಪಂದ್ಯದಲ್ಲಿ ಗೆಲುವು ಸಾಧಿಸಲೇಬೇಕಾಗಿದೆ. ಒಟ್ಟು 16 ಗುಂಪುಗಳಲ್ಲಿ ನಡೆಯುತ್ತಿರುವ ಈ ಟೂರ್ನಿಯಲ್ಲಿ, ಪ್ರತಿ ಗುಂಪಿನ ಅಗ್ರಸ್ಥಾನ ಪಡೆದ ಆಟಗಾರರು ಮಾತ್ರ ರೌಂಡ್ 16ರ ಸುತ್ತಿಗೆ ಪ್ರವೇಶ ಪಡೆಯುತ್ತಾರೆ.

ಬಾಲ್ ವಿರೂಪ: ಜಮಾನ್‌ಗೆ 2 ವರ್ಷ ನಿಷೇಧ

- ಪಿಎಸ್‌ಎಲ್ ಪಂದ್ಯದಲ್ಲಿ ಘಟನೆ
- ಪಂದ್ಯಾವಳಿಯಿಂದ 2 ವರ್ಷ ನಿಷೇಧ


ಕರಾಚಿ: ಐಪಿಎಲ್‌ನಲ್ಲಿ ಸೊಗಸಾದ ಪಂದ್ಯಗಳು ನಡೆಯುತ್ತಿರುವ ಸಮಯದಲ್ಲೇ ಅಲ್ಲಿ ಪಾಕಿಸ್ತಾನ ಸೂಪರ್ ಲೀಗ್ ಪಂದ್ಯಾವಳಿಯಲ್ಲಿ ಬಾಲ್ ವಿರೂಪಗೊಳಿಸಿರುವ ಆರೋಪದಲ್ಲಿ ಪಾಕಿಸ್ತಾನ ಕ್ರಿಕೆಟ್ ತಂಡದ ಪ್ರಮುಖ ಆಟಗಾರ ಫಕರ್ ಜಮಾನ್‌ಗೆ ಪಿಸಿಬಿ ಎರಡು ವರ್ಷದ ನಿಷೇಧ ಹೇರಿದೆ.



ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಗೂ ಮುನ್ನವೇ ಪಾಕಿಸ್ತಾನ ಸೂಪರ್ ಲೀಗ್ ಪಂದ್ಯಾವಳಿ ಶುರುವಾಗಿದೆ. ಹೀಗಿರುವಾಗ ಭಾನುವಾರ ಲಾಹೋರ್ ಹಾಗೂ ಕರಾಚಿ ತಂಡಗಳು ಎದುರಾಗಿದ್ದವು. ಕರಾಚಿ ತಂಡದ ನಾಯಕ ಶಾಹಿನ್ ಆಫ್ರಿದಿ ಹಾಗೂ ಹ್ಯಾರಿಸ್ ರೌಫ್ ಅವರೊಂದಿಗೆ ಗೇಮ್ ಪ್ಲಾನ್ ಮಾಡುವಾಗ ಅದೇ ತಂಡದ ಫಕರ್ ಜಮಾನ್ ಅವರು ಬಾಲನ್ನು ವಿರೂಪಗೊಳಿಸುವ ತುಣುಕುಗಳು ಹರಿದಾಡಿವೆ. ಖಾತರಿಗೊಂಡಂತೆ ಪಿಸಿಬಿ ಕಠಿಣ ನಿರ್ಧಾರಕ್ಕೆ ಮುಂದಾಯಿತು. ಮಂಗಳವಾರ ಈ ಬಗ್ಗೆ ಹೇಳಿರುವ ಪಿಸಿಬಿ, ಫಕರ್ ಜಮಾನ್ ಟೂರ್ನಮೆಂಟಿನ ಲೆವಲ್ ಮೂರರ ಮಾನದಂಡ ಉಲ್ಲಂಘನೆ ಮಾಡಿದ್ದಾರೆ. ನಮ್ಮ ನಿಯಮ ಪಟ್ಟಿಯ ವಿಧಿ 2.14ರ ಅಡಿಯಲ್ಲಿ ಅವರಿಗೆ ಸಜೆ ನೀಡಲಾಗುತ್ತದೆ. ಅಲ್ಲದೆ, ವಿಧಿ 41.3ರ ಅಡಿಯಲ್ಲಿ ಬಾಲ್ ವಿರೂಪಗೊಳಿಸಿರುವುದು ಖಾತರಿಯಾಗಿದೆ. ಇದಕ್ಕೆ ಕಠಿಣ ಕ್ರಮ ಕೈಗೊಳ್ಳಲಿರುವ ಪಿಸಿಬಿ ಜಮಾನ್ ಅವರನ್ನು ಪಿಎಸ್‌ಎಲ್‌ನಿಂದ 2 ವರ್ಷ ನಿಷೇಧ ಮಾಡುತ್ತದೆ ಎಂದು ಹೇಳಿದೆ. ಬಾಲ್ ವಿರೂಪಗೊಳಿಸಿರುವ ವಿಚಾರಕ್ಕೆ ಸಂಬಂಧಿಸಿದಂತೆ ಮೈದಾನದಲ್ಲೇ ನಿರ್ಣಾಯಕರು ಹಾಗೂ ಆಟಗಾರರ ನಡುವೆ ಗೊಂದಲಗಳಾಗಿವೆ. ಇದಕ್ಕೂ ಅವರಿಗೆ ದಂಡ ವಿಧಿಸಲಾಗಿದೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5940

ಎಡದಿಂದ ಬಲಕ್ಕೆ
1.ವಾರೆಯಾಗಿ ಕಂಡ ಮುಖ (2)
2.ತೆಂಗಿನ ಕಾಯಿಯಿಂದ ಮಾಡಿದ ಮೋದಕ (5)
4. ಕಾಯು–ರಕ್ಷಿಸು ಎಂಬರ್ಥದ ಶಬ್ದ (3)
5. ಓಟು ಚಲಾಯಿಸುವ ವ್ಯಕ್ತಿ (4)
7.ವಸ್ತು–ವಿಷಯವು ಸಾರದಿಂದ ಕೂಡಿದೆ (4)
9.ಶಬ್ದಗಳೊಂದಿಗೆ ಆಡುವ ಬೌದ್ಧಿಕ ಆಟ (4)
13.ಅಂಕುರ–ಮೊಳಕೆಯಿದು (4)
15.ಬರವನ್ನು ಹೋಗಲಾಡಿಸಲು ಮಾಡಿದ ಕಾಳಗ (3)
16.ಗೆಲುವಿನ ಹಬ್ಬ–ವಿಜಯೋತ್ಸವವಿದು (5)
17.ಮನೆಸಾಲುಗಳ ನಡುವಿನ ಹಾದಿ (2)

ಮೇಲಿನಿಂದ ಕೆಳಕ್ಕೆ
1.ಭೂಮಿಯನ್ನು ಅಳತೆ ಮಾಡುವವನು (5)
2.ಕಾನನದಲ್ಲಿರುವ ಸದನ (4)
3.ಮರದ ಕಾಂಡದ ಕೆಳಗಿನ ಭಾಗ (2)
4.ಸಾಹಿತಿಯ ಪರ್ಯಾಯ ಹೆಸರಿದು (4)
6.ಸುವರ್ಣವಿಲ್ಲಿ ತಲೆಕೆಳಗಾಗಿದೆ (3)
8.ತಕ್ಕಮಟ್ಟಿಗೆ ಒಂದೇ ಆಗಿರುವುದು (3)
10.ದರದ ಬಗ್ಗೆ ತಿಳಿದುಕೊಂಡ ಹಿರಿಯ ವೇದೆ (4)
11.ಬಿಳಿಯ ಬಣ್ಣದ ಹಿಮಾಚ್ಛಾದಿತ ಪರ್ವತ (5)
12.ಅಸಾಧಾರಣವಾದ ಶಕ್ತಿ ಆಲದ ನಡುವೆ ಇದೆ (4)
14.ಗಿಡ–ಮರಗಳ ಹುಟ್ಟಿಗೆ ಕಾರಣವಾದುದು (2)

5939 ಉತ್ತರ

ಎಡದಿಂದ ಬಲಕ್ಕೆ:
3.ತಾಣದೀವಿಗೆ
5.ಗುಟುರು 6.ತಬಲ
7.ಕರಜ 9.ರಣರಂಗ
11.ಜಡತನ 14.ಈಚಲ
16.ಶಿಲ್ಪಿಗ 17.ದಕ್ಷಿಣ
18.ತೋರಣದ್ವಾರ

ಮೇಲಿನಿಂದ ಕೆಳಕ್ಕೆ :
1. ಸಂಗೀತಗಾರ
2.ಅಂಗುಲ
3.ತಾರುಮಾರು 4.ದೀಪಕ
8.ರಕುತ 10.ಚರಣ
12.ನಖಶಿಖಾಂತ
13.ಪುರಂದರ 15.ಲಕ್ಷಣ
16.ಗಣನೆ

ಹೊಸ ದಿಗಂತ
ಗರಿಷ್ಠ 34° | ಕನಿಷ್ಠ 20°
ಬುಧವಾರ
1 ಏಪ್ರಿಲ್ 2026

ಶಿವಮೊಗ್ಗ

ಪ್ರಶಸ್ತಿ ಪತ್ರ



ಶಿವಮೊಗ್ಗ: ಮ್ಯಾಮ್ಕೋಸ್ ಸಂಸ್ಥೆಯ ಸದಸ್ಯರ ಪ್ರತಿಭಾವಂತ ಮಕ್ಕಳಿಗೆ ನೀಡುವ 2024-25ನೇ ಸಾಲಿನ ಬೆಳ್ಳಿ ಮಹೋತ್ಸವ ಪಾರಿತೋಷಕ ಬಹುಮಾನ, 5000 ರೂ ಚೆಕ್ ಮತ್ತು ಪ್ರಶಸ್ತಿಪತ್ರಗಳನ್ನು ಸಂಸ್ಥೆಯ ಸ್ಥಳೀಯ ನಿರ್ದೇಶಕ ಜಿ.ಈ.ವಿರೂಪಾಕ್ಷಪ್ಪ ಎಪಿಎಂಸಿ ಮ್ಯಾಮ್ಕೋಸ್ ಸಂಸ್ಥೆಯ ಆವರಣದಲ್ಲಿ ವಿತರಿಸಿದರು. ನಿರ್ದೇಶಕ ಸತೀಶ್ ರಾಮಿನಕೊಪ್ಪ, ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಶ್ರೀಕಾಂತ್ ಬರುವೆ, ಶಾಖಾ ವ್ಯವಸ್ಥಾಪಕಿ ಪುಷ್ಪ, ಗೋದಾಮು ವ್ಯವಸ್ಥಾಪಕರಾದ ಪಲ್ಲವಿ ಇತರರಿದ್ದರು.


ಇಂದಿನಿಂದ ಜನಗಣತಿ: ಡಿಸಿ | ೨
ಕೆರೆಗೆ ತ್ಯಾಜ್ಯ ಬಿಸಾಡದಿರಿ: ಎಂ.ಪಿ. ಲತಾ | ೩
ಒಳಮೀಸಲಾತಿ ಅಳವಡಿಸಿಕೊಂಡೇ ನೇಮಕಾತಿ | ೪

ಕಿರುಸುದ್ದಿ

ಅಡಿಕೆ ಧಾರಣೆ

ಶಿವಮೊಗ್ಗ	ಸಾಗರ
ಸರಕು-54,859-92,550	ರಾಶಿ-23,105-31,105
ರಾಶಿ-49,551-51,000	ಚಾಲಿ-27,105-28,205
ಬೆಟ್ಟೆ-65,009-65,009	ಕೆಂಪುಗೋಟು-12,105-12,105
ಗೊರಬಲು-20,899-21,321	ಬಿಳಿಗೋಟು-10,105-11,205
	ಸಿಪ್ಪೆಗೋಟು-8,919-22,630

ಡಾ.ಅಜಿತ್ ಹರೀಶಿ ಅವರ 'ತೇಲಿ ಬಿಟ್ಟ ಆತ್ಮಬುಟ್ಟಿ' ಕವನ ಸಂಕಲನಕ್ಕೆ ಶಿಭಾ ಕಾವ್ಯಪುರಸ್ಕಾರ



• **ಚಂದ್ರಗುತ್ತಿ:** ಕವಿ, ಕಥೆಗಾರ, ವಿಮರ್ಶಕ ಡಾ. ಅಜಿತ್ ಹರೀಶಿ ಅವರ 'ತೇಲಿ ಬಿಟ್ಟಆತ್ಮಬುಟ್ಟಿ' ಕವನ ಸಂಕಲನವು 2026ರ ಶಿಭಾ ಕಾವ್ಯ ಪುರಸ್ಕಾರವನ್ನು ಪಡೆದುಕೊಂಡಿದೆ. ಸಾಹಿತ್ಯ ಸೌರಭ, ವಡಗೋಲ, ಬೆಳಗಾವಿ ನೀಡುವ ಪ್ರಶಸ್ತಿ ಇದಾಗಿದೆ. ಬೆಳಗಾವಿ ಜಿಲ್ಲಾ ಸಾಹಿತ್ಯ ಭವನದಲ್ಲಿ, ಮೇ ಒಂದರಂದು ನಡೆಯುವ ಸಂಸ್ಥೆಯ ವಾರ್ಷಿಕೋತ್ಸವ ಸಮಾರಂಭದಲ್ಲಿ ಶಿಭಾ ಕಾವ್ಯ ಪುರಸ್ಕಾರ ನೀಡಿ ಗೌರವಿಸಲಾಗುವುದು ಎಂದು ಸಾಹಿತ್ಯ ಸೌರಭ ಫೌಂಡೇಶನ್, ವಡಗೋಲ, ಬೆಳಗಾವಿ ಇವರು ತಿಳಿಸಿದ್ದಾರೆ.

ಸಂಭ್ರಮದ ವೆಂಕಟರಮಣ ದೇವರ ರಥೋತ್ಸವ



• **ನಗರ(ಹೊಸನಗರ):** ನಗರದ ಗುಜರಿಪೇಟೆಯ ಶ್ರೀ ವೆಂಕಟರಮಣ ದೇವರ ರಥೋತ್ಸವ ಹಾಗೂ ವರ್ಧಂತಿ ಉತ್ಸವವೂ ಸಾವಿರಾರು ಭಕ್ತರ ಜಯಘೋಷ ಗಳೊಂದಿಗೆ ಅತ್ಯಂತ ವಿಜೃಂಭಣೆಯಲ್ಲಿ ನಡೆಯಿತು. ನಗರದ ಗೌಡ ಸಾರಸ್ವತ ಬ್ರಾಹ್ಮಣ ಸಮಾಜದ ಹಿರಿಯರು ಹಾಗು ದೇಗುಲ ಸಮಿತಿಯ ಅಧ್ಯಕ್ಷ ಎನ್. ಸುರೇಶ ಭಟ್, ಗೌರವಾಧ್ಯಕ್ಷ ಕೆ.ಭಾಸ್ಕರ ಭಟ್, ಅರ್ಚಕ ವೃಂದದ ತುಕಾರಾಮಭಟ್, ಪ್ರಮೋದ್‌ಭಟ್, ಊರ ಭಕ್ತಾದಿಗಳ ನಿರಂತರ ಜಯಘೋಷ ಮತ್ತು ಮಹಿಳಾ ವೃಂದದ ಭಜನೆಯೊಂದಿಗೆ ರಥಬೀದಿಯಲ್ಲಿ ರಥವನ್ನು ಎಳೆಯಲಾಯಿತು.

ವೆಂಕಟೇಶ್ ಜಿ.ಎಸ್. ನಿಧನ



• **ಸಾಗರ :** ಭಾರತೀಯ ಸೈನ್ಯದಲ್ಲಿ ಸುಬೇದಾರ್ ಆಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದ ವೆಂಕಟೇಶ್ ಜಿ.ಎಸ್. (65) ಸೋಮವಾರ ನಿಧನರಾಗಿದ್ದಾರೆ. ಮೃತರು ಪತ್ನಿ ಓರ್ವ ಪುತ್ರ ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ.

ವೆಂಕಟೇಶ್ ಜಿ.ಎಸ್. ಅವರಿಗೆ ಮಾಜಿ ಯೋಧರ ಕಲ್ಯಾಣ ಟ್ರಸ್ಟ್ ವತಿಯಿಂದ ಪಾರ್ಥಿವ ಶರೀರಕ್ಕೆ ರಾಷ್ಟ್ರಧ್ವಜ ಹೊದೆಸಿ ಅಂತಿಮ ನಮನ ಸಲ್ಲಿಸಲಾಯಿತು. ನಂತರ ರಾಷ್ಟ್ರಧ್ವಜವನ್ನು ಸುಶೀಲಾ ವೆಂಕಟೇಶ್ ಅವರಿಗೆ ಹಸ್ತಾಂತರಿಸಲಾಯಿತು. ಮಂಗಳವಾರ ಸಾಗರದ ಮಾರಿಕಾಂಬಾ ರುದ್ರಭೂಮಿಯಲ್ಲಿ ಅಂತ್ಯಸಂಸ್ಕಾರ ನಡೆಯಿತು.

ವೆಂಕಟೇಶ್ ಜಿ.ಎಸ್. ಅವರು ಭಾರತೀಯ ಸೈನ್ಯದಲ್ಲಿ ಸುಬೇದಾರ್ ಆಗಿ ಸೇವೆ ಸಲ್ಲಿಸಿ ನಿವೃತ್ತರಾದ ನಂತರ ಭಾರತೀಯ ಜೀವವಿಮಾ ನಿಗಮದಲ್ಲಿ ವಿಮಾ ಸಲಹೆಗಾರರಾಗಿ ಸೇವೆ ಸಲ್ಲಿಸುತ್ತಿದ್ದರು. ಮಾಜಿ ಯೋಧರ ಕಲ್ಯಾಣ ಟ್ರಸ್ಟ್‌ನ ಮುಖ್ಯ ಸಲಹೆಗಾರರಾಗಿ ಕೆಲಸ ಮಾಡುತ್ತಿದ್ದ ಅವರು ಸಾಗರ ರೋಟರಿ ಸಂಸ್ಥೆಯ ಅಧ್ಯಕ್ಷರಾಗಿ ಕೆಲಸ ಮಾಡಿದ್ದರು. ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಮೂಲಕ ಸಾಹಿತ್ಯ ಸೇವೆ ಸಲ್ಲಿಸಿದ್ದ ಅವರ ಕವನ ಸಂಕಲನವೊಂದು ಈಚೆಗೆ ಬಿಡುಗಡೆಯಾಗಿತ್ತು. ಸುಬೇದಾರ್ ವೆಂಕಟೇಶ್ ಅವರ ನಿಧನಕ್ಕೆ ಶಾಸಕ ಗೋಪಾಲಕೃಷ್ಣ ಬೇಳೂರು, ಮಾಜಿ ಯೋಧರ ಕಲ್ಯಾಣ ಟ್ರಸ್ಟ್, ರೋಟರಿ ಸಂಸ್ಥೆ, ಭಾರತೀಯ ಜೀವವಿಮಾ ಪ್ರತಿನಿಧಿಗಳ ಸಂಘ ಸಂತಾಪ ಸೂಚಿಸಿದೆ.

ಮಹಾವೀರ ಜಯಂತಿ ಉದ್ಘಾಟಿಸಿದ ಶಾಸಕ ಎಸ್.ಎನ್.ಚನ್ನಬಸಪ್ಪ

ಸಮಾಜ ಸೇವೆಯಲ್ಲಿ ಜೈನ ಸಮಾಜ



• **ಶಿವಮೊಗ್ಗ:** ಜೈನ ಸಮಾಜಕ್ಕೆ ಕೇಳಿದ್ದನ್ನು ಕೊಡುವ ಶಕ್ತಿ ಇದೆ. ಸಮಾಜಮುಖಿ ಕೆಲಸಗಳನ್ನು ಮಾಡುತ್ತಿದೆ ಎಂದು ಶಾಸಕ ಎಸ್.ಎನ್.ಚನ್ನಬಸಪ್ಪ ಹೇಳಿದರು.

ಜಿಲ್ಲಾಡಳಿತ, ಜಿಪಂ, ಮಹಾನಗರಪಾಲಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಜೈನ ಸಮಾಜದ ವಿವಿಧ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ ಕುವೆಂಪು ರಂಗಮಂದಿರದಲ್ಲಿ ಏರ್ಪಡಿಸಲಾಗಿದ್ದ ಭಗವಾನ್ ಮಹಾವೀರ ಜಯಂತಿ ಉದ್ಘಾಟಿಸಿ ಮಾತನಾಡಿದರು.

ಮಹಾರಾಜರಾಗಿದ್ದ ಮಹಾವೀರರು ತ್ಯಾಗಮಯಿಯಾಗಿ ಜೀವನದ ಪರಮೋಚ್ಚ ಮೌಲ್ಯಗಳನ್ನು ಸಮಾಜಕ್ಕೆ ನೀಡಿದರು. 24ನೇ ತೀರ್ಥಂಕರರಾಗಿ ಜೀವನ ಮೌಲ್ಯಗಳನ್ನು, ವಿಚಾರಗಳನ್ನು ಧಾರೆ ಎರೆದರು. ತಮ್ಮ 30ನೇ ವಯಸ್ಸಿನಲ್ಲಿ ಸಂಸಾರ ಸುಖವನ್ನು ತ್ಯಜಿಸಿ ಸನ್ಯಾಸಿಯಾದ ಇವರು 12 ವರ್ಷಗಳ ಕಾಲ ಕಠಿಣ ತಪಸ್ಸು ಮಾಡಿದ ನಂತರ, ಅವರಿಗೆ ಪರಿಪೂರ್ಣ ಜ್ಞಾನ ಪ್ರಾಪ್ತಿಯಾಗುತ್ತದೆ. ಇಂದ್ರಿಯಗಳನ್ನು ಗೆದ್ದಿದ್ದರಿಂದ ಅವರನ್ನು ಜಿನ ಮತ್ತು ಮಹಾವೀರ ಎಂದು ಕರೆಯಲಾಗುತ್ತದೆ ಎಂದರು.

ಅವರು ಅವರಿಗಾಗಿ ಬದುಕಲಿಲ್ಲ, ಸಮಾಜಕ್ಕಾಗಿ ಬದುಕಿದರು. ಅಹಿಂಸೆ, ಸತ್ಯ, ಅಸ್ತೇಯ, ಅಪರಿಗ್ರಹ, ಬ್ರಹ್ಮಚರ್ಯ ಈ ಪಂಚ ಮಹಾವ್ರತಗಳನ್ನು ಅನುಸರಿಸುವ ಮೂಲಕ ಮನುಕುಲಕ್ಕೇ ಮಾದರಿಯಾದ ಇವರು, ಎಲ್ಲರೂ ಇವನ್ನು ಅನುಸರಿಸುವಂತೆ ಕರೆ ನೀಡಿದರು.

ತ್ಯಾಗ ಎಂದರೆ ಏನೆಂದು ತೋರಿಸಿದ ಭಗವಾನ್ ಮಹಾವೀರರು ಅಹಿಂಸೆ ಮತ್ತು ಸತ್ಯದ ಮಾರ್ಗವನ್ನು ಜಗತ್ತಿಗೆ ಸಾರಿದ ಮಹಾನ್ ಜ್ಞಾನಿ. ಆಸ್ತಿ ಮಾಡುವುದಕ್ಕಿಂತ ನಮ್ಮ ಮಕ್ಕಳನ್ನೇ ಸಮಾಜದ ಆಸ್ತಿ ಮಾಡುವಂತೆ ತಿಳಿಸಿ ಹೋದ ಇವರೇ ಸಮಾಜಕ್ಕೆ ಒಂದು ಸಂದೇಶವಾಗಿದ್ದಾರೆ. ತ್ಯಾಗವೇ ನಮ್ಮ ಧ್ಯೇಯವಾಗಬೇಕು ಎಂದರು.

ಪಂಚಾಣುವ್ರತ ಆಚರಣೆ: ಸಾಗರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ವಿ.ಟಿ.ಸ್ವಾಮಿ ವಿಶೇಷ ಉಪನ್ಯಾಸ ನೀಡಿ, ಮಹಾವೀರರು ಜೈನ ಧರ್ಮದ 24ನೇ ಮತ್ತು ಕೊನೆಯ ತೀರ್ಥಂಕರರಾಗಿದ್ದು ಇವರ ಮೂಲ ಹೆಸರು ವರ್ಧಮಾನ. ಅವರ ಸಂದೇಶಗಳನ್ನು ಮೆಲುಕು ಹಾಕುವ ದಿನ ಇದಾಗಿದೆ. ಸತ್ಯವನ್ನು ಹುಡುಕಾಡಿದವರು ಮಹಾವೀರರು. ಸುಳ್ಳು, ಅಸತ್ಯದ ಕಾಲದಲ್ಲಿ ಸತ್ಯಕ್ಕಾಗಿ, ಜನರ ಕಲ್ಯಾಣಕ್ಕಾಗಿ ಎಲ್ಲವನ್ನು ತ್ಯಾಗ ಮಾಡಿದರು ಎಂದರು.

ಆತ್ಮ ಸಂಬಂಧಕ್ಕೆ ಜೈನ ಧರ್ಮ ಬಹಳ ಪ್ರಾಮುಖ್ಯತೆ ನೀಡುತ್ತದೆ. ಪಂಚಾಣುವ್ರತ ಆಚರಣೆಯನ್ನು ಹೃದಯಕ್ಕೆ ಇಳಿಸಿಕೊಂಡಾಗ ನಿಜವಾದ ಮನುಷ್ಯರಾಗುತ್ತೇವೆ. ಬದುಕನ್ನು ಬದುಕಲಿಕ್ಕೆ ಬಿಡಬೇಕೆಂಬ ಸತ್ಯ ಸಾರಿದ್ದಾರೆ. ಇವತ್ತಿನಿಂದಲೇ ಅವರ ಆಲೋಚನೆಗಳನ್ನು ಅಳವಡಿಸಿಕೊಂಡರೆ ನಮ್ಮ ಜೀವನ ಸಾರ್ಥಕ ಎಂದರು.

ಪ್ರಸ್ತುತ ಜೈನರ ಜನಸಂಖ್ಯೆ ಕಡಿಮೆ ಇದೆ. ದೇಶದಲ್ಲಿ ಸುಮಾರು 45 ರಿಂದ 50 ಲಕ್ಷ ಜನ ಮಾತ್ರ ಇದ್ದಾರೆ. ಆದರೆ ಜೈನರು ವ್ಯಾಪಾರ, ಉದ್ಯೋಗ, ಜಿಎಸ್‌ಟಿಗೆ ಬಹಳಷ್ಟು ಕೊಡುಗೆ ನೀಡಿದ್ದಾರೆ. ಶೇ. 32.5 ರಷ್ಟು ಆರ್ಥಿಕ ಬೆಂಬಲ ದೇಶಕ್ಕೆ ನೀಡಿದ್ದಾರೆ ಎಂದರು.

ಸಂಸ್ಕಾರವಂತರಾಗಬೇಕಿದೆ

ವೇದಗಳ ಕಾಲಕ್ಕಿಂತ ಮುಂಚೆ ಜೈನ ಧರ್ಮ ಅಸ್ತಿತ್ವದಲ್ಲಿ ಇತ್ತು. ಜೈನ ಧರ್ಮ ತ್ಯಾಗ, ಅಹಿಂಸೆಯ ಅನುಸರಣೆಯನ್ನು ಯಾವತ್ತೂ ಮಾಡುತ್ತಾ ಬಂದಿದೆ. ಭಗವಾನ್ ಮಹಾವೀರರು ಕರ್ಮ ಸಿದ್ಧಾಂತ ಗಳನ್ನು ಬಹಳ ಸೂಕ್ಷ್ಮವಾಗಿ ಹೇಳಿದ್ದಾರೆ. ಬದುಕನ್ನು ಶಾಂತ ಮತ್ತು ಸುಂದರಗೊಳಿಸುವ ವಿಚಾರಧಾರೆಗಳನ್ನು ನೀಡಿದ್ದಾರೆ. ನಾವು ಮುಂದಿನ ಪೀಳಿಗೆಗೆ, ಮಕ್ಕಳಿಗೆ ಮಹಾವೀರರ ಅಹಿಂಸಾ ತತ್ವ, ತ್ಯಾಗ, ಸತ್ಯದಂತಹ ವಿಚಾರಗಳನ್ನು ಧಾರೆ ಎರೆಯ ಬೇಕಿದೆ. ಸಂಬಂಧ ಬೆಸೆದು, ಸಂಸ್ಕಾರ ವಂತರಾಗ ಬೇಕಿದೆ ಎಂದು ವಿ.ಟಿ.ಸ್ವಾಮಿ ಹೇಳಿದರು.

ಜಿಲ್ಲಾ ದಿಗಂಬರ ಜೈನ ಸಂಘದ ಅಧ್ಯಕ್ಷ ಜಯರಾಜ ಬಿ ಪಾಂಡಿ, ಸಮಾಜದ ಮುಖಂಡರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಉಮೇಶ್ ಹೆಚ್, ಅಧಿಕಾರಿಗಳು ಪಾಲ್ಗೊಂಡಿದ್ದರು.

ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆದ ವಿದ್ಯಾರ್ಥಿಗಳಿಂದ ಮನವಿ

ತೃತೀಯ ಭಾಷೆ ಗ್ರೇಡಿಂಗ್ ಬದಲು ನಾವು ಬರೆದ ಅಂಕವನ್ನೇ ನೀಡಿ



• **ಹೊಸನಗರ:** ರಾಜ್ಯದ ಪ್ರೌಢಶಾಲಾ ವಿದ್ಯಾರ್ಥಿಗಳ ತೃತೀಯ ಭಾಷೆ (ಹಿಂದಿ) ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮಾರ್ಚ್ 31ರ ಮಂಗಳವಾರ ನಡೆದಿದೆ. ನಮಗೆ ಸರ್ಕಾರ ಸೂಚಿಸಿರುವ ಗ್ರೇಡಿಂಗ್ ಅಂಕದ ಬದಲಾಗಿ ಪರೀಕ್ಷೆ ಬರೆದ ಅಂಕವನ್ನೇ ನೀಡಬೇಕೆಂದು ಇಲ್ಲಿನ ಸರ್ಕಾರಿ ಜೂನಿಯರ್ ಕಾಲೇಜ್ ವಿಭಾಗದ ಪ್ರೌಢ ಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರು ತಹಶೀಲ್ದಾರ್ ಭರತ್‌ರಾಜ್ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಮನವಿ ಪತ್ರದಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ತೃತೀಯ ಭಾಷೆಯ (ಹಿಂದಿ) ಅಂಕಗಳನ್ನು ಅಂತಿಮ ಫಲಿತಾಂಶದಲ್ಲಿ ಪರಿಗಣಿಸದಂತೆ ಸರ್ಕಾರ ತೆಗೆದುಕೊಂಡಿರುವ ಏಕಪಕ್ಷೀಯ ತೀರ್ಮಾನ ಪ್ರಸ್ತುತ ವಿದ್ಯಾರ್ಥಿಗಳ ಸಮಗ್ರ ವಿದ್ಯಾಭ್ಯಾಸದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ತೃತೀಯ ಭಾಷೆಯು ವಿದ್ಯಾರ್ಥಿಗಳ ಭಾಷಾ ಸಾಮರ್ಥ್ಯವನ್ನು ವೃದ್ಧಿಸುವುದಲ್ಲದೇ ವಿವಿಧ ಸಂಸ್ಕೃತಿಗಳ ಅರಿವು ಮತ್ತು ಸಂವಹನ ಕೌಶಲ್ಯಗಳನ್ನು ಬೆಳೆಸಲು ಸಹಕಾರಿಯಾಗುತ್ತದೆ. ನಾವು ಕಲಿಯುವ ಮೂರು ಭಾಷೆಗಳಿಗೂ ಸರಿಸಮನಾದ ಮಾನ್ಯತೆ ನೀಡುವುದು ಶೈಕ್ಷಣಿಕವಾಗಿ ನ್ಯಾಯಸಮ್ಮತವಾಗಿದೆ . ನಾವು ತರಗತಿಯಲ್ಲಿ ಓದಿ ಕಲಿತ ಎಲ್ಲ ವಿಷಯಗಳಿಗೆ ಸಂಬಂಧಿಸಿದಂತೆ ಪರೀಕ್ಷೆ ನಡೆಸಿ ಅಂಕಗಳ ಆಧಾರದಲ್ಲೇ ಫಲಿತಾಂಶ ನೀಡುವುದು ಶಿಕ್ಷಣ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿದೆ. ಗ್ರೇಡಿಂಗ್ ನೀಡುವುದರಿಂದ ನಮ್ಮ ಫಲಿತಾಂಶದ ಮೇಲೆ ಪರಿಣಾಮ ಬೀರಲಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಗ್ರೇಡಿಂಗ್ ರದ್ದುಪಡಿಸಿ ನಮಗೆ ನಾವು ಪರೀಕ್ಷೆಯಲ್ಲಿ ಬರೆದ ಅಂಕವನ್ನೇ ನೀಡಬೇಕೆಂದು ವಿದ್ಯಾರ್ಥಿಗಳು ಮನವಿಯಲ್ಲಿ ತಿಳಿಸಿದ್ದಾರೆ.

ತಡೆಗೋಡೆಗೆ ಸಿಲುಕಿದ ಬಸ್ಸಿನ ಹಿಂಬದಿ ಚಕ್ರ

ಸೇತುವೆಯಲ್ಲಿ ಸ್ವಲ್ಪ ಪ್ರಮಾಣದ ನೀರು



• **ಭದ್ರಾವತಿ :** ಚಾಲಕನ ನಿಯಂತ್ರಣ ಕಳೆದುಕೊಂಡು ಕಾಗೇಹಳ್ಳ ಸೇತುವೆಗೆ ಬಸ್ ಡಿಕ್ಕಿ ಹೊಡೆದು ಉರುಳಿ ಬಿದ್ದ ಸಂದರ್ಭದಲ್ಲಿ ಸೇತುವೆಯಲ್ಲಿ ನೀರು ಸ್ವಲ್ಪ ಪ್ರಮಾಣದಲ್ಲಿದ್ದು, ಈ ಹಿನ್ನಲೆಯಲ್ಲಿ ಹೆಚ್ಚಿನ ಅನಾಹುತ ತಪ್ಪಿದಂತಾಗಿದೆ.

ಈ ಸೇತುವೆಯಲ್ಲಿ ಬೆಟ್ಟ-ಗುಡ್ಡ, ಹಳ್ಳ-ಕೊಳ್ಳಗಳಿಂದ ಹಾಗು ಜಮೀನಿನ ನೀರು ಹರಿಯುತ್ತದೆ. ಹೆಚ್ಚಿನ ಮಳೆಯಾದ ಸಂದರ್ಭದಲ್ಲಿ ಮಾತ್ರ ಸೇತುವೆಯ ಅರ್ಧದಷ್ಟು ವನೀರು ಹರಿಯುತ್ತದೆ. ಇಂತಹ ಸಂದರ್ಭದಲ್ಲಿ ಬಸ್ ಸಂಪೂರ್ಣವಾಗಿ ಸೇತುವೆ ಕೆಳಗೆ ಬಿದ್ದಿದ್ದರೆ ಹೆಚ್ಚಿನ ಅನಾಹುತ ಸಂಭವಿಸುತ್ತಿತ್ತು. ಆದರೆ ಈ ದುರ್ಘಟನೆಯಲ್ಲಿ ಬಸ್ ಸಂಪೂರ್ಣವಾಗಿ ಕೆಳಗೆ ಬಿದ್ದಿಲ್ಲ, ಸೇತುವೆ ತಡೆಗೋಡೆಗೆ ಡಿಕ್ಕಿ ಹೊಡೆದು ಹಿಂಬದಿ ಚಕ್ರ ತಡೆಗೋಡೆಗೆ ಸಿಲುಕಿಕೊಂಡಿದೆ. ಈ ಹಿನ್ನಲೆಯಲ್ಲಿ ಯಾವುದೇ ಸಾವು ನೋವು ಸಂಭವಿಸಿಲ್ಲ ಎನ್ನಲಾಗಿದೆ.

ಬಸ್ಸಿನ ಚಾಲಕ ಪ್ರಸಾದ್ ಗಾಯಗೊಂಡಿದ್ದು, ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಇವರ ಚೇತರಿಕೆ ನಂತರ ಅಪಘಾತಕ್ಕೆ ನಿಖರವಾದ ಕಾರಣ ತಿಳಿದು ಬರಲಿದೆ.

ಭದ್ರಾವತಿ ನಗರದಿಂದ ಹೊಳೆಹೊನ್ನೂರು, ಚನ್ನಗಿರಿ, ದಾವಣಗೆರೆ, ಚಿತ್ರದುರ್ಗ ಭಾಗಗಳಿಗೆ ಈ ವ್ಯಾಪ್ತಿಯಲ್ಲಿ ಹೆಚ್ಚಿನ ಖಾಸಗಿ ಬಸ್‌ಗಳು ಸಂಚರಿಸುತ್ತವೆ. ಈ ರೀತಿಯ ದುರ್ಘಟನೆಗಳು ಈ ಹಿಂದೆ ಸಹ ನಡೆದಿವೆ. ಇದಕ್ಕೆ ಸಾರಿಗೆ ಇಲಾಖೆ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣವಾಗಿದೆ. ಸಾರಿಗೆ ಅಧಿಕಾರಿಗಳು ಸಂಚಾರಿ ಪೊಲೀಸರ ನೆರವಿನೊಂದಿಗೆ ಅಪಾಯಕಾರಿ ಸ್ಥಳಗಳನ್ನು ಗುರುತಿಸಿ ವೇಗ ನಿಯಂತ್ರಣ ಅಳವಡಿಕೆಗೆ ಕ್ರಮ ಕೈಗೊಳ್ಳಬೇಕಾಗಿದೆ.

ಇಂದು ರಾಘವೇಂದ್ರಸ್ವಾಮಿ ಮಠದ ವಾರ್ಷಿಕೋತ್ಸವ

• **ಶಿವಮೊಗ್ಗ :** ತಿಲಕ್‌ನಗರ ದುರ್ಗಿಗುಡಿಯ ರಾಘವೇಂದ್ರ ಸೇವಾ ಸಮಿತಿ ವತಿಯಿಂದ 66ನೇ ವರ್ಷದ ಮಠದ ವಾರ್ಷಿಕೋತ್ಸವ ಏಪ್ರಿಲ್ 1 ರಂದು ನಡೆಯಲಿದ್ದು, ಬೆಳಿಗ್ಗೆ 8ಗಂಟೆಗೆ ಅಷ್ಟೋತ್ತರ ಪಾರಾಯಣ ಮತ್ತು ಅಭಿಷೇಕ, ಬೆಳಿಗ್ಗೆ 11ಕ್ಕೆ ರಜತ ರಥೋತ್ಸವ ನಡೆಯಲಿದೆ.

ಸಂಜೆ 5.30ಕ್ಕೆ ತಿರುಮಲ ತಿರುಪತಿ ದೇವಸ್ಥಾನ ಹಾಗೂ ಪ್ರಾಜೆಕ್ಟ್ ಮಂತ್ರಾಲಯದ ದಾಸ ಸಾಹಿತ್ಯ ಕೋ-ಆರ್ಡಿನೇಟರ್ ಹಾಗೂ ಹರಿಕಥಾಮೃತ ಸಾರದ ಪಾಠಗಳು ಹಾಗೂ ಪ್ರವಚನಗಳಿಂದ ಅಪಾರ ಶಿಷ್ಯವೃಂದ ಹೊಂದಿದ ಸುಜಯ ಎನ್. ಮುರಳೀಧರ ದಾಸರಿಂದ ರಾಘವೇಂದ್ರ ವೈಭವ ಉಪನ್ಯಾಸವಿದೆ.

ಹೊಂಬುಜ ಜೈನ ಮಠದಲ್ಲಿ ಮಹಾವೀರ ಜಯಂತಿ



• **ರಿಪ್ಪನ್ ಪೇಟೆ :** ಸಮೀಪದ ಹೊಂಬುಜ ಜೈನ ಮಠದಲ್ಲಿ ಜೈನ ಮತದ 24ನೇ ತೀರ್ಥಂಕರರಾದ ಶ್ರೀ ಮಹಾವೀರ ತೀರ್ಥಂಕರರ 2625ನೇ ಜನ್ಮ ಕಲ್ಯಾಣೋತ್ಸವವನ್ನು ಅತ್ಯಂತ ಭಕ್ತಿಭಾವದಿಂದ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಪೀಠಾಧಿಪತಿ ಜಗದ್ಗುರು ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ, ಭಗವಾನ್ ಶ್ರೀ ಮಹಾವೀರರ ಜೀವನವು ನಮಗೆ ಸಹಬಾಳ್ವೆ, ಸಾಮರಸ್ಯ, ಅಹಿಂಸಾ ಹಾಗೂ ಪರಿಸರ ರಕ್ಷಣೆಯ ಮಹತ್ವವನ್ನು ತಿಳಿಸುತ್ತದೆ. ಇಂದಿನ ಯುದ್ಧೋನ್ಮಾದದ ಜಗತ್ತಿನಲ್ಲಿ ಮಹಾವೀರರ ಸಂದೇಶ ಎಲ್ಲ ರಾಷ್ಟ್ರಗಳಿಗೂ ತಲುಪಬೇಕು ಎಂದರು.

ಶ್ರೀ ಮಹಾವೀರರ ಜಿನಬಿಂಬವನ್ನು ಸ್ವರ್ಣ ಪಲ್ಲಕ್ಕಿಯಲ್ಲಿ ಪ್ರಕಾರ್ಷಣ ಮಾಡಲಾಗಿದ್ದು, ಅಹಿಂಸಾ ಪರಮೋ ಧರ್ಮ', ಶ್ರೀ ಮಹಾವೀರ ಸ್ವಾಮಿ ಜೈ', ಜೈನ ಧರ್ಮ ಕೀ ಜೈ' ಎಂಬ ಘೋಷಣೆಗಳೊಂದಿಗೆ ಭಕ್ತರು ಮೆರವಣಿಗೆ ನಡೆಸಿದರು.

ಮೂಲನಾಯಕ ಶ್ರೀ ಪಾರ್ಶ್ವನಾಥ ಸ್ವಾಮಿ ಹಾಗೂ ಅಧಿದೇವತೆ ಶ್ರೀ ಪದ್ಮಾವತಿ ದೇವಿಯ ಸನ್ನಿಧಿಯಲ್ಲಿ ವಿಶೇಷ ಅಲಂಕಾರ ಪೂಜೆ ನೆರವೇರಿಸಲಾಯಿತು. ಬಳಿಕ ಶ್ರೀ ಮಹಾವೀರ ಸ್ವಾಮಿಯ ಜನ್ಮಾಭಿಷೇಕ ಮತ್ತು ನಾಮಕರಣ ವಿಧಿಗಳು ನಡೆಯಿತು. ಕಾರ್ಯಕ್ರಮದಲ್ಲಿ ಶ್ರೀ ಪದ್ಮಾವತಿ ಮಹಿಳಾ ಸಂಘದ ಸದಸ್ಯರು, ಶ್ರೀ ಕುಂದಕುಂದ ವಿದ್ಯಾಪೀಠದ ವಿದ್ಯಾರ್ಥಿಗಳು ಹಾಗೂ ಅನೇಕ ಭಕ್ತರು ಭಾಗವಹಿಸಿದ್ದರು.

ಡಾ.ಸಮೀಕ್ಷಾ ರೆಡ್ಡಿ ಸಾವಿನ ಪ್ರಕರಣ ತನಿಖೆ ನಡೆಸಲು ಮನವಿ



• **ಶಿವಮೊಗ್ಗ :** ಪಶುವೈದ್ಯೆ ಡಾ. ಸಮೀಕ್ಷಾ ರೆಡ್ಡಿ ಸಾವಿನ ಪ್ರಕರಣವನ್ನು ಉನ್ನತ ತನಿಖೆಗೆ ವಹಿಸಬೇಕು, ಇವರ ಸಾವಿಗೆ ಕಾರಣರಾದವರನ್ನು ಕೂಡಲೇ ಸೇವೆಯಿಂದ ವಜಾಗೊಳಿಸಬೇಕೆಂದು ಆಗ್ರಹಿಸಿ ಕನ್ನಡ ಕಾರ್ಮಿಕ ರಕ್ಷಣಾ ವೇದಿಕೆ ವತಿಯಿಂದ ಜಿಲ್ಲಾಧಿಕಾರಿಗಳ ಕಚೇರಿ ಎದುರು ಮಂಗಳವಾರ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಲಾಯಿತು.

ತಾವರೆಕೊಪ್ಪದಲ್ಲಿರುವ ಹುಲಿ ಸಿಂಹಧಾಮದಲ್ಲಿ ರಾತ್ರಿ 11.30ರ ಸಮಯದಲ್ಲಿ ಗರ್ಭಧರಿಸಿದ ನೀರಾನೆಗೆ ಚಿಕಿತ್ಸೆ ನೀಡಲು ಹೋಗಿ ನೀರಾನೆಯು ಏಕಾಏಕಿ ದಾಳಿಮಾಡಿದ ಪರಿಣಾಮ ತೀವ್ರ ಗಾಯಗೊಂಡು ಆಸ್ಪತ್ರೆಯಲ್ಲಿ ತರಬೇತಿ ನಿರತ ವೈದ್ಯೆ ಮೃತಪಟ್ಟಿದ್ದಾರೆ ಎಂದು ಸಿಂಹಧಾಮದ ಹಿರಿಯ ಕಾರ್ಯ ನಿರ್ವಹಣಾಧಿಕಾರಿ ತಿಳಿಸಿದ್ದಾರೆ.

ಆದರೆ ಸಾವಿಗೆ ಅಸಲಿ ಕಾರಣವೇನು? ಸಾಮಾನ್ಯವಾಗಿ ನೀರಾನೆಗಳಿಗೆ ಚಿಕಿತ್ಸೆ ನೀಡುವಾಗ ಸಾಕಷ್ಟು ಮುಂಜಾಗ್ರತೆ ವಹಿಸಬೇಕು. ಎಸ್‌ಒಪಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಆದರೆ ಇದ್ಯಾವುದೂ ನಡೆದಿಲ್ಲ ಎಂದು ದೂರಿದರು.

ಎಸ್‌ಒಪಿ ನಿಯಮಗಳೆಂದರೆ ರಾತ್ರಿ ವೇಳೆಯಲ್ಲಿ ಯಾವುದೇ ಪ್ರಾಣಿಗೂ ಚಿಕಿತ್ಸೆ ನೀಡಬಾರದು. ಒಂದು ವೇಳೆ ನೀಡಿದರೂ ಅರವಳಿಕೆ ಚುಚ್ಚುಮದ್ದು ನೀಡಿರಬೇಕು, ಜೊತೆಗೊಂದಿಷ್ಟು ಸಿಬ್ಬಂದಿ ಇರಬೇಕು. ಇದ್ಯಾವುದೂ ಇಲ್ಲಿ ಪಾಲಿಸದೇ ತರಬೇತಿ ಹಂತದಲ್ಲಿದ್ದ ಡಾ.ಸಮೀಕ್ಷಾ ರೆಡ್ಡಿ ಅವರನ್ನು ಚಿಕಿತ್ಸೆಗೆ ಕಳುಹಿಸಿದ್ದು ಎಷ್ಟರ ಮಟ್ಟಿಗೆ ಸರಿ ಎಂದು ಪ್ರಶ್ನಿಸಿದ್ದಾರೆ.

ರಾತ್ರಿ ವೇಳೆ ಯಾವುದೇ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಇರುವುದಿಲ್ಲ, ಆದಾಗ್ಯೂ ಡಾ.ಸಮೀಕ್ಷಾ ರೆಡ್ಡಿಯಾರ ಅನುಮತಿ ಪಡೆದು ಚಿಕಿತ್ಸೆ ನೀಡಲು ಬಂದಿದ್ದಾರೆ ಎಂಬ ಬಗ್ಗೆ ಸೂಕ್ತ ತನಿಖೆಯಾಗಬೇಕು. ಈ ಘಟನೆಗೆ ಡಾ. ಅಮರಾಕ್ಷರ ಅವರೇ ನೇರ ಹೊಣೆಗಾರರಾಗಿದ್ದಾರೆ. ಅವರನ್ನು ಸೇವೆಯಿಂದ ವಜಾಗೊಳಿಸಬೇಕು, ಇಲ್ಲವಾದರೆ ಮುಂದಿನ ದಿನಗಳಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಬಾಗಿಲಲ್ಲೇ ಅಹೋರಾತ್ರಿ ಪ್ರತಿಭಟನೆ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಮನವಿಯಲ್ಲಿ ಎಚ್ಚರಿಸಲಾಗಿದೆ.

ವೇದಿಕೆ ಅಧ್ಯಕ್ಷ ವಾಟಾಳ್ ಮಂಜುನಾಥ್, ಪ್ರಮುಖರಾದ ಪ್ರವೀಣ್, ಸತೀಶ್ ಗೌಡ, ಸಂಜು, ಲೋಕೇಶ್, ಅಕ್ಬರ್ ಪಾಷಾ, ರವಿಕುಮಾರ್, ರಾಘವೇಂದ್ರ ಇನ್ನಿತರರು ಭಾಗವಹಿಸಿದ್ದರು.

ಏ.3ರಿಂದ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿ: ಚೇತು



• **ಶಿವಮೊಗ್ಗ :** ಶಿವಮೊಗ್ಗ ಹಂಟರ್ಸ್ ವತಿಯಿಂದ ಪ್ರಥಮ ಬಾರಿಗೆ ಜಿಲ್ಲಾ ಮಟ್ಟದ ಲೀಗ್ ಮಾದರಿಯ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿ ಶಿವಮೊಗ್ಗ ಹಂಟರ್ ಕಪ್-2026ನ್ನು ಏ.3, 4 ಮತ್ತು 5 ರಂದು ಎನ್‌ಇಎಸ್ ಕ್ರೀಡಾಂಗ ಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪಂದ್ಯಾವಳಿಯ ಆಯೋಜಕ ರಲ್ಲೊಬ್ಬ ರಾದ ಚೇತು ರಾಗಿಗುಡ್ಡ ತಿಳಿಸಿದರು.

ಮಂಗಳವಾರಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಪ್ರಥಮ ಬಹುಮಾನ 1 ಲಕ್ಷ ರೂ., ದ್ವಿತೀಯ 50 ಸಾವಿರ ರೂ., ಹಾಗೂ ತೃತೀಯ ಬಹುಮಾನ 25 ಸಾವಿರ ರೂ. ಇದೆ. ಆಕರ್ಷಕ ಟ್ರೋಫಿ ನೀಡಲಾಗುವುದು ಎಂದರು.

38 ವರ್ಷ ಮೇಲ್ಪಟ್ಟ ಆಟಗಾರರಿಗೆ ಅವಕಾಶವಿದೆ. (1988 ಇಸವಿಯೊಳಗೆ ಇರತಕ್ಕದ್ದು) ಆಯಾ ತಾಲೂಕು ಆಟಗಾರರಿರಬೇಕು. ಪಂದ್ಯಾವಳಿ 6 ಓವರ್‌ಗೆ ಸೀಮಿತವಾಗಿದೆ. (ಸಮಯದ ಅಭಾವವಿದ್ದಲ್ಲಿ ಓವರ್ ಕಡಿತ ಮಾಡಲಾಗುವುದು). ಚಕ್ ಬೌಲರ್‌ಗಳಿಗೆ ಅವಕಾಶವಿರುವುದಿಲ್ಲ, ಚಕ್ ಎಸೆತದಲ್ಲಿ ಡೈರೆಕ್ಟ್ ನೋ ಬಾಲ್ ಕೊಡಲಾಗುವುದು. ತೀರ್ಪುಗಾರರ ಮತ್ತು ಸಮಿತಿ ತೀರ್ಮಾನವೇ ಅಂತಿಮ. ಅಸಭ್ಯವಾಗಿ ವರ್ತಿಸುವ ತಂಡಗಳಿಗೆ ಪಂದ್ಯಾವಳಿಯಿಂದ ಹೊರ ಹಾಕಲಾಗುವುದು. 10 ಸಾವಿರ ರೂ. ಪ್ರವೇಶ ಶುಲ್ಕವಿದೆ. ಈಗಾಗಲೇ 16 ತಂಡಗಳು ನೋಂದಾಯಿಸಿಕೊಂಡಿವೆ ಎಂದರು.

ಏ.3ರ ಬೆಳಿಗ್ಗೆ 9 ಗಂಟೆಗೆ ಪಂದ್ಯಾವಳಿ ಉದ್ಘಾಟನೆಗೊಳ್ಳಲಿದ್ದು, ಸಂಸದ ಬಿ.ವೈ.ರಾಘವೇಂದ್ರ, ಶಾಸಕರಾದ ಎಸ್.ಎನ್.ಚನ್ನಬಸಪ್ಪ, ಶಾರದಾ ಪೂರ್ಯಾನಾಯ್ಕ, ಬಿ.ಕೆ.ಸಂಗಮೇಶ್, ಡಿ.ಎಸ್.ಅರುಣ್, ಡಾ.ಧನಂಜಯ ಸರ್ಜಿ, ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ, ಮಾಜಿ ಶಾಸಕರಾದ ಕೆ.ಬಿ.ಪ್ರಸನ್ನಕುಮಾರ್, ಕೆ.ಬಿ.ಅಶೋಕ್‌ನಾಯ್ಕ್, ಮಾಜಿ ಜಿಪಂ ಸದಸ್ಯ ಕೆ.ಈ.ಕಾಂತೇಶ್, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಕೆ.ಎಂ.ರಾಮಕೃಷ್ಣ, ಭದ್ರಾವತಿ ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ಗಣೇಶ್ ಭಾಗವಹಿಸಲಿದ್ದಾರೆ.

ಏ.4ರಂದು ಕ್ರೀಡಾ ಸಾಧಕರನ್ನು ಸನ್ಮಾನಿಸಲಾಗುವುದು. ಮುಖ್ಯ ಅತಿಥಿಗಳಾಗಿ ಜೆಡಿಎಸ್ ಶಿವಮೊಗ್ಗ ಜಿಲ್ಲಾ ವಕ್ತಾರ ನರಸಿಂಹ ಗಂಧದಮನೆ, ಶಿವಮೊಗ್ಗ ನಗರ ಜೆಡಿಎಸ್ ಅಧ್ಯಕ್ಷ ದೀಪಕ್ ಸಿಂಗ್, ಭದ್ರಾವತಿಯ ಕಾಂಗ್ರೆಸ್ ಯುವ ಮುಖಂಡ ಬಸವೇಶ್ ಆಗಮಿಸಲಿದ್ದಾರೆ ಎಂದರು.

ಏ.5ರಂದು ನಡೆಯುವ ಬಹುಮಾನ ವಿತರಣಾ ಸಮಾರಂಭದಲ್ಲಿ ಜಿಲ್ಲಾ ಕಾಂಗ್ರೆಸ್ ಮುಖಂಡ ಎಂ.ಶ್ರೀಕಾಂತ್, ಸೂಡಾ ಅಧ್ಯಕ್ಷ ಹೆಚ್.ಎಸ್.ಸುಂದರೇಶ್, ಕಾಂಗ್ರೆಸ್ ಮುಖಂಡರಾದ ಹೆಚ್.ಸಿ.ಯೋಗೀಶ್, ನಾಗೇಶ್ ಹೊಳೆಹೊನ್ನೂರು, ಆರ್.ಉಮೇಶ್, ರಾಜ್ಯ ಕೈಮಗ್ಗ ಮೂಲ ಸೌಕರ್ಯ ಮಂಡಳಿ ಅಧ್ಯಕ್ಷ ಚೇತನ್ ಕೆ.ಗೌಡ, ಹಾಪ್ ಕಾಮ್ಸ್ ಅಧ್ಯಕ್ಷ ವಿಜಯಕುಮಾರ್, ಬಿಜೆಪಿ ಮುಖಂಡರಾದ ಸಿ.ಹೆಚ್. ಮಾಲತೇಶ್, ಎ.ಕೆ.ರಮೇಶ್ ಆಗಮಿಸಲಿದ್ದಾರೆ ಎಂದರು.

ಜೆಡಿಎಸ್ ನಗರ ಪ್ರಧಾನ ಕಾರ್ಯದರ್ಶಿ ಲೋಹಿತ್, ಮಧುಗೌಡ, ರಾಹುಲ್ ಗೌಡ, ಗಿರೀಶ್ ಜಕಾಳಿ, ರಜತ್, ಮಿಥುನ್ ಗೌಡ, ಪ್ರಶಾಂತ್ ಉಪಸ್ಥಿತರಿದ್ದರು.

ಮೀನು ಸಾಕಾಣಿಕೆ ಇ ಟೆಂಡರ್ ಅವೈಜ್ಞಾನಿಕ: ಆರೋಪ



• **ಶಿವಮೊಗ್ಗ :** ಶಿಕಾರಿಪುರ, ಸೊರಬ ಹಾಗೂ ಸಾಗರ ತಾಲೂಕುಗಳಲ್ಲಿನ ಸಣ್ಣ ನೀರಾವರಿ ಇಲಾಖೆಯ ಕೆರೆಗಳನ್ನು ಮೀನು ಸಾಕಾಣಿಕೆಗೆ ಕರೆದಿರುವ ಇ ಟೆಂಡರ್ ಅವೈಜ್ಞಾನಿಕವಾಗಿದ್ದು, ಇದನ್ನು ರದ್ದುಪಡಿಸುವಂತೆ ಮೀನು ಕೃಷಿಕ ಎಂ.ಸಿ. ಮಲ್ಲೇಶಪ್ಪ ಆಗ್ರಹಿಸಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇದುವರೆಗೂ ಟೆಂಡರ್ ಮೂಲಕ ಕೆರೆಗಳನ್ನು ಹರಾಜು ಹಿಡಿದು ಮೀನು ಕೃಷಿ ಮಾಡಿಕೊಂಡು ಬಂದಿರುವ ಕೃಷಿಕರನ್ನು ಮೀನು ಸಾಕಾಣಿಕೆಯಿಂದ ಹೊರಗಿಡುವ ಉದ್ದೇಶದಿಂದ ಮುಂಚಿತವಾಗಿಯೇ ಇ ಟೆಂಡರ್ ಕರೆಯಲಾಗಿದೆ ಎಂದರು.

ಈ ಮೂರೂ ತಾಲೂಕಿನ 48 ಕೆರೆಗಳನ್ನು ಈ ಹಿಂದೆ ಮೀನುಗಾರಿಕೆ ಇಲಾಖೆ ಅಥವಾ ಸ್ಥಳೀಯ ಗ್ರಾಪಂಗಳ ಮೂಲಕವೂ ಕೆರೆಗಳನ್ನು ಹರಾಜು ಮಾಡಲಾಗುತ್ತಿತ್ತು. ಆದರೆ ಈ ಬಾರಿ ಸಣ್ಣ ನೀರಾವರಿ ಇಲಾಖೆಗೆ ಹರಾಜು ಮಾಡಲು ನೀಡಲಾಗಿದೆ. ಹೀಗಾಗಿ ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳು ತಮಗೆ ಬೇಕಾದವರಿಗೆ ಕೆರೆಗಳನ್ನು ನೀಡಲು ಮುಂಚಿತವಾಗಿ ಟೆಂಡರ್ ಕರೆದಿದ್ದಾರೆ ಎಂದು ದೂರಿದರು.

ಪ್ರತೀ ವರ್ಷ ಜೂನ್, ಜುಲೈನಲ್ಲಿ ಕರೆಯುವ ಟೆಂಡರ್‌ನ್ನು ಈ ಬಾರಿ ಮಾರ್ಚ್ ತಿಂಗಳಿನಲ್ಲಿಯೇ ಕರೆಯಲಾಗಿದೆ. ಆದರೆ ಈ ಬಗ್ಗೆ ಯಾವ ಸುಳಿವನ್ನೂ ನೀಡದೆ ಪತ್ರಿಕೆಗಳಲ್ಲಿ ಮತ್ತು ಸಂತೆಗಳಲ್ಲಿ ಪ್ರಚಾರ ಮಾಡದೆ ಕೇವಲ ಕೆಲವರಿಗಷ್ಟೆ ತಿಳಿಸಿ ಟೆಂಡರ್ ಕರೆದು ಟೆಂಡರ್ ಪ್ರಕ್ರಿಯೆಯನ್ನು ಮುಗಿಸಲಾಗಿದೆ. ಈಗ ಟೆಂಡರ್ ಹಾಕಲು ಹೋದರೆ ವೆಬ್‌ಸೈಟ್ ಓಪನ್ ಆಗುತ್ತಿಲ್ಲ, ಅಧಿಕಾರಿಗಳನ್ನು ಕೇಳಿದರೆ ಅವಧಿ ಮುಗಿದಿದೆ ಎನ್ನುತ್ತಿದ್ದಾರೆ. ಆದರೆ ಪ್ರಕಟಣೆ ಪ್ರಕಾರ ಏ.7ರವರೆಗೆ ಕಾಲಾವಕಾಶವಿದೆ ಎಂದರು.

ಟೆಂಡರ್‌ನ್ನು ಪಾರದರ್ಶಕವಾಗಿ ಕರೆದಿದ್ದರೆ ಪ್ರತಿ ಕೆರೆಗಳು ಕನಿಷ್ಠ ಒಂದು ಲಕ್ಷ ರೂ.ಗೆ ಹರಾಜಾಗಬೇಕಿತ್ತು. ಆದರೆ ಕೇವಲ 15 ಸಾವಿರಕ್ಕೆ ಹರಾಜು ಮಾಡಲಾಗಿದೆ. ಈ ರೀತಿ ಮಾಡಿರುವುದರ ಹಿಂದೆ ಭ್ರಷ್ಟಾಚಾರ ಹಾಗೂ ಟೆಂಡರ್‌ದಾರರಿಂದ ಹಣ ಪಡೆದಿರುವ ಶಂಕೆ ವ್ಯಕ್ತವಾಗುತ್ತಿದೆ ಎಂದರು.

ಮಳೆಗಾಲದಲ್ಲಿ ಮಾಡಬೇಕಾದ ಕೆರೆಗಳ ಹರಾಜನ್ನು ಮಾರ್ಚ್ ತಿಂಗಳಲ್ಲಿಯೇ ಮಾಡಿದ್ದಾರೆ. ಈಗ ನೀರಿಲ್ಲದೆ ಕೆರೆಗಳು ಬತ್ತಿಹೋಗಿವೆ. ಹೇಗೆ ಮೀನು ಸಾಕಲು ಸಾಧ್ಯ. ಮೀನುಗಾರಿಕೆ ಇಲಾಖೆ ಅಧಿಕಾರಿಗಳು ಈ ಹಿಂದೆ ಇದೇ ಕೆರೆಗಳನ್ನು ಇ-ಟೆಂಡರ್ ಮೂಲಕ ಕಟ್ಟಿಸಿಕೊಂಡು ಟೆಂಡರ್ ಪ್ರಕ್ರಿಯೆ ಮಾಡಿದ್ದರೂ ಆನಂತರ ಯಾರೋ ನ್ಯಾಯಾಲಯದಿಂದ ತಡೆಯಾಜ್ಞೆ ತಂದು ಟೆಂಡರ್ ಪ್ರಕ್ರಿಯೆ ನಿಲ್ಲಿಸಿದ್ದರು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಮೀನು ಕೃಷಿಕರಾದ ಶಂಕರಾನಾಯ್ಕ, ಬಾಬು ನಾಯ್ಕ ಮಳವಳ್ಳಿ, ಮೊಹಮ್ಮದ್ ಫರ್ವಿಜ್, ಜಬೀವುಲ್ಲಾ, ನಾಗರಾಜಯ್ಯ, ಶಿವಾನಾಯ್ಕ, ಸಮೀವುಲ್ಲಾ ಖಾನ್, ಅಬ್ದುಲ್, ಖಿಬೂತರ್, ಸಿಗ್ಬತ್ ಇದ್ದರು.

ಕಿರುಸುದ್ದಿ

ಶ್ರೀ ರಂಭಾಪುರಿ ಜಗದ್ಗುರುಗಳ ಏಪ್ರಿಲ್‌ನ ಪ್ರವಾಸ

• **ಬಾಳೆಹೊನ್ನೂರು:** ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳ ಏಪ್ರಿಲ್ ಮಾಹೆಯ ಪ್ರವಾಸ ಕಾರ್ಯಕ್ರಮ ಈ ಕೆಳಗಿನಂತೆ ಇರುತ್ತದೆ ಎಂದು ಶ್ರೀ ಪೀಠದ ವಾರ್ತಾ ಸಂಯೋಜನಾಧಿಕಾರಿ ಸಿ.ಎಚ್. ಬಾಳನಗೌಡ್ರ ತಿಳಿಸಿದ್ದಾರೆ.

ಏ.2ರಂದು ಪೌರ್ಣಿಮೆಯ ನಿಮಿತ್ಯ ಬಾಳೆಹೊನ್ನೂರು ಶ್ರೀ ಜಗದ್ಗುರು ರಂಭಾಪುರಿ ಪೀಠದಲ್ಲಿ ವಾಸ್ತವ್ಯವಿದ್ದು ಭಕ್ತಾದಿಗಳಿಗೆ ದರ್ಶನಾಶೀರ್ವಾದ ನೀಡುವರು. ಏ.4ರಂದು ಬೆಳಗ್ಗೆ 11 ಗಂಟೆಗೆ ಚನ್ನಗಿರಿಯಲ್ಲಿ ನೂತನ ಹಿರೇಮಠದ ಕಟ್ಟಡ ಉದ್ಘಾಟನೆ ಧರ್ಮ ಸಮಾರಂಭ ಸಂಜೆ 5 ಗಂಟೆಗೆ ಶಿವಮೊಗ್ಗ ತಾಲೂಕ ವೀರಣ್ಣನ ಬೆನವಳ್ಳಿಯಲ್ಲಿ ಧರ್ಮ ಸಮಾರಂಭ, 5ರಂದು ಜಗಳೂರಿನಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಸಮಾರಂಭ, 6ರಂದು ಅಜ್ಜಂಪುರ ತಾಲೂಕ ಚನ್ನಾಪುರದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಸಮಾರಂಭ, 7ರಂದು ತರೀಕೆರೆ ತಾಲೂಕ ಹಳೆಯೂರಿನಲ್ಲಿ ಇಷ್ಟಲಿಂಗ ಮಹಾಪೂಜಾ, 8ರಂದು ಶಿಗ್ಗಾಂವಿ ತಾಲೂಕ ಅರಟಾಳ ಗ್ರಾಮದಲ್ಲಿ ಧರ್ಮ ಸಮಾರಂಭ, 9ರಂದು ಸಿಂದಗಿ ತಾಲೂಕ ಕನ್ನೊಳ್ಳಿಯಲ್ಲಿ ಪುರಾಣ ಪ್ರವಚನ ಸಮಾರಂಭ ಉದ್ಘಾಟನೆ, 11ರಂದು ಆಲಮೇಲ ತಾಲೂಕ ಮೊರಟಗಿಯಲ್ಲಿ ಶ್ರೀ ಸಿದ್ಧರಾಮೇಶ್ವರ ದೇವಸ್ಥಾನ ಕಳಸಾರೋಹಣ ಸಮಾರಂಭದ ಸಾನ್ನಿಧ್ಯ ವಹಿಸುವರು.

ಏ.12 ಮತ್ತು 13ರಂದು ಮಹಾರಾಷ್ಟ್ರದ ವೇಳಾಪುರದಲ್ಲಿ ಶ್ರೀ ಜಗದ್ಗುರು ಪಂಚ ಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ ಹಾಗೂ ಸದಾಶಿವ ಶಿವಾಚಾರ್ಯರ ಪಟ್ಟಾಧಿಕಾರ ವರ್ಧಂತಿ ಸಮಾರಂಭ, 15ರಂದು ಸುರಪುರ ತಾಲೂಕ ದೇವಾಪುರದಲ್ಲಿ ನೂತನ ಶಾಲಾ ಕಟ್ಟಡ ಉದ್ಘಾಟನೆ ಹಾಗೂ ಸಾಮೂಹಿಕ ವಿವಾಹ ಸಮಾರಂಭ, 17ರಂದು ಚನ್ನಗಿರಿ ತಾಲೂಕ ಮೇಳನಾಯಕನಕಟ್ಟೆಯಲ್ಲಿ ಇಷ್ಟಲಿಂಗ ಮಹಾಪೂಜಾ-ಸಮಾರಂಭ, 18ರಂದು ಶಿಕಾರಿಪುರದಲ್ಲಿ ಇಷ್ಟಲಿಂಗ ಮಹಾಪೂಜೆ ನಡೆಸುವರು.

ಏ.19ರಂದು ದಾವಣಗೆರೆ ತಾಲೂಕ ದೊಗ್ಗಳ್ಳಿಯಲ್ಲಿ ಶ್ರೀ ಕರಿಯಮ್ಮ ದೇವಸ್ಥಾನ ಉದ್ಘಾಟನೆ ಸಮಾರಂಭ, 20ರಂದು ಬೆಳಗ್ಗೆ 10 ಗಂಟೆಗೆ ಹರಿಹರ ತಾಲೂಕ ಮಲೆಬೆನ್ನೂರು ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಇಷ್ಟಲಿಂಗ ಮಹಾಪೂಜಾ, ಸಂಜೆ 5 ಗಂಟೆಗೆ ಚನ್ನಗಿರಿ ತಾಲೂಕ ಚಿರಡೋಣಿಯಲ್ಲಿ ಧರ್ಮ ಜಾಗೃತಿ ಸಮಾರಂಭ, 21ರಂದು ಚಿರಡೋಣಿಯಲ್ಲಿ ಶ್ರೀ ವೀರಭದ್ರೇಶ್ವರ ಮೂರ್ತಿ ಪ್ರತಿಷ್ಠಾಪನೆ ಮತ್ತು ಕಳಸಾರೋಹಣ ಸಮಾರಂಭ, 22ರಂದು ಬೆಳಗ್ಗೆ 11 ಗಂಟೆಗೆ ಬೈಲಹೊಂಗಲ ತಾಲೂಕ ಸಂಗೊಳ್ಳಿಯಲ್ಲಿ ಗ್ರಾಮದೇವತೆ ಕಳಸಾರೋಹಣ ಸಮಾರಂಭ, ಸಂಜೆ 5 ಗಂಟೆಗೆ ಮುಂಡರಗಿ ತಾಲೂಕ ಬಸಾಪುರದಲ್ಲಿ ಪುರ ಪ್ರವೇಶ-ಧರ್ಮ ಸಮಾರಂಭ, 23ರಂದು ಹಗರಿಬೊಮ್ಮನಹಳ್ಳಿ ತಾಲೂಕ ಗಿರಿಗೊಂಡನಹಳ್ಳಿಯಲ್ಲಿ ಈಶ್ವರ ನಂದೀಶ್ವರ-ಆಂಜನೇಯ ದೇವಸ್ಥಾನ ಉದ್ಘಾಟನೆ ಸಮಾರಂಭ, 24ರಂದು ಗೌರಿಬಿದನೂರು ತಾಲೂಕ ಗುಡಿಬಂಡೆಯಲ್ಲಿ ಇಷ್ಟಲಿಂಗ ಮಹಾಪೂಜಾ-ಧರ್ಮ ಸಮಾರಂಭ, 25ರಂದು ಬೆಂಗಳೂರು ಶ್ರೀ ಜಗದ್ಗುರು ರೇಣುಕಾಚಾರ್ಯ ವಿದ್ಯಾ ಸಂಸ್ಥೆಯಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಸಮಾರಂಭ, 26ರಂದು ಹಾವೇರಿ ಜಿಲ್ಲೆ ಬ್ಯಾಡಗಿಯಲ್ಲಿ ಕೋಲ್ಡ ಸ್ಟೋರೇಜ ಉದ್ಘಾಟನೆ, 27 ಮತ್ತು 28ರಂದು ಹುಬ್ಬಳ್ಳಿ ತಾಲೂಕ ಸುಳ್ಳ ಗ್ರಾಮದಲ್ಲಿ ಶ್ರೀ ಸಿದ್ಧರಾಮೇಶ್ವರ ಮಂಗಲ ಭವನ ಉದ್ಘಾಟನೆ, ಪುನರ್ ನಿರ್ಮಾಣವಾದ ಶ್ರೀ ಕಲ್ಲೇಶ್ವರ ದೇವಸ್ಥಾನ ಕಳಸಾರೋಹಣ ಧರ್ಮ ಸಮಾರಂಭ 29ರಂದು ಶಿವಮೊಗ್ಗದಲ್ಲಿ ಶಿವಾಲಯ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸುವರು.

ಧರ್ಮಾಭಿಮಾನಿಗಳು ಶ್ರೀ ರಂಭಾಪುರಿ ಜಗದ್ಗುರುಗಳವರ ಧಾರ್ಮಿಕ ಕಾರ್ಯಕ್ರಮಗಳ ಲಾಭವನ್ನು ಪಡೆದುಕೊಳ್ಳಬೇಕೆಂದು ವಿನಂತಿಸಿದ್ದಾರೆ.

ಕಡೂರಿನಲ್ಲಿ ಜಿಲ್ಲಾ ಮಟ್ಟದ ಹೊನಲು ಬೆಳಕಿನ ಕಬಡ್ಡಿ ಪಂದ್ಯಾವಳಿ

• **ಕಡೂರು:** ಪಟ್ಟಣದ ಸುಭಾಷ್ ಕ್ರೀಡಾಂಗಣದಲ್ಲಿ ಜಿಲ್ಲಾ ಮಟ್ಟದ ಕಬಡ್ಡಿ ಪಂದ್ಯಾವಳಿಗಳನ್ನು ಕಡೂರು ಗ್ರಾಮಾಂತರ ಕಡೂರು ಆಯೋಜನೆಯಲ್ಲಿ ಏಪ್ರಿಲ್ 5ರ ಭಾನುವಾರ ಬೆಳಗ್ಗೆ 17 ವರ್ಷದ ಒಳಗಿನ ವಯೋಮಾನದವರಿಗೆ ಹೊನಲು ಬೆಳಕಿನ ಕಬ್ಬಡಿ ಪಂದ್ಯಾವಳಿಯನ್ನು ಏರ್ಪಡಿಸಲಾಗಿದೆ ಎಂದು ಕಡೂರಿನ ಕ್ರಿಕೆಟ್ ತಾರೆ ವೇದ ಕೃಷ್ಣಮೂರ್ತಿ ಇವರ ತಂದೆ ಎಸ್.ಜಿ. ಕೃಷ್ಣಮೂರ್ತಿ ತಿಳಿಸಿದರು.

ಅವರು ಪತ್ರಿಕೆಗೆ ಮಾಹಿತಿ ನೀಡಿ ಮಾತನಾಡಿ, ಈ ಪಂದ್ಯಾವಳಿಯಲ್ಲಿ ಚಿಕ್ಕಮಗಳೂರು ಜಿಲ್ಲೆಯ ತಂಡಗಳಿಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. ಪಂದ್ಯಾವಳಿಗಳಲ್ಲಿ ಭಾಗವಹಿಸುವವರು ಕಡ್ಡಾಯವಾಗಿ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ ಹಾಗೂ ಆಧಾರ್ ಕಾರ್ಡ್ ಕಡ್ಡಾಯವಾಗಿ ತರಬೇಕು. ಪ್ರಥಮ ಬಹುಮಾನ ರೂ. 7000, ದ್ವಿತೀಯ ಬಹುಮಾನ 4000, ತೃತೀಯ ಬಹುಮಾನ 2500 ಹಾಗೂ ನಾಲ್ಕನೆಯ ಬಹುಮಾನ 1500 ಆಗಿರುತ್ತದೆ. ಮಾರ್ಚ್ 31ರ ಒಳಗೆ ತಂಡಗಳು ನೊಂದಾಯಿಸಿ ಕೊಳ್ಳಬಹುದಾಗಿದೆ ಎಂದರು. ಹೆಚ್ಚಿನ ಮಾಹಿತಿಗಾಗಿ 8123773633 ಈ ನಂಬರಿಗೆ ಸಂಪರ್ಕಿಸಬಹುದಾಗಿದೆ.



ಬಾಳೆಹೊನ್ನೂರಿನ ಹಲಸೂರು ಗ್ರಾಮದ ಗ್ರಾಮ ದೇವತೆಗಳಾದ ಶ್ರೀ ಕನ್ನಮ್ಮ, ಕಾಳಮ್ಮ ದೇವರ ವಾರ್ಷಿಕ ಸುಗ್ಗಿ ಹಬ್ಬ ಧಾರ್ಮಿಕ ವಿಧಿ, ವಿಧಾನ ಪ್ರಕಾರ ನಡೆಯಿತು. ರಾತ್ರಿ ಸುಗ್ಗಿ ಗದ್ದೆಯಲ್ಲಿ ಸುಗ್ಗಿ ಕುಣಿತ ನಡೆಯಿತು. ಬೆಳಗ್ಗೆ ಕೆಂಡಾರ್ಚನೆ ನಡೆಯಿತು. ಕೌಳಿ ನಾರಾಯಣಗೌಡ, ಹೆಚ್.ಹೆಚ್. ಉಮೇಶ್, ಚನ್ನೇಗೌಡ, ಹಿರಿಯರಾದ ಕೊಲ್ಲಪ್ಪಗೌಡ, ಮರಿಗೌಡ, ನಾರಾಯಣ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

ಪ್ರಾಣಾಪಾಯದಿಂದ ಗೌರಮ್ಮ ಪಾರು

• **ಮೂಡಿಗೆರೆ:** ತಾಲೂಕಿನ ಗೋಣಿಬೀಡು ಹೋಬಳಿ ಸಮೀಪದ ಜಿ. ಹೊಸಹಳ್ಳಿಯ ತಮಟೆಬೈಲು ಗ್ರಾಮದ ನಿವಾಸಿ ಗೌರಮ್ಮ, 45 ವರ್ಷದವರು ಇಲ್ಲಿನ ಟಾಟಾ ಕಾಫಿ ಎಸ್ಟೇಟ್‌ನಲ್ಲಿ ಕೂಲಿ ಕೆಲಸ ನಿರ್ವಹಿಸುವಾಗ ಕಾಡಾನೆ ದಾಳಿಯಿಂದ ಗಾಯಗೊಂಡಿದ್ದರು. ಚಿಕಿತ್ಸೆ ನಂತರ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಆನೆ ದಾಳಿ ಆದ ತಕ್ಷಣ ಅವರನ್ನು ಅರಣ್ಯ ಇಲಾಖೆ ಅಧಿಕಾರಿಗಳು ಸಮೀಪದ ಬೇಲೂರು ಸರ್ಕಾರಿ ಆಸ್ಪತ್ರೆಗೆ ಸೇರಿಸಿ ಪ್ರಾಥಮಿಕ ಚಿಕಿತ್ಸೆ ನೀಡಿ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಹಾಸನದ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಹೆಚ್ಚಿನ ಚಿಕಿತ್ಸೆ ಕೊಡಿಸಿದ್ದರು. ಪ್ರಾಣಾಪಾಯದಿಂದ ಪಾರಾಗಿ ಚಿಕಿತ್ಸೆ ಪಡೆಯುತ್ತಿರುವ ಗೌರಮ್ಮ ಅವರನ್ನು ಅರಣ್ಯ ಇಲಾಖೆಯ ಎಸಿಎಫ್ ಆಕರ್ಷ್, ಆರ್‌ಎಫ್‌ಒ ಮಂಜುನಾಥ್, ರವಿರಾಜ್, ಗ್ರಾಮದ ಪ್ರಮುಖರಾದ ದೀಪಕ್ ಆಸ್ಪತ್ರೆಗೆ ಭೇಟಿ ನೀಡಿ ಆರೋಗ್ಯ ವಿಚಾರಿಸಿದರು.



ಎರಡು ಹಂತದಲ್ಲಿ ಜನಗಣತಿ : ಜಿಲ್ಲಾಧಿಕಾರಿ ಎನ್.ಎಂ. ನಾಗರಾಜ್

ಇಂದಿನಿಂದ ಜನಗಣತಿ

• **ಚಿಕ್ಕಮಗಳೂರು:** ಭಾರತದ ರಾಷ್ಟ್ರೀಯ ಜನಗಣತಿಯು ಏಪ್ರಿಲ್ 1ರಿಂದ ಎರಡು ಹಂತದಲ್ಲಿ ನಡೆಯಲಿದೆ ಎಂದು ಜಿಲ್ಲಾಧಿಕಾರಿ ಎನ್.ಎಂ. ನಾಗರಾಜ್ ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಜನಗಣತಿಯು ದೇಶದ ಜನಸಂಖ್ಯೆಯ ಗಣತಿಯ ಜೊತೆಗೆ ದೇಶದ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳು ಮತ್ತು ಸಾಂಸ್ಕೃತಿಕ ವೈವಿಧ್ಯತೆಯನ್ನು ದಾಖಲಿಸುವ ವೈಜ್ಞಾನಿಕ ಪ್ರಕ್ರಿಯೆಯಾಗಿದ್ದು, ಭಾರತದ ಮೊದಲ ಡಿಜಿಟಲ್ ಜನಗಣತಿ ಮತ್ತು 16ನೇ ಜನಗಣತಿಯು ಏಪ್ರಿಲ್ 1ರಿಂದ ಮೇ 15ರವರೆಗೆ ನಡೆಯಲಿದೆ ಎಂದು ವಿವರಿಸಿದರು.

ಏಪ್ರಿಲ್ 1ರಿಂದ 15ರವರೆಗೆ ಸ್ವಯಂ ಗಣತಿ ಕಾರ್ಯಕ್ಕೆ ಅವಕಾಶ ಕಲ್ಪಿಸಲಾಗಿದೆ. ಸಾರ್ವಜನಿಕರು ವೆಬ್ ಪೋರ್ಟಲ್ http://se.census.gov.in ಬಳಸಿಕೊಂಡು ತಮ್ಮ ಕುಟುಂಬದ ಸಾಮಾನ್ಯ ಮಾಹಿತಿಯನ್ನು ಆನ್‌ಲೈನ್ ಮೂಲಕ ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ಮೊಬೈಲ್, ಡೆಸ್ಕ್‌ಟಾಪ್, ಲ್ಯಾಪ್‌ಟಾಪ್ ಸಾಧನಗಳ ಮೂಲಕ ನಮೂದಿಸಬಹುದು. ಇದರಿಂದ ಸಮಯದ ಉಳಿತಾಯ ಜೊತೆಗೆ ನಿಖರ ಹಾಗೂ ಸಮಗ್ರ ಮಾಹಿತಿಯನ್ನು ಸಂಗ್ರಹಿಸಲು ಸಹಕಾರಿಯಾಗಲಿದೆ ಎಂದರು.

ಸಾರ್ವಜನಿಕರು ಸುರಕ್ಷಿತ ವೆಬ್ ಪೋರ್ಟಲ್ ಮೂಲಕ ಸ್ವಯಂ ಗಣತಿಯಲ್ಲಿ ಪಾಲ್ಗೊಳ್ಳಬೇಕೆನ್ನುವ ಉದ್ದೇಶದಿಂದ ಈ ಅವಕಾಶ ಕಲ್ಪಿಸಲಾಗಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಂಡು ಜನಗಣತಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬಹುದಾಗಿದೆ ಎಂದರು.



ಎರಡನೇ ಹಂತದಲ್ಲಿ ಜಿಲ್ಲೆಯಲ್ಲಿ ಮನೆ ಪಟ್ಟಿ ಮತ್ತು ಮನೆಗಣತಿ ಕಾರ್ಯವು ಏಪ್ರಿಲ್ 16ರಿಂದ ಆರಂಭವಾಗಲಿದ್ದು, ಮಾಹಿತಿ ಭರ್ತಿಯ ವೇಳೆ ಕುಟುಂಬಗಳು ತಮ್ಮ ಸ್ಥಳದ ವಿವರಗಳನ್ನು (ರಾಜ್ಯ, ಜಿಲ್ಲೆ, ತಾಲೂಕು, ಪಟ್ಟಣ/ಗ್ರಾಮ/ನಗರ ಇತ್ಯಾದಿ) ಕಡ್ಡಾಯವಾಗಿ ನಮೂದಿಸಬೇಕು. ಸ್ಥಳವನ್ನು ನಿಖರವಾಗಿ ಗುರುತಿಸಲು ಪಿನ್‌ಕೋಡ್ ಮತ್ತು ಡಿಜಿಟಲ್ ಮ್ಯಾಪ್ ಮೂಲಕ ಮನೆಯ ಸ್ಥಳವನ್ನು ಗುರುತಿಸುವ ವ್ಯವಸ್ಥೆ ಇರುತ್ತದೆ ಎಂದು ತಿಳಿಸಿದರು.

ಸಾರ್ವಜನಿಕರು ತಮ್ಮ ಜನಗಣತಿ ವಿವರಗಳನ್ನು ಆನ್‌ಲೈನ್‌ನಲ್ಲಿ ವೇಗವಾಗಿ ಮತ್ತು ಸುರಕ್ಷಿತವಾಗಿ ಭರ್ತಿ ಮಾಡಬಹುದಾಗಿದ್ದು, ಏಪ್ರಿಲ್ 16ರಿಂದ ಮೇ 15ರವರೆಗಿನ ಅವಧಿಯಲ್ಲಿ ಗಣತಿದಾರರು ಮನೆಗೆ ಭೇಟಿ ನೀಡಿ ವಿವರಗಳನ್ನು ಪರಿಶೀಲಿಸುತ್ತಾರೆ. ಈ ವೇಳೆಯಲ್ಲಿ ಸಾರ್ವಜನಿಕರು ಗಣತಿದಾರರು ಮನೆಗೆ ಬಂದಾಗ ಅದನ್ನು ಹಂಚಿಕೊಳ್ಳಬಹುದು. ಒಂದು ವೇಳೆ ಸಾರ್ವಜನಿಕರು ತಮ್ಮ ಸ್ವಯಂ ಗಣತಿ ಪೂರ್ಣಗೊಳಿಸದಿದ್ದರೆ ಗಣತಿದಾರರು ತಮ್ಮಿಂದಲೇ ಮಾಹಿತಿಯನ್ನು ಸಂಗ್ರಹಿಸುತ್ತಾರೆ. ಸ್ವಯಂ ಗಣತಿಯು ಶೇ. 100 ಗೌಪ್ಯತೆಯ ಭದ್ರತೆ ನೀಡಲಿದ್ದು, ಪ್ರತಿಯೊಬ್ಬರೂ ಸ್ವಯಂ ಗಣತಿಯಲ್ಲಿ ಭಾಗವಹಿಸಿ ದೇಶದ ಜವಾಬ್ದಾರಿಯುತ ನಾಗರಿಕರಾಗುವಂತೆ ತಿಳಿಸಿದರು.

> ಸ್ವಯಂ ಗಣತಿ ಪೋರ್ಟಲ್‌ನಲ್ಲಿ ಕೇಳಿರುವ ಪ್ರಶ್ನೆಗಳಿಗೆ ಮನೆಪಟ್ಟಿ ಕಾರ್ಯಾಚರಣೆ, ಮೊಬೈಲ್ ಆ್ಯಪ್‌ನಲ್ಲಿರುವಂತೆ ರೂಪಿಸಲಾಗಿದ್ದು, ಸಾರ್ವಜನಿಕರಿಗೆ ಪದೇ ಪದೇ ಕೇಳುವ ಪ್ರಶ್ನೆಗಳು ಮತ್ತು ಮಾರ್ಗಸೂಚಿಗಳನ್ನು ಇದರಲ್ಲಿ ಒದಗಿಸಲಾಗಿದೆ. ಕುಟುಂಬವು ತಮ್ಮ ಮಾಹಿತಿಯನ್ನು ಯಶಸ್ವಿಯಾಗಿ ಸಲ್ಲಿಸಿದ ನಂತರ, ಅವರಿಗೆ ಒಂದು ವಿಶಿಷ್ಟ ಸ್ವಯಂ ಗಣತಿ ಐ.ಡಿ. ಅನ್ನು ನೀಡಲಾಗುತ್ತದೆ. ಈ ಐ.ಡಿ.ಯನ್ನು ಎಸ್‌ಎಂಎಸ್ ಮತ್ತು ಇ-ಮೇಲ್ ಮೂಲಕ ಕಳುಹಿಸಲಾಗುತ್ತದೆ. ಅದನ್ನು ಮನೆಗೆ ಭೇಟಿ ನೀಡುವ ಗಣತಿದಾರರಿಗೆ ಈ ಐ.ಡಿ.ಯನ್ನು ಸಾರ್ವಜನಿಕರು ಹಂಚಿಕೊಳ್ಳಬಹುದು.
> ■ ಎನ್.ಎಂ. ನಾಗರಾಜ್, ಜಿಲ್ಲಾಧಿಕಾರಿ

ಈಗಾಗಲೇ ಗಣತಿಯಲ್ಲಿ ಭಾಗವಹಿಸುವ ಎಲ್ಲರಿಗೂ ತರಬೇತಿ ನೀಡಲಾಗಿದ್ದು, ಜಿಲ್ಲೆಯಲ್ಲಿ ಒಟ್ಟು 2528 ಬ್ಲಾಕ್‌ಗಳನ್ನು ಗುರುತಿಸಲಾಗಿದೆ. 2220 ಗಣತಿದಾರರು ಹಾಗೂ 380 ಮೇಲ್ವಿಚಾರಕರನ್ನು ಗಣತಿ ಕಾರ್ಯಕ್ಕೆ ನೇಮಿಸಲಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಅಪರ ಜಿಲ್ಲಾಧಿಕಾರಿ ಗೌರವಶೆಟ್ಟಿ ಹಾಜರಿದ್ದರು.

ಕುಮಾರಗಿರಿ ದೇವಸ್ಥಾನಕ್ಕೆ ಮರದ ರಥ ಹಸ್ತಾಂತರ

• **ಚಿಕ್ಕಮಗಳೂರು:** ನಗರದ ಉದ್ಯಮಿ ವೆಂಕಟರಾಮು ಮತ್ತು ಅವರ ಪುತ್ರ ಅಯ್ಯಪ್ಪ ಕುಟುಂಬ ವರು ತಾಲೂಕಿನ ಮಲ್ಲೇನಹಳ್ಳಿ ಗ್ರಾಮದ ಕುಮಾರಗಿರಿ ದೇವಸ್ಥಾನಕ್ಕೆ ಕೊಡುಗೆಯಾಗಿ ನೀಡಿದ ಮರದಿಂದ ನಿರ್ಮಿಸಿದ ರಥವನ್ನು ದೇವಾಲಯದ ಆಡಳಿತ ಮಂಡಳಿಗೆ ಹಸ್ತಾಂತರಿಸುವ ಕಾರ್ಯಕ್ರಮ ಸೋಮವಾರ ನಡೆಯಿತು.

ಈ ಸಂದರ್ಭದಲ್ಲಿ ದೇವಸ್ಥಾನದ ಆವರಣದಲ್ಲಿ ಚಂದ್ರಶೇಖರ ಮತ್ತು ಆದಿತ್ಯಭಟ್ ನೇತೃತ್ವದಲ್ಲಿ ಗಣಪತಿ, ಸುಬ್ರಹ್ಮಣ್ಯ, ವಾಸ್ತು, ನವಗ್ರಹ ಹೋಮ ಹಾಗೂ ಅಧಿದೇವತೆ ಯಾಗ ಮತ್ತು ಮೃತ್ಯುಂಜಯಹೋಮ ನೆರವೇರಿಸಿ ಪೂರ್ಣಾಹುತಿ ನಡೆಯಿತು. ನಂತರ ರಥಕ್ಕೆ ವಿಶೇಷ ಪೂಜೆ ನೇರವೇರಿಸಿ ಕಳಶ ಕೂರಿಸಲಾಯಿತು. ದೇವಸ್ಥಾನ ಸಮಿತಿ ಅಧ್ಯಕ್ಷ ಗುಣಶೇಖರ್, ಕಾರ್ಯದರ್ಶಿ ವಿಜಯಕುಮಾರ್ ನೇತೃತ್ವದಲ್ಲಿ ರಥವನ್ನು ದೇವಾಲಯಕ್ಕೆ ಹಸ್ತಾಂತರ ಮಾಡಲಾಯಿತು.

ಈ ವೇಳೆ ಮಾತನಾಡಿದ ಕಾರ್ಯದರ್ಶಿ ವಿಜಯ್ ಕುಮಾರ್, ನಮ್ಮ ಅವಧಿಯಲ್ಲಿ ದೇವಸ್ಥಾನಕ್ಕೆ ಮೆಟ್ಟಿಲು ನಿರ್ಮಾಣ ಸೇರಿದಂತೆ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ವಿಶೇಷ ದಿನಗಳಲ್ಲಿ ಎಲ್ಲ ರೀತಿಯ ಪೂಜೆ ನೆರವೇರಿಸಲಾಗುತ್ತಿದೆ. ಇದೇ ಸಂದರ್ಭದಲ್ಲಿ ದೇವಲಾಯಕ್ಕೆ ದಾನಿಗಳು ಹೊಸ ತೇರು ನೀಡಿರುವುದು ದೇವಾಲಯದ ಶಕ್ತಿ ತುಂಬುವ ಕೆಲಸ ಹೆಚ್ಚಾದಂತಾಗಿದೆ ಎಂದರು.

ಪಂಗುನಿ ಉತ್ತಿರೆ ಜಾತ್ರೆ ಅಂಗವಾಗಿ ಸುತ್ತಮುತ್ತಲ ಗ್ರಾಮಗಳಾದ ಹೊಸಪೇಟೆ, ಮಲ್ಲೇನಹಳ್ಳಿ, ಭಕ್ತರಹಳ್ಳಿ, ಸುಬ್ರಹ್ಮಣ್ಯ ಮತ್ತು ವಳ್ಳಿ, ದೈವಾನೆ ದೇವರ ಮೆರವಣಿಗೆ ನಡೆಸಲಾಗುತ್ತದೆ. ಅಲ್ಲದೇ ಕಾವಡಿ ಸಮರ್ಪಣೆ ಮತ್ತು ಕಲ್ಯಾಣೋತ್ಸವ ಕಾರ್ಯಕ್ರಮ, ಸಾಮೂಹಿಕ ವಿವಾಹ, ಅನ್ನಸಂತರ್ಪಣೆ ಕಾರ್ಯವನ್ನು ಹಮ್ಮಿಕೊಳ್ಳಲಾಗುತ್ತದೆ ಎಂದು ತಿಳಿಸಿದರು.

ವಿಧಾನ ಪರಿಷತ್ ಉಪ ಸಭಾಪತಿ ಪ್ರಾಣೇಶ್, ಸಂಸದ ಕೋಟ ಶ್ರೀನಿವಾಸ ಪೂಜಾರಿ, ಶಾಸಕರಾದ ತಮ್ಮಯ್ಯ, ಸಿ.ಟಿ. ರವಿ, ಭೋಜೇಗೌಡ, ಮಾಜಿ ವಿಧಾನ ಪರಿಷತ್ ಸದಸ್ಯೆ ಗಾಯತ್ರಿ ಶಾಂತೇಗೌಡ, ಸಿಪಿಐ ಮುಖಂಡ ರೇಣುಕಾರಾಧ್ಯ, ಸಂಘದ ಗೌರವಾಧ್ಯಕ್ಷ ಶಂಕರ್, ಉಪಾಧ್ಯಕ್ಷರಾದ ಮಹಾಲಿಂಗಂ, ರಮೇಶ್, ರಘು, ಗೋಪಾಲ್, ಪುವೆಂದಿರನ್ ಇತರರು ಇದ್ದರು.



ಏ.2: ದೇವಾಂಗ ಜನಜಾಗೃತಿ ಹಾಗೂ ಸಂಘಟನಾ ಸಮಾವೇಶ

• **ಚಿಕ್ಕಮಗಳೂರು:** ಜಿಲ್ಲಾ ಮಟ್ಟದ 1046ನೇ ಶ್ರೀ ದೇವರ ದಾಸಿಮಯ್ಯನವರ ಜಯಂತಿ ಮತ್ತು ದೇವಾಂಗ ಜನಜಾಗೃತಿ ಹಾಗೂ ಸಂಘಟನಾ ಸಮಾವೇಶ ಏಪ್ರಿಲ್ 2ರ ಗುರುವಾರ ಕಡೂರು ಪಟ್ಟಣದ ಶ್ರೀ ಪ್ರಸನ್ನ ಗಣಪತಿ ಆಸ್ಥಾನ ಮಂಟಪದಲ್ಲಿ (ಎಂಆರ್‌ಎಂ ರಂಗಮಂದಿರ) ನಡೆಯಲಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಕೆ. ಶ್ರೀನಿವಾಸ್ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಡೂರು ತಾಲೂಕು ದೇವಾಂಗ ಸಮಾಜ ಹಾಗೂ ಜಿಲ್ಲಾ ಸಂಘದ ವತಿಯಿಂದ ಅದ್ದೂರಿಯಾಗಿ ಕಾರ್ಯಕ್ರಮ ಜರುಗಲಿದೆ ಎಂದು ಹೇಳಿದರು.

ಏಪ್ರಿಲ್ 2 ರ ಗುರುವಾರ ಬೆಳಗ್ಗೆ 10 ಗಂಟೆಗೆ ಪಟ್ಟಣದ ಶ್ರೀ ವೆಂಕಟೇಶ್ವರ ದೇವಾಲಯದಿಂದ ರಾಷ್ಟ್ರೀಯ ಹೆದ್ದಾರಿ ಮೂಲಕ ಶ್ರೀ ದೇವರ ದಾಸಿಮಯ್ಯನವರ ಭಾವಚಿತ್ರದೊಂದಿಗೆ ವಿವಿಧ ಜಾನಪದ ಕಲಾ ತಂಡಗಳ ಮೂಲಕ ಅದ್ದೂರಿಯ ಮೆರವಣಿಗೆ ನಡೆಯಲಿದೆ. ಮೆರವಣಿಗೆಯಲ್ಲಿ ಹಂಪಿ ಹೇಮಕುಟದ ದೇವಾಂಗ ಗುರುಗಳಾದ ಶ್ರೀ ದಯಾನಂದ ಪುರಿ ಸ್ವಾಮಿ, ಮಹಾರಾಷ್ಟ್ರದ ಸೊಲ್ಲಾಪುರದ ಶ್ರೀ ಅಭಿನವ ರಾಮಲಿಂಗ ಪಟ್ಟದೇವರು ಹಾಗೂ ಜಿಲ್ಲೆಯ ಸಮಾಜ ಬಾಂಧವರು ಭಾಗವಹಿಸಲಿದ್ದಾರೆ ಎಂದರು.

ದೇವಾಂಗ ಸಂಘದ ಕಡೂರು ತಾಲೂಕು ಅಧ್ಯಕ್ಷ ಎಚ್.ಎಲ್. ರಂಗನಾಥ ಮಾತನಾಡಿ, ಜಿಲ್ಲೆಯಾದ್ಯಂತ ಎಲ್ಲಾ ಗ್ರಾಮಗಳಿಗೆ ತೆರಳಿ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಸಮಾಜ ಬಾಂಧವರು ಆಗಮಿಸುವಂತೆ ತಿಳಿಸಲಾಗಿದೆ. ಜಿಲ್ಲೆಯಾದ್ಯಂತ ಗ್ರಾಮಗಳಿಂದ ಸುಮಾರು 5,000ಕ್ಕೂ ಹೆಚ್ಚು ಸಮಾಜ ಬಾಂಧವರು ಆಗಮಿಸುವ ನಿರೀಕ್ಷೆ ಇದೆ. ಈ ಮೂಲಕ ಸಮಾಜದ ಸಂಘಟನೆಗೆ ಹೆಚ್ಚಿನ ಒತ್ತು ನೀಡಿ ಕೆಲಸ ಮಾಡಲಾಗುವುದು. ಸಮಾರಂಭದದಲ್ಲಿ ಪಟ್ಟಣದ ವೈದ್ಯರಾದ ಡಾ. ಛಾಯಾಪತಿ ಅವರಿಗೆ ದೇವಲ ಮಹರ್ಷಿ ರತ್ನ ಪ್ರಶಸ್ತಿಯನ್ನು ಪ್ರಧಾನ ಮಾಡಲಾಗುವುದು ಎಂದರು.

ದೇವಾಂಗ ಸಮಾಜದ ಕಡೂರು ನಗರ ಅಧ್ಯಕ್ಷರಾದ ಹರೀಶ್ ಕುಮಾರ್ ಮಾತನಾಡಿ, ಭವ್ಯ ಮೆರವಣಿಗೆಯ ನಂತರ ವೇದಿಕೆಯ ಕಾರ್ಯಕ್ರಮಗಳು ಗುರುಗಳ ದಿವ್ಯ ಸಾನಿಧ್ಯದಲ್ಲಿ ನೆರವೇರಲಿದೆ, ಶಾಸಕ ಕೆ.ಎಸ್. ಆನಂದ ಸಮಾರಂಭದ ಉದ್ಘಾಟನೆಯನ್ನು ನೆರವೇರಿಸಲಿದ್ದಾರೆ, ರಾಜ್ಯಸಭಾ ಸದಸ್ಯ ಕೆ.ನಾರಾಯಣ್, ರಾಜ್ಯ ದೇವಾಂಗ ಸಂಘದ ಅಧ್ಯಕ್ಷ ರವೀಂದ್ರ ಕಲಬುರ್ಗಿ, ಶಾಸಕರುಗಳಾದ ಎಚ್.ಡಿ. ತಮ್ಮಯ್ಯ, ಸಿ.ಟಿ.ರವಿ, ಮಾಜಿ ಸಚಿವರಾದ ಉಮಾಶ್ರೀ, ಎಂ.ಡಿ. ಲಕ್ಷ್ಮಿ ನಾರಾಯಣ್, ಜಿ.ಎಚ್. ಶ್ರೀನಿವಾಸ್, ಎಸ್.ಎಲ್. ಭೋಜೇಗೌಡ, ಮಾಜಿ ಶಾಸಕ ವೈ.ಎಸ್.ವಿ. ದತ್ತ, ಬೆಳ್ಳಿ ಪ್ರಕಾಶ್ ಮುಂತಾದವರು ಭಾಗವಹಿಸಲಿದ್ದು ಸಾಹಿತಿಗಳಾದ ನಾಗಶ್ರೀ ತ್ಯಾಗರಾಜ್ ಉಪನ್ಯಾಸ ನೀಡಲಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಸಹಕಾರ್ಯದರ್ಶಿ ಸಿ.ಎಸ್.ರವಿಕುಮಾರ್, ಆಚರಣಾ ಸಮಿತಿಯ ಯೋಗೀಶ್, ಭಗವತಿ ಹರೀಶ್, ಬೆಂಕಿ ಶೇಖರಪ್ಪ ಮತ್ತಿತರರು ಉಪಸ್ಥಿತರಿದ್ದರು.

ಶಾಂತಿಯ ಸಂದೇಶ ನೀಡಿದ ಭಗವಾನ್

• **ಶೃಂಗೇರಿ:** ಜಗತ್ತಿಗೆ ಅಹಿಂಸೆ ಶಾಂತಿಯ ಸಂದೇಶ ನೀಡಿದ ಭಗವಾನ್ ಮಹಾವೀರರು ಎಂದು ಜಯಪುರ ಜೈನ್ ಮಿಲನ್‌ನ ಶಾಂತಕುಮಾರ ಜೈನ್ ಹೇಳಿದರು.

ಪಟ್ಟಣದ ಪಾರ್ಶನಾಥ ಬಸದಿಯಲ್ಲಿ ಸೋಮವಾರ ರಾಷ್ಟ್ರೀಯ ಹಬ್ಬಗಳ ಸಮಿತಿ ಮತ್ತು ಜೈನ್ ಮಿಲನ್ ಜಂಟಿಯಾಗಿ ಏರ್ಪಡಿಸಿದ್ದ ಮಹಾವೀರ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಭಗವಾನ್ ಮಹಾವೀರರ ತತ್ವಗಳು ಇಂದಿನ ಸಂಘರ್ಷಮಯ ಕಾಲಘಟ್ಟದಲ್ಲಿ ವಿಶ್ವಕ್ಕೆ ಮಾದರಿಯಾಗಿದೆ ಎಂದರು.

ಕಂದಾಯ ಇಲಾಖೆ ಪ್ರವೀಣ್, ಡಾ. ನಿರಂಜನ ಕುಮಾರ್, ಡಾ. ಭುವನೇಶ್ವರಿ ಬಲ್ಲಾಳ್, ಪ್ರವೀಣ್ ಇಂದ್ರ, ಧನ್ಯಕುಮಾರ್ ಜೈನ್, ದೃಷ್ಟಿ ಜೈನ್, ರವೀಂದ್ರ ಜೈನ್, ಪ್ರೇರಣ ಜೈನ್, ಶಶಿಪ್ರಭ, ಅಕಾಶ್ ಜೈನ್, ಅಜಿತ್ ಇಂದ್ರ ಇತರರು ಇದ್ದರು.

ಹೊಗರೇಖಾನ್ ಮಠದಲ್ಲಿ ಶ್ರೀ ಸಿದ್ದೇಶ್ವರಸ್ವಾಮಿ ಬ್ರಹ್ಮರಥೋತ್ಸವ

• **ಬೀರೂರು:** ಇತಿಹಾಸ ಪ್ರಸಿದ್ಧ ಹೊಗರೇಖಾನ್ ಮಠದ ಶ್ರೀ ಸಿದ್ದೇಶ್ವರ ಸ್ವಾಮಿಯವರ ಬ್ರಹ್ಮರಥೋತ್ಸವ ನೂರಾರು ಭಕ್ತರ ಸಮ್ಮುಖದಲ್ಲಿ ಮಂಗಳವಾರ ಶ್ರದ್ಧಾ ಭಕ್ತಿ, ಸಡಗರ ಸಂಭ್ರಮಗಳಿಂದ ನೆರವೇರಿತು.

ಮಂಗಳವಾರ ಬೆಳಗ್ಗೆಯಿಂದಲೇ ಶ್ರೀಯವರಿಗೆ ಪಂಚಾಭಿಷೇಕ ಪೂಜಾ, ನೂರೆಂಟು ಅಷ್ಟೋತ್ತರ, ರಥಕ್ಕೆ ಕಳಸ ಸ್ಥಾಪನಾ ಪೂಜಾ ಮತ್ತು ನೂರೊಂದುಎಡೆ ಸೇವೆಯನ್ನು ಭಕ್ತಿಯಿಂದ ಸಮರ್ಪಿಸಲಾಯಿತು. ಮಠದ ಸಕಲ ದೇವರುಗಳಿಗೆ ಪೂಜಾ ನಂತರದಲ್ಲಿ ಶ್ರೀ ಸಿದ್ದೇಶ್ವರಸ್ವಾಮಿ ಅವರನ್ನು ಮಂಗಳ ವಾದ್ಯಗಳೊಂದಿಗೆ ರಥದ ಬಳಿಗೆ ಕರೆತರಲಾಯಿತು.

ರಥದ ಧ್ವಜವನ್ನು ಒಕ್ಕಲುದಾರರಾದ ಹೋಗರೇಹಳ್ಳಿ ಸಿದ್ದಪ್ಪರವರು 1 ಲಕ್ಷ 50 ಸಾವಿರಕ್ಕೆ ಕೂಗಿ ಪಡೆದು ಸ್ವಾಮಿಯವರ ಪ್ರಥಮ ಪೂಜೆಗೆ ಪಾತ್ರರಾದರು. ನಂತರ ಸಾವಿರಾರು ಭಕ್ತ ಸಮೂಹ ಜೈಕಾರಗಳೊಂದಿಗೆ ರಥವನ್ನು ಕೆಂಚರಾಯರ ಗುಡಿಯ ಬಳಿಯವರೆಗೂ ಎಳೆದು ತಂದರು.

ಈ ಸಮಯದಲ್ಲಿ ಭಕ್ತರು ರಥಚಕ್ರಕ್ಕೆ ತೆಂಗಿನಕಾಯಿ ಒಡೆದು ಪೂಜೆಯನ್ನು ಸಲ್ಲಿಸಿ ಭಕ್ತಿ ಮೆರೆದರು. ತಮ್ಮ ಇಷ್ಟಾರ್ಥ ಸಿದ್ಧಾರ್ಥಿಗಾಗಿ ಬಾಳೆಯ ಹಣ್ಣುಗಳನ್ನು ರಥದ ಕಳಸಕ್ಕೆ ಎಸೆಯುವುದರ ಮೂಲಕ ಹರಕೆಯನ್ನು ಸಲ್ಲಿಸಿದರು. ನಂತರದಲ್ಲಿ ಶ್ರೀ ವೀರಶೈವ ಭಕ್ತ ಮಂಡಳಿ ಭಕ್ತಾದಿಗಳಿಂದ ಅನ್ನಸಂತರ್ಪಣೆಯನ್ನು ನೆರವೇರಿಸಲಾಯಿತು.



ಬ್ರಹ್ಮ ರಥೋತ್ಸವಕ್ಕೂ ಮುನ್ನ ಕಳೆದ ನಾಲ್ಕು ದಿನಗಳಿಂದಲೂ ಸಿದ್ದೇಶ್ವರ ಸ್ವಾಮಿಯವರಿಗೆ ನಿತ್ಯಪೂಜೆ, ಧ್ವಜಾರೋಹಣ, ರುದ್ರಾಭಿಷೇಕ, ಮದುವಣಿಗೆ ಶಾಸ್ತ್ರ, ನಂದಿ ವಾಹನೋತ್ಸವ, ಪಂಚಾಭಿಷೇಕ ಪೂಜೆ, ನೂರೆಂಟುಅಷ್ಟೋತ್ತರ, ನವಿಲು ಉತ್ಸವ, ಕುದುರೆ ವಾಹನೋತ್ಸವ, ಕಲ್ಯಾಣೋತ್ಸವ, ಗಜ ವಾಹನೋತ್ಸವ, ಉತ್ಸವ ಮೂರ್ತಿಗೆ ಅಡ್ಡಪಲ್ಲಕ್ಕಿ ಉತ್ಸವಗಳನ್ನು ನಡೆಸಲಾಯಿತು.

ಬುಧವಾರ ಮೂಲಮೂರ್ತಿಗೆ ಪಂಚಾಭಿಷೇಕ, ಅಷ್ಟೋತ್ತರ, ಓಕಳಿ, ಕಂಕಣ ವಿಸರ್ಜನೆಯೊಂದಿಗೆ ಶ್ರೀಸಿದ್ದೇಶ್ವರ ಸ್ವಾಮಿಯವರ ರಥೋತ್ಸವ ಸಂಪನ್ನಗೊಳಿಸಲಾಗುವುದು.

ರಾಜ್ಯದ ನಾನಾ ಮೂಲೆಗಳಿಂದ ಆಗಮಿಸಿದ್ದ ಸಾವಿರಾರು ಭಕ್ತರು ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡು ಭಕ್ತಿಪರವಶತೆಯನ್ನು ಮೆರೆದರು.

ಕರ್ಮ ಸಿದ್ಧಾಂತ ಪರಿಚಯಿಸಿದ ಮಹಾವೀರರು

• **ಚಿಕ್ಕಮಗಳೂರು:** ಜೈನ ಧರ್ಮದ ಸಂಸ್ಥಾಪಕರಾದ ಭಗವಾನ್ ಮಹಾವೀರರು ಜಗತ್ತಿನ ಮೊದಲ ಅಹಿಂಸಾವಾದಿ. ಸತ್ಯ, ಅಹಿಂಸೆ ಬ್ರಹ್ಮಚರ್ಯ. ಅಸ್ತೇಯ ಮತ್ತು ಕರ್ಮ ಸಿದ್ಧಾಂತಗಳ ಮೂಲಕ ಜಗತ್ತಿಗೆ ಅವರು ಪರಿಚಿತರಾಗಿದ್ದಾರೆ ಎಂದು ತೇರಾಪಂಥ್ ಸಭಾದ ಅಧ್ಯಕ್ಷ ಮಹೇಂದ್ರ ಡೋಸಿ ತಿಳಿಸಿದರು.

ಮಂಗಳವಾರ ತೇರಾಪಂಥ್ ಭವನದಲ್ಲಿ ಭಗವಾನ್ ಮಹಾವೀರ ಜಯಂತಿ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.

ಜೈನ ಧರ್ಮದ ಶ್ರೇಷ್ಠ ಜ್ಞಾನಿ ಮತ್ತು ಧರ್ಮ ಪ್ರವರ್ತಕ ಭಗವಾನ್ ಮಹಾವೀರರು. ಅವರ ಪ್ರಕಾರ ಅಹಿಂಸೆ ಎಂದರೆ ಸಕಲ ಜೀವರಾಶಿಗಳಿಗೆ ಯಾವುದೇ ನೋವನ್ನುಉಂಟು ಮಾಡದಿರುವುದು ಮತ್ತು ಪ್ರಾಮಾಣಿಕ ನಡವಳಿಕೆ ಮತ್ತು ಇತರರನ್ನು ನೋಯಿಸದಿರುವುದೇ ಆಗಿದೆ. ಸಕಲ ಜೀವಿಗಳಿಗೂ ಒಳ್ಳೆಯದನ್ನು ಬಯಸಬೇಕು ಎನ್ನುವುದು ಮಹಾವೀರರ ಮೂಲ ತತ್ವ ಹಸಿವು ಮತ್ತು ದಾಹಗಳನ್ನ ದೀರ್ಘಕಾಲ ನಿಯಂತ್ರಿಸಿ ಮಹಾ ಜ್ಞಾನಿಯಾದವರು. ಮಹಾವೀರರು ಆಸೆಗಳನ್ನು ಗೆದ್ದವರು. ಕರ್ನಾಟಕವನ್ನು ಆಳಿದ ಆರಂಭದ ಎಲ್ಲಾ ರಾಜ ಮನೆತನಗಳು ಜೈನ ಧರ್ಮವನ್ನು ಪೋಷಿಸಿವೆ. ಕನ್ನಡ ಸಾಹಿತ್ಯ, ಕಲೆಗೆ ಅವರ ಕೊಡುಗೆ ಅಪಾರ ಎಂದರು.

ತೇರಾಪಂಥ್ ಭವನದ ಮಾಜಿ ಅಧ್ಯಕ್ಷ ಮದನ್ ಚಂದ್ ಜೈನ್ ಮಾತನಾಡಿ, ಕಷ್ಟದಲ್ಲಿರುವವರಿಗೆ ಸಹಾಯ ಮಾಡಬೇಕು. ಸರ್ವೇಜನೋ ಸುಖಿನೋಭವಂತು, ದೀನ ದಲಿತರಿಗೆ ಸಹಾಯ ಮಾಡುವುದು ಜೈನ ಧರ್ಮದ ಮುಖ್ಯ ತತ್ವವಾಗಿದೆ. ಸಾಧ್ಯವಾದಷ್ಟು ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಹೆಚ್ಚು ಒತ್ತು ನೀಡಬೇಕು ಎಂದರು.

ಈ ಸಂದರ್ಭದಲ್ಲಿ ಕಾರ್ಯದರ್ಶಿ ಪದಮ್ ನಹಾರ್, ಮಹಿಳಾ ಮಂಡಲ್ ಅಧ್ಯಕ್ಷೆ ಸಂತೋಷ್‌ಬಾಯಿ ಗಾದಿಯಾ, ಯುವ ಪರಿಷತ್ ಅಧ್ಯಕ್ಷ ನಿಖಿಲ್ ಗಾದಿಯಾ, ಅಣುವ್ರತ್ ಸಮಿತಿ ಅಧ್ಯಕ್ಷೆ ಮಂಜುಬಾಯಿ ಬನ್ಸಾಲಿ, ಟ್ರಸ್ಟ್ ಅಧ್ಯಕ್ಷ ಅಶೋಕ್ ಡೋಸಿ, ಟಿಪಿಎಫ್ ಅಧ್ಯಕ್ಷ ಅಭಿಷೇಕ್ ಆಚಾ, ಉಪಾಸಿಕ ರಂಜು ಆಚಾ, ಮಾಜಿ ಅಧ್ಯಕ್ಷರಾದ ಸುರೇಂದ್ರ ಕುಮಾರ್ ಗೋಕ್ರೋ, ಲಾಲ್ ಚಂದ್ ಬನ್ಸಾಲಿ ಉಪಸ್ಥಿತರಿದ್ದರು.



ಕಷ್ಟದಲ್ಲಿರುವವರಿಗೆ ಸಹಾಯ ಮಾಡಿದರೆ ಹೆಚ್ಚುವ ಮೌಲ್ಯ

• **ಚಿಕ್ಕಮಗಳೂರು:** ಕಷ್ಟದಲ್ಲಿರುವವರಿಗೆ ಸಹಾಯ ಮಾಡಿದಾಗ ಮಾತ್ರ ಶ್ರೀಮಂತಿಕೆಯ ನಿಜವಾದ ಮೌಲ್ಯ ಬೆಳಗುತ್ತದೆ ಎಂದು ಎನ್‌ಆರ್‌ಪುರ ಲಯನ್ಸ್ ಕ್ಲಬ್ ಅಧ್ಯಕ್ಷ ಪಿ.ಜೆ. ಆಂಟೋನಿ ತಿಳಿಸಿದರು.

ಎನ್‌ಆರ್‌ಪುರ ಹೊಡೆಯಾಲದ ಶ್ರೀರಾಮ ದೇವಸ್ಥಾನದಲ್ಲಿ ಅಮ್ಮ ಫೌಂಡೇಶನ್ ವತಿಯಿಂದ ಆಯೋಜಿಸಲಾದ 33ನೇ ಆರೋಗ್ಯ ಶಿಬಿರದ ಅಂಗವಾಗಿ ಉಚಿತ ಕನ್ನಡಕ ವಿತರಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಅಮ್ಮ ಫೌಂಡೇಶನ್ ಕಳೆದ ಆರು ವರ್ಷಗಳಿಂದ ಕ್ಷೇತ್ರದ ಪ್ರತಿ ಹಳ್ಳಿ ಹಾಗೂ ಪ್ರತಿಯೊಂದು ಗ್ರಾಮಗಳ ಮನೆಮನೆಗೂ ತಲುಪಿದ್ದು, ಬಡವರು, ದಲಿತರು, ರೈತರು ಮತ್ತು ಕೂಲಿ ಕಾರ್ಮಿಕರಿಗೆ ಅವಶ್ಯಕತೆಯ ಸಮಯದಲ್ಲಿ ಸಹಾಯ ಹಸ್ತ ನೀಡುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ ಎಂದು ತಿಳಿಸಿದರು.

ವಿಶೇಷವಾಗಿ ಶೃಂಗೇರಿ ಕ್ಷೇತ್ರದಲ್ಲಿ ಹೆಚ್ಚಿನ ಕೂಲಿ ಕಾರ್ಮಿಕರು ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದು, ಅಂತಹ ಸಂದರ್ಭಗಳಲ್ಲಿ ನಿಮ್ಮೊಂದಿಗೆ ನಾನಿದ್ದೇನೆ ಎಂಬ ಭರವಸೆ ನೀಡುವ ಸಂಸ್ಥೆಯ ಅಗತ್ಯವಿದೆ. ಆ ದೃಷ್ಟಿಯಿಂದ ಸೇವೆ ಸಲ್ಲಿಸುತ್ತಿದೆ ಎಂದರು.

ಶೃಂಗೇರಿ ಕ್ಷೇತ್ರದಲ್ಲಿ ಮಾನವೀಯತೆ ಮೆರೆಯುತ್ತಿರುವ ಸುಧಾಕರ್ ಶೆಟ್ಟಿ ಯವರು ಇದುವರೆಗೆ ಸಂಸ್ಥೆ ಸುಮಾರು 75 ವೀಲ್‌ಚೇರ್‌ಗಳನ್ನು ವಿತರಿಸಿದ್ದು, 3000 ಜನರಿಗೆ ಉಚಿತ ಕನ್ನಡಕಗಳನ್ನು ನೀಡಿದೆ. ಅಲ್ಲದೆ, 250 ಜನರಿಗೆ ಕಣ್ಣಿನ ಶಸ್ತ್ರಚಿಕಿತ್ಸೆ ಮಾಡಿಸಿ, ಸುಮಾರು 2000 ಜನರಿಗೆ ಉದ್ಯೋಗಾವಕಾಶ ಕಲ್ಪಿಸಿರುವುದು ಅತ್ಯಂತ ಪ್ರಶಂಸನೀಯ ಕಾರ್ಯವಾಗಿದೆ ಎಂದು ಹೇಳಿದರು.

ಮನುಷ್ಯನು ಗಳಿಸಿದ ಸಂಪತ್ತನ್ನು ಕೇವಲ ಮಕ್ಕಳಿಗೆ ಅಥವಾ ಮೊಮ್ಮಕ್ಕಳಿಗೆ ಮಾತ್ರ ಉಳಿಸಿ ಹೋಗುವುದರಿಂದ ಜೀವನದ ಮೌಲ್ಯ ಹೆಚ್ಚುವುದಿಲ್ಲ, ಆದರೆ ಸಮಾಜಕ್ಕೆ ನೀಡಿದ ಕೊಡುಗೆ ಮಾತ್ರ ಶಾಶ್ವತವಾಗಿ ಉಳಿದು, ಜನಮನಗಳಲ್ಲಿ ನಮ್ಮನ್ನು ನೆನಪಿಸುತ್ತದೆ. ಆದ್ದರಿಂದ ಶ್ರೀಮಂತ ಉದ್ಯಮಿಗಳು ತಮ್ಮ ಆದಾಯದಲ್ಲಿ ಕನಿಷ್ಟ ಒಂದು ಭಾಗವನ್ನಾದರೂ ಸಮಾಜದ ಹಿತಕ್ಕಾಗಿ ಮೀಸಲಿಡಬೇಕು ಅವರು ಕರೆ ನೀಡಿದರು.

ಹಣದ ಆಸೆ ಮನುಷ್ಯನ ಸ್ವಭಾವವಾದರೂ, ಬಡವರು, ಕೂಲಿ ಕಾರ್ಮಿಕರು ಹಾಗೂ ದಲಿತರಿಗೆ ನೀಡುವ ಸಹಾಯವೇ ನಿಜವಾದ ಧರ್ಮಕಾರ್ಯ. ಇಂತಹ ಪುಣ್ಯ ಕಾರ್ಯಗಳಿಂದ ಭಗವಂತನು ಕೂಡ ಸಂತೋಷಪಟ್ಟು ನಿಮ್ಮ ಜೀವನದಲ್ಲಿ ಒಳ್ಳೆಯದನ್ನು ನೀಡುತ್ತಾನೆ. ಈ ನಿಟ್ಟಿನಲ್ಲಿ ಅಮ್ಮ ಫೌಂಡೇಶನ್ ಸಂಸ್ಥಾಪಕ ಸುಧಾಕರ್ ಶೆಟ್ಟಿ ಸೇವೆ ಸಾರ್ಥಕವಾದದ್ದು ಎಂದರು.

ಕಾರ್ಯಕ್ರಮದಲ್ಲಿ ಎನ್.ಆರ್.ಪುರ ರೋಟರಿ ಕ್ಲಬ್ ಅಧ್ಯಕ್ಷರಾದ ವಿನಯ್ ಕಣಿವೆ, ಕೃಷಿಕರಾದ ಪ್ರಫುಲ್ಲ ಕೆ., ಮುತ್ತಿನಕೊಪ್ಪ ಪ್ರಫುಲ್ಲಚಂದ್ರ, ಅಮ್ಮ ಫೌಂಡೇಶನ್ ಯೋಜನಾಧಿಕಾರಿ ವೆಂಕಪ್ಪ ಆಚಾರ್, ನಿರ್ದೇಶಕರಾದ ಪ್ರಭಾಕರ್ ಶೆಟ್ಟಿ, ರಮೇಶ್ ಶೆಟ್ಟಿ, ರವಿಕುಮಾರ್ ಕೆ., ಪ್ರಕಾಶ್ ಹೊಡೆಯಾಲ, ಅಭಿನವ್ ಉಪಸ್ಥಿತರಿದ್ದರು.



ಕಿರುಸುದ್ದಿ

ಇಂದಿನಿಂದ 15 ದಿನಗಳ ಕಾಲ ಸ್ವಯಂ ಗಣತಿ ವ್ಯವಸ್ಥೆ

ದಾವಣಗೆರೆ: ಜನಗಣತಿ-2027ರ ಅಂಗವಾಗಿ ಸ್ವಯಂ ಗಣತಿ ವ್ಯವಸ್ಥೆಯ ಮೂಲಕ ಸಾರ್ವಜನಿಕರು ಮನೆ, ಕಚೇರಿಯಲ್ಲೇ ಅಥವಾ ಯಾವುದೇ ಅನುಕೂಲಕರ ಸ್ಥಳದಿಂದ ಸುರಕ್ಷಿತ ವೆಬ್ ಪೋರ್ಟಲ್ ಬಳಸಿಕೊಂಡು ತಮ್ಮ ಕುಟುಂಬದ ಸಾಮಾನ್ಯ ಮಾಹಿತಿಯನ್ನು ಆನ್ ಲೈನ್ ಮೂಲಕ ಸ್ವತಃ ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ಸ್ವಯಂ ಗಣತಿಯಿಂದ ಸಮಯ ಉಳಿತಾಯದ ಜೊತೆಗೆ ನಿಖರ ಹಾಗೂ ಸಮಗ್ರ ಮಾಹಿತಿಯನ್ನು ಸಂಗ್ರಹಿಸಲು ಸಹಕಾರಿ ಆಗಲಿದೆ. ಜಿಲ್ಲೆಯಲ್ಲಿ ಮನೆಪಟ್ಟಿ ಕಾರ್ಯಾಚರಣೆ ಪ್ರಾರಂಭವಾಗುವ ದಿನಾಂಕಕ್ಕೆ 15 ದಿನಗಳ ಮೊದಲು ಅಂದರೆ ಏಪ್ರಿಲ್ 1ರಿಂದ 15ರ ಅವಧಿಯಲ್ಲಿ ಸ್ವಯಂ ಗಣತಿ ವೆಬ್ ಸೈಟ್ ಪೋರ್ಟಲ್ ಸಾರ್ವಜನಿಕರಿಗೆ ಲಭ್ಯವಾಗಲಿದೆ.

ಮಾಹಿತಿ ಭರ್ತಿಯ ವೇಳೆ ಕುಟುಂಬಗಳು ತಮ್ಮ ಸ್ಥಳದ ವಿವರ(ರಾಜ್ಯ, ಜಿಲ್ಲೆ,ತಾಲ್ಲೂಕು, ಗ್ರಾಮ/ಪಟ್ಟಣ/ನಗರ ಇತ್ಯಾದಿ) ಕಡ್ಡಾಯವಾಗಿ ನಮೂದಿಸಬೇಕು. ಸ್ಥಳವನ್ನು ನಿಖರವಾಗಿ ಗುರುತಿಸಲು ಪಿನ್ ಕೋಡ್ ಮತ್ತು ಡಿಜಿಟಲ್ ಮ್ಯಾಪ್ ಮೂಲಕ ಮನೆಯ ಸ್ಥಳವನ್ನು ಗುರುತಿಸುವ ವ್ಯವಸ್ಥೆಯೂ ಲಭ್ಯವಿರುತ್ತದೆ. ಸ್ವಯಂ ಗಣತಿ ಪೋರ್ಟಲ್ ನಲ್ಲಿ ಕೇಳಲಾಗುವ ಪ್ರಶ್ನೆಗಳು ಮನೆಪಟ್ಟಿ ಕಾರ್ಯಾಚರಣೆ ಮೊಬೈಲ್ ಆಪ್ ನಲ್ಲಿರುವಂತೆಯೇ ರೂಪಿಸಲ್ಪಟ್ಟಿದ್ದು, ಕೆಲವು ಮಾಹಿತಿಗಳು ಪೂರ್ವಭರ್ತಿಯಾಗಿರಬಹುದು. ಸಾರ್ವಜನಿಕರಿಗೆ ಸಹಾಯವಾಗುವಂತೆ ಪದೇ ಪದೇ ಕೇಳುವ ಪ್ರಶ್ನೆಗಳು ಮತ್ತು ಮಾರ್ಗಸೂಚಿಗಳನ್ನು ಒದಗಿಸಲಾಗಿದೆ.

ಕುಟುಂಬವು ತಮ್ಮ ಮಾಹಿತಿಯನ್ನು ಯಶಸ್ವಿಯಾಗಿ ಸಲ್ಲಿಸಿದ ನಂತರ, ಒಂದು ವಿಶಿಷ್ಟ ಸ್ವಯಂ ಗಣತಿ ಐಡಿ ನೀಡಲಾಗುತ್ತದೆ. ಈ ಐಡಿಯನ್ನು ಎಸ್.ಎಂ.ಎಸ್ ಮತ್ತು ಇಮೇಲ್ ಮೂಲಕ ಕಳುಹಿಸಲಾಗುವುದು. ಮನೆಗೆ ಭೇಟಿ ನೀಡುವ ಗಣತಿದಾರರಿಗೆ ಈ ಐಡಿಯನ್ನು ಹಂಚಿಕೊಳ್ಳಬೇಕು. ಮಾಹಿತಿ ಭರ್ತಿ ಮಾಡುವಾಗ ಸರಿಯಾದ ಮತ್ತು ಸಂಪೂರ್ಣ ಮಾಹಿತಿಯನ್ನು ನೀಡುವುದು ಅತ್ಯಂತ ಮಹತ್ವದ್ದಾಗಿದೆ. ಸಾರ್ವಜನಿಕರು ಈ ಸೌಲಭ್ಯವನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ಜಿಲ್ಲಾಧಿಕಾರಿ ಹಾಗೂ ಪ್ರಧಾನ ಜನಗಣತಿ ಅಧಿಕಾರಿ ಜಿ.ಎಂ ಗಂಗಾಧರಸ್ವಾಮಿ ತಿಳಿಸಿದ್ದಾರೆ.

ದೊಡ್ಡಪೇಟೆಯಲ್ಲಿ ಶ್ರೀನಿವಾಸ್ ದಾಸಕರಿಯಪ್ಪ ಪ್ರಚಾರ

ದಾವಣಗೆರೆ: ದಕ್ಷಿಣ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ್ ದಾಸಕರಿಯಪ್ಪ ಮಂಗಳವಾರ 10ನೇ ವಾರ್ಡ್ ನ ದೊಡ್ಡಪೇಟೆಯ ಗಣಪತಿ ದೇವಸ್ಥಾನದಿಂದ ಅದ್ದೂರಿ ಪ್ರಚಾರ ಆರಂಭಿಸಿದರು. ನಾನು ಬಡತನದ ಹಿನ್ನೆಲೆಯಿಂದ ಬಂದಿದ್ದು, ಜನರ ಸಂಕಷ್ಟಗಳು ನನಗೆ ಚೆನ್ನಾಗಿ ಗೊತ್ತಿವೆ. ನಿಮ್ಮ ನಡುವೆ ಬೆಳೆದಿರುವ ನನಗೆ ಸಮಾಜಸೇವೆ ಮಾಡಲು ಒಂದು ಅವಕಾಶ ನೀಡಬೇಕು. ಬರುವ ಏಪ್ರಿಲ್ 9ರಂದು ನಡೆಯಲಿರುವ ಉಪಚುನಾವಣೆಯಲ್ಲಿ ನನಗೆ ಮತ ನೀಡಿ. ನನ್ನನ್ನು ಶಾಸಕನಾಗಿ ಆಯ್ಕೆ ಮಾಡಿದರೆ ಕ್ಷೇತ್ರದ ಅಭಿವೃದ್ಧಿಗಾಗಿ ಹಗಲಿರುಳು ಶ್ರಮಿಸುತ್ತೇನೆ ಎಂದು ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ ಮನವಿ ಮಾಡಿದರು. ಮಾಜಿ ಕೇಂದ್ರ, ಸಚಿವ ಎ.ನಾರಾಯಣಸ್ವಾಮಿ, ಬಿಜೆಪಿ ಮುಖಂಡರಾದ ಜಿ.ಎಸ್.ಅನಿತ್ ಕುಮಾರ್, ಯಶವಂತರಾವ್ ಜಾಧವ್, ರಾಜನಹಳ್ಳಿ ಶಿವಕುಮಾರ್, ಬಿ.ಜಿ.ಅಜಯ್ ಕುಮಾರ್, ದೇವರಮನೆ ಶಿವಕುಮಾರ್, ವೀರೇಶ ಹನಗವಾಡಿ, ಸಂತೋಷ್, ರಾಕೇಶ್ ಜಾಧವ್ ಸೇರಿದಂತೆ ಜೆಡಿಎಸ್ ಹಾಗೂ ಬಿಜೆಪಿ ಕಾರ್ಯಕರ್ತರು, ಅಭಿಮಾನಿಗಳು ಪ್ರಚಾರದಲ್ಲಿ ಪಾಲ್ಗೊಂಡಿದ್ದರು.

ಇಂದು ಪ್ರಚಾರಕ್ಕೆ ಬಿಎಸ್‌ವೈ

ದಾವಣಗೆರೆ: ದಕ್ಷಿಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ್ ಟಿ.ದಾಸಕರಿಯಪ್ಪ ಏಪ್ರಿಲ್ 1ರಂದು ಚುನಾವಣಾ ಪ್ರಚಾರ ಕೈಗೊಳ್ಳಲಿದ್ದಾರೆ. ಅಭ್ಯರ್ಥಿಯ ಜೊತೆ ಮತಯಾಚಿಸಲು ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್ .ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಮಾಜಿ ಸಚಿವ ಸಿ.ಸಿ.ಪಾಟೀಲ್ ಆಗಮಿಸಲಿದ್ದಾರೆ. ಬೆಳಗ್ಗೆ 9 ಗಂಟೆಗೆ 11ನೇ ವಾರ್ಡ್ ಬಸವರಾಜಪೇಟೆಯ ಬಸವೇಶ್ವರ ದೇವಸ್ಥಾನ ಹಾಗೂ ಸಂಜೆ 4 ಗಂಟೆಗೆ 18ನೇ ವಾರ್ಡ್ ಕಾಯಿಪೇಟೆಯ ಬಸವೇಶ್ವರ ದೇವಸ್ಥಾನದಿಂದ ಪ್ರಚಾರ ಪ್ರಾರಂಭವಾಗಲಿದೆ.

ಸಂಸದೆ ಪ್ರಭಾ ಮನೆ ಮನೆಗೆ ತೆರಳಿ ಪ್ರಚಾರ

ದಾವಣಗೆರೆ: ದಕ್ಷಿಣ ವಿಧಾನಸಭಾ ಕ್ಷೇತ್ರದ ಬಸಾಪುರ, ಬಸವರಾಜಪೇಟೆ ಸೇರಿದಂತೆ ಸುತ್ತಮುತ್ತ ಗ್ರಾಮದಲ್ಲಿ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಮನೆ-ಮನೆಗೆ ತೆರಳಿ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಪರವಾಗಿ ಮತಯಾಚಿಸಿದರು. ಇದೇ ವೇಳೆ ಮಾತನಾಡಿದ ಅವರು, ಮಹಿಳೆಯರು, ಹಿರಿಯ ನಾಗರೀಕರು ಮತ್ತು ಯುವಕರನ್ನು ಗಮನದಲ್ಲಿಟ್ಟುಕೊಂಡು ನಮ್ಮ ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದೆ. ಈ ಮೂಲಕ ಸರ್ವರಿಗೂ ನ್ಯಾಯ ಒದಗಿಸುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ರಸ್ತೆ, ಪಾದಚಾರಿ ಮಾರ್ಗ ಮತ್ತು ಉದ್ಯಾನವನಗಳ ಅಭಿವೃದ್ಧಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ ಎಂದು ತಿಳಿಸಿದರು. ಈ ವೇಳೆ ಮಹಿಳೆಯರು, ಮುಖಂಡರು, ಕಾರ್ಯಕರ್ತರು ಹಾಜರಿದ್ದರು.



ದಾವಣಗೆರೆ ನಗರದ ಜಿಲ್ಲಾ ಗೃಹರಕ್ಷಕ ದಳ ಕಚೇರಿಯಲ್ಲಿ ವಿಶ್ವ ಮಹಿಳಾ ದಿನ ಆಚರಿಸಲಾಯಿತು. ಜಿಲ್ಲಾ ಕಮಾಂಡೆಂಟ್ ಡಾ.ಸುಜಿತ್ ಕುಮಾರ್, ಸ್ಟಾಫ್ ಆಫೀಸರ್ ಕೆ.ಸರಸ್ವತಿ, ನಳಿನಾ ಸುಜಿತ್ ಕುಮಾರ್, ತಾಲೂಕು ಕಸಾಪ ಅಧ್ಯಕ್ಷೆ ಸುಮತಿ ಜಯಪ್ಪ, ಮಧು ಅಮರೇಶ್, ಮಂಜುಳಾ, ಗಾಯತ್ರಿ ಮಂಜುನಾಥ್, ದೀಪಾ, ನೇತ್ರಾ, ಹಾಲೇಶ್ ಉಪಸ್ಥಿತರಿದ್ದರು. ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರನ್ನು ಗೌರವಿಸಲಾಯಿತು. ಪ್ರಿಯಾ ಯೋಗ ಪ್ರದರ್ಶನ ನಡೆಸಿಕೊಟ್ಟರು.



ದಾವಣಗೆರೆಯ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ್ ದಾಸ ಕರಿಯಪ್ಪ ಪರವಾಗಿ ಕಾರ್ಕಳದ ಶಾಸಕ ಸುನೀಲ್ ಕುಮಾರ್ ಪಕ್ಷದ ಮುಖಂಡರ ಜೊತೆ ಸಭೆ ನಡೆಸಿದರು. ಇದೇ ವೇಳೆ ರಾಮಜ್ಯೋತಿ ರಥಯಾತ್ರೆಯಲ್ಲಿ ಸಾವನಪ್ಪಿದ 8 ಜನರ ಕುಟುಂಬಸ್ಥರನ್ನು ಗೌರವಿಸಲಾಯಿತು. ಈ ಸಂದರ್ಭದಲ್ಲಿ ಭಾರತಿ ಶೆಟ್ಟಿ, ಯಶವಂತರಾವ್ ಜಾಧವ್, ರಾಜನಹಳ್ಳಿ ಶಿವಕುಮಾರ್, ಜಿ.ಎಸ್. ಅನಿತ್ ಕುಮಾರ್, ಜಿ.ಬಿ.ವಿನಯ್ ಕುಮಾರ್ ಹಾಜರಿದ್ದರು.



ದಾವಣಗೆರೆ ನಗರದ ಹೊರವಲಯದಲ್ಲಿರುವ ಆವರಗೆರೆ ಸರ್ಕಾರಿ ಪ್ರಾಥಮಿಕ ಶಾಲೆಯ ಮೈದಾನದಲ್ಲಿ ಇತ್ತೀಚೆಗೆ ಹುತಾತ್ಮರ ಶ್ರದ್ಧಾಂಜಲಿ ಕಾರ್ಯಕ್ರಮದ ಅಂಗವಾಗಿ ಏರ್ಪಡಿಸಿದ್ದ ಕ್ರಿಕೆಟ್ ಪಂದ್ಯಾವಳಿಗೆ ಸಿಪಿಐ ಜಿಲ್ಲಾ ಕಾರ್ಯದರ್ಶಿ ಆವರಗೆರೆ ಚಂದ್ರು, ಹೆಚ್.ಜಿ.ಉಮೇಶ್, ಜಿ.ಯಲ್ಲಪ್ಪ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಕೆರನಹಳ್ಳಿ ರಾಜು, ಕೆ.ಬಾನಪ್ಪ, ಎ.ತಿಪ್ಪೇಶ್, ಹೆಚ್.ಎಸ್. ಚಂದ್ರು, ಈ.ಎಸ್.ಉಮೇಶ್, ಎಸ್.ಜಯಪ್ಪ, ಮೈಸೂರು ಹನುಮಂತು, ಮರಿಯಪ್ಪ, ಮೌನೇಶ್, ರಂಗಸ್ವಾಮಿ, ದಾದಾಪೀರ್, ಮಹಾಂತೇಶ್, ಸಲೀಂ, ನವೀನ್, ಪ್ರವೀಣ್, ಮದನ್ ಇದ್ದರು.

ಮುಂದಿನ ಪೀಳಿಗೆಗಾಗಿ ಕೆರೆಗಳನ್ನು ಸಂರಕ್ಷಿಸಬೇಕು | ಶಾಸಕಿ ಎಂ.ಪಿ. ಲತಾ ಸೂಚನೆ

ಕೆರೆಗೆ ತ್ಯಾಜ್ಯ ಬಿಸಾಡದಿರಿ





ಹರಪನಹಳ್ಳಿ: ಕೆರೆಗಳು ಭೂಮಿ ಮೇಲಿನ ಅಕ್ಷಯ ಪಾತ್ರೆಗಳು ಇದ್ದಂತೆ. ಹೀಗಾಗಿ ಮುಂದಿನ ಪೀಳಿಗೆಗಾಗಿ ಅವುಗಳ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿ ಎಂದು ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ್ ಹೇಳಿದರು.

ನಗರಸಭೆ ಸಿಬ್ಬಂದಿ ಜೊತೆ ನಗರದ ಅಯ್ಯನಕೆರೆ ಸ್ವಚ್ಛತೆ ಕಾರ್ಯ ವೀಕ್ಷಿಸಿ ಮಾತನಾಡಿದ ಅವರು. ಮನೆಯ ತ್ಯಾಜ್ಯವನ್ನೆಲ್ಲಾ ಕೆರೆಗೆ ಬಿಸಾಡುವ ವಿವೇಕವಿಲ್ಲದ ಕೆಲಸ ಮಾಡದಿರಿ. ಮುಂದೆ ನಾವೆಲ್ಲರೂ ಇಂತಹ ಕೆರೆಗಳನ್ನು ನಮ್ಮ ತಪ್ಪಿನಿಂದ ಹಾಳು ಮಾಡಿದರೆ ಮತ್ತೊಮ್ಮೆ ಸಿಗಲಾರದು. ಕೆರೆ ನಮ್ಮಗಳ ಜೀವನಾಡಿ, ಜನ ಜಾನುವಾರುಗಳ ದಾಹ ತೀರಿಸುವ, ಅಂತರ್‌ಜಲ ಹೆಚ್ಚಿಸುವ ಜಲಸಂಗ್ರಹವಾಗಿರಲಿ, ಕೆರೆ ಕಟ್ಟೆಗಳು ಹಲವಾರು ಪ್ರಾಣಿಗಳ ಪಕ್ಷಿಗಳ ಜೀವರಕ್ಷಕ ತಾಣವಾಗಬೇಕೇ ವಿನಹಃ ಪ್ಲಾಸ್ಟಿಕ್ ತುಂಬಿದ ಕಸದ ಬುಟ್ಟಿಯಾಗದಿರಲಿ ಎಂದು ಬೇಸರ ವ್ಯಕ್ತಪಡಿಸಿದರು.

ನಗರದ ತ್ಯಾಜ್ಯ ನೀರನ್ನು ಕೆರೆಗೆ ಸೇರದಂತೆ ಪೈಪ್ ಲೈನ್ ಮೂಲಕ ಒಳಚರಂಡಿಗೆ ಪಾಂಡ್‌ಗಳಿಗೆ ಸೇರಿಸುವ ಕಾರ್ಯ ಮಾಡಲಾಗುವುದು. ಇದು ಕೇವಲ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಮಾಡಬೇಕಾದ ಕೆಲಸವಲ್ಲ, ಇದು ಪ್ರತಿಯೊಬ್ಬ ನಾಗರೀಕರ ಗುರುತರ ಜವಾಬ್ದಾರಿಯಾಗಿದೆ ಎಂದರು.

ಪೌರಾಯುಕ್ತೆ ರೇಣುಕಾ ಎಸ್ ದೇಸಾಯಿ ಮಾತನಾಡಿ. ಇಡೀ ನಗರದ ತ್ಯಾಜ್ಯವನ್ನೆಲ್ಲಾ ಅಯ್ಯನಕೆರೆಗೆ ಹರಿಬಿಡುವುದು ಸರ್ವೆ ಸಾಮಾನ್ಯವಾಗಿದೆ. ಪರಿಸರ ವಿರೋಧಿ ಪ್ಲಾಸ್ಟಿಕ್ ಭೂಮಿ ಮತ್ತು ನೀರಿನ ಸತ್ವವನ್ನೇ ಹಾಳು ಮಾಡುತ್ತದೆ ಎಂಬ ಅರಿವಿದ್ದರೂ ಕೆರೆಗೆ ಸುರಿಯುವುದು ನಿರಂತರವಾಗಿದೆ. ತ್ಯಾಜ್ಯ ಮತ್ತು ಪ್ಲಾಸ್ಟೀಕ್ ತುಂಬಿ ಹಾಳಾಗಿದ್ದ ಅಯ್ಯನ ಕೆರೆಯನ್ನು ಸಂರಕ್ಷಿಸಲು ಪ್ರಯತ್ನ ಮುಂದುವರಿಸಿದ್ದೇವೆ. ಮುಂದಿನ ದಿನಗಳಲ್ಲಿ ಈ ಕೆರೆಯನ್ನು ಸುರಕ್ಷಿತವಾಗಿರಿಸುವ ನಿಟ್ಟಿನಲ್ಲಿ ಕೆಲಸ ಮಾಡಲು ಸಿಬ್ಬಂದಿಗಳೊಂದಿಗೆ ಸ್ವಚ್ಛತೆಗೆ ನಿಂತಿದ್ದೇವೆ ಎಂದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ.ಅಂಜೀನಪ್ಪ, ಲಾಠಿದಾದಾಪೀರ್, ಇಸ್ಮಾಯಿಲ್ ಎಲಿಗಾರ್, ಮತ್ತೂರು ಬಸವರಾಜ್ ಹಾಗೂ ಇತರರು ಇದ್ದರು. ಸ್ವಚ್ಚತಾ ಕಾರ್ಯದಲ್ಲಿ ಹಿರಿಯ ಆರೋಗ್ಯ ನಿರೀಕ್ಷಕ ಮಂಜುನಾಥ್, ಇಂಜೀನೀಯರ್ ಅಮರೇಶ್ ಪವಾರ್, ಉಚ್ಚಂಗೆಪ್ಪ, ಹಾಗೂ ಪೌರಕಾರ್ಮಿಕರು ಹಾಜರಿದ್ದರು.

- ಜನ ಜಾನುವಾರುಗಳ ದಾಹ ತೀರಿಸುವ, ಅಂತರ್‌ಜಲ ಹೆಚ್ಚಿಸುವ ಜಲಸಂಗ್ರಹವಾಗಬೇಕು
- ಕೆರೆ ಕಟ್ಟೆಗಳು ಜೀವರಕ್ಷಕ ತಾಣವಾಗಬೇಕೇ ವಿನಹಃ ಪ್ಲಾಸ್ಟಿಕ್ ತುಂಬಿದ ಕಸದ ಬುಟ್ಟಿಯಾಗಬರದು
- ನಗರದ ತ್ಯಾಜ್ಯ ನೀರನ್ನು ಕೆರೆಗೆ ಸೇರದಂತೆ ಪೈಪ್ ಲೈನ್ ಮೂಲಕ ಒಳಚರಂಡಿಗೆ ಪಾಂಡ್‌ಗಳಿಗೆ ಸೇರಿಸುವ ಕಾರ್ಯ ಮಾಡಲಾಗುವುದು

ಶೈಕ್ಷಣಿಕ, ಸಂಶೋಧನಾ ಸಹಕಾರಕ್ಕೆ ಹೊಂದಾಣಿಕೆ

ಒಪ್ಪಂದ ಪತ್ರಕ್ಕೆ ಸಹಿ



ದಾವಣಗೆರೆ: ನಗರದ ಜಿ.ಎಂ ವಿಶ್ವವಿದ್ಯಾಲಯವು ಧಾರವಾಡದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಜೊತೆಗೆ ಮಹತ್ವದ ಶೈಕ್ಷಣಿಕ ಹಾಗೂ ಸಂಶೋಧನಾ ಸಹಕಾರಕ್ಕಾಗಿ ಪರಸ್ಪರ ಒಪ್ಪಂದ ಪತ್ರಕ್ಕೆ ಸಹಿ ಮಾಡಿದೆ.

ಸದರಿ ಒಪ್ಪಂದಕ್ಕೆ ಸಹಿ ಮಾಡುವ ಕಾರ್ಯಕ್ರಮದಲ್ಲಿ ಧಾರವಾಡ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಪಿ.ಎಲ್.ಪಾಟೀಲ್, ಸಂಶೋಧನಾ ನಿರ್ದೇಶಕ ಡಾ.ಪಿ.ವಿ.ಕೃಷ್ಣರಾಜ್, ಡಾ.ಜೆ.ಆರ್. ದಿವಾನ್, ಡಾ.ಎ.ಜಿ. ವಿಜಯಕುಮಾರ್ ಸೇರಿದಂತೆ ಹಿರಿಯ ಪ್ರಾಧ್ಯಾಪಕರು ಹಾಗೂ ಸಂಶೋಧನಾ ತಜ್ಞರು ಭಾಗವಹಿಸಿದ್ದರು.

ಜಿ.ಎಂ ವಿಶ್ವವಿದ್ಯಾಲಯದ ಪರವಾಗಿ ಉಪಕುಲಪತಿ ಡಾ.ಎಸ್. ಆರ್.ಶಂಕಪಾಲ್, ಸಹ ಉಪಕುಲಪತಿ ಡಾ.ಹೆಚ್.ಡಿ.ಮಹೇಶಪ್ಪ, ರಿಜಿಸ್ಟ್ರಾರ್ ಡಾ.ಸುನಿಲ್ ಕುಮಾರ್, ಸಂಶೋಧನಾ ಸಲಹೆಗಾರ ಡಾ.ಸಿ.ಎಸ್.ರಮೇಶ್, ಡಾ.ಕೆ.ಎನ್.ಭರತ್, ಡಾ.ಕೆ.ಸ್ವರೂಪ್, ಡಾ.ಕೆ.ಜೆ.ಕವಿತಾ, ಅಶೋಕ್ ಕುಮಾರ್, ಡಾ.ಕೆ.ಕೆ.ಪ್ರಕಾಶ್, ಡಾ.ರಾಜಶೇಖರ ಬಿ.ಸೋಮಸಾಗರ ಉಪಸ್ಥಿತರಿದ್ದರು.

ಈ ಒಪ್ಪಂದದ ಉದ್ದೇಶವು ಸಂಯುಕ್ತ ಸಂಶೋಧನೆ, ಶೈಕ್ಷಣಿಕ ವಿನಿಮಯ, ಸಂಯುಕ್ತ ಯೋಜನೆಗಳು, ವಿದ್ಯಾರ್ಥಿ ಮತ್ತು ಸಿಬ್ಬಂದಿ ಅಭಿವೃದ್ಧಿ ಕಾರ್ಯಕ್ರಮ ಹಾಗೂ ತಂತ್ರಜ್ಞಾನ ವರ್ಗಾವಣೆಯನ್ನು ಉತ್ತೇಜಿಸುವುದಾಗಿದೆ. ಈ ಸಹಕಾರದ ಪ್ರಮುಖ ಕೇಂದ್ರೀಯ ವಿಷಯಗಳಲ್ಲಿ ಕೃತಕ ಬುದ್ಧಿಮತ್ತೆ, ಇಂಟರ್ನೆಟ್ ಆಫ್ ಥಿಂಗ್ಸ್, ರೋಬೋಟಿಕ್ಸ್, ಜೈವಿಕ ತಂತ್ರಜ್ಞಾನ ಮತ್ತು ಸ್ಮಾರ್ಟ್ ಯಾಂತ್ರೀಕರಣ ವ್ಯವಸ್ಥೆಗಳನ್ನು ಕೃಷಿಯಲ್ಲಿ ಅಳವಡಿಸುವುದು ಸೇರಿವೆ.

ಇವು ನಿಖರ ಕೃಷಿ, ಸ್ವಯಂಚಾಲಿತ ಕೃಷಿ ಪದ್ಧತಿ, ಬೆಳೆ ಮತ್ತು ಮಣ್ಣಿನ ಆರೋಗ್ಯದ ತಕ್ಷಣದ ನಿಗಾ ಹಾಗೂ ಡೇಟಾ ಆಧಾರಿತ ನಿರ್ಧಾರಗಳನ್ನು ಸಾಧ್ಯವಾಗಿಸುವ ಮೂಲಕ ಕೃಷಿ ಉತ್ಪಾದಕತೆ ಮತ್ತು ಸ್ಥಿರತೆಯನ್ನು ಹೆಚ್ಚಿಸಲು ಸಹಕಾರಿ ಆಗಲಿವೆ. ಇಂಜಿನಿಯರಿಂಗ್, ಜೀವಶಾಸ್ತ್ರ ಮತ್ತು ಕೃಷಿ ಸಂಶೋಧನೆಯನ್ನು ಒಗ್ಗೂಡಿಸುವ ಮೂಲಕ ರೈತರು, ಕೃಷಿ ಉದ್ಯಮಗಳು ಮತ್ತು ಗ್ರಾಮೀಣ ಸಮುದಾಯಗಳಿಗೆ ಪ್ರಯೋಜನ ಕಾರಿಯಾದ ವಿಸ್ತರಣೆಯೋಗ್ಯ ಪರಿಹಾರಗಳನ್ನು ರೂಪಿಸುವುದು ಈ ಸಹಕಾರದ ಮುಖ್ಯ ಗುರಿಯಾಗಿದೆ.



ತ್ಯಾವಣಿಗೆ ಸಮೀಪದ ಅರೇಹಳ್ಳಿ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ರಥೋತ್ಸವ ಸೋಮವಾರ ವೈಭವದಿಂದ ಜರುಗಿತು. ಭಾನುವಾರದಿಂದಲೇ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ಹೂವು ಹಾಗೂ ಬಣ್ಣಬಣ್ಣದ ಬಾವುಟಗಳಿಂದ ರಥವನ್ನು ಅಲಂಕರಿಸಲಾಗಿತ್ತು. ರಥ ಮುಂದಕ್ಕೆ ಸಾಗುತ್ತಿದ್ದಂತೆ ಸಾವಿರಾರು ಜನರು ಜನರಿಂದ ಹರ್ಷೋದ್ಗಾರ ಮುಗಿಲು ಮುಟ್ಟಿತ್ತು. ಭಕ್ತರು ರಥಕ್ಕೆ ಬಾಳೆಹಣ್ಣು, ಕಾಳು ಮೆಣಸು ತೂರಿ ಭಕ್ತಿ ಸಮರ್ಪಿಸಿದರು. ಮಂಗಳವಾರ ಮುಳ್ಳಿನ ಗದ್ದುಗೆ ಕಾರ್ಯಕ್ರಮ ನಡೆಯಿತು. ಸುತ್ತಮುತ್ತಲ ಗ್ರಾಮಗಳ ಭಕ್ತಾರಿಗಳು ರಥೋತ್ಸವದಲ್ಲಿ ಭಾಗವಹಿಸಿ ಆಂಜನೇಯಸ್ವಾಮಿಯ ಕೃಪೆಗೆ ಪಾತ್ರರಾದರು.

ಅಸಮಾಧಾನ ಶಮನಕ್ಕೆ ನಡೆಸಿದ ಸಂಧಾನ ವಿಫಲ

ದಾವಣಗೆರೆ: ಉಪ ಚುನಾವಣೆಯ ಟಿಕೆಟ್ ವಿಚಾರದಲ್ಲಿ ಅಸಮಾಧಾನಗೊಂಡಿರುವ ಮುಸ್ಲಿಂ ಸಮುದಾಯದ ಪಕ್ಷೇತರ ಅಭ್ಯರ್ಥಿಗಳ ಅಸಮಾಧಾನ ಶಮನಕ್ಕೆ ಮಂಗಳವಾರ ಕಾಂಗ್ರೆಸ್ ನಾಯಕರು ನಡೆಸಿದ ಸಂಧಾನ ವಿಫಲವಾಗಿದೆ.

ಕೇಂದ್ರದ ಮಾಜಿ ಸಚಿವ ಸಿ.ಎಂ.ಇಬ್ರಾಹಿಂ ಬೆಂಬಲಿತ ಅಭ್ಯರ್ಥಿ, ವಕೀಲ ಖಾದರ್ ಆದಿಲ್ ಬಾಷಾ ಮನವೊಲಿಕೆಗೆ ಸೋಮವಾರ ರಾತ್ರಿ ಭದ್ರಾವತಿ ಶಾಸಕ ಸಂಗಮೇಶ ಭೇಟಿ ನೀಡಿ, ಸಂಧಾನಕ್ಕೆ ಮಾಡಿದ ಪ್ರಯತ್ನ ವಿಫಲವಾಗಿತ್ತು. ಈ ಹಿನ್ನೆಲೆಯಲ್ಲಿ ಮಂಗಳವಾರ ಕಾಂಗ್ರೆಸ್ ಯುವ ಮುಖಂಡ ಮಹಮ್ಮದ್ ನಲಪಾಡ್ ಪಕ್ಷೇತರ ಅಭ್ಯರ್ಥಿ ಖಾದರ್ ಆದಿಲ್ ಬಾಷಾ ಮನೆಗೆ ಭೇಟಿ ನೀಡಿ, ಸುಮಾರು ಹೊತ್ತು ಚರ್ಚಿಸಿದರು. ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಗೆಲುವಿನ ಮಹತ್ವದ ಬಗ್ಗೆ ಮನವರಿಕೆ ಮಾಡಿಕೊಟ್ಟು, ಕಾಂಗ್ರೆಸ್ ಅಭ್ಯರ್ಥಿಗೆ ಬೆಂಬಲಿಸುವಂತೆ ಮನವೊಲಿಸಲು ಪ್ರಯತ್ನಿಸಿದರು. ಆದರೆ ಖಾದರ್ ಆದಿಲ್ ಬಾಷಾ ಸ್ಪರ್ಧೆಯಿಂದ ಹಿಂದೆ ಸರಿಯಲು ನಿರಾಕರಿಸಿದ್ದರಿಂದ ಮಹಮ್ಮದ್ ನಲಪಾಡ್ ಬಂದ ದಾರಿಗೆ ಸುಂಕ ಇಲ್ಲ ಎಂಬಂತೆ ವಾಪಾಸ್ಸಾಗಬೇಕಾಯಿತು. ಇದೇ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಮೊಹಮ್ಮದ್ ನಲಪಾಡ್, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನರ ವಿರುದ್ಧ ಅವನ್ಯಾರೋ ಕಾರ್ಪೋರೇಟರ್ ಮಾತನಾಡಿದ್ದಾನೆ. ಸಚಿವ ಜಮೀರ್ ಅಹಮ್ಮದ್ ಆಪ್ತ ಅಂತಾ ಹೇಳಿಕೊಂಡಿದ್ದಾನೆ. ಜಮೀರ್ ಅಹಮ್ಮದ್ ರೇ ನನ್ನನ್ನು ಇಲ್ಲಿಗೆ ಕಳಿಸಿದ್ದಾರೆ. ನಾವೆಲ್ಲರೂ ಸೇರಿಯೇ ಪ್ರಚಾರ ಮಾಡುತ್ತೇವೆ ಎಂದರು. ಪಕ್ಷೇತರ ಅಭ್ಯರ್ಥಿ ಖಾದರ್ ಆದಿಲ್ ಬಾಷಾ ಸುದ್ದಿಗಾರರೊಂದಿಗೆ ಮಾತನಾಡಿ, ಎಂತಹದ್ದೇ ಪರಿಸ್ಥಿತಿಯಲ್ಲೂ ನಾನು ಚುನಾವಣಾ ಕಣದಿಂದ ಹಿಂದೆ ಸರಿಯುವುದಿಲ್ಲ ಎಂದು ತಿಳಿಸಿದರು.



ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ಹಿನ್ನೆಲೆಯಲ್ಲಿ ಮತದಾನದ ಪ್ರಮಾಣವನ್ನು ಹೆಚ್ಚಿಸಲು ಮತ್ತು ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಜಿಲ್ಲಾಡಳಿತ ಹಾಗೂ ಸ್ವೀಪ್ ಸಮಿತಿಯ ವತಿಯಿಂದ ಜಾಗೃತಿ ಮೂಡಿಸಲಾಯಿತು.

ಮತದಾನದ ಪ್ರಮಾಣ ಹೆಚ್ಚಿಸಲು ಜಾಗೃತಿ ಕಾರ್ಯಕ್ರಮ

ದಾವಣಗೆರೆ: ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ಹಿನ್ನೆಲೆಯಲ್ಲಿ ಮತದಾನದ ಪ್ರಮಾಣವನ್ನು ಹೆಚ್ಚಿಸಲು ಮತ್ತು ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಜಿಲ್ಲಾಡಳಿತ ಹಾಗೂ ಸ್ವೀಪ್ ಸಮಿತಿಯ ವತಿಯಿಂದ ಬೃಹತ್ ಮತದಾನ ಜಾಗೃತಿ ಆಯೋಜಿಸಲಾಗಿದೆ ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಾಹಕಾಧಿಕಾರಿ ಮತ್ತು ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷ ಗಿತ್ತೆ ಮಾಧವ ವಿಠಲರಾವ್ ತಿಳಿಸಿದರು.



ನಗರದ ದೇವರಾಜ ಅರಸು ಬಡಾವಣೆಯಲ್ಲಿ ಮಂಗಳವಾರ ಜಿಲ್ಲಾಡಳಿತ ಹಾಗೂ ಸ್ವೀಪ್ ಸಮಿತಿಯ ವತಿಯಿಂದ ಮತದಾನ ಜಾಗೃತಿಗೆ ಹಮ್ಮಿಕೊಂಡಿದ್ದ ಬೃಹತ್ ವಾಕಥಾನ್ ಉದ್ಘಾಟಿಸಿ ಮಾತನಾಡಿದ ಅವರು, ಬರುವ ಏಪ್ರಿಲ್ 9ರಂದು ನಡೆಯಲಿರುವ ಉಪಚುನಾವಣೆಯಲ್ಲಿ ಪ್ರತಿಯೊಬ್ಬ ಮತದಾರರು ತಪ್ಪದೇ ಮತಗಟ್ಟೆಗೆ ಬಂದು ತಮ್ಮ ಹಕ್ಕನ್ನು ಚಲಾಯಿಸಬೇಕು. ದಾವಣಗೆರೆ ಕ್ಷೇತ್ರದಲ್ಲಿ ಮತದಾನದ ಶೇಕಡಾವಾರು ಪ್ರಮಾಣವನ್ನು ಹೆಚ್ಚಿಸುವುದು ನಮ್ಮೆಲ್ಲರ ಗುರಿಯಾಗಲಿ ಎಂದು ಸಲಹೆ ನೀಡಿದರು.

ಇದೇ ವೇಳೆ ದೇವರಾಜ ಅರಸು ಕ್ರೀಡಾಂಗಣದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಸಾರ್ವಜನಿಕರಿಗೆ ಮತದಾನದ ಮಹತ್ವವನ್ನು ಸಾರುವ ಬೀದಿನಾಟಕ ಪ್ರದರ್ಶಿಸಿದರು. ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಮಮತಾ ಹೊಸಗೌಡರ್, ಸಿಪಿಓ ಮಲ್ಲನಾಯ್ಕ ಇದ್ದರು.

ಬೇಡಿಕೆಗಳ ಈಡೇರಿಕೆಗೆ ಆಗ್ರಹ | ಎಐಯುಟಿಯುಸಿ ನೇತೃತ್ವದಲ್ಲಿ ಪ್ರತಿಭಟನೆ

ಆಶಾ ಕಾರ್ಯಕರ್ತೆಯರ ಸೇವೆ ಯಥಾವತ್ ಮುಂದುವರಿಸಿ

ದಾವಣಗೆರೆ: ಆರೋಗ್ಯ ಇಲಾಖೆಯನ್ನು ತರ್ಕಬದ್ಧಗೊಳಿಸುವ ಕ್ರಮದಿಂದ ಆಶಾ ಕಾರ್ಯಕರ್ತೆಯರನ್ನು ಕೈಬಿಡುವ ಪ್ರಕ್ರಿಯೆ ನಿಲ್ಲಿಸಿ, ಆಶಾಗಳ ಸೇವೆಯನ್ನು ಯಥಾವತ್ ಮುಂದುವರೆಸಲು ಆಗ್ರಹಿಸಿ ಎಐಯುಟಿಯುಸಿ ಸಂಯೋಜಿತ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದಿಂದ ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.



ಇಲ್ಲಿನ ಜಿಲ್ಲಾ ಪಂಚಾಯತ್ ಕಚೇರಿ ಎದುರು ಜಮಾಯಿಸಿದ್ದ ಸಂಘಟನೆ ಮುಖಂಡರು, ಆಶಾ ಕಾರ್ಯಕರ್ತೆಯರು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಜಿಪಂ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಮುಖಾಂತರ ಸರ್ಕಾರಕ್ಕೆ ಮನವಿಪತ್ರ ಸಲ್ಲಿಸಿದರು.

ಇದೇ ವೇಳೆ ಸಂಘಟನೆಯ ಜಿಲ್ಲಾ ಗೌರವಾಧ್ಯಕ್ಷ ಮಂಜುನಾಥ ಕುಕ್ಕುವಾಡ ಮಾತನಾಡಿ, ಆರೋಗ್ಯ ಇಲಾಖೆ ತರ್ಕಬದ್ಧಗೊಳಿಸುವ ಹೆಸರಿನಲ್ಲಿ ಆಶಾ ಕಾರ್ಯಕರ್ತೆಯರನ್ನು ಕೈಬಿಡುವ ಆದೇಶ ಹೊರಡಿಸಿರುವುದು ಕೇಂದ್ರದ ಮಾರ್ಗಸೂಚಿಯ ಉಲ್ಲಂಘನೆಯಾಗಿದೆ. ದೇಶದ ಯಾವುದೇ ರಾಜ್ಯದಲ್ಲಿ ಇಲ್ಲದಿರುವ ಆರೋಗ್ಯ ಇಲಾಖೆ ತರ್ಕಬದ್ಧಗೊಳಿಸುವ ಈ ಹುನ್ನಾರವನ್ನು ಸರ್ಕಾರ ಕೈಬಿಡಬೇಕು ಎಂದು ಒತ್ತಾಯಿಸಿದರು.

ಕಳೆದ ವರ್ಷ ಆಶಾ ಸುಗಮಕಾರರನ್ನು ಕೈಬಿಟ್ಟಿದ್ದು, ಅನೇಕ ವರ್ಷಗಳಿಂದ ಸೇವೆ ಮಾಡಿದ ಆಶಾಗಳನ್ನು ಯಾವುದೇ ಪರಿಹಾರ ನೀಡದೆ ಬೀದಿಗೆ ತಳ್ಳಿದ್ದಾರೆ. ಇದೇ ರೀತಿ ರಾಜ್ಯದಲ್ಲಿ ಸುಮಾರು 7,000 ಆಶಾಗಳನ್ನು ಕೈಬಿಡಲಾಗಿದೆ. ದಾವಣಗೆರೆ ಜಿಲ್ಲೆಯಲ್ಲಿ ಕೂಡ ನೂರಾರು ಆಶಾಗಳನ್ನು ಕೈಬಿಡುವ ಪಟ್ಟಿ ಬಿಡುಗಡೆ ಮಾಡಿರುವುದು ಖಂಡನೀಯ ಎಂದರು.

ಸಂಘಟನೆ ಜಿಲ್ಲಾಧ್ಯಕ್ಷ ಕೆ.ಸೋಮಶೇಖರ್ ಯಾದಗಿರಿ, ಜಿಲ್ಲಾ ಕಾರ್ಯದರ್ಶಿ ಡಿ.ನಾಗಲಕ್ಷ್ಮೀ, ಮುಖಂಡರಾದ ಲಲಿತಮ್ಮ ನರಗನಹಳ್ಳಿ, ನಾಗವೇಣಿ, ಪರ್ವಿನ್ ಬಾನು, ಮಂಜುಳಾ ಶಿರಮಗೊಂಡನಹಳ್ಳಿ, ರೂಪ, ವಿಶಾಲಾಕ್ಷಿ, ಮಂಜಮ್ಮ, ಇಂದಿರಾ, ವೇದಾ, ರೂಪ ಕೊಕ್ಕನೂರು, ರೀತಾ, ಲೀಲಾ, ತಿಪ್ಪೇಸ್ವಾಮಿ ಇತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಹರ್ಷೋದ್ಗಾರದಿಂದ ರಥ ಎಳೆದ ಭಕ್ತರು | ಇಂದು ಓಕುಳಿ ಉತ್ಸವ

ಕೆಳಗೋಟೆಯಲ್ಲಿ ಬಸವೇಶ್ವರ ಸ್ವಾಮಿಯ ರಥೋತ್ಸವ

ಜಗಳೂರು: ತಾಲೂಕಿನ ಕೆಳಗೋಟೆ ಗ್ರಾಮದಲ್ಲಿ ಮಂಗಳವಾರ ಬೆಳಗ್ಗೆ ಬಸವೇಶ್ವರಸ್ವಾಮಿಯ ರಥೋತ್ಸವ ಸಡಗರ ಸಂಭ್ರಮದಿಂದ ನೆರವೇರಿತು.

ಪ್ರತಿ ಬಾರಿಯೂ ಯುಗಾದಿ ಹಬ್ಬದ ನಂತರ ವಸಂತ ಋತುವಿನಲ್ಲಿ ನಡೆಯುವ ಬಸವೇಶ್ವರಸ್ವಾಮಿಯ ರಥೋತ್ಸವಕ್ಕೆ ಸಂಬಂಧಿಕರು, ಬಂಧು, ಬಳಗ ಸೇರಿದಂತೆ ವಿವಿಧ ಗ್ರಾಮಗಳಿಂದ ಸಾವಿರಾರು ಜನರು ಆಗಮಿಸುತ್ತಾರೆ.

ಮುಂಜಾನೆಯಿಂದಲೆ ದೇಗುಲದಲ್ಲಿ ನಾನಾ ಪೂಜಾ ಕೈಂಕರ್ಯಗಳು ನೆರವೇರಿದವು. ಅಭಿಷೇಕ, ಜವಳ, ವಿವಿಧ ಹರಕೆಗಳ ಸೇವೆಯನ್ನು ಭಕ್ತರು ಸಲ್ಲಿಸಿದರು. ಬೆಳಗ್ಗೆ 9ಕ್ಕೆ ತೇರಿನ ಬೀದಿಬಳಿ ಭಕ್ತರ ದಂಡು ಸೇರಿತ್ತು. ಸ್ವಾಮಿಯ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಕೂರಿಸಿ, ಕುಂಭಗಳನ್ನು ಹೊತ್ತ ಮುತ್ತೈದೆಯರ ಸ್ವಾಗತ ಹಾಗೂ ಡೊಳ್ಳು, ಸಮಾಳ, ತಮಟೆ, ನಂದಿಕೋಲು ಇತರೆ ವಾದ್ಯಗಳ ನಡುವೆ ಮೆರವಣಿಗೆ ರಥದ ಬಳಿಗೆ ಕರೆ ತಂದು ರಥದಲ್ಲಿ ಕೂರಿಸಲಾಯಿತು.



ಬಳಿಕ ದೇವರ ಬಾವುಟ , ಹೂ ಹಾರಗಳ ಹರಾಜು ಪ್ರಕ್ರಿಯೆ ನಡೆಯಿತು. ಈ ವೇಳೆ ಕೆಂಚಪ್ಪರು ನರೇಶ 21 ಸಾವಿರ ರೂಪಾಯಿಗೆ ಪಟವನ್ನು ಪಡೆದುಕೊಂಡರು.

ತೇರಿನ ಬೀದಿಯಲ್ಲಿ ರಥೋತ್ಸವಕ್ಕೆ ಚಾಲನೆ ನೀಡಿದಾಕ್ಷಣ ನೆರದಿದ್ದ ಭಕ್ತರು ತೇರಿನ ಗಾಲಿಗೆ ತೆಂಗಿನ ಕಾಯಿ ಹೊಡೆದು, ಬಾಳೆ ಹಣ್ಣು ಎಸೆದು ಭಕ್ತಿ ಸಮರ್ಪಿಸಿದರು. ರಥವನ್ನು ಪಾದಗಟ್ಟೆಯವರೆಗೂ ಎಳೆದೊಯ್ದು ಬಳಿಕ ತೇರು ಬೀದಿಗೆ ಎಳೆದು ತಂದು ನಿಲ್ಲಿಸಲಾಯಿತು. ಏ.1ರಂದು ಓಕುಳಿಯೊಂದಿಗೆ ದೇವರನ್ನು ಗುಡಿದುಂಬಿಸುವ ಮೂಲಕ ರಥೋತ್ಸವಕ್ಕೆ ತೆರೆಕಾಣಲಿದೆ.

ರಥೋತ್ಸವಕ್ಕೂ ಮುನ್ನ ದಿನವಾದ ಸೋಮವಾರ ಗ್ರಾಮದ ಕಬ್ಬೂರು ಶಿಕ್ಷಕ ಕಲ್ಲೇಶಪ್ಪ ಮತ್ತು ಕುಟುಂಬಸ್ಥರು ರಥೋತ್ಸವ ಹಿನ್ನೆಲೆ ಅನ್ನದಾಸೋಹ ಏರ್ಪಡಿಸಿದ್ದರು. ವಕೀಲ ಡಿ.ವಿ ನಾಗಪ್ಪ ದೇವರಿಗೆ ಹೂವಿನ ಅಲಂಕಾರ ಮಾಡಿಸಿದ್ದರು. ದೇವಿ ಮೂರ್ತಪ್ಪ ಭಕ್ತರಿಗೆ ಮಜ್ಜಿಗೆ ವ್ಯವಸ್ಥೆ ಮಾಡಿದ್ದರು. ಮುಗ್ಗಿದರಾಗಿಹಳ್ಳಿ ನಾಗರಾಜ್ ರಥೋತ್ಸವಕ್ಕೆ ಅಲಂಕಾರದ ವ್ಯವಸ್ಥೆ ಮಾಡಿದ್ದರು.

ಕಿರುಸುದ್ದಿ

ಏ.1ರಿಂದ ಬೇವಿನಾಳಮ್ಮ ದೇವಿಯ ಜಾತ್ರಾ ಮಹೋತ್ಸವ

• **ಹೊಸದುರ್ಗ:** ತಾಲೂಕಿನ ಮಾಡದಕೆರೆ ಹೋಬಳಿಯ ವಿವಿ ಸಾಗರ ಹಿನ್ನೀರು ಬಳಿಯ ಬೇವಿನಹಳ್ಳಿ ಗ್ರಾಮದ ಬೆಟ್ಟದ ಮೇಲೆ ನೆಲೆಸಿರುವ ಶಕ್ತಿ ದೇವತೆ ಶ್ರೀ ಕರಿಯಮ್ಮ (ಬೇವಿನಾಳಮ್ಮ) ದೇವಿಯ ಜಾತ್ರಾ ಮಹೋತ್ಸವ ಏ.1ರ ಬುಧವಾರದಿಂದ ಏ.8ರ ಬುಧವಾರದವರೆಗೆ ನಡೆಯಲಿದೆ.

ಏ.1ರ ಬುಧವಾರದಂದು ಧ್ವಜಾ ರೋಹಣ, ಭೇರಿ ತಾಂಡನ, ಅಂಕುರಾರ್ಪಣೆ ಸೇವೆ, ಮದಲಿಂಗಿತ್ತಿ ಚಪ್ಪರದ ಸೇವೆ, ಮಧ್ಯಾಹ್ನ ಮಾಡದಕೆರೆ ಗ್ರಾಮದಲ್ಲಿ ಗೌಡರ ವಂಶಸ್ಥರು ಹಾಗೂ ಗ್ರಾಮಸ್ಥರಿಂದ ಮದಲಿಂಗಿತ್ತಿ ಶಾಸ್ತ್ರ ನಡೆಯಲಿದೆ. ಸಂಜೆ 4 ಗಂಟೆಗೆ ಉಯ್ಯಾಲೆ ಉತ್ಸವ ನಡೆಯಲಿದೆ. ಏ.3ರ ಶುಕ್ರವಾರದಂದು ನಡೆಮುಡಿ,



ಜಲದಿ ಗಂಗಸ್ನಾನ, ಮದಾಲ್ಸೆ ಉತ್ಸವ ನಡೆಯಲಿದೆ. ಏ.4ರ ಶನಿವಾರ ರಾತ್ರಿ ಹೂವಿನ ಉತ್ಸವ ಜರುಗಲಿದೆ. ಏ.5ರ ಭಾನುವಾರದಂದು ಸರಗಂಬಲಿ ಸೇವೆ, ಗದ್ದುಗೆ ಕಂಬಳಿ ಸೇವೆ, ಉಯ್ಯಾಲೆ ಉತ್ಸವ ನಡೆಯಲಿದೆ.

ಏ.6ರ ಸೋಮವಾರದಂದು ಶ್ರೀದೇವಿಯವರ ರಥೋತ್ಸವ ಜರುಗಲಿದೆ. ಏ.7ರ ಮಂಗಳವಾರದಂದು ಮಧ್ಯಾಹ್ನ ಸಿಡಿ ಉತ್ಸವ, ಹೂವಿನ ಉತ್ಸವ ನಡೆಯಲಿದ್ದು, ಏ.8ರ ಬುಧವಾರದಂದು ಬೆಳಗ್ಗೆ 10 ಗಂಟೆಗೆ ಓಕಳಿ ಸೇವೆ, ಸಂಜೆ 6 ಗಂಟೆಗೆ ಅಮ್ಮನವರು ಬೇವಿನಹಳ್ಳಿ ಗ್ರಾಮದಿಂದ ಲಕ್ಕಿಹಳ್ಳಿ ಗ್ರಾಮದ ಶ್ರೀ ದಾರಮಾದೇಶ್ವರ ಸ್ವಾಮಿಯ ಸನ್ನಿಧಿಗೆ ಬಿಜಂಗೈಯುವರು. ಅಮ್ಮನವರ ಈ ಧಾರ್ಮಿಕ ಕಾರ್ಯಗಳಿಗೆ ಭಕ್ತಾದಿಗಳು ತನು-ಮನ-ಧನ ಸಹಕಾರ ನೀಡಿ, ಯಶಸ್ವಿಗೊಳಿಸಬೇಕೆಂದು ಬೇವಿನಹಳ್ಳಿ ಶ್ರೀ ಕರಿಯಮ್ಮದೇವಿ ದೇವಸ್ಥಾನದ ಜೀರ್ಣೋದ್ಧಾರ ಅಭಿವೃದ್ಧಿ ಸೇವಾ ಟ್ರಸ್ಟ್ ತಿಳಿಸಿದೆ.

ಪೊಲೀಸ್ ಎಂ.ಷರೀಫ್‌ಗೆ ಮುಖ್ಯಮಂತ್ರಿ ಪದಕ

• **ಚಿತ್ರದುರ್ಗ:** ಮೂಲತಃ ಚಳ್ಳಕೆರೆ ತಾಲೂಕಿನ ಕಾಟಮದೇವರ ಕೋಟೆಯ ಷರೀಫ್ ಎಂ. ಮುಖ್ಯಮಂತ್ರಿಗಳ ಚಿನ್ನದ ಪದಕ ಗಳಿಸಿ ಪೊಲೀಸ್ ಇಲಾಖೆಗೆ ಕೀರ್ತಿ ತಂದಿದ್ದಾರೆ.

ಚಿತ್ರದುರ್ಗದ ಮಹಾರಾಣಿ ಸಂಯುಕ್ತ ಪದವಿ ಪೂರ್ವ



ಕಾಲೇಜಿನಲ್ಲಿ 2008-10ನೇ ಸಾಲಿನಲ್ಲಿ ಪಿ.ಯು.ಸಿ. ವ್ಯಾಸಂಗ ಮಾಡಿದ ಷರೀಫ್ ಎಂ. ಕಡುಬಡತನದಲ್ಲಿ ಬೆಳೆದವರು. ನಂತರ ಕೂಡ್ಲಿಗಿ ತಾಲ್ಲೂಕಿನ ಸುಲ್ತಾನಿಪುರದಲ್ಲಿರುವ ಸಹೋದರಿಯ ನೆರವು ಪಡೆದು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ತೇರ್ಗಡೆಯಾಗಿ 2014 ರಲ್ಲಿ ಕೆ.ಎಸ್.ಐ.ಎಸ್.ಎಫ್. ಪೊಲೀಸ್ ಕಾನ್‌ಸ್ಟೇಬಲ್ ಆಗಿ ಇಲಾಖೆಗೆ ಸೇರ್ಪಡೆಗೊಂಡರು.

ಬುನಾದಿ ತರಬೇತಿಯನ್ನು ಪೂರ್ಣಗೊಳಿಸಿದ ನಂತರ ಆಂತರಿಕ ವಿಭಾಗದ ತಾಂತ್ರಿಕ ವಿಭಾಗಕ್ಕೆ ನಿಯೋಜಿಸಲಾಯಿತು. ಬಳಿಕ 2017 ರಲ್ಲಿ ಸಿವಿಲ್ ಪೊಲೀಸ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಬೆಂಗಳೂರಿನಲ್ಲಿ ಕಾನ್‌ಸ್ಟೇಬಲ್ ಆಗಿ ಆಯ್ಕೆಗೊಂಡರು.

ತಾಂತ್ರಿಕತೆಯಲ್ಲಿ ನಿಪುಣನಾಗಿದ್ದ ಇವರಲ್ಲಿ ಅಪರಾಧ ಚಟುವಟಿಕೆಗಳಿಗೆ ಸಂಬಂಧಿಸಿದ ಕಾಲ್ ಡೀಟೇಲ್ ರೆಕಾರ್ಡ್‌ಗಳ ವಿಶ್ಲೇಷಣೆಯಲ್ಲಿ ಅಪಾರ ಜ್ಞಾನ ಹೊಂದಿರುವುದನ್ನು ಗುರುತಿಸಿ ಇಲಾಖೆಗೆ ಸವಾಲಾಗಿರುವ ಪ್ರಕರಣಗಳ ಪತ್ತೆ ಜವಾಬ್ದಾರಿಯನ್ನು ವಹಿಸಲಾಯಿತು.

2017ರಿಂದ ಇಲ್ಲಿಯವರೆಗೂ ನಡೆದ ಕೊಲೆ, ಮಾರಣಾಂತಿಕ ಹಲ್ಲೆ, ದ್ವಿಚಕ್ರ ವಾಹನ, ಮನೆಗಳ್ಳತನ, ರಾಬರಿ ಅಡಿಯಲ್ಲಿ ದಾಖಲಾಗಿರುವ ಪ್ರಕರಣಗಳನ್ನು ಸೀಮಿತ ಅವಧಿಯಲ್ಲಿ ಮಾಹಿತಿಗಳನ್ನು ಕಲೆ ಹಾಕಿ ಆರೋಪಿಗಳನ್ನು ಪತ್ತೆ ಹಚ್ಚುವಲ್ಲಿ ಮೇಲಾಧಿಕಾರಿಗಳಿಗೆ ತಾಂತ್ರಿಕ ಸಹಾಯ ಒದಗಿಸುವುದರ ಜೊತೆಗೆ ನಿಪುಣತೆ, ನಿಷ್ಠೆ, ಪ್ರಾಮಾಣಿಕತೆಯಿಂದ ಕರ್ತವ್ಯ ನಿರ್ವಹಿಸುತ್ತಿರುವ ಷರೀಫ್ ಎಂ. ಮುಖ್ಯಮಂತ್ರಿಗಳ 2025 ಸಾಲಿನ ಚಿನ್ನದ ಪದಕಕ್ಕೆ ಭಾಜನರಾಗಿದ್ದಾರೆ.

ಜಿಲ್ಲಾ ಮದಕರಿ ನಾಯಕ ವಿದ್ಯಾ ಸಂಸ್ಥೆ ಅಧ್ಯಕ್ಷರಾದ ಎಸ್.ಸಂದೀಪ್ ಮುಖ್ಯಮಂತ್ರಿಗಳ ಚಿನ್ನದ ಪದಕಕ್ಕೆ ಆಯ್ಕೆಯಾಗಿರುವ ಷರೀಫ್ ಎಂ.ಗೆ ಅಭಿನಂದಿಸಿದ್ದಾರೆ.

ವಾರ್ಷಿಕ ಸಾಲ ಗುರಿಯ ಬಿಡುಗಡೆ

• **ಚಿತ್ರದುರ್ಗ:** ಚಿತ್ರದುರ್ಗ ಜಿಲ್ಲಾ ಪಂಚಾಯಿತಿ ಕಚೇರಿಯಲ್ಲಿ ಮಂಗಳವಾರ ಜಿಪಂ ಉಪ ಕಾರ್ಯದರ್ಶಿ ಡಾ.ರಂಗಸ್ವಾಮಿ ಅವರು ಜಿಲ್ಲಾ ಲೀಡ್ ಬ್ಯಾಂಕ್‌ನ ವಾರ್ಷಿಕ ಸಾಲ ಗುರಿ ಬಿಡುಗಡೆ ಮಾಡಿದರು.

ಆರ್ಥಿಕ ವರ್ಷ 2026-27ರ ಒಟ್ಟು ಸಾಲ ಗುರಿ 11786.78 ಕೋಟಿಗಳಾಗಿದ್ದು, ಆದ್ಯತಾ ವಲಯಗಳ ಸಾಲದ ಗುರಿ 8967.41 ಕೋಟಿಗಳು ಹಾಗೂ ಆದ್ಯತಾವಲಯವಲ್ಲದ ಸಾಲದ ಗುರಿ 2819.37 ಕೋಟಿಗಳಷ್ಟಿದೆ.

ಲೀಡ್ ಬ್ಯಾಂಕ್ ವ್ಯವಸ್ಥಾಪಕ ಎಂ.ರಾಘವೇಂದ್ರ, ನಬಾರ್ಡ್‌ನ ಡಿಡಿಎಂ ವಿನಂತ್, ಎಸ್‌ಬಿಐ ಬ್ಯಾಂಕ್ ಮುಖ್ಯ ವ್ಯವಸ್ಥಾಪಕ ಅಭಿಲಾಶ್ ಉಪಸ್ಥಿತರಿದ್ದರು.

ಉಪಚುನಾಣೆಯಲ್ಲಿ ಕಾಂಗ್ರೆಸ್ ಗೆಲ್ಲಲ್ಲ: ಅಶೋಕ್

• **ಚಿತ್ರದುರ್ಗ:** ರಾಜ್ಯ ಸರ್ಕಾರ ದುರಾಡಳಿತ, ಭ್ರಷ್ಟಾಚಾರ, ಶೇ 60 ಕಮಿಷನ್‌ನಲ್ಲಿ ಮುಳುಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸಾಲದ ರಾಮಯ್ಯ ಆಗಿದ್ದಾರೆ. ಇದರಿಂದಾಗಿ ರಾಜ್ಯ ಸಾಲದಲ್ಲಿ ಮುಳಿಗಿದ್ದು, ಅಭಿವೃದ್ಧಿ ಮರೀಚಿಕೆಯಾಗಿದೆ ಎಂದು ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಹೇಳಿದರು.



ಉಪಚುನಾವಣೆ ಹಿನ್ನೆಲೆಯಲ್ಲಿ ದಾವಣಗೆರೆಗೆ ತೆರಳುತ್ತಿದ್ದ ಮಾರ್ಗಮಧ್ಯೆ ಮಂಗಳವಾರ ತಮ್ಮನ್ನು ಭೇಟಿಯಾದ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಈ ಸರ್ಕಾರ 1 ಲಕ್ಷ 32 ಸಾವಿರ ಕೋಟಿ ಸಾಲದಲ್ಲಿ ಮುಳುಗಿದೆ. ಸಿದ್ದರಾಮಯ್ಯ ಒಬ್ಬನೇ 4 ಲಕ್ಷ ಕೋಟಿಗೂ ಅಧಿಕ ಸಾಲ ಮಾಡಿದ್ದಾರೆ. ಒಬ್ಬರ ತಲೆ ಮೇಲೆ 80 ಸಾವಿರ ಸಾಲದ ಹೊರೆ ಕೂತಿದೆ. ಈ ಸರ್ಕಾರ ನಂಬಿ ಕುಳಿತರೆ ಅಧೋಗತಿ ಆಗಲಿದೆ. ಅನ್ನಭಾಗ್ಯದಲ್ಲು 750 ಕೋಟಿ ಕೊಟ್ಟಿಲ್ಲ, ಸಿದ್ದರಾಮಯ್ಯ ಸಾಲಗಾರ ಆಗಿದ್ದಾನೆ ಎಂದು ವಾಗ್ದಾಳಿ ನಡೆಸಿದರು.

ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗಳು ಗೆಲ್ಲುವುದಿಲ್ಲ, ಈ ಸರ್ಕಾರವನ್ನು ಜನರು ಕಿತ್ತೊಗೆಯುತ್ತಾರೆ. ಇವೆಲ್ಲವೂ ಮುಂದಿನ ಚುನಾವಣೆಗೆ ಪ್ರತಿ ಬಿಂಬ ಆಗಲಿವೆ. ರಾಜ್ಯ ಸರ್ಕಾರದ ಎಲ್ಲ ಅಂಶಗಳನ್ನು ಪರಿಗಣಿಸಿ ಜನರು ಬಿಜೆಪಿಗೆ ಮತ ನೀಡಲಿದ್ದಾರೆ ಎಂದ ಅವರು, ಬಿಜೆಪಿ ಕಳ್ಳೆತ್ತುಗಳಿಗೆ ವೋಟ್ ಹಾಕಬೇಡಿ ಎಂಬ ಸಿಎಂ ಹೇಳಿಕೆ ಕುರಿತು ಪ್ರತಿಕ್ರಿಯಿಸಿ, ಡಿಕೆಶಿ, ಸಿದ್ದರಾಮಯ್ಯ ಜೋಡೆತ್ತುಗಳು ಕುಂಟೆತ್ತುಗಳು. ಡಿಕೆಶಿ, ಸಿದ್ದರಾಮಯ್ಯ ಇಬ್ಬರೂ ಸಹ ಒಬ್ಬರ ದಾರಿಗೆ ಮತ್ತೊಬ್ಬರು ಬರಲ್ಲ, ಅಧಿಕಾರಕ್ಕಾಗಿ ಡಿಕೆಶಿ ಬಕಪಕ್ಷಿಯಂತೆ ಕಾಯುತ್ತಿದ್ದಾರೆ ಎಂದರು.

ಬಸವೇಶ್ವರ ವೈದ್ಯಕೀಯ ವಿದ್ಯಾಲಯದ ನೂತನ ಪ್ರಾಚಾರ್ಯರಾಗಿ ಡಾ.ರಾಜೇಶ್

• **ಚಿತ್ರದುರ್ಗ:** ನಗರದ ಬಸವೇಶ್ವರ ವೈದ್ಯಕೀಯ ಮಹಾವಿದ್ಯಾಲಯದ ನೂತನ ಪ್ರಾಚಾರ್ಯರಾಗಿ ಡಾ. ಎಂ.ಎಸ್. ರಾಜೇಶ್ ಹಾಗೂ ಬಸವೇಶ್ವರ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕರಾಗಿ ಡಾ. ಎಲ್. ಫಾಲಾಕ್ಷಯ್ಯ ನೇಮಕಗೊಂಡಿದ್ದಾರೆ. ಅದರಂತೆ ವಯೋನಿವೃತ್ತಿ ಹೊಂದಿದ ಎಸ್.ಜೆ.ಎಂ. ಫಾರ್ಮಸಿ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಟಿ.ಎಸ್. ನಾಗರಾಜ್ ಅವರ ಜಾಗಕ್ಕೆ ನೂತನ ಪ್ರಾಚಾರ್ಯರಾಗಿ ಡಾ.ಟಿ. ಮಾರುತಿ ಏಕಬೋಟೆ ಅಧಿಕಾರ ವಹಿಸಿಕೊಂಡರು.

ನೂತನಪ್ರಾಚಾರ್ಯರುಗಳನ್ನುಮತ್ತುವೈದ್ಯಕೀಯಅಧೀಕ್ಷಕರನ್ನು ಎಸ್.ಜೆ.ಎಂ. ವಿದ್ಯಾಪೀಠ ಆಡಳಿತ ಮಂಡಳಿಯ ಅಧ್ಯಕ್ಷರಾದ ಶಿವಯೋಗಿ ಸಿ. ಕಳಸದ, ಸದಸ್ಯರಾದ ಡಾ. ಬಸವಕುಮಾರ ಸ್ವಾಮಿಗಳು, ಡಾ. ಪಿ.ಎಸ್. ಶಂಕರ್, ಎಸ್.ಎನ್. ಚಂದ್ರಶೇಖರ್, ಎಸ್.ಜೆ.ಎಂ. ವಿಶ್ವವಿದ್ಯಾಲಯದ ಕುಲಪತಿ ಡಾ. ಕೆ.ಬಿ. ಗುಡಸಿ, ಕುಲಸಚಿವ ಡಾ. ಎಂ.ಎಸ್. ಗಣಾಚಾರಿ, ಕಾಲೇಜಿನ ಬೋಧಕ ಮತ್ತು ಬೋಧಕೇತರ ವರ್ಗದವರು ಅಭಿನಂದಿಸಿದ್ದಾರೆ.



ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಹೆಚ್. ಮುನಿಯಪ್ಪ

ಒಳ ಮೀಸಲಾತಿ ಅಳವಡಿಸಿಕೊಂಡೇ ನೇಮಕಾತಿ

• **ಚಿತ್ರದುರ್ಗ:** ಸರ್ಕಾರ ನೇಮಕಾತಿಗೆ ಮುಂದಾಗಿರುವ ಹುದ್ದೆಗಳಿಗೆ ಒಳ ಮೀಸಲಾತಿ ಅಳವಡಿಸಿಕೊಂಡೇ ನೇಮಕಾತಿ ಪ್ರಕ್ರಿಯೆ ನಡೆಸಲಾಗುವುದು ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಹೆಚ್. ಮುನಿಯಪ್ಪ ತಿಳಿಸಿದರು.

ನಗರದ ಹೊರ ವಲಯದ ಶಿವಶರಣ ಮಾದಾರ ಚನ್ನಯ್ಯ ಗುರುಪೀಠದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗ ನೇಮಕಾತಿ ಪ್ರಕ್ರಿಯೆ ನಡೆಯುತ್ತಿದೆ. ಅದು ಅಂತಿಮವಾಗುವುದರೊಳಗೆ ನಮ್ಮ ಸರ್ಕಾರ ಒಳ ಮೀಸಲಾತಿ ಜಾರಿ ಮಾಡಲಿದೆ. ಅದರಂತೆಯೇ ನೇಮಕಾತಿ ಪ್ರಕ್ರಿಯೆ ನಡೆದು ಎಲ್ಲಾ ಸಮುದಾಯದ ನಿರುದ್ಯೋಗಿ ಅಭ್ಯರ್ಥಿಗಳಿಗೆ ನ್ಯಾಯ ಸಿಗಲಿದೆ. ಇದರಲ್ಲಿ ಯಾವುದೇ ಆತಂಕ ಬೇಡ ಎಂದು ಭರವಸೆ ನೀಡಿದರು.

ಹಿಂದಿನ ಬಿಜೆಪಿ ಸರ್ಕಾರ ಮೀಸಲಾತಿ ಪ್ರಮಾಣವನ್ನು ಶೇ.56ಕ್ಕೆ ಏರಿಸಿದೆ. ಆದರೆ ನ್ಯಾಯಾಲಯ ಶೇ.50 ಕ್ಕೆ ಒಳಪಡಿಸುವಂತೆ ಆದೇಶ ನೀಡಿದೆ. ಈ ಆದೇಶದ ಹಿನ್ನೆಲೆಯಲ್ಲಿ ಎಲ್ಲಾ ಸಮುದಾಯಗಳಿಗೆ ಮೀಸಲಾತಿ ಪ್ರಮಾಣ ಸ್ವಲ್ಪಮಟ್ಟಿಗೆ ಕಡಿಮೆ ಮಾಡಿ ಜಾರಿಗೊಳಿಸಲು ಎಲ್ಲಾ ಸಮುದಾಯದ ಮುಖಂಡರುಗಳು ಸಮ್ಮತಿಸಿದ್ದಾರೆ. ಇದರ ಬಗ್ಗೆ ಅಂತಿಮವಾಗಿ ಸಚಿವ ಸಂಪುಟದಲ್ಲಿ ತೀರ್ಮಾನ ಮಾಡಿ ಉಪಚುನಾವಣೆಯ ನಂತರ ಜಾರಿ ಮಾಡಲಾಗುವುದು ಎಂದರು.



ಒಳ ಮೀಸಲಾತಿಗೆ ಸಂಬಂಧಪಟ್ಟಂತೆ ಪರಿಶಿಷ್ಟ ಜಾತಿಯ ಎಲ್ಲಾ ಸಮುದಾಯಗಳು ಕಳೆದ 35 ವರ್ಷಗಳಿಂದ ಹೋರಾಟ ಮಾಡುತ್ತಾ ಬಂದಿವೆ. ಇದರ ಜಾರಿಗೆ ಹಲವಾರು ಆಯೋಗಗಳನ್ನು ರಚನೆ ಮಾಡಿ ವರದಿ ತಯಾರಿಸಲಾಗಿದೆ. ಇದರ ಬಗ್ಗೆ ಈಗಾಗಲೇ ಸಚಿವ ಸಂಪುಟದಲ್ಲಿ ಎರಡು ಮೂರು ಬಾರಿ ಚರ್ಚೆ ನಡೆದಿದ್ದು, ಅಂತಿಮವಾಗಿ ಮಾರ್ಚ್ 27 ರಂದು ವಿಶೇಷ ಅಧಿವೇಶನದಲ್ಲಿ ಸರ್ಕಾರ ಜಾರಿ ಮಾಡಲು ಮುಂದಾಗಿತ್ತು ಆದರೆ ಉಪ ಚುನಾವಣೆಯ ನೀತಿ ಸಂಹಿತೆಯ ಹಿನ್ನೆಲೆಯಲ್ಲಿ ಜಾರಿಯನ್ನು ಮುಂದೂಡಲಾಗಿದೆ ಎಂದು ಸಚಿವರು ತಿಳಿಸಿದರು.

ರಾಜ್ಯದಲ್ಲಿ ನಡೆಯುತ್ತಿರುವ ಉಪ ಚುನಾವಣೆಯ ನೀತಿ ಸಂಹಿತೆ ಮುಗಿದ ನಂತರ ಒಳ ಮೀಸಲಾತಿ ಜಾರಿ ಮಾಡಲಾಗುವುದು. ಇದರಲ್ಲಿ ಯಾವುದೇ ಆತಂಕ ಬೇಡ. ನಮ್ಮ ನೆರೆ ರಾಜ್ಯಗಳು ಈಗಾಗಲೇ ಒಳ ಮೀಸಲಾತಿ ಜಾರಿ ಮಾಡಿವೆ. ಅದರಂತೆ ನಮ್ಮ ರಾಜ್ಯದಲ್ಲೂ ಸಹ ಜಾರಿಯಾಗಲಿದೆ. ಪರಿಶಿಷ್ಟ ಜಾತಿಯಲ್ಲಿ 101 ಉಪ ಜಾತಿಗಳಿವೆ. ಸಮಗಾರ, ಡೆಕ್ಕರ್, ಡೋಲರ್ ಇವರೆಲ್ಲ ಮಾದಿಗ ಸಮುದಾಯಕ್ಕೆ ಸಂಬಂಧಪಟ್ಟವರು. ಈ ಜನರಿಗೆ ಸ್ವಲ್ಪ ಗೊಂದಲ ಇದೆ. ಇವರಿಗೆ ಯಾವ ರೀತಿ ಪ್ರಾತಿನಿಧ್ಯತೆ ಕೊಡಬೇಕು ಎಂಬುದರ ಸಲುವಾಗಿ ಉಪ ಸಮುದಾಯದ ನಾಯಕರೊಂದಿಗೆ ಸಭೆಯ ಮಾಡಲಿದ್ದೇವೆ. ಅವರಿಗೆ ಆಗಿರುವ ಅನ್ಯಾಯ ಸರಿಪಡಿಸುವಲ್ಲಿ ಸರ್ಕಾರ ಬದ್ಧವಾಗಿದೆ ಎಂದು ಹೇಳಿದರು.

ಕೆ.ಹೆಚ್ ಮುನಿಯಪ್ಪನವರು ಮಾದಿಗ ಮಹಾಸಭಾ ಕಟ್ಟಿಕೊಂಡು ಜನರನ್ನು ಗೊಂದಲಕ್ಕೆ ಈಡು ಮಾಡುತ್ತಿದ್ದಾರೆ ಎಂಬ ಸಂಸದ ಗೋವಿಂದ ಕಾರಜೋಳ ಅವರ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಅವರು, ಬಿಜೆಪಿ ಸರ್ಕಾರದ ಅವಧಿಯಲ್ಲಿ ಮೀಸಲಾತಿ ಹೆಚ್ಚಳ ಮಾಡಿದ್ದು ಸಂತೋಷ. ಆದರೆ ಕೇಂದ್ರದಲ್ಲೂ ಅವರದೇ ಸರ್ಕಾರ ಇತ್ತು. 9ನೇ ಶೆಡ್ಯೂಲ್‌ಗೆ ಸೇರಿಸಬಹುದಾಗಿತ್ತು ಎಂದು ಹೇಳಿದರು.

ರಾಜ್ಯದಲ್ಲಿ ಪೆಟ್ರೋಲ್ ಹಾಗೂ ಸಿಲೆಂಡರ್ ಗ್ಯಾಸ್‌ನ ಅಭಾವವಿಲ್ಲ, ಸರಿಯಾದ ರೀತಿಯಲ್ಲಿ ವಿತರಣೆ ಆಗುತ್ತಿದೆ. ಯಾರಾದರೂ ಕಾಳಸಂತೆಯಲ್ಲಿ ಮಾರಾಟ ಮಾಡುವುದು ಕಂಡುಬಂದರೆ ಅಂತವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು. ರಾಜ್ಯಕ್ಕೆ ಹೆಚ್ಚಿನ ರೀತಿಯಲ್ಲಿ ಪೆಟ್ರೋಲ್ ಹಾಗೂ ಅಡುಗೆ ಅನಿಲ ನೀಡುವಂತೆ ಕೇಂದ್ರಕ್ಕೆ ಪತ್ರ ಬರೆಯಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಸಂಸದ ಬಿ.ಎನ್.ಚಂದ್ರಪ್ಪ, ಸಮಾಗಾರ ಹರಳಯ್ಯ ಸಾಮಾಜಿಕ ಒಳಮೀಸಲಾತಿ ಹೋರಾಟ ಸಮಿತಿ ರಾಜ್ಯ ಸಂಚಾಲಕ ವೈ.ಸಿ.ಕಾಂಬ್ಳೆ, ಸಂತೋಷ್ ಸವಣೂರು, ಡಿಸಿಸಿ ಕಾರ್ಯಾಧ್ಯಕ್ಷರಾದ ಹಾಲಸ್ವಾಮಿ ಹಾಜರಿದ್ದರು.

> **ಪಂಚ ಗ್ಯಾರಂಟಿಗಳನ್ನು ನೀಡಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಪಕ್ಷ ಬಾಗಲಕೋಟೆ ಹಾಗೂ ದಾವಣಗೆರೆ ಉಪಚುನಾವಣೆಯಲ್ಲಿ ಗೆಲುವು ಸಾಧಿಸಲಿದೆ. ಎಲ್ಲಾ ಮತದಾರರು ಮತ ನೀಡುವ ಮೂಲಕ ಆಶೀರ್ವಾದ ನೀಡಿ ನಮ್ಮ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಲಿದ್ದಾರೆ. ದಾವಣಗೆರೆಯಲ್ಲಿ ಸಮರ್ಥ್ ಹಾಗೂ ಬಾಗಲಕೋಟೆಯಲ್ಲಿ ಉಮೇಶ್ ಮೇಟಿ ಅವರಿಗೆ ಟಿಕೆಟ್ ನೀಡಲಾಗಿದೆ. ಇವರನ್ನು ಗೆಲ್ಲಿಸುವ ಮೂಲಕ ಅವರ ಮೃತ ಹಿರಿಯರ ಆತ್ಮಕ್ಕೆ ಶಾಂತಿ ನೀಡಬೇಕಾಗಿದೆ ಎಂದು ಮನವಿ ಮಾಡಿದರು.**

ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರ ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟ

• **ಚಿತ್ರದುರ್ಗ:** ಜಿಲ್ಲೆಯ ಭರಮಸಾಗರ, ಚಿತ್ರದುರ್ಗ, ಚಳ್ಳಕೆರೆ, ಹಿರಿಯೂರು, ಹೊಳಲ್ಕೆರೆ, ಹೊಸದುರ್ಗ ಮತ್ತು ಮೊಳಕಾಲ್ಮೂರು ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಖಾಲಿಯಿದ್ದ 22 ಅಂಗನವಾಡಿ ಕಾರ್ಯಕರ್ತೆ ಹಾಗೂ 228 ಅಂಗನವಾಡಿ ಸಹಾಯಕರ ಹುದ್ದೆಗಳ ನೇಮಕಾತಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿ ಭರ್ತಿ ಮಾಡಲು 05 ಆಗಸ್ಟ್ 2025 ರಂದು ಅಧಿಸೂಚನೆ ಹೊರಡಿಸಲಾಗಿತ್ತು.

ಸದರಿ ಹುದ್ದೆಗಳ ನೇಮಕಾತಿಗಾಗಿ ದಿನಾಂಕ 12-03-2026 ರಂದು ನಡೆದ ಜಿಲ್ಲಾ ಮಟ್ಟದ ಆಯ್ಕೆ ಸಮಿತಿ ಸಭೆಯಲ್ಲಿ ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆಪಟ್ಟಿ ಸಿದ್ಧಪಡಿಸಲಾಗಿದೆ. ಸದರಿ ಆಯ್ಕೆ ಪಟ್ಟಿಯನ್ನು ಎಲ್ಲಾ ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ ಸೂಚನಾ ಫಲಕ, ಅಂಗನವಾಡಿ ಕೇಂದ್ರ, ಗ್ರಾಮ ಪಂಚಾಯಿತಿ, ಶಾಲೆ, ಸಮುದಾಯ ಭವನ ಹಾಗೂ ಗ್ರಂಥಾಲಯಗಳಲ್ಲಿ ಪ್ರಕಟಿಸಲಾಗಿದೆ.

ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆಗಳು ಇದ್ದಲ್ಲಿ, ಸೂಕ್ತ ದಾಖಲೆಗಳೊಂದಿಗೆ ದಿನಾಂಕ 10-04-2026 ರ ಸಂಜೆ 5:30ರ ಒಳಗಾಗಿ ಆಯಾ ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಗೆ ಸಲ್ಲಿಸಬಹುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ವಿಜಯಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲಾ ಪೊಲೀಸ್ ಅಧೀಕ್ಷಕರಿಂದ ಅಹವಾಲು ಸ್ವೀಕಾರ

ಹೆಚ್ಚಾಗುತ್ತಿರುವ ವ್ಯಾಜ್ಯ ಪ್ರಕರಣಗಳು

• **ಮೊಳಕಾಲ್ಮೂರು:** ತಾಲೂಕಿನ ರಾಂಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸೋಮವಾರ ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲಿ ಜನಸಂಪರ್ಕ ಸಭೆ ನಡೆಸಲಾಯಿತು.

ಜನ ಸಂಪರ್ಕ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಪ್ರಾಣಿಗಳಿಗೆ ಹೆಚ್ಚಾಗಿ ಹೊಲದ ಜಗಳ, ಬಾಲ್ಯ ವಿವಾಹ, ಬಾಲಕಾರ್ಮಿಕ, ಅಣ್ಣ ತಮ್ಮಂದಿರ ಜಗಳ, ದಾರಿ ಜಗಳ ಇಂತಹ ಪ್ರಕರಣಗಳೇ ಹೆಚ್ಚಾಗಿ ಬರುತ್ತಿವೆ. ಹೊಂದಾಣಿಕೆಯೊಂದಿಗೆ ಸಹೋದರರಂತೆ ನಡೆದುಕೊಂಡು ವ್ಯಾಜ್ಯ ಇತ್ಯರ್ಥ ಪಡಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ರಾಂಪುರ ಪೊಲೀಸ್ ಠಾಣೆಯು ಗಡಿ ಠಾಣೆಯಾಗಿರುವುದರಿಂದ ಮೇಲಧಿ ಕಾರಿಗಳು ಈ ಕಡೆ ಬರುವುದು ಸ್ವಲ್ಪ ತಡವಾಗ ಬಹುದು. ಹಾಗಾಗಿ ಯಾವುದೇ ಕುಂದು ಕೊರತೆಗಳಿದ್ದಲ್ಲಿ ಮುಕ್ತವಾಗಿ ಹೇಳಿಕೊಳ್ಳಿ ಆಗದಿದ್ದರೆ ಲಿಖಿತ ರೂಪದಲ್ಲಿ ತಮ್ಮ ಸಮಸ್ಯೆಗಳ ನೀಡಿ ಎಂದು ಸಲಹೆ ನೀಡಿದರು.

ಪೊಲೀಸ್ ಇಲಾಖೆಯು ವೈಯಕ್ತಿಕ ಹಿತಾಸಕ್ತಿಗಾಗಿ ಕೆಲಸ ನಿರ್ವಹಿಸುವುದಿಲ್ಲ, ಸಾರ್ವಜನಿಕರಿಗೆ ಯಾವುದೇ ಸಮಸ್ಯೆ ಉಂಟಾಗದ ರೀತಿಯಲ್ಲಿ ನೋಡಿಕೊಳ್ಳುವುದು ನಮ್ಮ ಜವಾಬ್ದಾರಿ ಹಾಗಾಗಿ ಸಾರ್ವಜನಿಕರು ಇಲಾಖೆಗೆ ಕನ್ನಡಿ ಇದ್ದ ಹಾಗೆ ಇಲಾಖೆಯಲ್ಲಿ ಯಾವುದೇ ಲೋಪದೋಷ ಕಂಡು ಬಂದಲ್ಲಿ ಅಥವಾ ಸಮಾಜದ ಹೊರೆ ಕೋರೆಗಳನ್ನು ತಿದ್ದುವಲ್ಲಿ ವಿಫಲವಾದಲ್ಲಿ ನಮ್ಮ ಗಮನಕ್ಕೆ ತಂದರೆ ನಾವು ಸೂಕ್ತ ಕ್ರಮ ಕೈಗೊಂಡು ಕೆಲಸ ನಿರ್ವಹಿಸುವಂತೆ ಮಾರ್ಗದರ್ಶನ ನೀಡುತ್ತೇವೆ ಎಂದು ತಿಳಿಸಿದರು.

ಈ ಠಾಣೆ ವ್ಯಾಪ್ತಿಯಲ್ಲಿ ಯಾವುದೇ ಅನೈತಿಕ



> **ದ್ವಿಚಕ್ರ ವಾಹನ ಚಲಾಯಿಸುವಾಗ ಕಡ್ಡಾಯವಾಗಿ ಹೆಲ್ಮೆಟ್ಟನ್ನು ಧರಿಸಿ ಏಕೆಂದರೆ ಯಥೇಚ್ಛವಾಗಿ ಸಾವಿಗೀಡಾಗುತ್ತಿರುವುದು ಹೆಲ್ಮೆಟ್ ಧರಿಸದೆ ವಾಹನ ಚಲಾಯಿಸುವ ದ್ವಿಚಕ್ರ ವಾಹನ ಸವಾರರೇ ಹಾಗಾಗಿ ಹೆಲ್ಮೆಟ್ ಧರಿಸಿ ವಾಹನ ಚಲಾಯಿಸುವುದು ಕಡ್ಡಾಯ ಮಾಡಿಕೊಳ್ಳಿ.**
>
> ■ ಶಿವಕುಮಾರ್, ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ

ಚಟುವಟಿಕೆಗಳಾದ ಗಾಂಜಾ ಮಾರಾಟ, ಜೂಜು, ಮಟ್ಕಾ, ಐಪಿಎಲ್ ಬೆಟ್ಟಿಂಗ್, ಅಕ್ರಮ ಮದ್ಯ ಮಾರಾಟ, ಇಂತಹವು ಕಂಡುಬಂದಲ್ಲಿ ಪೊಲೀಸ್ ಇಲಾಖೆ ಗಮನಕ್ಕೆ ತನ್ನಿ ಎಂದು ತಿಳಿಸಿದರು.

ಗ್ರಾಮದ ಸಿಪಿಐ ಕಾರ್ಯದರ್ಶಿ ಪೆನ್ನಯ ಮಾತನಾಡಿ, ಠಾಣೆಯ ಸಿಬ್ಬಂದಿ ಕೊರತೆಯನ್ನು ನೀಗಿಸುವಂತೆ ಮನವಿ ಸಲ್ಲಿಸಿದ್ದರು. ಶನಿವಾರ ಮತ್ತು ಸೋಮವಾರ ನಡೆಯುವ ಕುರಿ ಸಂತೆಯ ದಿನದಂದು ಸಾರ್ವಜನಿಕರಿಗೆ ಸುಗಮ ಸಂಚಾರಕ್ಕೆ



ಅನುವು ಮಾಡಿಕೊಡಿ ಹಾಗೂ ಸಿಬ್ಬಂದಿಯನ್ನು ಹೆಚ್ಚಿಸಿ ಅಪರಿಚಿತ ವ್ಯಕ್ತಿಗಳ ಮೇಲೆ ಗಮನವಿರಿಸಿ ಎಂದು ತಿಳಿಸಿದರು.

ಈ ಜನ ಸಂಪರ್ಕ ಸಭೆಗೆ ರಾಂಪುರ ಪೊಲೀಸ್ ಠಾಣೆ ವ್ಯಾಪ್ತಿಯ ಗ್ರಾಮಗಳಿಂದ 100 ರಿಂದ 150 ಜನಪ್ರತಿನಿಧಿಗಳು ವಿವಿಧಸಂಘ, ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಪಾಲ್ಗೊಂಡು ತಮ್ಮ ಕುಂದು ಕೊರತೆಗಳ ಬಗ್ಗೆ ಚರ್ಚಿಸಿದರು.

ಈ ಸಂದರ್ಭದಲ್ಲಿ ಎಲ್ಲರ ಹವಾಲು ಹಾಗೂ ಸಮಸ್ಯೆಗಳ ಆಲಿಸಿದ ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕರು ಮುಂದಿನ ಸಭೆ ಒಳಗಾಗಿ ಸಾಧ್ಯವಾದಷ್ಟು ಸಮಸ್ಯೆಗಳ ಬಗ್ಗೆ ಅಗತ್ಯ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಡಿವೈಎಸ್ಪಿ ಸತ್ಯನಾರಾಯಣ್, ಮೊಳಕಾಲ್ಮೂರು ವೃತ್ತ ನಿರೀಕ್ಷಕರಾದ ನಾಗರಾಜ್, ಪಿಎಸ್‌ಐ ಬಾಹುಬಲಿ, ಮುಖಂಡರಾದ ಜಿರಳೆ ತಿಪ್ಪೇಸ್ವಾಮಿ, ಕಾಮ್ರೆಡ್ ಪೆನ್ನಯ್ಯ, ವೆಂಕಟೇಶ್, ಜಿರಳ್ಳಿ ಹನುಮಯ್ಯ, ಹೂಲಯ್ಯ, ವಜ್ರಹೊನ್ನೂರ್ ಸ್ವಾಮಿ, ಹಾಗೂ ಸರ್ವ ಪೊಲೀಸ್ ಸಿಬ್ಬಂದಿ ಮತ್ತು ಸಾರ್ವಜನಿಕರು ಹಾಜರಿದ್ದರು.

ಕಳಪೆ ಮೆಕ್ಕೆಜೋಳ ಬಿತ್ತನೆ ಬೀಜ: ರೈತ ಕಂಗಾಲು

• **ನಾಯಕನಹಟ್ಟಿ :** ಮೆಕ್ಕೆಜೋಳ ಬಿತ್ತನೆ ಬೀಜ ಕಳಪೆಯಾಗಿದ್ದು, ಕಾವೇರಿ ಸೀಡ್ಸ್ ಕಂಪನಿಯ ಮೇಲೆ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಭತ್ತಯ್ಯನಹಟ್ಟಿ ಗ್ರಾಮದ ರೈತರು ಗಂಭೀರ ಆರೋಪ ಮಾಡಿದರು.

ರೈತ ಮುಖಂಡ ಪಿ ಓಬಯ್ಯ ಮಾತನಾಡಿ, ಬೀಜೋತ್ಪಾದನೆಯಲ್ಲಿ ಹೆಸರು ವಾಸಿಯಾದ ತಾಲೂಕಿನಲ್ಲಿ ಕಳಪೆ ಬೀಜದ ಜಾಲ ವ್ಯಾಪಕವಾಗಿ ಹರಡಿಕೊಂಡಿದೆ. ಗುಣಮಟ್ಟದ ಬೀಜ ಎಂದು ನಂಬಿಕೊಂಡು ಕಾವೇರಿ ಸೀಡ್ಸ್ ಕಂಪನಿಯ ಬಿತ್ತನೆ ಬೀಜ ಖರೀದಿಸಿದ್ದೇವೆ. ಆದರೆ ಕಳಪೆ ಬಿತ್ತನೆ ಬೀಜದಿಂದ ರೈತರ ಬದುಕು ಹಾಳಾಗುತ್ತಿದೆ ಎಂದು ದೂರಿದರು.

ಚಳ್ಳಕೆರೆ ನಗರದ ಬೀಜ ವಿತರಕರ ಅಂಗಡಿಯಲ್ಲಿ ಕಾವೇರಿ 244 ಮೆಕ್ಕೆಜೋಳ ಖರೀದಿಸಿ, ಮೂರು ಎಕರೆ ಜಮೀನಿನಲ್ಲಿ ಮೆಕ್ಕೆಜೋಳ ಹಾಕಿದ್ದು, ಮೆಕ್ಕೆಜೋಳ ಬೆಳೆಗೆ ಕ್ಯಾನ್ಸರ್ ರೋಗ ಕಾಣಿಸಿಕೊಂಡು ದಿನೇ ದಿನೇ ಕಮರಿ ಹೋಗುತ್ತದೆ. ಬೀಜ ವಿತರಕ ಅಂಗಡಿಯವರು ಹೆಚ್ಚಿನ ಲಾಭದ ಆಸೆಯಿಂದ ಕಳಪೆ ಬೀಜಗಳನ್ನು ರೈತರಿಗೆ ವಿತರಿಸಿ ವಂಚನೆ ಮಾಡುತ್ತಿದ್ದಾರೆ. ಕೂಡಲೇ ಅಧಿಕಾರಿಗಳು ಬೀಜ ವಿತರಿಸಿದ ಅಂಗಡಿ ಮಾಲೀಕರ ಮೇಲೆ ಕ್ರಮ ಕೈಗೊಳ್ಳುಬೇಕು ತಾಲ್ಲೂಕಿನಲ್ಲಿ ಕಳಪೆ ಬೀಜದಿಂದ ಮೋಸ ಹೋಗಿರುವ ರೈತರಿಗೆ ಪರಿಹಾರ ಒದಗಿಬೇಕು ಎಂದರು.

ಈ ಸಂದರ್ಭದಲ್ಲಿ ಓ. ನಾಗೇಶ್, ಎಸ್. ಕೆ. ಕಾಟಂಲಿಂಗೇಶ್ವರ, ಚಿತ್ರಯ್ಯ, ಕೆ.ಪಿ. ಸೂರಯ್ಯ, ಭರತ್ ಇನ್ನು ಮುಂತಾದವರು ಇದ್ದರು.



ಭೀಮಸಮುದ್ರ ಗ್ರಾಮದಲ್ಲಿ ಕರ್ನಾಟಕ ರಾಜ್ಯ ರೈತ ಸೇನೆ ಶಾಖೆ ಉದ್ಘಾಟನೆ

ರೈತ ನೆಮ್ಮದಿಯಾಗಿದ್ದಲ್ಲಿ ದೇಶ ಸಮೃದ್ಧಿ: ಪಪ್ಪಿ

• **ಚಿತ್ರದುರ್ಗ:** ರೈತ ನೆಮ್ಮದಿಯಾಗಿದ್ದಲ್ಲಿ ದೇಶವು ಕೂಡ ಸಮೃದ್ಧಿಯಾಗಿರುತ್ತದೆ. ರೈತ ಬಿಟ್ಟು ಇನ್ಯಾರೂ ಸಹ ಹಸಿವು ನೀಗಿಸುವ ಕೆಲಸ ಮಾಡಲಾಗದು. ಹಾಗಾಗಿ ನಾನು ರೈತರ ಪರವಾಗಿ ಯಾವಾಗಲೂ ಇರುತ್ತೇನೆ ಎಂದು ಶಾಸಕ ಕೆ.ಸಿ.ವೀರೇಂದ್ರ (ಪಪ್ಪಿ) ತಿಳಿಸಿದರು.

ತಾಲೂಕಿನ ಭೀಮಸಮುದ್ರ ಗ್ರಾಮದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಶಾಖೆ ಉದ್ಘಾಟಿಸಿ ಮಾತನಾಡಿದ ಅವರು, ರೈತರು ಕಷ್ಟ ಬಿದ್ದು ಭೂಮಿಯನ್ನು ಹದ ಮಾಡಿ ಫಸಲು ತೆಗೆಯಲು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಾರೆ. ಆದರೆ ಸರಿಯಾದ ಬೆಲೆ ಇಲ್ಲದೆ ರೈತರು ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. ಈ ವಿಚಾರವನ್ನು ನಾನು ಗಂಭೀರವಾಗಿ ಅರಿತಿದ್ದೇನೆ. ಆದ್ದರಿಂದ ರೈತರಿಗೆ ಅನುಕೂಲವಾಗುವಂತಹ ಕೃಷಿ ಯೋಜನೆಗಳು ರೈತರಿಗೆ ತಲುಪಿಸುವಂತಹ ಕೆಲಸವನ್ನು ನಾನು ಪ್ರಾಮಾಣಿಕವಾಗಿ ಮಾಡುತ್ತೇನೆ ಎಂದರು.

ಶಾಸಕ ದರ್ಶನ್ ಪುಟ್ಟಣ್ಣಯ್ಯ ಮಾತನಾಡಿ, ರೈತನಬೆಳೆಯುವಬೆಳೆಗಳಿಗೆಸರಿಯಾಗಿಮಾರುಕಟ್ಟೆಗಳಲ್ಲಿ ಬೆಲೆ ಸಿಗದ ರೈತ ಸಾಲಗಾರನಾಗಿದ್ದಾನೆ. ರೈತರಿಗೆ ಮಾರುಕಟ್ಟೆಯಲ್ಲಿ ದೊರೆಯುವಂತಹ ಬೆಲೆಯು ಶ್ರೀಮಂತಿಕೆ ತಂದು ಕೊಡುವುದಿಲ್ಲ, ಬೆಳೆ ಬೆಳೆಯುವ ಖರ್ಚು ವೆಚ್ಚಗಳಿಗೆ ಸರಿಯಾಗುತ್ತದೆ. ಆದರೆ ಮಾರುಕಟ್ಟೆಯಿಂದ ನಂತರ ವ್ಯವಹರಿಕರಣವಾಗುವಾಗ ಬೆಲೆಯು ಮಧ್ಯವರ್ತಿಗಳಿಗೆ ಸಾಕಷ್ಟು ಲಾಭವಾಗುತ್ತದೆ. ಇದರಿಂದ ರೈತನಿಗೆ ಮತ್ತಷ್ಟು ನಷ್ಟವಾಗುತ್ತದೆ ಎಂದು ತಿಳಿಸಿದರು.



ವಿಜಾಪುರ ಸಂಚಾರಿ ಪೀಠದ ಶ್ರೀ ಪ್ರವೀಣ್ ಗುರೂಜಿ, ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಪಡಗಲಪುರ ನಾಗೇಂದ್ರ, ರಾಜ್ಯ ರೈತ ಸಂಘದ ರಾಜ್ಯ ಕಾರ್ಯದರ್ಶಿ ಚಾಮರಸಮಾಲಿ ಪಾಟೀಲ್, ರಾಜ್ಯ ಪ್ರಧಾನ ಕಾರ್ಯದರ್ಶಿ ವಸಂತ್ ಕುಮಾರ್, ಉಪಾಧ್ಯಕ್ಷ ಕೆ.ಪಿ. ಭೂತಯ್ಯ, ಬಸ್ತಿಹಳ್ಳಿ ಸುರೇಶ್‌ಬಾಬು, ಅರುಣ್ ಕುಮಾರ್, ಕೆ.ಸಿ.ಹೊರಕೇರಪ್ಪ, ಜಿಲ್ಲಾಧ್ಯಕ್ಷ ಧನಂಜಯ್, ಜಿಲ್ಲಾ ಉಪಾಧ್ಯಕ್ಷ ಚಿಕ್ಕಪ್ಪನಹಳ್ಳಿ ರುದ್ರಸ್ವಾಮಿ, ತಾಲೂಕು ಪ್ರಧಾನ ಕಾರ್ಯದರ್ಶಿ ಹುಣಸೇಕಟ್ಟೆ ಕಾಂತರಾಜ್, ಗಣಿಬಾಧಿತ ಪ್ರದೇಶ ಹೋರಾಟಗಾರ ಸಮಿತಿ ಸಂಚಾಲಕ ರಮೇಶ್ ಬಿ.ದುರ್ಗ ಭಾಗವಹಿಸಿದ್ದರು.

ಶಕ್ತಿ ದೇವತೆ ಕಾಶಿಭಾಗೀರಥಿ ದೇವಿಯ ಅದ್ದೂರಿ ರಥೋತ್ಸವ

• **ಹೊಸದುರ್ಗ :** ತಾಲೂಕಿನ ಮತ್ತೋಡಿನ ಶಕ್ತಿದೇವತೆ ಕಾಶಿ ಭಾಗೀರಥಿ ದೇವಿಯ ರಥೋತ್ಸವ ಮಂಗಳವಾರ ನಸುಕಿನಲ್ಲಿ ನೂರಾರು ಭಕ್ತರ ಸಮ್ಮುಖದಲ್ಲಿ ಅತ್ಯಂತ ವಿಜೃಂಭಣೆಯಿಂದ ನಡೆಯಿತು.

ರಥೋತ್ಸವದ ಅಂಗವಾಗಿ ಮಾರ್ಚ್ 26 ರಂದು ಧ್ವಜಾರೋಹಣ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಸಂಜೆ ಮದುವಣಗಿತ್ತಿ ಶಾಸ್ತ್ರ ಹಾಗೂ ಕಂಕಣ ಧಾರಣೆ ಧಾರ್ಮಿಕ ವಿಧಿಗಳನ್ವಯ ನಡೆಯಿತು. ಗ್ರಾಮಸ್ಥರೆಲ್ಲಾ ದೇವಿಗೆ ಮಡಿಲಕ್ಕಿ ಸಮರ್ಪಿಸಿ, ಭಕ್ತಿ ಮೆರೆದರು.

ಗಂಗಾ ಪೂಜೆ, 101 ಎಡೆ ಪೂಜೆ ನಡೆಯಿತು. ಶನಿವಾರ ಕೋಣನ ಉತ್ಸವ, ಭಾನುವಾರದಂದು ಆನೆ ಉತ್ಸವ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಾಗಿತು. ಉತ್ಸವ ವಿಶೇಷವಾಗಿದ್ದು, ಭಕ್ತರ ಕಣ್ಮನ ಸೆಳೆಯುವಂತಿತ್ತು.

ಮಾರ್ಚ್ 31 ರ ಮಂಗಳವಾರದಂದು ನಸುಕಿನಲ್ಲಿ ದೇವಿಯ ರಥವೇರಿತು. ದಕ್ಷಬ್ರಹ್ಮಸ್ವಾಮಿ ರಥೋತ್ಸವಕ್ಕೆ ಚಾಲನೆ ನೀಡಿದ ನಂತರ ರಥ ಎಳೆಯಲಾಯಿತು. ಸಕಲ ವಾದ್ಯಗೋಷ್ಠಿಗಳು



ಹಾಗೂ ಭಕ್ತರ ಜಯಘೋಷಗಳ ನಡುವೆ ರಥ ತೇರು ಮನೆಯಿಂದ ಮತ್ತೋಡಿನ ಬಸ್ ನಿಲ್ದಾಣದ ರಸ್ತೆಯ ವರೆಗೂ ಸಾಗಿತು. ಭಕ್ತರು ಬಾಳೆಹಣ್ಣು ಸಮರ್ಪಿಸಿ, ಪ್ರಾರ್ಥಿಸಿದರು. ಮಧ್ಯಾಹ್ನ ಹಾಲು ಪಲ್ಲಕ್ಕಿ ಉತ್ಸವ ನಡೆಯಿತು. ಬಂದಂತಹ ಭಕ್ತಾದಿಗಳಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಮತ್ತೊಂದೆಡೆ ದಕ್ಷ ವಿನಾಯಕ ಗೆಳೆಯರ ಬಳಗದ ವತಿಯಿಂದ ಮಜ್ಜಿಗೆ, ಪಾನಕ ವಿತರಿಸಲಾಯಿತು.

ಬುಧವಾರ ಹೋಕುಳಿ ಹಾಗೂ ಕಂಕಣ ವಿಸರ್ಜನೆ ಮೂಲಕ ರಥೋತ್ಸವ ಕಾರ್ಯಕ್ರಮಗಳಿಗೆ ತೆರೆ ಬೀಳಲಿದೆ. ಗುಡಿ ಗೌಡರು, ದೇವಾಲಯದ ಆಡಳಿತ ಮಂಡಳಿ, ಸುತ್ತಮುತ್ತಲಿನ 7 ಹಳ್ಳಿ ಗ್ರಾಮಸ್ಥರು ಹಾಗೂ ನೂರಾರು ಭಕ್ತರು ದೇವಿಯ ದರ್ಶನ ಪಡೆದರು.

ಮತ್ತೋಡಿನ ಸರ್ಕಾರಿ ಆಸ್ಪತ್ರೆ ಮುಂಭಾಗದಿಂದ ಆರೇಹಳ್ಳಿ ಗೇಟ್ ವರೆಗೂ ದೀಪಾಲಂಕಾರ ಮಾಡಲಾಗಿತ್ತು. ಮತ್ತೋಡು ಗ್ರಾಮದಲ್ಲಿ ನೆಲೆಸಿರುವ ಆಂಜನೇಯ, ಶಿವ, ದುರ್ಗಾದೇವಿ ದೇವಾಲಯಗಳಿಗೂ ಕೂಡ ಆಕರ್ಷಕ ವಿದ್ಯುತ್ ದೀಪಾಲಂಕಾರ ಮಾಡಿದ್ದು, ಗ್ರಾಮದ ತುಂಬೆಲ್ಲಾ ಹಬ್ಬದ ವಾತಾವರಣ ಮನೆ ಮಾಡಿತ್ತು.